ಮಾನವಿಕ ಕರ್ಣಾಟಕ

ಸಂಪುಟ: ೩೦
ಸಂಚಿಕೆ: ೩ ಮತ್ತು ೪

ಪ್ರಸಾರಾಂಗ: ಮೈಸೂರು ವಿಶ್ವವಿದ್ಯಾನಿಲಯ

ಈ ಸಂಚಿಕೆಯ ಲೇಖಕರು

ಡಾ. ಎನ್. ಉಷಾರಾಣಿ
ಬಿ.ಪಿ. ಮಹೇಶಚಂದ್ರಗುರು
ಡಾ. ಕೆ. ಚಂದ್ರಶೇಖರ್
ಜಿ.ಎಸ್. ಭಟ್ಟ
ಡಾ. ಕೆ.ವೈ. ಬಾಲರಾಜ್
ನರಸಿಂಹೇಗೌಡ ನಾರಣಾಪುರ
ಎಸ್.ಕೆ. ರಮೇಶ್
ಪ್ರೊ. ಕೆ. ಕೇಶವಮೂರ್ತಿ
ಡಾ. ಜಿ.ಆರ್. ತಿಪ್ಪೇಸ್ವಾಮಿ

ಮಾನವಿಕ ಕರ್ನಾಟಕ

ಸಂಪುಟ ೩೦ ; ಸಂಚಿಕೆ ೩ ಮತ್ತು ೪

ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು
೨೦೦೦

MĀNAVIKA KARNĀTAKA : Kannada Quarterly of the University of Mysore. Volume No. 30; Number 3 and 4, Edited by the Editorial Committee. Published by the Director, Prasaranga, University of Mysore, Manasagangotri, Mysore–570 006

ಸಂಚಾಲಕರು ಮತ್ತು ಪ್ರಕಾಶಕರು

ಪ್ರೊ. ಲಕ್ಷ್ಮೀನಾರಾಯಣ ಅರೋರಾ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦ ೦೦೬

ಮುದ್ರಕರು

ಡಾ. ಕೃಷ್ಣೇಗೌಡ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦ ೦೦೬

ಪ್ರಕಾಶಕರ ಮಾತು

'ಮಾನವಿಕ ಕರ್ಣಾಟಕ' ಸಂಪುಟ ೩೦ರ ೩ ಹಾಗೂ ೪ನೇ ಸಂಚಿಕೆಗಳು ಸಂಯುಕ್ತ ಹೊತ್ತಗೆಯ ರೂಪದಲ್ಲಿ ಓದುಗರ ಕೈಸೇರುತ್ತಿದೆ. ವಿಶ್ವವಿದ್ಯಾನಿಲಯದ ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ನಾಟಕ ಹಾಗೂ ವಿಜ್ಞಾನ ಕರ್ಣಾಟಕ—ಈ ಪತ್ರಿಕೆಗಳು ಸಕಾಲದಲ್ಲಿ ಹೊರಬರುವ ನಿಟ್ಟಿನಲ್ಲಿ ಪ್ರಯತ್ನ ನಡೆಸಲಾಗುತ್ತಿದೆ. ಓದುಗರೆಲ್ಲ ದಯವಿಟ್ಟು ಸಹಕರಿಸಬೇಕಾಗಿ ವಿನಂತಿ.

ಪ್ರಸಕ್ತ ಸಂಪುಟದ ಸಂಪಾದಕ ಮಂಡಳಿಯವರು ಈ ಸಂಚಿಕೆಗಳನ್ನು ಹೊರತರುವಲ್ಲಿ ಶ್ರಮವಹಿಸಿ ನೆರವಾಗಿದ್ದಾರೆ. ಸಂಪಾದಕ ಮಂಡಳಿಯ ಅಧ್ಯಕ್ಷರಾದ ಪ್ರೊ. ಅಂಬಳಿಕೆ ಹಿರಿಯಣ್ಣನವರಿಗೂ ಮಾನ್ಯಸದಸ್ಯರಿಗೂ ನಾನು ವಿಶೇಷವಾಗಿ ಆಭಾರಿಯಾಗಿದ್ದೇನೆ.

ಪ್ರಸಾರಾಂಗದ ಎಲ್ಲ ಚಟುವಟಿಕೆಗಳಿಗೆ ಮಾನ್ಯ ಕುಲಪತಿಯವರಾದ ಪ್ರೊ. ಎಸ್. ಎನ್. ಹೆಗ್ಡೆಯವರು ಹಾಗೂ ಮಾನ್ಯ ಕುಲಸಚಿವರಾದ ಪ್ರೊ. ವಿ. ಜಿ. ತಳವಾರ್ ಅವರು ನಿರಂತರ ಪ್ರೋತ್ಸಾಹ ನೀಡುತ್ತಿದ್ದಾರೆ. ವಿಶ್ವವಿದ್ಯಾನಿಲಯ ಮುದ್ರಣಾಲಯದ ನಿರ್ದೇಶಕರಾದ ಡಾ. ಕೃಷ್ಣೇಗೌಡ ಮತ್ತು ಅವರ ಸಿಬ್ಬಂದಿ ನಮ್ಮ ಪುಸ್ತಕಗಳ ಹಾಗೂ ಪತ್ರಿಕೆಗಳ ಮುದ್ರಣಕಾರ್ಯವನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತಿದ್ದಾರೆ. ಅಂತೆಯೇ ಪ್ರಸಾರಾಂಗದ ಉಪನಿರ್ದೇಶಕರಾದ ಶ್ರೀ ಬಾ. ವೇ. ಶ್ರೀಧರ ಮತ್ತು ಇತರ ಸಹೋದ್ಯೋಗಿಗಳು ಈ ನಿಟ್ಟಿನಲ್ಲಿ ಉತ್ಸಾಹದಿಂದ ನೆರವಾಗುತ್ತಿದ್ದಾರೆ. ಈ ಎಲ್ಲ ಮಹನೀಯರಿಗೂ ಕೃತಜ್ಞತೆಗಳನ್ನು ಅರ್ಪಿಸಬಯಸುತ್ತೇನೆ.

ಲಕ್ಷ್ಮೀನಾರಾಯಣ ಅರೋರಾ
ನಿರ್ದೇಶಕ

ಸಂಪಾದಕೀಯ

ಮೌಖಿಕ ಸಂಕಥನ : ಜಾನಪದ

ನಮ್ಮ ಹಿಂದಿನ ತಲೆಮಾರಿನ ವಿದ್ವಾಂಸರ ಕಠಿಣ ಪರಿಶ್ರಮ, ದುಡಿಮೆ ಹಾಗೂ ಇವತ್ತಿನ ವಿದ್ವಾಂಸರ ಮುಂದುವರೆದ ಪ್ರಯತ್ನದಿಂದಾಗಿ ಹೊಸ ಸಹಸ್ರಮಾನದಲ್ಲೂ ಜಾನಪದ ಅಧ್ಯಯನ ದಾಪುಗಾಲಿಟ್ಟು ಮುನ್ನಡೆಯುವುದು ಸಾಧ್ಯವಾಗಿದೆ. ಕಳೆದ ಸಹಸ್ರಮಾನದಲ್ಲಿ ಈ ದೇಶದ ಆಡಳಿತದ ಚುಕ್ಕಾಣಿ ಹಿಡಿದ ಮಹಾನುಭಾವರ ಬೇಜವಾಬ್ದಾರಿತನ ಮತ್ತು ಅಜ್ಞಾನದಿಂದಾಗಿ ಅತ್ಯಂತ ಪ್ರಸ್ತುತವೂ ಪರಿಶೀಲನೆಗೆ ಅರ್ಹವೂ ಆದ ಈ ಕ್ಷೇತ್ರ ಸಂಪೂರ್ಣ ನಿರ್ಲಕ್ಷ್ಯಕ್ಕೆ ಗುರಿಯಾಗಿತ್ತು. ಸನ್ನಿವೇಶ ಸಂಪೂರ್ಣ ಬದಲಾಗಿಲ್ಲವಾದರೂ ಸಾಕಷ್ಟು ಸುಧಾರಿಸಿದ್ದು ಇಂದು ಜಾನಪದ, ರಾಷ್ಟ್ರದ ಉದ್ದಕ್ಕೂ ಸಮಾಜವಿಜ್ಞಾನಿಗಳ ಅತ್ಯಂತ ಕಾಳಜಿಯ ಕ್ಷೇತ್ರವಾಗಿ ಕಂಡುಬಂದಿದೆ. ರಾಷ್ಟ್ರದಲ್ಲೇ ಏಕೆ ? ಇಡೀ ಉಪಖಂಡದಲ್ಲೇ ಇದು ಕುತೂಹಲದ, ಗಂಭೀರ ಪರಿಶೀಲನೆಯ ವಿಷಯವಾಗಿ ಎಲ್ಲರ ಗಮನ ಸೆಳೆದಿದೆ. ಜ್ಞಾನದ ಪರ್ಯಾಯ ಆಕರವಾಗಿ (Alternative source) ಅದನ್ನು ಮೊದಲಿಗಿಂತ ಈಗ ಹೆಚ್ಚು ವಿದ್ವದಾಸಕ್ತಿಯಿಂದ ನೋಡುವ ಪ್ರವೃತ್ತಿ ಆರಂಭಗೊಂಡಿದೆ. ಇದು ಜಾನಪದ ಅಧ್ಯಯನದ ದೃಷ್ಟಿ–ಧೋರಣೆಯಲ್ಲಿ ಎದ್ದುಕಾಣುವ ಮಹತ್ವದ ಪಲ್ಲಟವೆಂದೇ ಹೇಳಬೇಕು. ಈ ಪಲ್ಲಟ ಹೊಚ್ಚ ಹೊಸ ಜ್ಞಾನವನ್ನು ಶೋಧಿಸುವುದಷ್ಟೇ ಅಲ್ಲ, ಸಮಾಜದ ಜ್ಞಾನ ಮತ್ತು ನಡವಳಿಕೆಯ ರೂಢಿಬದ್ಧ ಶೋಧನ ವಿಧಾನಗಳನ್ನೇ ಬದಲಾಯಿಸುತ್ತಿದೆ. ಸಮಾಜದ ವರ್ತನೆಗಳನ್ನು ಇನ್ನೂ ಹೆಚ್ಚು ವೈಜ್ಞಾನಿಕವಾಗಿ, ಪ್ರಾಮಾಣಿಕವಾಗಿ ಅಭ್ಯಸಿಸಲು ಪ್ರೇರಣೆ ಒದಗಿಸುತ್ತಿದೆ. ಇದೊಂದು ಮಹತ್ತರ ಬೆಳವಣಿಗೆಯೇ. ಈ ಜಾಗೃತಿಯನ್ನು ಸಂಭ್ರಮದಿಂದ ಸ್ವಾಗತಿಸುವುದರೊಡನೆ ನಾವು ಕೆಲವು ಸವಾಲುಗಳನ್ನು ಎದುರಿಸಬೇಕಾಗಿದೆ. ಮೌಖಿಕ ಆಕರಗಳನ್ನು, ಅವುಗಳ ಅಧಿಕೃತತೆ (authenticity) ಯನ್ನು ನೆಚ್ಚುವ, ಈ ಆಕರಗಳು ಹಂಚಿಕೊಳ್ಳುವ ಅಧಿಕಾರ ಶಕ್ತಿಯನ್ನು ನಂಬುವ ಕಾಲ ಸನ್ನಿಹಿತವಾಗಿದೆ.

ಆದರೆ ಇದುವರೆಗೆ ಈ ದೇಶಾದ್ಯಂತ ಶೈಕ್ಷಣಿಕ ಘಟ್ಟದಲ್ಲಿ ನಡೆದಿರುವ ಅಧ್ಯಯನ ಪೂರ್ವಗ್ರಹೀತವಾದುದು ; ಕೇವಲ ಸಂಗ್ರಹಣೆ, ವಿಭಜನೆ, ಸೂಚಿ ಮತ್ತು ಪತ್ರಾಗಾರ ನಿರ್ಮಾಣ ಕಾರ್ಯವೇ ಜಾನಪದ ವಿದ್ವತ್ತು ಎಂದು ತಿಳಿದಿದ್ದ ಯುಗ ಅದು. ಆ ಯುಗ ಈಗ ಮುಗಿದು ಹೋಗಿದೆ. ಸಂಗ್ರಹಿತ ಸಾಮಗ್ರಿ, ಶೇಖರಗೊಂಡ ಜ್ಞಾನ— ಎಲ್ಲವೂ ಇವತ್ತಿನ ಭಾರತೀಯ ಜಾನಪದ ವಿದ್ವಾಂಸರು ಮತ್ತು ಇತರ ಸಮಾಜ ವಿಜ್ಞಾನಿಗಳ ಲಕ್ಷ್ಯವನ್ನು ನಿರೀಕ್ಷಿಸುತ್ತಾ ಕೂತಿವೆ. ವಾಸ್ತವವಾಗಿ ಇದೊಂದು ಬಹು ದೊಡ್ಡ ಕೆಲಸ. ಕೇವಲ ವಿವರಣೆಯನ್ನಷ್ಟೇ ಅದು ಬಯಸುತ್ತಿಲ್ಲ ; ನಮ್ಮ ಸಮಾಜದ ಸಾಹಿತ್ಯಿಕ ಸಂಕಥನಗಳಲ್ಲಿ ಈಗಾಗಲೇ ಕಂಡುಬಂದಿರುವ ಧೋರಣೆಯ ಪಲ್ಲಟ ಇಲ್ಲೂ

ಅವತರಿಸಬೇಕಾಗಿದೆ. ಭಾರತೀಯ ಸಮಾಜ ಮತ್ತು ಅದರ ಸಾಮಾಜಿಕ ವರ್ತನೆಗಳನ್ನು ಹೊಸ ಹೊಳಹುಗಳಿಂದ ವಿಶ್ಲೇಷಿಸಲು ಮತ್ತು ವ್ಯಾಖ್ಯಾನಿಸಲು ಜಾನಪದವನ್ನು ಮೌಖಿಕ ಸಂಕಥನವಾಗಿ ಹಾಗೂ ಪರ್ಯಾಯ ಜ್ಞಾನವನ್ನಾಗಿ ಪರಿಗಣಿಸುವಂತಾಗ ಬೇಕು. ಪಶ್ಚಿಮ ದೇಶಗಳಲ್ಲಿ ಯಾರು ಯಾರ ಸಂಕಥನಗಳ ಬೇರುಗಳು ಮೌಖಿಕ ಪರಂಪರೆಯಲ್ಲಿ ಹುದುಗಿವೆಯೋ ಅಲ್ಲೆಲ್ಲಾ ಈ ಕೆಲಸವನ್ನು ಆರಂಭಿಸಲಾಗಿದೆ. ಪರ್ಯಾಯ ಜ್ಞಾನವನ್ನು ಆಧರಿಸಿ ನಡೆಸಿದ ಸಂಶೋಧನೆಯ ಫಲಿತಗಳು ಈ ಸಮಾಜ ಗಳ ಧ್ಯೇಯ–ಧೋರಣೆಗಳನ್ನು ರೂಪಿಸಲು ಸಾಧನವಾಗಿ ಪರಿಣಮಿಸಿವೆ.

ಮೌಖಿಕ ಸಂಕಥನ, ಒಂದು ಪರ್ಯಾಯ ಜ್ಞಾನವಾಗಿ, ಇಂದು ಹಲವು ದೇಶ ಗಳಿಗೆ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ತಂದುಕೊಟ್ಟಿದೆ. ಅಲ್ಲದೆ, ಪ್ರಪಂಚದ ಹಲವು ಸ್ಥಳಗಳಲ್ಲಿ ರಾಜಕೀಯ ಮತ್ತು ಸಾಮಾಜಿಕ ಶೋಷಣೆಗಳನ್ನು ತಡೆದಿದೆ. ಮೌಖಿಕ ಸಂಕಥನ ಮತ್ತು ಅದರ ಗಂಭೀರ ವಿಶ್ಲೇಷಣೆ ಲಿಂಗ ಅಸಮಾನತೆ ಬಗೆಗೂ ನಮ್ಮ ತಿಳಿವಳಿಕೆಯನ್ನು ವಿಸ್ತರಿಸಿದೆ ಹಾಗೂ ಮಾನವ ಕುಲದ ಕ್ರೂರ ಶೋಷಣಾ ಪ್ರವೃತ್ತಿಯನ್ನು ಬಯಲಿಗೆಳೆದಿದೆ.

ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿ ಎಂದರೆ ಈ ಮೌಖಿಕ ಸಂಕಥನ ಒಂದು ಪರ್ಯಾಯ ಜ್ಞಾನವಾಗಿ ಅದರ ಒಡಲೊಳಗೇ ಇರುವ ಸಾಮಾಜಿಕ ರೂಪಾವಳಿಯ ಪ್ರಾಬಲ್ಯವನ್ನು ಮತ್ತು ತಪ್ಪಿಹೋದ ಅದರ ಬಳಕೆಯನ್ನು ತಲೆಕೆಳಗು ಮಾಡುವ ಹೊಣೆ ಹೊತ್ತಿರುವುದು. ಅಷ್ಟೇ ಅಲ್ಲ, ವಿಜ್ಞಾನಿಗಳು ಮತ್ತು ಸಾಹಿತ್ಯಿಕ ವಿದ್ವಾಂಸರನ್ನು ಸಾಮಾಜಿಕ ಸಂಕಷ್ಟಗಳಿಗೆ ಹೊಣೆಗಾರರನ್ನಾಗಿ ಮಾಡುವ ಸಾಮರ್ಥ್ಯ ಹೊಂದಿದೆ. ಈ ಸಂಗತಿಯನ್ನು ಇಲ್ಲಿ ನಿಷ್ಕಾರಣವಾಗಿ ಪ್ರತಿಪಾದಿಸುತ್ತಿಲ್ಲ. ಭಾರತೀಯ ಸಮಾಜದ ಸಂದರ್ಭದಲ್ಲಿ ಇದಕ್ಕೆ ಒಂದು ಯುಕ್ತ ಸನ್ನಿವೇಶ ಸೃಷ್ಟಿಯಾಗಿದೆ. ಜ್ಞಾನ ವನ್ನು, ಎಂದಿನಂತೆ ಇಂದು ಕೂಡ ಅಧಿಕಾರ ಸಾಧನವಾಗಿ ಮತ್ತು ಶೋಷಣೆಯ ಸಾಧನವಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಕಾರಣಕ್ಕಾಗಿ ಯಾರೇ ಒಬ್ಬ ಜವಾಬ್ದಾರಿಯುತ ಸಮಾಜ ವಿಜ್ಞಾನಿ ಮೌಖಿಕ ಸಂಕಥನದ ಮಹತ್ವವನ್ನು ನಿರ್ಲಕ್ಷಿಸ ಲಾಗದು. ಭಾರತದ ಅನೇಕ ಸಾಹಿತ್ಯಿಕ ಮತ್ತು ಸಾಮಾಜಿಕ ಚಳವಳಿಗಳು ಆಗಾಗ ಈ ದೇಶದಲ್ಲಿ ಜ್ಞಾನದ ಈ ಪ್ರಾಬಲ್ಯವನ್ನು ವಿರೋಧಿಸುತ್ತಲೇ ಬಂದಿವೆ. ಆದರೂ ಭಾರತದಲ್ಲಿ ಜ್ಞಾನ, ಬಹುಮಟ್ಟಿಗೆ, ಸಾಮ್ರಾಜ್ಯಶಾಹಿ–ವಸಾಹತು ಶಕ್ತಿಗಳ ಹಿಡಿತದಲ್ಲೇ ಇದೆ. ಆ ಶಕ್ತಿಗಳು ಯಾಜಮಾನ್ಯ ಸ್ವಭಾವದವಷ್ಟೇ ಅಲ್ಲ, ಅಧಿಕಾರ ಕೇಂದ್ರಿತವೂ ಆಗಿವೆ. ಇವುಗಳಿಂದ ಮುಕ್ತರಾಗಲು ಉಳಿದಿರುವ ಏಕೈಕ ಮಾರ್ಗ ಎಂದರೆ ಜಾನಪದ ವನ್ನು ಮೌಖಿಕ ಸಂಕಥನವಾಗಿ ಪರಿಭಾವಿಸುವುದು.

ಹಿಂದಿನ ಮತ್ತು ಇಂದಿನ–ಎರಡೂ ಕಾಲದ ನಮ್ಮ ಸಮಾಜದ ಸಾಮಾಜಿಕ ಮಂಗಡಗಳು ಮತ್ತು ವರ್ತನೆಯನ್ನು ಶೋಧಿಸುವುದೇ ಮೌಖಿಕ ಸಂಕಥನದ ಮುಖ್ಯ ಕಾಳಜಿ. ಪರ್ಯಾಯ ಜ್ಞಾನವಾಗಿ ಒಮ್ಮೆ ನಾವು ಅದನ್ನು ಬಳಸುವಂತಾದರೆ ನಿಶ್ಚಿತ

ವಾಗಿಯೂ ನಾವು ಹೊಸ ವಿನ್ಯಾಸಗಳನ್ನು ರೂಪಿಸುತ್ತೇವೆ; ಹೊಸ ರೂಪಾವಳಿಗಳನ್ನು ಕಂಡುಕೊಳ್ಳುತ್ತೇವೆ—ಇದು ಭಾರತೀಯ ಸಾಮಾಜಿಕ ವರ್ತನೆಗಳನ್ನು ಪುನರ್ ವ್ಯಾಖ್ಯಾನಿಸಲು ಸಹಾಯಕವಾಗಿದೆ. ಈ ಚಟುವಟಿಕೆಗಳನ್ನು ಗಂಭೀರವಾಗಿ ಮುಂದುವರೆಸಿದ ಪಕ್ಷದಲ್ಲಿ ತಂತ್ರಜ್ಞಾನದ ಅತಿಕ್ರಮಣ, ಜಾಗತೀಕರಣ, ಭಾಷಾ ಪಾರಮ್ಯ, ಬಳಕೆಯಲ್ಲಿಲ್ಲದ ಮತ್ತು ಹಳಿತಪ್ಪಿಸುವ ಸಾಹಿತ್ಯಿಕ ರೂಪಾವಳಿಗಳಿದ್ದಾಗ್ಯೂ ನಮ್ಮ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳುವ ಅವಕಾಶವಿರುತ್ತದೆ. ಈ ಅತಿಕ್ರಮಣಗಳು ಮುಖ್ಯವಾಗಿ ರಾಜಕೀಯ ಹಾಗೂ ಆರ್ಥಿಕ ಸ್ವರೂಪವು. ಈ ಉಗ್ರ ಅತಿಕ್ರಮಣ ಪ್ರಕ್ರಿಯೆಯು ಮುಂಚೂಣಿಯಲ್ಲಿರುವಂಥದು ಹಾನಿಕರ ಆದರ್ಶಗಳಿಂದ ಕೂಡಿದ ಆರ್ಥಿಕ ವ್ಯವಸ್ಥೆಯ ಕ್ರಮ. ಮಾನವ ಕುಲದ ಬಗೆಗೆ ಅದು ಹೊಂದಿರುವ ಲೋಕದೃಷ್ಟಿಯೂ ದೋಷಪೂರಿತವಾದುದು. ಮಾನವ ವರ್ತನೆಗಳಲ್ಲಿ ವಿಭಿನ್ನತೆಯನ್ನು ಗಣನೆಗೆ ತಂದುಕೊಳ್ಳುವ ಔದಾರ್ಯವೇ ಅಲ್ಲಿಲ್ಲ. ಕೇವಲ ಲಾಭ ಸಂಪಾದನೆಗಾಗಿ ಮತ್ತು ರಾಜಕೀಯಕ್ಕಾಗಿ ಈ ಭೂವಲಯವನ್ನೇ ಸಂಕುಚಿತಗೊಳಿಸುವ ಪ್ರಯತ್ನ ಅದು.

ಈ ಅತಿ ರಭಸಗತಿಯ ಅತಿಕ್ರಮಣ ಪ್ರಕ್ರಿಯೆಯ ದೃಷ್ಟಿಯಿಂದ ಹೇಳುವುದಾದರೆ, ಜಾನಪದ ಅಧ್ಯಯನ ಈ ದೇಶದಲ್ಲಿ ನವವಸಾಹತುಶಾಹಿ ಮತ್ತು ನವ ಮಿಷನರಿಗಳ ಉದಯದಿಂದ ರಕ್ಷಣೆ ಹೊಂದಬೇಕಾಗಿದೆ. ಮುಗ್ಧರ ಹಾಗೂ ಸರಳ ಜೀವಿಗಳ ದಾರಿದ್ರ್ಯ ಮತ್ತು ಆರ್ಥಿಕ ಬಡತನವನ್ನು ಇಂಥ ಲಾಭಕೋರ ಜಾಗತಿಕ ರೂಪಾವಳಿಗಳು ಶೋಷಣೆಗೈಯಬಹುದು. ಜಾನಪದ ಒಂದು ಮಾರಾಟದ ಸರಕು ಅಲ್ಲ; ಅಂತೆಯೇ ಸ್ವೀಕರಣ ಮಾಡುವ ವಹಿವಾಟೂ ಅಲ್ಲ ಎಂಬುದನ್ನು ಮನಗಾಣಲು ಇದು ಸಕಾಲ. ನಮ್ಮ ಅಸ್ತಿತ್ವ ಮತ್ತು ಕಲ್ಯಾಣಕ್ಕಾಗಿ ಹಾಗೂ ಉತ್ತಮ ಭವಿತವ್ಯಕ್ಕಾಗಿ ನಾವು ಏನನ್ನು ರೂಢಿಸಿಕೊಂಡಿದ್ದೇವೊ, ಬಳಕೆ ಮಾಡುತ್ತಿದ್ದೇವೊ ಅದೇ ಅಧಿಕೃತ ಜ್ಞಾನ. ಅದರ ಸದ್ಬಳಕೆಯಾದರೆ ಮಾನವ ಬದುಕು ಪ್ರವರ್ಧಿಸುವುದು ನಿಶ್ಚಿತ.

ಅಂಬಳಿಕೆ ಹಿರಿಯಣ್ಣ
ಅಧ್ಯಕ್ಷ
ಸಂಪಾದಕ ಮಂಡಳಿ

ಪರಿವಿಡಿ

ಡಾ- ಎನ್. ಉಷಾರಾಣಿ

ಪತ್ರಿಕೋದ್ಯಮ ಮತ್ತು ಸಮಾಜ

ಪತ್ರಿಕೋದ್ಯಮಕ್ಕೂ ಸಮಾಜಕ್ಕೂ ನಿಕಟ ಸಂಬಂಧವಿದೆ. ಸಮಾಜವು ಪ್ರಜಾಪ್ರಭುತ್ವ ತತ್ವ ಅಥವಾ ಸರ್ವಾಧಿಕಾರಿ ತತ್ವದ ಮೇಲೆ ರಚಿತವಾಗಿರಬಹುದು. ಸಮಾಜದ ರಚನೆ ಮತ್ತು ಕಟ್ಟುನಿಟ್ಟುಗಳ ಮೇಲೆ ಪತ್ರಿಕೋದ್ಯಮದ ಕರ್ತವ್ಯ, ನಿಷ್ಠೆ, ತತ್ವ ಮತ್ತು ಮೌಲ್ಯಗಳು ನಿಂತಿರುತ್ತವೆ.

ನಮ್ಮದು ಪ್ರಜಾಪ್ರಭುತ್ವ ಸಮಾಜ. ಇಲ್ಲಿ ಅಭಿಪ್ರಾಯವನ್ನು ಸ್ವತಂತ್ರವಾಗಿ ವ್ಯಕ್ತಪಡಿಸಲು, ಸಾರ್ವಜನಿಕ ಸುದ್ದಿ ಪ್ರಸಾರ ಮಾಡಲು ಮತ್ತು ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಿದೆ. ಪತ್ರಿಕೆಗಳು ನಿರ್ಭಯವಾಗಿ ಕೆಲಸ ಮಾಡಿದಾಗ ಮಾತ್ರ ಸ್ವತಂತ್ರ ಸಮಾಜದ ನಿರ್ಮಾಣ ಸಾಧ್ಯ.

ಪ್ರಜಾಪ್ರಭುತ್ವ ಸಮಾಜದಲ್ಲಿ ಜನಾಭಿಪ್ರಾಯಕ್ಕೆ ಮನ್ನಣೆ ಹೆಚ್ಚು. ಪತ್ರಿಕಾ ಕ್ಷೇತ್ರದಲ್ಲಿ ಜನಾಭಿಪ್ರಾಯ ಸಂಗ್ರಹಣೆ ಇತ್ತೀಚೆಗೆ ಕಂಡುಬಂದಿರುವ ಚಟುವಟಿಕೆಗಳಲ್ಲೊಂದು. 'ಇಂಡಿಯಾ ಟುಡೆ' 'ಇಂಡಿಯನ್ ಎಕ್ಸ್‌ಪ್ರೆಸ್' ಮತ್ತು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗಳು ಇತ್ತೀಚಿನ ವಿಧಾನಸಭೆ ಚುನಾವಣೆ (೧೯೯೪) ಸಮಯದಲ್ಲಿ ಜನಾಭಿಪ್ರಾಯ ಸಂಗ್ರಹಿಸಿ ಪ್ರಕಟಿಸಿವೆ. ಆದರೆ ಇವುಗಳ ಫಲಿತಾಂಶ ಮಾತ್ರ ಭಿನ್ನವಾಗಿವೆ. 'ಇಂಡಿಯಾ ಟುಡೆ' ಪಾಕ್ಷಿಕ ಪ್ರಕಟಿಸಿರುವ ಚುನಾವಣಾ ವರದಿ, ಹೊರಬಿದ್ದಿರುವ ಫಲಿತಾಂಶದೊಂದಿಗೆ ಹೋಲಿಸಿದಾಗ ಶೇ. ೯೯ ರಷ್ಟು ಸರಿಯಾಗಿದ್ದು ಇತರ ಪತ್ರಿಕೆಗಳು ನಿಖರವಾದ ಚುನಾವಣಾ ವರದಿ ಕೊಡುವಲ್ಲಿ ವಿಫಲವಾಗಿವೆ. ಈ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ವೈವಿಧ್ಯಮಯ ಫಲಿತಾಂಶ ಬರಲು ಕಾರಣ ಏನು? ಈ ವ್ಯತ್ಯಾಸಗಳಿಂದ ಪತ್ರಿಕೆಗಳ ನಿಖರತೆ ಮತ್ತು ಪ್ರಾಮಾಣಿಕತೆಯನ್ನೆ ಪ್ರಶ್ನಿಸಬೇಕಾಗಿದೆ. ಚುನಾವಣೆಗೆ ಮುಂಚೆ ಸಮೀಕ್ಷೆ ನಡೆಸುವುದು ಮತ್ತು ಚುನಾವಣೆ ನಂತರ 'exit polls' ಎನ್ನುವ ಹೊಸ ರೀತಿಯ ಸಮೀಕ್ಷೆ ನಡೆಸಿರುವ ಪತ್ರಿಕೆಗಳ ಫಲಿತಾಂಶ ವರದಿಗಳಲ್ಲಿ ಅನೇಕ ನ್ಯೂನತೆಗಳು ಕಂಡುಬಂದಿವೆ. ಈ ಆಧುನಿಕ ವಿಜ್ಞಾನ ಯುಗದಲ್ಲಿ ಪತ್ರಿಕೆಗಳಿಗೆ ಬೇಕಾದ ಎಲ್ಲಾ ಸೌಲಭ್ಯಗಳು ದೊರಕುವಾಗ ಪತ್ರಿಕೆಗಳು ತಮ್ಮ ಸಾಂಪ್ರದಾಯಿಕ ವರದಿ–ವಿಧಾನಗಳನ್ನು ಬದಲಾಯಿಸಿಕೊಳ್ಳಬೇಕು. ವೈಜ್ಞಾನಿಕ ರೀತಿಯಲ್ಲಿ ನಡೆಸುವ

ಬೆಳೆಯುತ್ತದೆ ಇವೇ ಮೊದಲಾದವು ಕೇವಲ ಪ್ರಶ್ನೆಗಳಾಗಿ ಉಳಿದಿವೆ. ಈ ವಿಚಾರಗಳ ಕಡೆಗೆ ನೈಜವಾಗಿ ಆಲೋಚಿಸುವ ಪ್ರಯತ್ನ ಅಗತ್ಯವಾಗಿದೆ.

ಮೇಲ್ಕಂಡ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಾಮಾಣಿಕ ಸಂಶೋಧನಾ ಯತ್ನ ಮಾಡಬೇಕಾಗಿದೆ. ಕೆಂಗಲ್ ಹನುಮಂತಯ್ಯನವರ ಜೀವನ, ಸುಧಾರಿತ ಆಡಳಿತ ನೀತಿ, ಸಾಮಾಜಿಕ ಜೀವನದಲ್ಲಿ ಮನೆ ಮಾಡಿರುವ ಸ್ವಾರ್ಥತೆ, ಅಧಿಕಾರಲಾಲಸೆ ಲಂಚಗುಳಿತನ, ಅಪ್ರಾಮಾಣಿಕತೆ ರಾಜಕೀಯ ಅನಿಷ್ಟಗಳ ನಿವಾರಣೆ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುವ ಯತ್ನವನ್ನು ಮಾಡಬೇಕಾಗಿದೆ ಹಾಗೂ ಉತ್ತಮ ಸಮಾಜದ ಉಗಮಕ್ಕೆ ಸರಿಯಾದ ವಾತಾವರಣ ನಿರ್ಮಿಸಬೇಕಿದೆ. ಇದಕ್ಕಾಗಿ ವ್ಯಾಪಕ ಜನಜಾಗೃತಿ ನಡೆಯಬೇಕಿದೆ. ಸರ್ಕಾರದ ಕಾರ್ಯ ಜವಾಬ್ದಾರಿ ಹೊತ್ತವರ ಧೋರಣೆಗಳನ್ನು ಕುರಿತು ಚರ್ಚೆ ನಡೆಯಬೇಕಿದೆ. ಪ್ರಜಾತಂತ್ರ ವಿರೋಧಿ ಧೋರಣೆಗಳ ಬಗ್ಗೆ ವ್ಯಾಪಕ ಚರ್ಚೆ ನಡೆಯಬೇಕಾಗಿದೆ.

ಈ ಎಲ್ಲಾ ಆಶಯಗಳಿಗೆ ಭಾರತದ ರಾಜಕೀಯ ಚರಿತ್ರೆಯಲ್ಲಿ ಕೆಂಗಲ್ ಹನುಮಂತಯ್ಯನವರ ಆಲೋಚನೆಗಳು ಪರಿಹಾರ ನೀಡಬಲ್ಲವಾಗಿವೆ. ಅದರಲ್ಲೂ ಕರ್ನಾಟಕಕ್ಕೆ ಸಂಬಂಧಿಸಿದಂತೆ ಅವರನ್ನು ಕುರಿತ ಅಧ್ಯಯನ ಕರ್ನಾಟಕದ ರಾಜಕೀಯ ಚರಿತ್ರೆಯ ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಬಲ್ಲದೆಂಬುದು ನನ್ನ ಗ್ರಹಿಕೆ.

ಕೆಂಗಲ್ ಹನುಮಂತಯ್ಯನವರು ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆ ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿಯಲ್ಲಿ ೧೯೦೮ ಫೆಬ್ರುವರಿ ೧೦ರಂದು ಜನಿಸಿದರು. ಇವರ ತಂದೆ ವೆಂಕಟೇಗೌಡರು, ತಾಯಿ ನಂಜಮ್ಮ. ಪ್ರಾಥಮಿಕ ಶಿಕ್ಷಣ ವನ್ನು ಕೆಂಗೇರಿಯಲ್ಲಿ ಪಡೆದರು. ತಂದೆತಾಯಿಗಳು ಅವಿದ್ಯಾವಂತರಾಗಿದ್ದುದರಿಂದಾಗಿ ಮತ್ತು ಬಾಲ್ಯ ಜೀವನದಲ್ಲಿ ವ್ಯವಸಾಯದ ಕಡೆ ಹೆಚ್ಚು ಗಮನವನ್ನು ಕೊಡಬೇಕಾಗಿದ್ದ ರಿಂದಾಗಿ ಹನುಮಂತಯ್ಯನವರ ಪ್ರಾಥಮಿಕ ಶಿಕ್ಷಣ ಬಹಳ ಕಷ್ಟದಿಂದ ಕೂಡಿದ್ದಿತು. ೧೯೨೦ರಲ್ಲಿ ಎಲ್. ಎಸ್. ಶೈಕ್ಷಣಿಕ ವ್ಯಾಸಂಗವನ್ನು ಪ್ರಥಮ ದರ್ಜೆಯಲ್ಲಿ ಮುಗಿಸಿದರು. ಆರ್ಥಿಕವಾಗಿ ಸಂಕಷ್ಟ ಸ್ಥಿತಿಯಲ್ಲಿದ್ದ ಕೆಂಗಲ್ ಹನುಮಂತಯ್ಯನವರು ದಿವಂಗತ ಎಚ್. ಸಿ. ದಾಸಪ್ಪನವರ ಅನುಗ್ರಹದಿಂದ ದೊರೆತ ವಿದ್ಯಾರ್ಥಿ ವೇತನದ ಸಹಾಯ ದಿಂದ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ (೧೯೩೦) ಬಿ. ಎ. ಪದವಿಯನ್ನು ದ್ವಿತೀಯ ದರ್ಜೆಯಲ್ಲಿ ಪಡೆದರು ಹಾಗೂ ಪೂನಾದ ಕಾನೂನು ಕಾಲೇಜಿನಲ್ಲಿ ಕಾನೂನಿನಲ್ಲಿ ಪದವಿ ಪಡೆದು ಮೈಸೂರು ಸಂಸ್ಥಾನದಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸಿದರು. ಹನುಮಂತಯ್ಯನವರು ತಮ್ಮ ವೈಯಕ್ತಿಕ ಜೀವನದ ಕಷ್ಟಗಳ ಜೊತೆಗೆ ಸಾರ್ವಜನಿಕ ಕೆಲಸಗಳಲ್ಲಿ ಭಾಗವಹಿಸಿ ತಮ್ಮಲ್ಲಿದ್ದ ಸುಪ್ತ ಪ್ರತಿಭೆಯನ್ನು ಸಮಾಜಕ್ಕೆ ತೋರಿಸಿಕೊಟ್ಟರು. ೧೯೩೩ರಲ್ಲಿ ಬೆಂಗಳೂರು ಜಿಲ್ಲೆಯ 'ಹರಿಜನ ಸೇವಕ ಸಂಘ'ದ ಕಾರ್ಯದರ್ಶಿಯಾಗಿ ಮತ್ತು ೧೯೩೪ರಲ್ಲಿ ಬೆಂಗಳೂರು ಹಿಂದಿ ಪ್ರಚಾರ

ಈ ಜನಾಭಿಪ್ರಾಯ ಸಂಗ್ರಹಣೆಯನ್ನು ಪತ್ರಿಕೆಯವರು ಪ್ರಾಮಾಣಿಕತೆಯಿಂದ ಮಾಡಿದರೆ ಅದರ ಸದುಪಯೋಗ ಸಮಾಜಕ್ಕೆ ಆಗುತ್ತದೆ. ಭಾಷಣ, ಸಮ್ಮೇಳನಗಳಂತಹ ದಿನನಿತ್ಯದ ವರದಿಗಳನ್ನು ಮಾಡುವುದು ಕಷ್ಟಕರವಾದುದೇನಲ್ಲ. ಆದರೆ ಜನಾಭಿಪ್ರಾಯವನ್ನು ಸಂಗ್ರಹಿಸುವುದು ಮತ್ತು ಅದನ್ನು ಪರಿಣಾಮಕಾರಿಯಾಗಿ ಪತ್ರಿಕೆಯಲ್ಲಿ ಬಳಸಿಕೊಳ್ಳುವುದು ಪತ್ರಕರ್ತರಿಗೆ ಒಂದು ಸವಾಲು.

ಪತ್ರಿಕೆ ತನಗೆ ಬೇಕಾದ ಸುದ್ದಿ ಮಾತ್ರ ಪ್ರಕಟಿಸುವುದಕ್ಕಿಂತ ಜನರು ಅದರಿಂದ ಏನನ್ನು ನಿರೀಕ್ಷಿಸುತ್ತಾರೆ ಎನ್ನುವುದನ್ನು ತಿಳಿಯುವುದು ಅವಶ್ಯಕ. ನಮ್ಮಲ್ಲಿ ಹೆಚ್ಚಿನ ಪತ್ರಿಕೆಗಳು ಓದುಗರ ಸಮೀಕ್ಷೆಯನ್ನು ನಡೆಸುವುದೇ ಅಪರೂಪ. ಓದುಗರ ಆಸಕ್ತಿ, ಅವಶ್ಯಕತೆ ಮತ್ತು ಅದರ ಚಿತ್ರಣದ ಪರಿಚಯ ಯಾವುದೇ ಪತ್ರಿಕೆಗೆ ಆದರೂ ಇರಬೇಕು. ಓದುಗರ ನಾಡಿಯನ್ನು ಪತ್ರಿಕೆ ತಿಳಿಯಬೇಕು. ಒಂದು ಪತ್ರಿಕೆಯ ಗುಣಮಟ್ಟ ಕಾಪಾಡಿಕೊಳ್ಳಲು ಓದುಗರ ಸಮೀಕ್ಷೆ ಒಂದು ಶಕ್ತಿಶಾಲಿ ಸಾಧನ.

ನಮ್ಮ ಪತ್ರಿಕೆಗಳಿಗೆ ದೊಡ್ಡದೊಡ್ಡ ಜನಾಂದಲೋನವನ್ನೇ ನಡೆಸುವಂತಹ ಬೆಟ್ಟದಷ್ಟು ವಿಷಯಗಳಿದ್ದರೂ ಅವಶ್ಯಕವಿಲ್ಲದ ವಿಚಾರಗಳಿಗೆ ಸ್ಥಳಾವಕಾಶ ನೀಡಲಾಗುತ್ತಿದೆ. ಎಲ್ಲರಿಗೂ ತಿಳಿದಂತೆ, ರಾಜಕೀಯ ಸುದ್ದಿ ಪತ್ರಿಕೆಯ ಪ್ರಮುಖ ಆಹಾರ. ಬಹುಶಃ ಜಾಹಿರಾತನ್ನು ಬಿಟ್ಟರೆ ಎರಡನೇ ಸ್ಥಾನ ರಾಜಕೀಯ ಸುದ್ದಿಗೆ ಪತ್ರಿಕೆಯಲ್ಲಿ ಪ್ರಾಶಸ್ತ್ಯ. ಅಲ್ಲದೆ, ಹೊರದೇಶದ ಕ್ಷುಲ್ಲಕ ವಿಚಾರಗಳಿಗೂ ಅಪಾರ ಗಮನ ನೀಡುವ ಪತ್ರಿಕೆಗಳು ತಮ್ಮ ಸುತ್ತಮುತ್ತಲಿನ ಸಮುದಾಯದ ಅವಶ್ಯಕತೆಗಳನ್ನು ಗಮನಲ್ಲಿಟ್ಟುಕೊಳ್ಳದಿರುವುದು ವಿಷಾದನೀಯ. ಬ್ರಿಟಿಷರ ಆಡಳಿತ ಭಾರತದಲ್ಲಿ ಕೊನೆಗೊಂಡಿದ್ದರೂ ಅವರ ಬಗೆಗಿನ ಒಲವು ಮಾತ್ರ ಪತ್ರಿಕೆಗಳಿಗೆ ಇಂಗಿಲ್ಲ. ಬ್ರಿಟನ್ ರಾಜಮನೆತನದ ಸುದ್ದಿ ನಮ್ಮ ಪತ್ರಿಕೆಗಳ ಅಚ್ಚುಮೆಚ್ಚು. ಉದಾಹರಣೆಗೆ ಬ್ರಿಟನ್‌ನ ರಾಜಮನೆತನದ ಡಯಾನಾಳು ಆಸ್ಟ್ರೇಲಿಯಾ ಪ್ರವಾಸದಲ್ಲಿ ಯಾವಯಾವ ಉಡುಗೆ–ತೊಡುಗೆ ಧರಿಸಿದ್ದಳು ಎಂಬುದನ್ನು ನಮ್ಮ ಎಲ್ಲಾ ಪತ್ರಿಕೆಗಳು ಒಂದೇ ರೀತಿಯಾಗಿ ಚಾಚೂತಪ್ಪದೆ ವರದಿ ಮಾಡಿವೆ. ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರ ಮುದ್ದಿನ ಬೆಕ್ಕು 'ಸಾಕ್ಸ್'ನ ಚಿತ್ರವನ್ನು ಮತ್ತು ಅದರ ಬಗ್ಗೆ ಲೇಖನವನ್ನು ನಮ್ಮ ಪತ್ರಿಕೆಗಳು ವರದಿ ಮಾಡಿದ್ದು ಅತಿರೇಕದ ಪರಮಾವಧಿಯನ್ನು ಮುಟ್ಟುತ್ತದೆ.

ಪತ್ರಿಕೆ ಸಮಾಜದ ಹುಣ್ಣುಗಳನ್ನು ವಿಮರ್ಶಾತ್ಮಕವಾಗಿ ಟೀಕೆಮಾಡಬೇಕು ಮತ್ತು ಕುಂದುಕೊರತೆಗಳಿಗೆ ಸ್ಪಂದಿಸಬೇಕು. ಮೈಸೂರಿನ ಸ್ಥಳಿಯ ಪತ್ರಿಕೆ 'ಆಂದೋಲನ'ದ ಉದಾಹರಣೆ ಇಲ್ಲಿ ಸೂಕ್ತ. ಇದು ಹೆಸರಾಂತ ಕನ್ನಡ ದಿನಪತ್ರಿಕೆ. ಅತ್ಯಂತ ಜನಪ್ರಿಯವಾಗಿರುವ ಈ ಪತ್ರಿಕೆಯ ಪ್ರಸರಣ ಸಂಖ್ಯೆ ೩೬,೦೦೦. ಪ್ರತಿಗಳು ಕೇವಲ ಎರಡು ಪುಟ ಹೊಂದಿರುವ 'ಬ್ರಾಡ್‌ಸೈಜ್' ಅಳತೆಯ ಈ ಸ್ಥಳೀಯ ಕನ್ನಡ ದಿನ ಪತ್ರಿಕೆಯೊಂದು ಇಷ್ಟೊಂದು ಜನಪ್ರಿಯವಾಗಿರುವುದು ನಮ್ಮ ರಾಜ್ಯದಲ್ಲೇ ಮೊದಲು ಎಂದು ಹೇಳ

ಸಭೆಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ಪ್ರಥಮವಾಗಿ ತಮ್ಮ ವಕೀಲಿ ವೃತ್ತಿಯನ್ನು ಬೆಂಗಳೂರಿನಲ್ಲಿ ಆರಂಭಿಸಿದರು. ವಕೀಲಿ ವೃತ್ತಿಯ ಜೊತೆಗೆ ಸಾಮಾಜಿಕ, ರಾಜಕೀಯ ಮತ್ತು ನೈತಿಕ ಚಟುವಟಿಕೆಗಳಲ್ಲಿ ಸಕ್ರಿಯವಾದ ಪಾತ್ರ ವಹಿಸಿದ್ದರು. ಅಲ್ಲದೆ ಯುವ ವಕೀಲರಿಗೆ ಬೇರೆ ಹವ್ಯಾಸಗಳಲ್ಲಿ ಸಮಯವನ್ನು ವ್ಯಯ ಮಾಡದೆ ಕಾನೂನನ್ನು ಕರಗತ ಮಾಡಿಕೊಳ್ಳಬೇಕು ಎಂಬ ಕಿವಿ ಮಾತನ್ನು ಹೇಳುತ್ತಿದ್ದರು. ಇದರಿಂದಾಗಿಯೇ ಅವರು ತಮ್ಮ ವಕೀಲಿ ವೃತ್ತಿಯಲ್ಲಿ ಅಪಾರ ವಿದ್ವತ್ತು, ಪಾಂಡಿತ್ಯವನ್ನು ಪಡೆದಿದ್ದರೆಂಬುದು ತಿಳಿಯುತ್ತದೆ. ಕಾನೂನು ಶಾಸ್ತ್ರದ ಆಳವಾದ ಅಧ್ಯಯನ, ಆಳವಾದ ಜ್ಞಾನ ಅವರ ಭವಿಷ್ಯತ್ತಿನಲ್ಲಿ ವಿಧಾನಸಭೆ, ವಿಧಾನಪರಿಷತ್ತು, ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಸಮರ್ಥವಾಗಿ ಕಾರ್ಯನಿರ್ವಹಣೆ ಮಾಡಲು ಸಹಾಯಕಾರಿಯಾಯಿತು.

ಸ್ವಾತಂತ್ರ್ಯ ಚಳವಳಿಯಲ್ಲಿ ಹನುಮಂತಯ್ಯನವರ ಪಾತ್ರ

ಅಂದಿನ ಮೈಸೂರು ಸಂಸ್ಥಾನದಲ್ಲಿ ಅನೇಕ ವಕೀಲರು ತಮ್ಮ ಜೀವನವನ್ನೆಲ್ಲಾ ಸ್ವಾತಂತ್ರ್ಯ ಚಳವಳಿಗೆ ಮೀಸಲಾಗಿಟ್ಟಿದ್ದರು. ಅಂತಹವರಲ್ಲಿ ಪ್ರಮುಖರಾದವರೆಂದರೆ ಎಚ್. ಸಿ. ದಾಸಪ್ಪ, ಟಿ. ಸಿದ್ದಲಿಂಗಯ್ಯ, ಕೆ. ಟಿ. ಭಾಷ್ಯಂ ಇನ್ನೂ ಮುಂತಾದವರು; ಇಂತಹ ಸ್ವಾತಂತ್ರ್ಯ ಚಳವಳಿಯ ಕಾಲದಲ್ಲೂ ಅನೇಕ ಸಾಮಾಜಿಕ ಸುಧಾರಣೆ ಮಾಡಿದ ವ್ಯಕ್ತಿ ಹನುಮಂತಯ್ಯನವರು ಎಂದರೆ ಅತಿಶಯೋಕ್ತಿಯಾಗಲಾರದು. ಅಂದಿನ ಮೈಸೂರು ಸಂಸ್ಥಾನದ ಪರಿಸ್ಥಿತಿಯಲ್ಲೂ ಬ್ರಿಟಿಷರ ಮತ್ತು ಶ್ರೀಮಾನ್ ಮಹಾರಾಜರ ಆಡಳಿತದ ದೋಷಗಳನ್ನು ಸಾರ್ವಜನಿಕರಿಗೆ ಮನದಟ್ಟು ಮಾಡಿಕೊಟ್ಟು ಜನರನ್ನು ಸ್ವಾತಂತ್ರ್ಯ ಚಳವಳಿಗೆ ಧುಮುಕುವಂತೆ ಮಾಡಿದಂತಹ ಹೋರಾಟಗಾರರಲ್ಲಿ ಕೆಂಗಲ್ ಹನುಮಂತಯ್ಯನವರು ಪ್ರಮುಖರು. ಮೈಸೂರು ಸಂಸ್ಥಾನದಲ್ಲಿ ಮಹಾರಾಜರ ಸರ್ಕಾರವನ್ನು ವಜಾ ಮಾಡಿ ಪ್ರಜೆಗಳಿಂದ ಚುನಾಯಿತರಾದ ಪರಿಪೂರ್ಣ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಬೇಕೆಂಬುದು ಹನುಮಂತಯ್ಯನವರ ಇಚ್ಛೆಯಾಗಿದ್ದಿತು. ೧೯೩೭ರಲ್ಲಿ ಅಂದು ಪ್ರಬಲ ಪಕ್ಷವಾಗಿದ್ದಂತಹ ಪ್ರಜಾ ಸಂಯುಕ್ತ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಲು ಪ್ರಯತ್ನಪಟ್ಟು ಯಶಸ್ವಿಯಾದರು. ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ೧೯೩೮ ಏಪ್ರಿಲ್ ೧೧ರಂದು ಮಂಡ್ಯಜಿಲ್ಲೆಯ ಶಿವಪುರದಲ್ಲಿ ಸಮಾವೇಶಗೊಂಡಿತ್ತು. ಈ ಅಧಿವೇಶನದಲ್ಲಿ ಕಾಂಗ್ರೆಸ್ ಸಂಸ್ಥೆಯ ಧ್ಯೇಯಧೋರಣೆಗಳನ್ನು ಜನತೆಗೆ ಮನವರಿಕೆ ಮಾಡಿಕೊಟ್ಟು ಸಮಾವೇಶ ಬಹಳ ಶಾಂತಿಯುತವಾಗಿ ನಡೆಯಲು ಅಂದಿನ ಯುವಕ ಹನುಮಂತಯ್ಯನವರ ಅಪಾರ ಶ್ರಮವು ಇದ್ದಿತೆಂದು ಹೇಳಬಹುದು. ಅವರು ತಮ್ಮ ಸ್ವಜ್ಞಾನ, ಸ್ವಶಕ್ತಿ, ಸ್ವಆಲೋಚನೆ, ಸ್ವಂತಿಕೆಯ ಸಾಮರ್ಥ್ಯ ಮತ್ತು ಪ್ರತಿಭೆಗಳಿಂದ ರಾಷ್ಟ್ರನಾಯಕರಾದರೇ ಹೊರತು ಇಂದಿನ ನಾಯಕರಂತೆ ಹಣಬಲದಿಂದಾಗಲೀ, ಅನುವಂಶೀಯತೆಯ ಕಾರಣದಿಂದಾಗಲಿ,

ಬಹುದು. ಸ್ಥಳೀಯ ವಿಚಾರಗಳಿಗೆ ಪ್ರಾಶಸ್ತ್ಯಕೊಡುವ ಈ ಪತ್ರಿಕೆ ನಮ್ಮ ಸಮಾಜದ ಶಕ್ತಿ ಸಾಧನವಾಗಿ ಇವತ್ತು ಕೆಲಸ ಮಾಡುತ್ತಿರುವುದು ಒಂದು ಹೆಮ್ಮೆಯ ಸಂಗತಿ. ಇದರ ಮುಖ್ಯ ಬೆನ್ನೆಲುಬು ಓದುಗರು. ಅವರೇ ಈ ಪತ್ರಿಕೆಯ ಶ್ರೀರಕ್ಷೆ. ಓದುಗರ ಅಭಿರುಚಿಯನ್ನು ಬೆಳೆಸುತ್ತಾ, ಅಭಿಪ್ರಾಯವನ್ನು ರೂಢಿಸುತ್ತಾ ಮತ್ತು ಆಸಕ್ತಿಯನ್ನು ಕೆರಳಿಸುತ್ತಾ ಈ ಪತ್ರಿಕೆ ಶರವೇಗದಲ್ಲಿ ಮುನ್ನುಗ್ಗುತ್ತಿದೆ. ಮೈಸೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ನಡೆಯುವ ಎಲ್ಲಾ ಪ್ರಮುಖ ಸುದ್ದಿ ವಿಚಾರಗಳನ್ನು ವರದಿ ಮಾಡುವ ಈ ಪತ್ರಿಕೆ, ಗ್ರಾಮೀಣ ಮತ್ತು ಜಿಲ್ಲಾ ಮಟ್ಟದಲ್ಲಿ ಯಾವ ರೀತಿ ಒಂದು ಸಣ್ಣ ಪತ್ರಿಕೆ ನಗರದ ದೊಡ್ಡ ಪತ್ರಿಕೆಗಳಿಗೆ ಮಾರ್ಗದರ್ಶನ ನೀಡಬಲ್ಲದು ಎಂಬುದಕ್ಕೆ ಜ್ವಲಂತ ಸಾಕ್ಷಿ. ೧೯೯೨ರಲ್ಲಿ 'ಆಂದೋಲನ' ಪತ್ರಿಕೆಯು ರಾಜ್ಯಸರ್ಕಾರದ ವಿರುದ್ಧ ಒಂದು ಸುದ್ದಿಯನ್ನು ವರದಿ ಮಾಡಿದಾಗ, ಅದು ವಿವಾದಾತ್ಮಕವಾಗಿ ಸರಕಾರ ಜಾಹಿರಾತನ್ನೇ ಈ ಪತ್ರಿಕೆಗೆ ನಿಲ್ಲಿಸಿತು. ಇದನ್ನು ಖಂಡಿಸಿ ಪತ್ರಿಕೆಯ ಸಂಪಾದಕರು ಮುಖಪುಟದಲ್ಲೇ ಒಂದು ಸಂಪಾದಕೀಯ ಬರೆದಾಗ, ಮೈಸೂರು ಜಿಲ್ಲೆಯ ಓದುಗರಿಂದ ಪತ್ರದ ಸುರಿಮಳೆಯೇ ಆಯಿತು. ಸರಕಾರವನ್ನೆ ತರಾಟೆಗೆ ತೆಗೆದುಕೊಂಡ ಓದುಗರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಮತ್ತು ರಾಜಕಾರಣಿಗಳು 'ಆಂದೋಲನ' ಪತ್ರಿಕೆಗಾಗಿ ಸರಕಾರದ ವಿರುದ್ಧ ಒಂದು ಜನಾಂದೋಲನವನ್ನೇ ನಡೆಸಿ ಜಾಹಿರಾತನ್ನು ಪುನಃ ಪತ್ರಿಕೆಗೆ ದಕ್ಕುವಂತೆ ಮಾಡುವಲ್ಲಿ ಯಶಸ್ವಿಯಾದರು. ಪತ್ರಿಕೆ ಪ್ರಾಮಾಣಿಕವಾಗಿ ಸಮಾಜಕ್ಕೆ ದುಡಿಯಲು ಲೇಖನಿ ಹಿಡಿದು ಟೊಂಕಕಟ್ಟಿ ನಿಂತಾಗ ಮಾತ್ರ ಇದು ಸಾಧ್ಯ.

ದುರಾದೃಷ್ಟಕರ ಸಂಗತಿ ಎಂದರೆ ನಮ್ಮ ಪತ್ರಿಕೆಗಳಲ್ಲಿ ದೂರದ ಇಸ್ರೇಲ್ ಮತ್ತು ಪ್ಯಾಲಿಸ್ಟೇನಿಯರ ಸಮಸ್ಯೆಗೆ ಪರಿಹಾರ ಇದೆ. ಆದರೆ ಇತ್ತೀಚೆಗೆ ಸಂಶಯಾಸ್ಪದ ರೀತಿಯಲ್ಲಿ ಸಾವಿಗೀಡಾದ ಅಂಗನವಾಡಿ ಕಾರ್ಯಕರ್ತೆ ಶರಣವ್ವಳ ಪ್ರಕರಣಕ್ಕಾಗಲೇ ಗೋರಿ ಕಟ್ಟಿದ್ದಾರೆ. ಆಕೆ ಸತ್ತ ಎರಡು ವಾರಗಳ ನಂತರ ಸುದ್ದಿ ಪತ್ರಿಕಾಲಯಗಳಿಗೆ ಮುಟ್ಟಿದ್ದು ನಿಜಕ್ಕೂ ಒಂದು ವಿಪರ್ಯಾಸ. ಶೋಷಿತವರ್ಗದ ಧ್ವನಿಯಾಗಿರಬೇಕಾದ ಪತ್ರಿಕೆಗಳು ಇಂತಹ ಪ್ರಕರಣಗಳನ್ನು ವೈಭವೀಕರಿಸಲು ಯತ್ನಿಸಿದ್ದು ಶೋಚನೀಯ. ಇತ್ತೀಚೆಗೆ, ಮೌಲ್ಯಾಧಾರಿತ ರಾಜಕೀಯ ಪ್ರತಿಪಾದಿಸುವ ರಾಜಕಾರಣಿಗಳು ಮತ್ತು ನಿಷ್ಠಾವಂತ ಮತ್ತು ಪ್ರಾಮಾಣಿಕರೆಂದು ಹೇಳಿಕೊಳ್ಳುವ ಐ.ಎ.ಎಸ್. ಅಧಿಕಾರಿಗಳು ಚಲನಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಪತ್ರಿಕೆಗಳಲ್ಲಿ ಪುಕ್ಕಟೆ ಪ್ರಚಾರವನ್ನು ಗಿಟ್ಟಿಸಿಕೊಂಡಿದ್ದಾರೆ. ಆದರೆ ಇವರುಗಳು ಸಮಾಜಕ್ಕಾಗಿ ದುಡಿದಿದ್ದೇನು ? ಜನರ ಕುಂದುಕೊರತೆಗಳನ್ನು ನಿವಾರಿಸುವಷ್ಟು ಅಧಿಕಾರ ಇವರಲ್ಲಿ ಇದ್ದಾಗ್ಯೂ ಇವರು ಮಾಡಿದ್ದೇನು? ಚಲನಚಿತ್ರದಂತಹ ವ್ಯವಹಾರಗಳಲ್ಲಿ ಕೈಹಾಕಲು ಇವರಿಗೆ ಹಣ ಎಲ್ಲಿಂದ ಬಂತು ಮತ್ತು ಇವರುಗಳ ಕಾರ್ಯವೈಖರಿಯ ಬಗ್ಗೆ ಪತ್ರಿಕೆಗಳು ಚಕಾರವೆತ್ತದಿರುವುದು ಆಶ್ಚರ್ಯದ ಸಂಗತಿ.

ಜಾತಿ ಮತ್ತು ಪ್ರಾಂತೀಯತೆಯ ಅವಲಂಬನೆಯಿಂದಾಗಲೀ ಅಥವಾ ಕಂಟಿಲತೆಯಿಂದಾಗಲೀ ಅಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

೧೯೩೬ರಲ್ಲಿ ವಕೀಲಿ ವೃತ್ತಿಯನ್ನು ಬಿಟ್ಟು ದೇಶ ಸೇವೆಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟರು. ಬೆಂಗಳೂರು ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಸತತವಾಗಿ ೧೦ ವರ್ಷ ದುಡಿದರು. ಇವರು ೧೯೪೦ರಿಂದ ೧೯೪೪ರವರೆಗೆ ಬೆಂಗಳೂರು ಪೌರಸಭಾ ಅಧ್ಯಕ್ಷರಾಗಿದ್ದರು. ಮೈಸೂರು ರಾಜ್ಯದ ಕಾಂಗ್ರೆಸ್‌ನ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ, ಅಧ್ಯಕ್ಷರಾಗಿ ಹಾಗೂ ಸಂಸತ್ತಿನ ಉಪಸಮಿತಿಗಳಲ್ಲಿ ಕೆಲಸ ಮಾಡಿದರು. ೧೯೩೪ರಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷವು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ವಿಲೀನವಾಗಲು ಶ್ರಮಿಸಿದರು. ಹೀಗೆ ಕೆಂಗಲ್ ಹನುಮಂತಯ್ಯನವರು ಒಂದು ಸಂಸ್ಥೆಯಾಗಿ ಬೆಳೆದು ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡರು. ೧೯೪೦ರಲ್ಲಿ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಸತತವಾಗಿ ಎರಡು ಬಾರಿ ಆರಿಸಿ ಬಂದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಹನುಮಂತಯ್ಯನವರು ಹಾಕುತ್ತಿದ್ದ ಪ್ರಶ್ನೆ ಮತ್ತು ಧೈರ್ಯವನ್ನು ನೋಡಿ, ಕಾಂಗ್ರೆಸ್ ಅವರನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ನೇಮಿಸಿತು. ಇವರು ೧೯೪೪ರಿಂದ ೧೯೪೯ರವರೆವಿಗೂ ಕಾಂಗ್ರೆಸ್ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು.

೧೯೪೨ರಲ್ಲಿ ಗಾಂಧೀಜಿ ಮತ್ತು ರಾಷ್ಟ್ರೀಯ ಕಾಂಗ್ರೆಸ್ ನಡೆಸಿದ ಅಹಿಂಸೆಯ ಹೋರಾಟ ಮತ್ತು ಅಂತ್ಯ ಹೋರಾಟವೇ ಕ್ವಿಟ್ ಇಂಡಿಯಾ ಚಳವಳಿ ಅಥವಾ ಭಾರತವನ್ನು ಬಿಟ್ಟು ತೊಲಗಿ ಎಂಬ ಚಳವಳಿ. ಈ ಕ್ವಿಟ್ ಇಂಡಿಯಾ ಚಳವಳಿಯ ಕ್ರಾಂತಿಯ ಪ್ರಭಾವ ಮೈಸೂರು ಸಂಸ್ಥಾನದಲ್ಲಿ ತೀವ್ರವಾದುದರಿಂದಾಗಿ ಸರ್ಕಾರವು ಕಾಂಗ್ರೆಸ್ ನಾಯಕರನ್ನು ಬಂಧಿಸಿತ್ತು. ಈ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಹನುಮಂತಯ್ಯನವರು ರಾಜ್ಯದ ಎಲ್ಲಾ ಸ್ಥಳಗಳಲ್ಲೂ ಮತ್ತು ಬೆಂಗಳೂರಿನಲ್ಲೂ ನಡೆದ ಬಹಿರಂಗ ಸಭೆಗಳಲ್ಲಿ ಸರ್ಕಾರದ ಕ್ರಮವನ್ನು ಉಗ್ರವಾಗಿ ಖಂಡಿಸಿದರು. ಇದರಿಂದಾಗಿ ಇವರು ಸಹ ಬಂಧನಕ್ಕೆ ಒಳಗಾದರು. ಬ್ರಿಟಿಷ್ ಸರ್ಕಾರ ಇವರ ಮೇಲೆ ಕಣ್ಣಿಟ್ಟು ಒಂದಲ್ಲ ಒಂದು ಕಾರಣಕ್ಕಾಗಿ ಇವರನ್ನು ಏಳು ಸಲ ಜೈಲಿಗೆ ಕಳುಹಿಸಿತು. ಅಷ್ಟೇ ಅಲ್ಲದೆ, ಮದ್ರಾಸಿನಿಂದ ಬಂದಿದ್ದಂತಹ ಒಬ್ಬ ದಿವಾನ ಇವರ ಮೇಲೆ ರಾಜದ್ರೋಹದ ಆರೋಪವನ್ನು ಮಾಡಿ ೧೯೪೮–೪೯ರಲ್ಲಿ ೯ ತಿಂಗಳ ಕಾಲ ಜೈಲಿಗೆ ಹಾಕಿಸಿದನು. ಇದಕ್ಕೆ ಎದೆಗುಂದದೆ, ಹನುಮಂತಯ್ಯನವರು ದೇಶಪ್ರೇಮವನ್ನು ಪ್ರಮುಖ ಅಸ್ತ್ರವನ್ನಾಗಿ ಬಳಸಿಕೊಂಡು ಪ್ರಜಾಸರ್ಕಾರದ ಸ್ಥಾಪನೆಗಾಗಿ ಅರಮನೆಯ ಸತ್ಯಾಗ್ರಹವನ್ನು ಆರಂಭಿಸಿದರು. ಇದು ಮೈಸೂರು ರಾಜ್ಯದಲ್ಲಿ ಬಹಳ ಚರಿತ್ರಾರ್ಹವಾದದ್ದು.

ಬಹುದು. ಸ್ಥಳೀಯ ವಿಚಾರಗಳಿಗೆ ಪ್ರಾಶಸ್ತ್ಯ ಕೊಡುವ ಈ ಪತ್ರಿಕೆ ನಮ್ಮ ಸಮಾಜದ ಶಕ್ತಿ ಸಾಧನವಾಗಿ ಇವತ್ತು ಕೆಲಸ ಮಾಡುತ್ತಿರುವುದು ಒಂದು ಹೆಮ್ಮೆಯ ಸಂಗತಿ. ಇದರ ಮುಖ್ಯ ಬೆನ್ನೆಲುಬು ಓದುಗರು. ಅವರೇ ಈ ಪತ್ರಿಕೆಯ ಶ್ರೀರಕ್ಷೆ. ಓದುಗರ ಅಭಿರುಚಿಯನ್ನು ಬೆಳೆಸುತ್ತಾ, ಅಭಿಪ್ರಾಯವನ್ನು ರೂಢಿಸುತ್ತಾ ಮತ್ತು ಆಸಕ್ತಿಯನ್ನು ಕೆರಳಿಸುತ್ತಾ ಈ ಪತ್ರಿಕೆ ಶರವೇಗದಲ್ಲಿ ಮುನ್ನುಗ್ಗುತ್ತಿದೆ. ಮೈಸೂರು ಜಿಲ್ಲೆಯ ಹನ್ನೊಂದು ತಾಲ್ಲೂಕುಗಳಲ್ಲಿ ನಡೆಯುವ ಎಲ್ಲಾ ಪ್ರಮುಖ ಸುದ್ದಿ ವಿಚಾರಗಳನ್ನು ವರದಿ ಮಾಡುವ ಈ ಪತ್ರಿಕೆ, ಗ್ರಾಮೀಣ ಮತ್ತು ಜಿಲ್ಲಾ ಮಟ್ಟದಲ್ಲಿ ಯಾವ ರೀತಿ ಒಂದು ಸಣ್ಣ ಪತ್ರಿಕೆ ನಗರದ ದೊಡ್ಡ ಪತ್ರಿಕೆಗಳಿಗೆ ಮಾರ್ಗದರ್ಶನ ನೀಡಬಲ್ಲದು ಎಂಬುದಕ್ಕೆ ಜ್ವಲಂತ ಸಾಕ್ಷಿ. ೧೯೯೨ರಲ್ಲಿ 'ಆಂದೋಲನ' ಪತ್ರಿಕೆಯು ರಾಜ್ಯಸರ್ಕಾರದ ವಿರುದ್ಧ ಒಂದು ಸುದ್ದಿಯನ್ನು ವರದಿ ಮಾಡಿದಾಗ, ಅದು ವಿವಾದಾತ್ಮಕವಾಗಿ ಸರಕಾರ ಜಾಹಿರಾತನ್ನೇ ಈ ಪತ್ರಿಕೆಗೆ ನಿಲ್ಲಿಸಿತು. ಇದನ್ನು ಖಂಡಿಸಿ ಪತ್ರಿಕೆಯ ಸಂಪಾದಕರು ಮುಖಪುಟದಲ್ಲೇ ಒಂದು ಸಂಪಾದಕೀಯ ಬರೆದಾಗ, ಮೈಸೂರು ಜಿಲ್ಲೆಯ ಓದುಗರಿಂದ ಪತ್ರದ ಸುರಿಮಳೆಯೇ ಆಯಿತು. ಸರಕಾರವನ್ನೆ ತರಾಟೆಗೆ ತೆಗೆದುಕೊಂಡ ಓದುಗರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು ಮತ್ತು ರಾಜಕಾರಣಿಗಳು 'ಆಂದೋಲನ' ಪತ್ರಿಕೆಗಾಗಿ ಸರಕಾರದ ವಿರುದ್ಧ ಒಂದು ಜನಾಂದೋಲನವನ್ನೇ ನಡೆಸಿ ಜಾಹಿರಾತನ್ನು ಪುನಃ ಪತ್ರಿಕೆಗೆ ದಕ್ಕುವಂತೆ ಮಾಡುವಲ್ಲಿ ಯಶಸ್ವಿಯಾದರು. ಪತ್ರಿಕೆ ಪ್ರಾಮಾಣಿಕವಾಗಿ ಸಮಾಜಕ್ಕೆ ದುಡಿಯಲು ಲೇಖನಿ ಹಿಡಿದು ಟೊಂಕಕಟ್ಟಿ ನಿಂತಾಗ ಮಾತ್ರ ಇದು ಸಾಧ್ಯ.

ದುರಾದೃಷ್ಟಕರ ಸಂಗತಿ ಎಂದರೆ ನಮ್ಮ ಪತ್ರಿಕೆಗಳಲ್ಲಿ ದೂರದ ಇಸ್ರೇಲ್ ಮತ್ತು ಪ್ಯಾಲಿಸ್ಟೇನಿಯರ ಸಮಸ್ಯೆಗೆ ಪರಿಹಾರ ಇದೆ. ಆದರೆ ಇತ್ತೀಚೆಗೆ ಸಂಶಯಾಸ್ಪದ ರೀತಿಯಲ್ಲಿ ಸಾವಿಗೀಡಾದ ಅಂಗನವಾಡಿ ಕಾರ್ಯಕರ್ತೆ ಶರಣವ್ವಳ ಪ್ರಕರಣಕ್ಕಾಗಲೇ ಗೋರಿ ಕಟ್ಟಿದ್ದಾರೆ. ಆಕೆ ಸತ್ತ ಎರಡು ವಾರಗಳ ನಂತರ ಸುದ್ದಿ ಪತ್ರಿಕಾಲಯಗಳಿಗೆ ಮುಟ್ಟಿದ್ದು ನಿಜಕ್ಕೂ ಒಂದು ವಿಪರ್ಯಾಸ. ಶೋಷಿತವರ್ಗದ ಧ್ವನಿಯಾಗಿರಬೇಕಾದ ಪತ್ರಿಕೆಗಳು ಇಂತಹ ಪ್ರಕರಣಗಳನ್ನು ವೈಭವೀಕರಿಸಲು ಯತ್ನಿಸಿದ್ದು ಶೋಚನೀಯ. ಇತ್ತೀಚೆಗೆ, ಮೌಲ್ಯಾಧಾರಿತ ರಾಜಕೀಯ ಪ್ರತಿಪಾದಿಸುವ ರಾಜಕಾರಣಿಗಳು ಮತ್ತು ನಿಷ್ಠಾವಂತ ಮತ್ತು ಪ್ರಾಮಾಣಿಕರೆಂದು ಹೇಳಿಕೊಳ್ಳುವ ಐ.ಎ.ಎಸ್. ಅಧಿಕಾರಿಗಳು ಚಲನಚಿತ್ರಗಳಲ್ಲಿ ಅಭಿನಯಿಸುವ ಮೂಲಕ ಪತ್ರಿಕೆಗಳಲ್ಲಿ ಪುಕ್ಕಟೆ ಪ್ರಚಾರವನ್ನು ಗಿಟ್ಟಿಸಿಕೊಂಡಿದ್ದಾರೆ. ಆದರೆ ಇವರುಗಳು ಸಮಾಜಕ್ಕಾಗಿ ದುಡಿದಿದ್ದೇನು ? ಜನರ ಕುಂದುಕೊರತೆಗಳನ್ನು ನಿವಾರಿಸುವಷ್ಟು ಅಧಿಕಾರ ಇವರಲ್ಲಿ ಇದ್ದಾಗ್ಯೂ ಇವರು ಮಾಡಿದ್ದೇನು? ಚಲನಚಿತ್ರದಂತಹ ವ್ಯವಹಾರಗಳಲ್ಲಿ ಕೈಹಾಕಲು ಇವರಿಗೆ ಹಣ ಎಲ್ಲಿಂದ ಬಂತು ಮತ್ತು ಇವರುಗಳ ಕಾರ್ಯವೈಖರಿಯ ಬಗ್ಗೆ ಪತ್ರಿಕೆಗಳು ಚಕಾರವೆತ್ತದಿರುವುದು ಆಶ್ಚರ್ಯದ ಸಂಗತಿ.

ಭಾರತ ಸಂವಿಧಾನ ರಚನಾ ಸಮಿತಿ ಸದಸ್ಯರಾಗಿ ಹನುಮಂತಯ್ಯನವರ ಪಾತ್ರ

ಭಾರತದ ರಾಜಕೀಯ ಇತಿಹಾಸದಲ್ಲಿ ಭಾರತ ಸಂವಿಧಾನ ರಚನಾ ಸಮಿತಿಯಿಂದ ರೂಪಿಸಲ್ಪಟ್ಟ "ಭಾರತ ಸಂವಿಧಾನ" ರಾಷ್ಟ್ರದ ೨೦ನೇ ಶತಮಾನದ ಅದ್ಭುತ ಸಾಧನೆಗಳಲ್ಲೊಂದಾಗಿದೆ. ಇಂತಹ ಸಂವಿಧಾನ ರಚನಾ ಸಮಿತಿಗೆ ಸದಸ್ಯರಾಗಿ ಚುನಾಯಿಸಲ್ಪಟ್ಟು ಅನೇಕ ಸಮಿತಿಗಳಲ್ಲಿ ಕೆಲಸ ಮಾಡಿ ಹೇರಳವಾಗಿ ಅನುಭವ ಗಳಿಸಿ ಕೊಂಡವರು ಶ್ರೀಯುತ ಕೆಂಗಲ್ ಹನುಮಂತಯ್ಯನವರು. ಸಂವಿಧಾನ ರಚನಾ ಸಭೆಯಲ್ಲಿ ಹನುಮಂತಯ್ಯನವರ ಪಾತ್ರ ಅಮೋಘವಾದದ್ದು. ಭಾರತವನ್ನು ಸಾರ್ವ ಭೌಮ ಸಮಾಜವಾದಿ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯ ರಾಷ್ಟ್ರವನ್ನಾಗಿ ಮಾಡಲು ಮತ್ತು ಎಲ್ಲ ಪೌರರಿಗೆ ಸಾಮಾಜಿಕ, ಆರ್ಥಿಕ ರಾಜಕೀಯ, ನ್ಯಾಯ ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು ಉಪಾಸನಾ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಅವಕಾಶಗಳಲ್ಲಿ ಸಮಾನತೆ ಎಲ್ಲರಿಗೂ ದೊರೆಯುವಂತೆ ಮಾಡುವುದಕ್ಕೆ; ವ್ಯಕ್ತಿ ಗೌರವ ಮತ್ತು ರಾಷ್ಟ್ರದ ಏಕತೆ ಮತ್ತು ಸಮಗ್ರತೆಯನ್ನು ರಕ್ಷಿಸಿ, ಭ್ರಾತೃತ್ವ ಭಾವನೆ ಯನ್ನು ಎಲ್ಲರಲ್ಲೂ ವೃದ್ಧಿಗೊಳಿಸುವುದಾಗಿ ಕಾನೂನು ರೂಪದಲ್ಲಿ ಹಲವಾರು ತತ್ವಗಳನ್ನು ಸಂವಿಧಾನದಲ್ಲಿ ಸೇರಿಸುವುದರಲ್ಲಿ ಹನುಮಂತಯ್ಯನವರ ಸಲಹೆಗಳು ಮತ್ತು ಚಿಂತನೆಗಳು ಇಂದಿಗೂ ಕೂಡ ಸಮಂಜಸವಾಗಿವೆ. ಅವರೊಬ್ಬರು ಮಾನವತಾ ವಾದಿಯೂ ಹೌದು, ಪ್ರಜಾಪ್ರಭುತ್ವವಾದಿಯೂ ಹೌದು. ಇವರು ಪಾರ್ಲಿಮೆಂಟ್‌ನಲ್ಲಿ ನಮ್ಮ ಸಂವಿಧಾನವನ್ನು ಹೀಗೆ ವರ್ಣಿಸಿದ್ದಾರೆ: "ನಮಗೆ ಬೇಕಾಗಿರುವುದು ಭಾರತದ ಸಂಗೀತ, ಆದರೆ ಈಗ ದೊರಕಿರುವುದು ಇಂಗ್ಲಿಷಿನ ಪಿಯಾನೋ ಸಂಗೀತ"1. ೧೯೫೦ ರಲ್ಲಿ ಜಾರಿಗೆ ಬಂದ ಭಾರತೀಯ ಸಂವಿಧಾನವು ಸಂಪೂರ್ಣವಾಗಿ ಭಾರತೀಯತ್ವವನ್ನು ಬಿಟ್ಟು ಬಿಟ್ಟಿರುವುದು ಕಂಡುಬರುತ್ತದೆ. ಹಾಗೂ ಸಂವಿಧಾನವು ಏರ್ಪಡಿಸಿರುವ ಸಂಸ್ಥೆಗಳು ಕಾಯ್ದೆಗಳು, ಸರ್ಕಾರ ಪದ್ಧತಿ ಮತ್ತು ಅಧಿಕಾರವನ್ನು ನಡೆಸುವ ಕ್ರಮ ಮುಂತಾದವುಗಳು ಪಾಶ್ಚಾತ್ಯ ಸಂಸ್ಕೃತಿಯ ನಕಲಿ ಆಗಿದೆ ಎಂಬ ಅಭಿಪ್ರಾಯವನ್ನು ಸಹ ಅವರು ನೀಡಿದ್ದಾರೆ. ಇದು ಸತ್ಯವಾದ ಮಾತು. ಆದ್ದರಿಂದಲೇ ನಮ್ಮ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳು ಇವತ್ತಿಗೂ ಬರುತ್ತಲೇ ಇವೆ.

ಇವರು ೧೯೪೯ರಲ್ಲಿ ಸಂಸದೀಯ ಯೂನಿಯನ್ ಸಂಘದ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಸ್ಟಾಕ್‌ಹೋಮ್‌ಗೆ ತೆರಳಿದರು. ಆಗ ಅನೇಕ ದೇಶಗಳಲ್ಲಿ ಸಂಚಾರಮಾಡಿ ಹೆಚ್ಚಿನ ಅನುಭವ ಪಡೆದರು. ೧೯೫೦ ರಲ್ಲಿ ಡಬ್ಲಿನ್‌ಗೆ ಮತ್ತು ೧೯೬೨ ರಲ್ಲಿ ಬ್ರಿಸಿಲಿಯಾದಲ್ಲಿ ನಡೆದ ಅಂತರ್‌ಸಂಸತ್ ಸಮ್ಮೇಳನಗಳಲ್ಲಿ ಭಾರತದ ಪ್ರತಿನಿಧಿ ಯಾಗಿ ಭಾಗವಹಿಸಿದ್ದರು. ಮುಂದೆ ರಷ್ಯಾ, ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಐರ್ಲೆಂಡ್, ಸ್ವೀಡನ್, ನಾರ್ವೆ, ಈಜಿಪ್ಟ್, ಕೆನಡ ಮತ್ತು ಅಮೆರಿಕಾ ದೇಶಗಳನ್ನು ನೋಡಿ ಅವುಗಳ ಪ್ರಗತಿಗೆ ಮಾರುಹೋಗಿ ನಮ್ಮ ದೇಶವನ್ನು ಹಾಗೆಯೇ ಅಭಿವೃದ್ಧಿಪಡಿಸಬೇಕೆಂಬ

ಪ್ರತ್ರಿಕೆಗಳು ಸಮಾಜದ ಒಂದು ದೂರುಪೆಟ್ಟಿಗೆ. ಅಲ್ಲಿ 'ಪ್ರಶ್ನೆಗಳ ಸುರಿಮಳೆ ಆಗುತ್ತಲೇ ಇರಬೇಕು. ಇದಕ್ಕೆ ಪೂರಕವಾಗಿ ಎಲ್ಲಾ ಪತ್ರಿಕೆಗಳಲ್ಲೂ ಓದುಗರ ಪತ್ರಕ್ಕೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಆದರೂ ದಿನನಿತ್ಯ ನೂರಾರು ಪತ್ರಗಳನ್ನು ಪಡೆಯುವ ಪತ್ರಿಕೆಗಳು ಕಾರಣ ನೀಡದೆ ಕೆಲವೊಮ್ಮೆ ಪತ್ರಗಳನ್ನು ತಿರಸ್ಕರಿಸುವುದುಂಟು. ಆದರೆ ಮೈಸೂರಿನ ಸ್ಥಳಿಯ ಜನಪ್ರಿಯ ಆಂಗ್ಲ ಸಂಜೆ ದಿನ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್', ಓದುಗರ ಕೋರಿಕೆ ಮೇಲೆ ಅವರ ಪತ್ರಗಳಿಗಾಗಿ ಮೊದಲಿಗಿಂತ ಹೆಚ್ಚಿನ ಸ್ಥಳವನು ಕಾದಿರಿಸಿರುವುದು ಗಮನೀಯ ಅಂಶ. ಜನರ ಅಭಿಪ್ರಾಯ, ಅಭಿರುಚಿ ಮತ್ತು ವಿಚಾರಧಾರೆ ಕೀಳಾಗಿದೆ ಅಥವಾ ತಪ್ಪಾಗಿದೆ ಎಂದು ಕಂಡುಬಂದಾಗ ಅದನ್ನು ಉತ್ತಮ ಪಡಿಸುವುದು ಪತ್ರಿಕೆಗಳ ಕರ್ತವ್ಯಗಳಲ್ಲೊಂದು.

ಉದಾಹರಣೆಗೆ, ೧೯೯೨ ಡಿಸೆಂಬರ್ ೬ ರಂದು ನಡೆದ ಅಯೋಧ್ಯೆ ಘಟನೆಯಲ್ಲಿ ಕೆಲವು ಪತ್ರಕರ್ತರು ಕೂಡ ಕರಸೇವೆ ಮಾಡಿದರು ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಸಮಾಜದ ಹಿತರಕ್ಷಿಸಬೇಕಾದ ಸತ್ಯಶೋಧಕರೇ ಇಂತಹ ಅವಮಾನೀಯ ಘಟನೆಗಳಲ್ಲಿ ಪಾಲುಗೊಂಡಾಗ ಅದು ನಮ್ಮ ಸಮಾಜದ ದೊಡ್ಡ ದುರಂತ. ಗುಜರಾತಿ, ಮರಾಠಿ ಮತ್ತು ಹಿಂದೀ ಭಾಷಾ ಪತ್ರಿಕೆಗಳು ಮತ ಅಥವಾ ಧರ್ಮದ ಆಧಾರದಮೇಲೆ ವರದಿಗಳನ್ನು ಮತ್ತು ಅಭಿಪ್ರಾಯಗಳನ್ನು ಅಯೋಧ್ಯೆ ನಂತರದ ದಿನಗಳಲ್ಲಿ ಪ್ರಕಟಿಸಿದ್ದು ಪತ್ರಿಕಾ ವೃತ್ತಿಧರ್ಮಕ್ಕೆ ಆದ ಅವಮಾನ. ಆ ಸಮಯದಲ್ಲಿ ಭಾಷಾ ಪತ್ರಿಕೆಗಳ ಓದುಗರ ಸಂಖ್ಯೆ ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ ಮತ್ತು ಉತ್ತರ ಪ್ರದೇಶ ಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹೆಚ್ಚಾಯಿತು. ಆದರೆ ಓದುಗರ ವಿಚಾರಧಾರೆಯನ್ನು ಸರಿಪಡಿಸಬಹುದಾದಂತಹ ಸದವಕಾಶವನ್ನು ಪತ್ರಿಕೆ ಕಳೆದುಕೊಂಡಿತು. ವೃತ್ತಿ ಧರ್ಮ ಎಲ್ಲಾ ಧರ್ಮಗಳಿಗಿಂತ ಉನ್ನತವಾದದ್ದು. ಮೊದಲು ವೃತ್ತಿ ಅನಂತರ ಧರ್ಮ. ಮತ/ಧರ್ಮ ಒಬ್ಬ ವ್ಯಕ್ತಿಯ ಖಾಸಗಿ ವಿಚಾರ. ಪತ್ರಕರ್ತರು ಧರ್ಮ ಪ್ರಚಾರಕರಲ್ಲ. ಅವರ ಮುಖ್ಯ ಕರ್ತವ್ಯ ಸೂಕ್ಷ್ಮದರ್ಶಕ ದೃಷ್ಟಿಯಿಂದ ಸಮಾಜವನ್ನು ಗಮನಿಸಬೇಕೇ ವಿನಃ ಬಣ್ಣದ ಗಾಜಿನಿಂದಲ್ಲ. ಇಂತಹ ವಿವಾದಾತ್ಮಕ ಘಟನೆಗಳಲ್ಲಿ ಪತ್ರಿಕೆಗಳು ಜನಾಭಿಪ್ರಾಯಕ್ಕೂ (Public Opinion) ಮತ್ತು ದೊಂಬಿ ಅಭಿಪ್ರಾಯಕ್ಕೂ (Mob Opinion) ವ್ಯತ್ಯಾಸ ಕಂಡುಕೊಳ್ಳಬೇಕು.

ಅಯೋಧ್ಯೆ ನಂತರ ಎರಡು ಪ್ರಮುಖ ಬೆಳವಣಿಗೆಗಳನ್ನು ನೋಡಿದ್ದೇವೆ. ಒಂದು ಭಾಷಾ ಪತ್ರಿಕೆಗಳು ಮೊದಲಿಗಿಂತ ಹೆಚ್ಚಾಗಿ ಇಂದು ಜನಸಮೂಹ (Mass)ಕ್ಕೆ ಹತ್ತಿರವಾಗಿವೆ. ಹಾಗೂ ಒಂದು ವಿವಾದಾತ್ಮಕ ವಿಷಯದ ಆಧಾರದ ಮೇಲೆ ಪತ್ರಿಕೆಯ ವ್ಯಕ್ತಿತ್ವವನ್ನು ಬೆಳೆಸುವ ಪ್ರವೃತ್ತಿ ಹೆಚ್ಚಾಗಿದೆ. ಎರಡನೆಯದಾಗಿ ಆಂಗ್ಲ ಪತ್ರಿಕೆಗಳು ಗ್ರಾಮೀಣ ಮತ್ತು ಜಿಲ್ಲಾ ಮಟ್ಟದ ಜನಸಮೂಹದಿಂದ ಇನ್ನೂ ದೂರ ಸರಿದಿವೆ.

ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಗಳ ಚುನಾವಣೆ ಡಿಸೆಂಬರ್ ಅಂತ್ಯದಲ್ಲಿ ನಡೆಯಲಿದ್ದು ಭಾಷಾ ಪತ್ರಿಕೆಗಳಿಗೆ ಸ್ಥಳೀಯ–ವರ್ಗದ ಜನಸಮೂಹದ ಜೊತೆ ಇನ್ನೂ ಪರಿಣಾಮಕಾರಿ ರೀತಿಯಲ್ಲಿ ಸಂಪರ್ಕ ಏರ್ಪಡಿಸಿಕೊಳ್ಳಲು ಅವಕಾಶವಿದೆ. ಈ ಹಿಂದೆ ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತುಗಳು ಕಾರ್ಯಗತವಾದಾಗ ಹಳ್ಳಿ ಮತ್ತು ಜಿಲ್ಲಾ ಮಟ್ಟಗಳಲ್ಲಿ ರಾಜಕೀಯದ ಬಗ್ಗೆ ತಿಳಿವಳಿಕೆ ಹೆಚ್ಚಾಗಿದ್ದರೂ, ಜನಸಾಮಾನ್ಯರಿಗೆ ತಮ್ಮ ಕುಂದುಕೊರತೆಗಳ ಅರಿವು ಮೂಡಿದೆ. ಡಂಕೆಲ್ ಪ್ರಸ್ತಾಪದಿಂದಾಗಿ ಇಂದು ಪತ್ರಿಕೆಗಳ ಮುಖಪುಟದಲ್ಲಿ ರೈತನ ಸಮಸ್ಯೆಗಳ ಚರ್ಚೆ ಆಗುತ್ತಿದೆ. ರೈತನು ಕೂಡ ಪೆಪ್ಸಿ–ಕೋಲಾದಂತಹ ಬಂಡವಾಳಶಾಹಿಗಳ ಜೊತೆ ಪತ್ರಿಕೆಯಲ್ಲಿ ಸ್ಥಳಾವಕಾಶಕ್ಕಾಗಿ ಪೈಪೋಟಿ ನಡೆಸುವುದನ್ನು ನಾವು ಕಂಡಿದ್ದೇವೆ.

ಎರಡನೆಯ ಪತ್ರಿಕಾ ಆಯೋಗವು ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಸಾಮಾನ್ಯ ಜನರು ಸಕ್ರಿಯವಾಗಿ ಪಾಲ್ಗೊಳ್ಳಲು ಪತ್ರಿಕೆ ಸಮಾಜದ ಎಲ್ಲಾ ವರ್ಗದ ಜನರನ್ನು ತಲುಪಬೇಕು ಎಂದು ಹೇಳಿದೆ. ಆದರೆ ನಮ್ಮಲ್ಲಿ ಎಷ್ಟು ಜನರಿಗೆ ಪತ್ರಿಕೆ ತಲುಪುತ್ತದೆ ಎನ್ನುವ ಪ್ರಶ್ನೆಗೆ ದೊರಕುವ ಅಂಕಿ–ಅಂಶಗಳು, ನಿರಾಶೆಯನ್ನುಂಟುಮಾಡುತ್ತವೆ. ೧೯೯೩ ರಲ್ಲಿ ೩೩,೦೦೦ ಪತ್ರಿಕೆಗಳು ಪ್ರಕಟವಾಗುತ್ತಿದ್ದು ಇವುಗಳ ಪ್ರತಿದಿನದ ಒಟ್ಟು ಪ್ರಸರಣ ಸಂಖ್ಯೆ ೫.೫ ಕೋಟಿ. ಒಂದು ಪತ್ರಿಕೆಯನ್ನು ಸರಾಸರಿ ಮೂರು ಮಂದಿ ಓದುವುದಾದರೆ ಅದರ ಒಟ್ಟು ಪ್ರಸರಣ ಸಂಖ್ಯೆ ೧೫ ಕೋಟಿಗಳಷ್ಟು. ಭಾರತದ ಜನಸಂಖ್ಯೆ ಸುಮಾರು ೯೫ ಕೋಟಿ. ಅಂದರೆ ಪ್ರತಿ ೧೦೦ ಮಂದಿಗೆ ೩–೪ ಪತ್ರಿಕೆಗಳು ಲಭ್ಯ. ಆದರೆ ಸುಮಾರು ೮೦ ಕೋಟಿ ಜನರಿಗೆ ಪತ್ರಿಕೆಯೇ ತಲುಪುವುದಿಲ್ಲ ಎಂದಾಯಿತು. ಜಪಾನಿನಂತಹ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ 'ಯುಮೂರಿ ಶಿಂಭೋ' ಎಂಬ ಭಾಷಾ ದಿನಪತ್ರಿಕೆ ೧.೫ ಕೋಟಿ ಪ್ರಸರಣ ಸಂಖ್ಯೆ ಹೊಂದಿದ್ದು ಪ್ರಪಂಚದಲ್ಲೆ ಅತ್ಯಧಿಕ ದಿನಪ್ರಸಾರವುಳ್ಳ ಪತ್ರಿಕೆ ಎಂಬ ಕೀರ್ತಿಗೆ ಪಾತ್ರವಾಗಿದೆ. ಭಾರತದಲ್ಲಿ 'ಮಲಯಾಳಂ ಮನೋರಮ' ಸುಮಾರು ೭.೫ ಲಕ್ಷ ಪ್ರಸಾರಣ ಸಂಖ್ಯೆಯನ್ನು ಹೊಂದಿದ್ದು ದಿನಪತ್ರಿಕೆಗಳಲ್ಲಿ ಪ್ರಥಮ ಸ್ಥಾನದಲ್ಲಿದೆ. ಅಲ್ಲದೇ 'ಮಂಗಳಂ' ಎನ್ನುವ ವಾರ ಪತ್ರಿಕೆಯ ಪ್ರಸರಣ ಸಂಖ್ಯೆ ೧೫ ಲಕ್ಷ ಪ್ರತಿಗಳು. ಆದರೆ ಇದರ ಮುಖ್ಯ ಆಕರ್ಷಣೆ ಧಾರಾವಾಹಿಗಳು. ಸುಮಾರು ೮–೧೦ ಧಾರಾವಾಹಿಗಳನ್ನು ಪ್ರಕಟಿಸುವ ಈ ವಾರ ಪತ್ರಿಕೆಯು ಪತ್ರಿಕೋದ್ಯಮದ ಯಾವ ಕರ್ತವ್ಯಗಳಿಗಾಗಿ ಮೀಸಲಿಟ್ಟಿದೆ ಎನ್ನುವುದು ಸೋಜಿಗದ ಸಂಗತಿ.

ಪತ್ರಿಕೆ ಸಮಾಜದ ಮೇಲೂ ಸಮಾಜ ಪತ್ರಿಕೆಯ ಮೇಲೂ ಪರಿಣಾಮ ಬೀರುತ್ತವೆ. ಪತ್ರಿಕೆಗೆ ಎರಡು ಮುಖಗಳಿವೆ. ಒಂದೆಡೆ ಇದು ಖಾಸಗಿ ಸಂಸ್ಥೆ. ಇನ್ನೊಂದೆಡೆ ಇದು ಸಾರ್ವಜನಿಕ ಸೇವಾ ಸಂಸ್ಥೆ. ಸುದ್ದಿ ಮತ್ತು ಅಭಿಪ್ರಾಯಗಳನ್ನು ಪ್ರಕಟಿಸಿ ಜನರ ಸೇವೆಯಲ್ಲಿ ತೊಡಗಿದ್ದರೂ ಪತ್ರಿಕೆ ಒಂದು ವ್ಯಾಪಾರಿ ಸಂಸ್ಥೆ. ಒಂದು ಪತ್ರಿಕೆ ಯಶಸ್ವಿಯಾಗಬೇಕಾದರೆ ಆರ್ಥಿಕ ಭದ್ರತೆ ಅಗತ್ಯ. ಆದಕ್ಕೆ ಪ್ರಸರಣ ಸಂಖ್ಯೆ

ಮತ್ತು ಜಾಹಿರಾತಿನ ಬೆಂಬಲ ಅವಶ್ಯಕ. ಆದರೆ ಒಂದು ಪತ್ರಿಕೆ ತನ್ನ ಆರ್ಥಿಕ ಅಂಶವನ್ನು ವಸ್ತುನಿಷ್ಠ ಸುದ್ದಿ ಮತ್ತು ಅಭಿಪ್ರಾಯಗಳನ್ನು ಪ್ರಕಟಿಸುವ ಕರ್ತವ್ಯದ ಜೊತೆ ಹೇಗೆ ಹೊಂದಾಣಿಕೆ ಮಾಡಿಕೊಳ್ಳುತ್ತದೆ ಎನ್ನುವುದು ಅದರ ಮಾಲೀಕರ ಧೋರಣೆಯನ್ನು ಅವಲಂಬಿಸಿರುತ್ತದೆ. ಆಧುನಿಕ ಸಮಾಜದಲ್ಲಿ ಬದಲಾದ ಅರ್ಥ ವ್ಯವಸ್ಥೆಯಲ್ಲಿ ಪತ್ರಿಕೆಯ ಲಾಭಗಳಿಕೆಯ ಉದ್ದೇಶ ಇತರ ವ್ಯಾಪಾರಿ ಸಂಸ್ಥೆಗಳಿಗಿಂತ ಭಿನ್ನವಾದುದ್ದೇನಲ್ಲ. ಉದಾಹರಣೆಗೆ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯು ಹೋಟೆಲು, ಕಂಪ್ಯೂಟರ್ ಮತ್ತು ಕಟ್ಟಡ ಉದ್ದಿಮೆದಾರರ ಜಾಹಿರಾತಿಗಾಗಿ ಪ್ರಚಾರ ಮಾದರಿಯ ಲೇಖನಗಳನ್ನು ಪ್ರಕಟಿಸುತ್ತಿದೆ. ೨-೪ ಪುಟಗಳಿರುವ ಈ ವಿಭಾಗ ವಾರಕ್ಕೆ ಒಂದು ಬಾರಿ ಕೇವಲ ಒಂದು ಲೇಖನವನ್ನು ಜಾಹಿರಾತುಗಳೊಂದಿಗೆ ಪ್ರಕಟಿಸುತ್ತಿದೆ. ಈಗಾಗಲೇ ಪತ್ರಿಕೆಗಳು ಶೇ ೬೦ ರಷ್ಟು ಸ್ಥಳವನ್ನು ಜಾಹಿರಾತಿಗಾಗಿ ಮೀಸಲಿಟ್ಟಿರು ವಾಗ, ಇನ್ನಷ್ಟು ಸ್ಥಳದ ಕಡಿತ ಸುದ್ದಿ ಪುಟಗಳಲ್ಲಿ ಆದರೆ ಪತ್ರಿಕೆಗೂ ಮತ್ತು ಒಂದು ಉತ್ಪಾದಕ (Commodity)ಕ್ಕೂ ವ್ಯತ್ಯಾಸವಿರುವುದಿಲ್ಲ. ನಮ್ಮಲ್ಲಿರುವ ಸರಪಳಿ ಪತ್ರಿಕೆಗಳು (Chain newspapers) ಪತ್ರಿಕೆಯನ್ನು ಒಂದು ಉತ್ಪಾದಕ ಎಂದೇ ಭಾವಿಸಿ ಸರ್ವವಿಧದ ಮಾರಾಟ ತಂತ್ರಗಳನ್ನು ಬಳಸುತ್ತಿದ್ದಾರೆ. ೧೧೩ ವರ್ಷ ಇತಿಹಾಸವುಳ್ಳ ವಾರಪತ್ರಿಕೆ 'Illustrated Weekly of India' ಇತ್ತೀಚೆಗೆ ನಿಂತು ಹೋಯಿತು. ಜನಾಭಿರುಚಿಯನ್ನು ಬೆಳೆಸಲು ಯಶಸ್ವಿಯಾಗಿ ಕೆಲಸಮಾಡಿದ ಈ ಪತ್ರಿಕೆ ಕೊನೆಯ ದಿನಗಳಲ್ಲಿ ಜಾಹಿರಾತಿನ ಬೆಂಬಲ ಕ್ಷೀಣಿಸಿದ್ದರಿಂದ ಮುಚ್ಚುವ ಸ್ಥಿತಿ ತಲುಪಿತು. ತನ್ನ ಉಳಿವಿಗಾಗಿ ಕೀಳು ಅಭಿರುಚಿಯ ಲೇಖನ ಮತ್ತು ಛಾಯಾ ಚಿತ್ರಗಳ ಮೊರೆ ಹೊಕ್ಕಿದ್ದು ದುರದೃಷ್ಟಕರ. ಇದರ ಅವನತಿಗೆ ವ್ಯಾಪಾರಿ ಮನೋಭಾವದ ಮಾಲೀಕರು ಕಾರಣ ಎಂಬ ಟೀಕೆ ಕೇಳಿಬರುತ್ತಿದೆ. ಎಲ್ಲಿಯವರೆಗೆ ಪತ್ರಿಕಾ ಮಾಲೀಕರು ಸಮಾಜದ ಅವಶ್ಯಕತೆಗಳನ್ನು ಕಡೆಗಣಿಸಿ ಇತರ ವ್ಯಾಪಾರಿಗಳಂತೆ ಲಾಭಗಳಿಕೆಯೊಂದೇ ಗುರಿಯನ್ನಾಗಿಟ್ಟುಕೊಳ್ಳುತ್ತಾರೋ ಅಲ್ಲಿಯವರೆಗೆ ಈ ಘರ್ಷಣೆ ತಪ್ಪಿದ್ದಲ್ಲ. ಇದರ ಪರಿಣಾಮವಾಗಿ ಪತ್ರಿಕಾ ಮೌಲ್ಯಗಳು, ತತ್ವಗಳು ಮತ್ತು ಸೇವಾನುಭಾವ ಬದಲಾಗುತ್ತವೆ. ನಿಜ, ಪತ್ರಿಕೆ ಜನತಾ ಸೇವಾಸಂಸ್ಥೆ ಆಗಿದ್ದರೂ ಇತರ ಸೇವಾಸಂಸ್ಥೆಗಳಿಗಿಂತ ಭಿನ್ನ. ಸಾಮಾಜಿಕ ಸೇವಾಸಂಸ್ಥೆಗಳಿಗೆ ತೆರಿಗೆವಿನಾಯಿತಿ, ಸ್ವಯಂ ಸೇವಕರ ಸಹಾಯ, ಧನಸಹಾಯ ಹೀಗೆ ಇನ್ನಿತರ ಸೌಲಭ್ಯಗಳು ಲಭ್ಯ. ಆದರೆ ಪತ್ರಿಕೆಗೆ ಸೌಲಭ್ಯಕ್ಕಿಂತ ಹೊಣೆಗಾರಿಕೆಯೇ ಹೆಚ್ಚು.

ಪತ್ರಿಕೆಯು ಸಾರ್ವಜನಿಕರಿಂದ ನಿರೀಕ್ಷಿಸುವುದು ಬಹಳ ಕಡಿಮೆ. ಆದರೆ ಸಾರ್ವಜನಿಕರು ಪತ್ರಿಕೆಯಿಂದ ಬಹಳಷ್ಟು ನಿರೀಕ್ಷೆ ಮಾಡುತ್ತಾರೆ. ಪತ್ರಿಕೆ ಜನರ ಜೊತೆ ನಿಕಟಸಂಪರ್ಕ ಹೊಂದಬೇಕಾದರೆ ಅದು ಸಾಮಾಜಿಕ ಕಳಕಳಿಯನ್ನು ಹೊಂದಿರಬೇಕು. ಸಮಾಜದ ಕುಂದುಕೊರತೆಗಳಿಗೆ ಸ್ಪಂದಿಸಿದಾಗಲೇ ಪತ್ರಿಕೆ ಒಂದು ಸಾಮಾಜಿಕ ಸಂಸ್ಥೆ ಯಾಗಿ ರೂಪುಗೊಳ್ಳುವುದು. ಇದಕ್ಕೆ ಉತ್ತಮ ಉದಾಹರಣೆ 'ಈನಾಡು' ತೆಲುಗು

ದಿನಪತ್ರಿಕೆ. ಇದು ಬಣ್ಣದಲ್ಲಿ ಅಚ್ಚಾಗುವ ಏಕೈಕ ಭಾಷಾದಿನಪತ್ರಿಕೆ ಮತ್ತು ಇದರ ಪ್ರಸಾರ ಸಂಖ್ಯೆ ೪ ಲಕ್ಷ ಪ್ರತಿಗಳು. ಸ್ಥಳೀಯ ಸುದ್ದಿ ವಿಚಾರಗಳಿಗೆ ಮತ್ತು ಅಭಿವೃದ್ಧಿ ಸುದ್ದಿಗೆ ಪ್ರಾಮುಖ್ಯ ನೀಡುವುದು ಈ ಪತ್ರಿಕೆಯ ಪ್ರಮುಖ ಅಂಶ. ಇದರ ಪತ್ರಿಕಾಲಯದಲ್ಲಿ ಸುಸಜ್ಜಿತವಾದ ಸಂಶೋಧನಾ ವಿಭಾಗವನ್ನು ಹೊಂದಿರುವುದು ಇದರ ಹೆಗ್ಗಳಿಕೆ,

ಪತ್ರಿಕೆ ಸಮಾಜದ ಒಂದು ದೂರು ಪೆಟ್ಟಿಗೆ. ಜನರೇ ಅದರ ರಕ್ಷಕರು. ಅದರಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಮಾಜದ ಎಲ್ಲ ವರ್ಗದ ಜನಗಳಿಗೂ ಅವಕಾಶವಿದ್ದಾಗ ಮಾತ್ರ ಸ್ವತಂತ್ರ ಮತ್ತು ಪ್ರೌಢ ಸಮಾಜದ ನಿರ್ಮಾಣ ಸಾಧ್ಯ.

ಬಿ. ಪಿ. ಮಹೇಶಚಂದ್ರಗುರು

ಪತ್ರಿಕಾ ಪ್ರಪಂಚ: ಡಾ. ಬಿ. ಆರ್. ಅಂಬೇಡ್ಕರ್ ದೃಷ್ಟಿಕೋನ

ಪತ್ರಿಕಾ ಪ್ರಪಂಚ :

ಪತ್ರಿಕೆಗಳು ಜನತೆಗೆ ಸಮಾಚಾರ, ಶಿಕ್ಷಣ ಮತ್ತು ಮನರಂಜನೆಗಳನ್ನು ಒದಗಿಸುತ್ತವೆ. ಜನಾಭಿಪ್ರಾಯ ನಿರೂಪಿಸುವಲ್ಲಿ ಪತ್ರಿಕೆಗಳು ಅತ್ಯಂತ ಪರಿಣಾಮಕಾರಿ ಪಾತ್ರ ವಹಿಸುತ್ತವೆ. ಪತ್ರಿಕೆಗಳಿಲ್ಲದ ಸಮಾಜ ಸೃಜನಶೀಲತೆಯನ್ನು ಕಳೆದುಕೊಳ್ಳುತ್ತದೆ. ಜನರ ಹಿತರಕ್ಷಣೆ ಮಾಡುವಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ವಿಫಲಗೊಂಡಾಗ ಪತ್ರಿಕಾಂಗವು ಜನತೆಯ ವಕೀಲನಂತೆ ಕಾರ್ಯ ನಿರ್ವಹಿಸಿದೆ. ಪತ್ರಿಕೋದ್ಯಮ ಪ್ರಜಾಪ್ರಭುತ್ವದ ನಾಲ್ಕು ನೆಲೆಗಟ್ಟುಗಳಲ್ಲಿ ಒಂದಾಗಿದೆ. ಪ್ರಜಾಪ್ರಭುತ್ವವನ್ನು ಬೆಳೆಸುವಲ್ಲಿ ಜಗತ್ತಿನೆಲ್ಲೆಡೆ ಪತ್ರಿಕೋದ್ಯಮ ವಿಶಿಷ್ಟವಾದ ಕೊಡುಗೆಯನ್ನೇ ನೀಡಿವೆ. ಅಮೇರಿಕಾದ ಮಾಜಿ ಅಧ್ಯಕ್ಷ ಥಾಮಸ್ ಜೆಫರ್‌ಸನ್ ಹಿಂದೊಮ್ಮೆ ಪತ್ರಿಕೆಗಳ ಮಹತ್ವ ಕುರಿತಂತೆ ಹೀಗೆ ಹೇಳಿದ್ದರು : "ಪತ್ರಿಕೆಗಳಿಲ್ಲದ ಸರ್ಕಾರ ಅಥವಾ ಸರ್ಕಾರವಿಲ್ಲದ ಪತ್ರಿಕೆಗಳು ಇವೆರಡರಲ್ಲಿ ನನ್ನ ಆಯ್ಕೆ ಸರ್ಕಾರವಿಲ್ಲದ ಪತ್ರಿಕೆಗಳೇ ಆಗಿವೆ." ಪತ್ರಿಕೆಗಳು ಸಮಾಜದ ಅಭಿವೃದ್ಧಿಗೆ ಅತ್ಯಂತ ಅವಶ್ಯಕ. ಪತ್ರಿಕೆಗಳಿಲ್ಲದ ಸಮಾಜದಲ್ಲಿ ಪ್ರಜಾಪ್ರಭುತ್ವ ಅರ್ಥರಹಿತವಾಗುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆ ಜನಶಿಕ್ಷಣ, ಜನಾಭಿಪ್ರಾಯ ನಿರೂಪಣೆ ಮತ್ತು ಜನಸಂಘಟನೆ ಮಾಡುವಲ್ಲಿ ಪತ್ರಿಕೆಗಳು ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡುತ್ತವೆ. ಜನ ವಿರೋಧಿ ಶಕ್ತಿಗಳ ವಿರುದ್ಧ ಸಂಘಟಿತ ಸಮರವನ್ನು ಉಂಟು ಮಾಡುವಲ್ಲಿ ಪತ್ರಿಕೆಗಳು ಹಿಂದೆ ಬಿದ್ದಿಲ್ಲ. ಸರ್ಕಾರದ ವೈಫಲ್ಯತೆ, ಜನವಿರೋಧಿ ಧೋರಣೆ, ಜನತಂತ್ರ ವಿರೋಧಿ ಪ್ರಕ್ರಿಯೆ, ಅಭಿವೃದ್ಧಿ ವಿರೋಧಿ ಕೃತ್ಯಗಳು ಇವೇ ಮೊದಲಾದವುಗಳನ್ನು ಬಯಲಿಗೆಳೆಸಿ ಜನರ ಕೈಗಳನ್ನು ಬಲಪಡಿಸಿ ಜನತಂತ್ರ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಪತ್ರಿಕೆಗಳು ಸಮರ್ಥವಾಗಿವೆ. ಬ್ರಿಟಿಷರ ಬಂದೂಕು ಶಕ್ತಿಯ ವಿರುದ್ಧ ನಾಯಕರಾದ ಗಾಂಧಿ, ನೆಹರು, ತಿಲಕ್, ಅಂಬೇಡ್ಕರ್ ಮೊದಲಾದವರು ತಮ್ಮ ಲೇಖನಿ ಶಕ್ತಿಯನ್ನು ಬಳಸಿಕೊಂಡು ಪತ್ರಿಕೋದ್ಯಮದ ಮೂಲ ರಾಷ್ಟ್ರಕ್ಕೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮೊದಲಾದವು

ಗಳನ್ನು ದೊರಕಿಸಿಕೊಟ್ಟಿದ್ದಾರೆ. ಪತ್ರಿಕೋದ್ಯಮವು ಕೇವಲ ಹಣ ಗಳಿಸುವ ಉದ್ಯಮ ವಾಗಿರದೆ ಜನಸೇವಾ ಸಂಸ್ಥೆಯೂ ಆಗಿದೆ. ಪತ್ರಿಕೋದ್ಯಮವು ಜನಸೇವೆಯನ್ನು ಆಧರಿಸಿದಂತಹ ಒಂದು ಪ್ರಧಾನ ವೃತ್ತಿ ಮತ್ತು ಸೇವಾ ಮಾಧ್ಯಮ.

ಡಾ ಬಿ. ಆರ್. ಅಂಬೇಡ್ಕರ್ :

ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಭಾರತದ ಸಂಪುತ್ರ. ಮಾನವತೆಯ ಹರಿಕಾರ ಮತ್ತು ಶೋಷಿತರ ಮಹಾನ್ ನಾಯಕ. ಅವರ ವಿಚಾರ ಧಾರೆಗಳು ಮತ್ತು ಹೋರಾಟ ಇಂದಿಗೂ ಕೂಡ ಭಾರತದ ಕೋಟ್ಯಾನುಕೋಟಿ ಶೋಷಿತರ ವಿಮೋಚನೆಗೆ ದಾರಿದೀಪ. ಬುದ್ಧ, ಬಸವಣ್ಣ, ಮಹಾತ್ಮ ಜ್ಯೋತಿಫುಲೆ ಮೊದಲಾದವರ ಬದುಕು, ಚಿಂತನೆ ಮತ್ತು ಆದರ್ಶಗಳಿಂದ ಪ್ರಭಾವಿತರಾದ ಅಂಬೇಡ್ಕರ್ ಭಾರತದ ಪುರೋಹಿತಶಾಹಿ, ಬಂಡವಾಳಶಾಹಿ, ಮತ್ತಿತರ ಜನವಿರೋಧಿ ಶಕ್ತಿಗಳ ವಿರುದ ಜೀವನ ಪರ್ಯಂತ ಸಮರವನ್ನೇ ಸಾರಿದ್ದರು. ಅಂಬೇಡ್ಕರ್ ತಾವು ನಂಬಿಕೊಂಡಿದ್ದ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ವಿಷಯದಲ್ಲಿ ಎಂದಿಗೂ ರಾಜಿ ಮಾಡಿ ಕೊಂಡವರಲ್ಲ. ಅವರು ತಮ್ಮ ಜೀವನದಲ್ಲಿ ಸಿಹಿಗಿಂತ ಕಹಿಯನ್ನೇ ಉಂಡದ್ದು ಹೆಚ್ಚು. ಶ್ರೇಷ್ಠ ಸಮಾಜ ಸುಧಾರಕ, ಕ್ರಾಂತಿಕಾರಿ, ಮಾನವ ಹಕ್ಕುಗಳ ಹೋರಾಟಗಾರ, ರಾಜನೀತಿ ಪಂಡಿತ, ಅರ್ಥಶಾಸ್ತ್ರಜ್ಞ, ಶಿಕ್ಷಣ ಪ್ರಚಾರಕ, ನ್ಯಾಯಾಂಗ ಪಂಡಿತ, ಪತ್ರಿಕೋದ್ಯಮಿ, ಸಂವಿಧಾನ ಶಿಲ್ಪಿ, ಸಂಶೋಧಕ ಹೀಗೆ ನಾನಾ ಮುಖಗಳುಳ್ಳ ಅಪೂರ್ವ ವಿಮೋಚಕ ಡಾ. ಅಂಬೇಡ್ಕರ್.

ಅಹಿಂಸೆ, ಸತ್ಯ, ಪ್ರೀತಿ, ಹೋರಾಟ, ಇವೇ ಮೊದಲಾದ ಅಸ್ತ್ರಗಳನ್ನು ಬಳಸಿ ಕೊಂಡು ನಾಡಿನ ಜಾತೀಯತೆ, ಅಸ್ಪೃಶ್ಯತೆ, ಅಜ್ಞಾನ, ಅನ್ಯಾಯ, ಅಸಹಾಯಕತೆ, ದಬ್ಬಾಳಿಕೆ,ಶೋಷಣೆ ಮೊದಲಾದ ಪಿಡುಗುಗಳ ವಿರುದ್ಧ ಅವಿಶ್ರಾಂತ ಹೋರಾಟ ನಡೆಸಿದ ಅಂಬೇಡ್ಕರ್ ನಿಜಕ್ಕೂ ಇತಿಹಾಸ ಪುರುಷರು. ಅವರು ಯಾವುದೇ ಒಂದು ಜಾತಿಯ ನಾಯಕರಲ್ಲ. ಮಾನವತೆಯೊಂದೇ ತನ್ನ ಜಾತಿ ಮತ್ತು ಜೀವನ ಧರ್ಮ ಎಂದು ತಮ್ಮ ಸಾಧನೆ ಮತ್ತು ಹೋರಾಟಗಳ ಮೂಲಕ ಸಾಬೀತುಪಡಿಸಿದ ಮಹಾನ್ ಕ್ರಾಂತಿಕಾರಿ ಅಂಬೇಡ್ಕರ್ ಎಂದೆಂದಿಗೂ ನೊಂದವರ ಜನರಿಗೆ ಪ್ರಸ್ತುತ ನಾಯಕ. ದಲಿತರು, ರೈತರು, ಕಾರ್ಮಿಕರು, ಮಹಿಳೆಯರು, ಹಿಂದುಳಿದವರು, ಅಲ್ಪಸಂಖ್ಯಾತರು ಹೀಗೆ ಎಲ್ಲ ಶೋಷಿತ ವರ್ಗಗಳ ಸಂಘಟನೆ, ವಿಮೋಚನೆ ಮತ್ತು ಅಭಿವೃದ್ಧಿಗಳಿಗೆ ಜೀವನ ಪರ್ಯಂತ ದುಡಿದ ಅಂಬೇಡ್ಕರ್ ಸತ್ತ ನಂತರವೂ ಅಗಾಧ ಪ್ರಮಾಣದಲ್ಲಿ ವಿಶ್ವದಾದ್ಯಂತ ಜನ ಮನ್ನಣೆ, ಅನುಯಾಯಿಗಳು ಮತ್ತು ಅಭಿಮಾನಿಗಳನ್ನೂ ಗಳಿಸಿದ್ದಾರೆ. ಅಂಬೇಡ್ಕರ್ ವಿಚಾರಧಾರೆಗಳು ಶೋಷಿತ ಜನವರ್ಗಗಳ ಮೇಲೆ ಹೆಚ್ಚು ಹೆಚ್ಚು ಪ್ರಭಾವ ಬೀರುತ್ತಿವೆ. ಶೋಷಣಾ ರಹಿತ ನವ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗುವ ಎಲ್ಲರಿಗೂ ಅವರು ನಿತ್ಯಚೇತನ.

ಅಂಬೇಡ್ಕರ್ ಅವರ ಶೈಕ್ಷಣಿಕ ಹಿನ್ನೆಲೆ :

ಮಹಾರಾಷ್ಟ್ರದ ಸಾಮಾನ್ಯ ದಲಿತ ಕುಟುಂಬವೊಂದರಲ್ಲಿ ಜನ್ಮ ತಾಳಿದ ಅಂಬೇಡ್ಕರ್ ಶಿಕ್ಷಣ, ವೃತ್ತಿ, ಜೀವನ ಹೀಗೆ ಎಲ್ಲ ವಿಷಯಗಳಲ್ಲೂ ಹೋರಾಟದಿಂದಲೇ ಮುಂದೆ ಬಂದವರು. ಅವರ ಶಿಕ್ಷಣ ಕೂಡ ಅಷ್ಟೊಂದು ಸುಗಮವಾಗಿ ಸಾಗಲಿಲ್ಲ. ವಾಸ್ತವವಾಗಿ ಅದೊಂದು ದುರ್ಗಮವಾದ ರಸ್ತೆಯೇ ಆಗಿತ್ತು. ಬಡತನ, ತಾರತಮ್ಯ, ಅಸ್ಪೃಶ್ಯತೆ, ಒಂಟಿತನ ಹೀಗೆ ಅನೇಕ ಸಮಸ್ಯೆಗಳು ಅವರನ್ನು ಬಹಳವಾಗಿ ಕಾಡಿದವು. ಆದರೆ ಇವುಗಳಿಂದ ಧೃತಿಗೆಡದೆ ಛಲಬಿಡದ ತ್ರಿವಿಕ್ರಮನಂತೆ ಅಂಬೇಡ್ಕರ್ ಮುಂದೆ ಸಾಗಿದರು. ಪ್ರತಿಯೊಂದು ನೋವನ್ನೂ ಅವರು ಛಲವಾಗಿ ಕಂಡರು. ಅವಮಾನದ ಸರಮಾಲೆಗಳನ್ನು ಸಾಧನೆಯ ಮೆಟ್ಟಿಲುಗಳನ್ನಾಗಿಸಿ ಶೈಕ್ಷಣಿಕ ಪ್ರಗತಿಯ ಉತ್ತುಂಗ ಶಿಖರವನ್ನೇ ಏರಿದರು.

ಅಂಬೇಡ್ಕರ್ ಅವರ ತಂದೆ ರಾಂಜಿ ಕಿತ್ತು ತಿನ್ನುವ ಬಡತನದ ಮಧ್ಯೆಯೂ ಮಗನ ಶಾಲಾ ಶಿಕ್ಷಣದ ವ್ಯವಸ್ಥೆಯನ್ನು ಸಮರ್ಪಕವಾಗಿಯೇ ನೋಡಿಕೊಂಡರು. ಬರೋಡ ಮಹಾರಾಜರ ನೆರವಿನಿಂದ ಅಂಬೇಡ್ಕರ್ ನಿರಾತಂಕವಾಗಿ ಕಾಲೇಜು ಶಿಕ್ಷಣ ವನ್ನು ಪೂರೈಸಿದರು. ಅನಂತರ ಅಮೆರಿಕಾದಲ್ಲಿಯ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ತೆರಳಿ ಎಂ. ಎ. ಪದವಿ ಗಳಿಸಿದರು. ಅಲ್ಲಿಯೇ "ಭಾರತೀಯ ಹಣಕಾಸು ವ್ಯವಸ್ಥೆ" ಕುರಿತಂತೆ ಪ್ರಬಂಧ ರಚಿಸಿ ಪಿಎಚ್.ಡಿ. ಪದವಿ ಗಳಿಸಿದರು. ಅರ್ಥಶಾಸ್ತ್ರದಲ್ಲಿ ಅತ್ಯುನ್ನತ ಅಧ್ಯಯನ ನಡೆಸುವ ಹಂಬಲದಿಂದ ೧೯೧೬ ಜೂನ್ ತಿಂಗಳಲ್ಲಿ ಲಂಡನ್ ನಗರಕ್ಕೆ ಬಂದರು. ಅರ್ಥಶಾಸ್ತ್ರದಲ್ಲಿ ಡಿಎಸ್‌ಸಿ. ಪದವಿಗಾಗಿ ಲಂಡನ್ ವಿಶ್ವವಿದ್ಯಾಲಯ ದಲ್ಲೂ, ಬ್ಯಾರಿಸ್ಟರ್ ಆಫ್ ಲಾ ಪದವಿಗಾಗಿ ಗ್ರೇಜ್ ಇನ್‌ನಲ್ಲಿಯ ಕಾನೂನು ಸಂಸ್ಥೆ ಯಲ್ಲೂ ಪ್ರವೇಶ ಪಡೆದರು. ದುರದೃಷ್ಟವಶಾತ್ ಬರೋಡ ಸಂಸ್ಥಾನದಿಂದ ವಿದ್ಯಾರ್ಥಿವೇತನ ಅವಧಿ ಮುಗಿದು ಹೋಗಿದ್ದ ಕಾರಣ ಕೂಡಲೇ ಹಿಂತಿರುಗಬೇಕೆಂಬ ಆದೇಶ ಬಂದಿತು. ಬರೆದುಕೊಟ್ಟಿದ್ದ ಕೌಲಿನ ಪ್ರಕಾರ ಅಂಬೇಡ್ಕರ್‌ರು ಬರೋಡ ಸಂಸ್ಥಾನದಲ್ಲಿ ಹತ್ತು ವರ್ಷಗಳ ಸೇವೆಯನ್ನು ಸಲ್ಲಿಸಬೇಕಿತ್ತು. ಅರ್ಥಶಾಸ್ತ್ರದ ಮತ್ತು ಕಾನೂನು ವಿಷಯಗಳಲ್ಲಿನ ತಮ್ಮ ಉನ್ನತ ಅಧ್ಯಯನವನ್ನು ಕೂಡಲೇ ಮೊಟಕುಗೊಳಿಸಿ ಕೊಲಂಬೋ ಮಾರ್ಗವಾಗಿ ಆಗಸ್ಟ್ ೨೧, ೧೯೧೭ರಂದು ಅಂಬೇಡ್ಕರ್ ಭಾರತದಲ್ಲಿ ಬಂದಿಳಿದರು.

ಪತ್ರಿಕೋದ್ಯಮಿಯಾಗಿ ಅಂಬೇಡ್ಕರ್ :

ಅಂಬೇಡ್ಕರ್ ಭಾರತಕ್ಕೆ ಬಂದ ಕೂಡಲೇ ಬರೋಡದ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿಯಾಗಿ ನೇಮಕಗೊಂಡರು. ಆಡಳಿತದ ವಿವಿಧ ಭಾಗಗಳಲ್ಲಿ ಅನುಭವ ಪಡೆದ ನಂತರ ಅವರನ್ನು ಅರ್ಥಮಂತ್ರಿಯಾಗಿ ನೇಮಿಸುವ ಆಕಾಂಕ್ಷೆ ಮಹಾರಾಜರ ದ್ದಾಗಿತ್ತು. ಅತ್ಯುನ್ನತ ಶಿಕ್ಷಣ ಮತ್ತು ಹುದ್ದೆಗಳನ್ನು ಹೊಂದಿದ್ದರೂ ಕೂಡ ಅಂಬೇಡ್ಕರ್ ಅವರನ್ನು ಅಸ್ಪೃಶ್ಯತೆಯ ಪೆಡಂಭೂತ ಬಹಳವಾಗಿ ಬಾಧಿಸಿತು. ಕಛೇರಿಯಲ್ಲಿ ಮತ್ತು

ಹೊರಗಡೆ ಅಂಬೇಡ್ಕರ್ ಅಸ್ಪೃಶ್ಯತೆಯ ಬವಣೆ ಅನುಭವಿಸಬೇಕಾಯಿತು. ಅವರಿಗೆ ವಾಸಿಸಲು ಬರೋಡೆಯಂಥ ದೊಡ್ಡ ನಗರದಲ್ಲಿ ಅಸ್ಪೃಶ್ಯ ಎಂಬ ಕಾರಣಕ್ಕಾಗಿ ಸ್ಥಳಾವಕಾಶ ಲಭಿಸಲಿಲ್ಲ. ಬರೋಡೆಯ ದಿವಾನ್ ಮತ್ತು ಮಹಾರಾಜರು ಅಂಬೇಡ್ಕರರಿಗೆ ವಸತಿ ಸೌಕರ್ಯ ಕಲ್ಪಿಸಿ ಕೊಡುವಲ್ಲಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು. ಕೆಲವೇ ದಿನಗಳಲ್ಲಿ ಅವರು ಉಳಿದುಕೊಂಡಿದ್ದ ಪಾರಸಿ ತಂಗುಮನೆಯಿಂದಲೂ ಅವರನ್ನು ಹೊರದೂಡಲಾಯಿತು. ಕೊನೆಗೆ ಮರದಡಿಯಲ್ಲಿ ಕುಳಿತು ಅಂಬೇಡ್ಕರ್ ಕಣ್ಣೀರು ಸುರಿಸಬೇಕಾದ ದುಸ್ಥಿತಿ ಬಂದೊದಗಿತು. ಅವರು ಅನಿವಾರ್ಯವಾಗಿ, ೧೯೧೭ರ ನವೆಂಬರ್ ಮಧ್ಯದಲ್ಲಿ ಬರೋಡೆಯಿಂದ ನಿರ್ಗಮಿಸಿದರು. ೧೯೧೮ರ ನವೆಂಬರ್ ತಿಂಗಳಲ್ಲಿ ಮುಂಬೈ ನಗರದ ಸಿಡೆನ್ ಹ್ಯಾಂ ವಾಣಿಜ್ಯ ಕಾಲೇಜಿನಲ್ಲಿ ಅಂಬೇಡ್ಕರ್ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಇಲ್ಲಿಯೂ ಕೂಡ ಅಸ್ಪೃಶ್ಯತೆ ಅವರನ್ನು ಕಾಡದೆ ಬಿಡಲಿಲ್ಲ. ಅಸ್ಪೃಶ್ಯತೆಯೆಂಬ ಶಾಪವನ್ನು ತೊಡೆದು ಹಾಕಲೇಬೇಕು ಮತ್ತು ತನ್ನ ಜನರನ್ನು ಈ ಪಿಡುಗಿನಿಂದ ವಿಮೋಚನೆಗೊಳಿಸಲೇಬೇಕೆಂಬ ನಿರ್ಧಾರವೂ ಅವರಲ್ಲಿ ಬಲಗೊಳ್ಳುತ್ತಿತ್ತು. ಸರ್ಕಾರದ ಸೇವೆಯಲ್ಲಿದ್ದುಕೊಂಡು ದಲಿತೋದ್ಧಾರ ಕಾರ್ಯವನ್ನು ನಿರ್ವಹಿಸುವುದು ಅಸಾಧ್ಯವೆಂಬುದನ್ನು ಅಂಬೇಡ್ಕರ್ ಮನಗಂಡರು.

ಪತ್ರಿಕೋದ್ಯಮದ ಎಲ್ಲ ಮುಖಗಳನ್ನು ಅಂಬೇಡ್ಕರ್ ಚೆನ್ನಾಗಿ ಅರಿತಿದ್ದರು. ಭಾರತೀಯ ಪತ್ರಿಕೆಗಳು ಅಂದು ಸ್ವಾತಂತ್ರ್ಯ ಗಳಿಕೆಯ ಏಕೈಕ ಗುರಿಯನ್ನು ಹೊಂದಿದ್ದವು. ಭಾರತೀಯ ಸಮಾಜದ ಸುಧಾರಣೆ, ಅಸ್ಪೃಶ್ಯತಾ ನಿವಾರಣೆ ಮತ್ತು ದೀನ ದಲಿತರ ಉನ್ನತಿಗಳು ಅಂದಿನ ಪತ್ರಿಕೆಗಳ ಪ್ರಧಾನ ಗುರಿಗಳಾಗಿರಲಿಲ್ಲ ಎಂಬುದನ್ನು ಅಂಬೇಡ್ಕರ್ ಮನಗಂಡಿದ್ದರು. ವ್ಯವಸ್ಥೆಗೆ ವಿರುದ್ಧವಾದ ಪತ್ರಿಕಾ ಧೋರಣೆ ಅತ್ಯವಶ್ಯ ಎಂಬುದು ಅವರ ನಿಲುವಾಗಿತ್ತು. ಅಂದಿನ ಪತ್ರಿಕೆಗಳು ಪ್ರಧಾನವಾಗಿ ಮೇಲ್ಜಾತಿಯ ಶ್ರೀಮಂತರ ಪ್ರಭುತ್ವಕ್ಕೆ ಒಳಪಟ್ಟಿದ್ದವು. ದಲಿತರ ಬದುಕು, ಆಶಯ ಮತ್ತು ಅಭಿವೃದ್ಧಿಗೆ ಅಂದಿನ ಭಾರತೀಯ ಪತ್ರಿಕೋದ್ಯಮ ಪೂರಕವಾಗಿರಲಿಲ್ಲ. ದಲಿತರ ವಾಣಿಯಾಗಿ ಪತ್ರಿಕೆಯೊಂದನ್ನು ಸ್ಥಾಪಿಸಿ ದಲಿತೋದ್ಧಾರದ ಕೆಲಸವನ್ನು ಕೈಗೊಳ್ಳುವ ದೃಢ ನಿರ್ಧಾರವನ್ನು ಅಂಬೇಡ್ಕರ್ ಮಾಡಿದರು.

ದತ್ತೋಬಾಪವಾರ್ ಎಂಬ ಹಿತಚಿಂತಕರ ಮಧ್ಯಸ್ಥಿಕೆಯ ಫಲವಾಗಿ ಕೊಲ್ಲಾಪುರದ ಮಹಾರಾಜರಿಂದ ಆರ್ಥಿಕ ಸಹಾಯ ಪಡೆದು ೧೯೨೦ರ ಜನವರಿ ೩೧ ರಂದು ಮುಂಬೈನಲ್ಲಿ "ಮೂಕ ನಾಯಕ" (Leader of the Dumb) ಎಂಬ ಮರಾಠಿ ಪಕ್ಷ ಪತ್ರಿಕೆಯನ್ನು ಪ್ರಾರಂಭಿಸಿದರು. ಅಂಬೇಡ್ಕರ್ ನೇರವಾಗಿ ಪತ್ರಿಕೆಯ ಸಂಪಾದಕರಾಗಿರಲಿಲ್ಲವಾದರೂ ಅದರ ಹಿಂದಿನ ಚಾಲಕ ಶಕ್ತಿ ಅವರೇ ಆಗಿದ್ದರು. ಅಸ್ಪೃಶ್ಯತೆಯ ಪರಾಕಾಷ್ಠೆ ಎಷ್ಟಿತ್ತೆಂದರೆ ತಿಲಕರ "ಕೇಸರಿ" ಪತ್ರಿಕೆಯಲ್ಲಿ 'ಮೂಕನಾಯಕ' ಪತ್ರಿಕೆಯ ಸ್ಥಾಪನೆ ಬಗ್ಗೆ ಹಣ ಕೊಟ್ಟರೂ ಜಾಹೀರಾತು ಪ್ರಕಟನೆಯನ್ನು ನಿರಾಕರಿಸಲಾಯಿತು. ಅದೂ ತಿಲಕರ ನೇತೃತ್ವದ ಅವಧಿಯಲ್ಲೇ ಇಂತಹ ನಿರಾಕರಣೆ ಉಂಟಾಯಿತು.

'ಮೂಕನಾಯಕ' ಭಾರತದ ಪತ್ರಿಕೋದ್ಯಮ ಇತಿಹಾಸದಲ್ಲೇ ಒಂದು ಮೈಲಿಗಲ್ಲು. ದಲಿತ ಜನ ವರ್ಗಗಳ ವಾಣಿಯಾಗಿ ಈ ಪತ್ರಿಕೆಯನ್ನು ಬೆಳೆಸುವ ಸದುದ್ದೇಶದಿಂದ ಅಂಬೇಡ್ಕರ್ ಪತ್ರಿಕೆಯನ್ನು ಹೊರತಂದರು. ಅದರ ಮೊದಲ ಸಂಚಿಕೆಯಲ್ಲಿ ಸಂಪಾದಕರ ಪರವಾಗಿ ಪತ್ರಿಕೆಯ ಧ್ಯೇಯೋದ್ದೇಶಗಳನ್ನು ವಿವರಿಸುತ್ತಾ ಅಂಬೇಡ್ಕರ್ ಹೀಗೆ ಬರೆದರು.: ಬ್ರಾಹ್ಮಣ, ಅಬ್ರಾಹ್ಮಣ ಮತ್ತು ಅಸ್ಪೃಶ್ಯ ಎಂಬ ಮೂರು ವರ್ಗಗಳನ್ನೊಳಗೊಂಡ ಹಿಂದೂ ಸಮಾಜವೆಂದರೆ ಅಸಮಾನತೆಗಳ ತವರು; ಅದೊಂದು ಅನೇಕ ಮಜಲುಗಳ ಗೋಪುರ; ಆದರೆ ಒಂದರಿಂದೊಂದಕ್ಕೆ ಪ್ರವೇಶವಿಲ್ಲ; ಪ್ರಾಣಿಗಳಲ್ಲಿ, ನಿರ್ಜೀವ ವಸ್ತುಗಳಲ್ಲಿ ದೇವರನ್ನು ಕಾಣುವ ಸವರ್ಣೀಯರು ಸಹಧರ್ಮೀಯರನ್ನು ಅಸ್ಪೃಶ್ಯರನ್ನಾಗಿ ಕಾಣುವುದು ಶೋಚನೀಯ; ವಿದ್ಯಾವಕಾಶ ಹಾಗೂ ಅಧಿಕಾರ ಇಲ್ಲದ್ದರಿಂದ ಅಬ್ರಾಹ್ಮಣರು ಹಿಂದುಳಿದವರಾಗಿದ್ದಾರೆ; ನಿರಂತರ ದಾಸ್ಯ ಅಜ್ಞಾನ, ಬಡತನಗಳಿಂದ ಅವರನ್ನು ಮುಕ್ತಗೊಳಿಸುವುದಕ್ಕೆ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡಲೇಬೇಕು".[1]

ಶ್ರೇಣೀಕೃತ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹಾನಿಕಾರಕ ಎಂದು ಅಂಬೇಡ್ಕರ್ ಜರಿದರು. ಬ್ರಾಹ್ಮಣವಾದ ಈ ಎಲ್ಲ ಅಸಮಾನತೆಗಳಿಗೆ ಮೂಲ ಕಾರಣವಾಗಿದ್ದು ಶಿಕ್ಷಣ ಮತ್ತು ಜ್ಞಾನ ಪ್ರಸಾರ ಬ್ರಾಹ್ಮಣರ ಮೂಲ ಉದ್ದೇಶಗಳಾಗಿರದೆ ಸಂಪತ್ತಿನ ಕ್ರೋಢೀಕರಣ ಮತ್ತು ಏಕಸ್ವಾಮ್ಯಗಳೇ ಅದರ ನಿಜವಾದ ಉದ್ದೇಶಗಳಾಗಿವೆ ಎಂದು ಶೋಷಣೆಯ ಮೂಲವಾದ ಬ್ರಾಹ್ಮಣವಾದವನ್ನು ಖಂಡತುಂಡವಾಗಿ ಅಂಬೇಡ್ಕರ್ ಖಂಡಿಸಿದ್ದರು. ಅಸ್ಪೃಶ್ಯ ಮತ್ತು ಹಿಂದುಳಿದ ಜನಾಂಗಗಳನ್ನು ಸಂಘಟಿಸುವ ಸಲುವಾಗಿ ಪತ್ರಿಕೆಯನ್ನು ನಡೆಸಿದರು. ಅಸ್ಪೃಶ್ಯತೆ, ಜಾತೀಯತೆ ಮತ್ತು ಅಜ್ಞಾನ ಪ್ರಜಾಪ್ರಭುತ್ವದ ಪ್ರಬಲ ಶತ್ರುಗಳು ಎಂದು ಅವರು ಸಾರಿದರು. ಶಿಕ್ಷಣವನ್ನು ಹೋರಾಟದ ಪ್ರಬಲ ಅಸ್ತ್ರವನ್ನಾಗಿ ಬಳಸಬೇಕೆಂದು ಅಂಬೇಡ್ಕರ್ ಶೋಷಿತ ಜನಗಳಿಗೆ ಕರೆಯಿತ್ತರು.

ಇನ್ನೊಂದು ಸಂಚಿಕೆಯಲ್ಲಿ "ರಾಜ್ಯಾಧಿಕಾರಕ್ಕಾಗಿ ಸವರ್ಣೀಯರು ಬ್ರಿಟಿಷರಿಗೆ ಎದುರು ನಿಲ್ಲುವುದು ನ್ಯಾಯವಾದರೆ, ನ್ಯಾಯವಾದ ಅಧಿಕಾರಾವಕಾಶಗಳಿಗಾಗಿ ಅಸ್ಪೃಶ್ಯರು ಸವರ್ಣೀಯರಿಗೆ ಎದುರು ನಿಲ್ಲುವುದು ನ್ಯಾಯ", ಎಂದೂ ಅವರು ವಾದಿಸಿದರು.[2] ಪತ್ರಿಕೆಯ ಲೇಖನವೊಂದರಲ್ಲಿ ಅಂಬೇಡ್ಕರ್ ಹೀಗೆ ಬರೆದರು: "ಭಾರತವು ಕೇವಲ ಸ್ವತಂತ್ರ ರಾಷ್ಟ್ರವಾದರಷ್ಟೇ ಸಾಲದು. ಭಾರತವು ಒಂದು ಒಳ್ಳೆಯ ರಾಷ್ಟ್ರವಾಗಿ ಮೇಲೇರಬೇಕು. ಎಲ್ಲ ವರ್ಗಗಳಿಗೂ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸಮಾನತೆಯನ್ನು ತಂದುಕೊಡುವುದರ ಮೂಲಕವಾಗಿ ಪ್ರತಿಯೊಬ್ಬ ಪ್ರಜೆಯ ಜೀವನಮಟ್ಟದಲ್ಲಿ ಸುಧಾರಣೆ ಮತ್ತು ಅಭಿವೃದ್ಧಿಗೆ ಪೂರಕವಾದ ಸನ್ನಿವೇಶಗಳನ್ನು ಸೃಷ್ಟಿಮಾಡುವುದು ಅತ್ಯವಶ್ಯ...[3] ನಿಮ್ನ ವರ್ಗಗಳಿಗೆ ಮೂಲಭೂತ ಹಕ್ಕುಗಳನ್ನು ಅನುಭವಿಸಲು ಅವಕಾಶ ಮಾಡಿಕೊಡದ ಸ್ವರಾಜ್ಯ ಪರಿಕಲ್ಪನೆಯನ್ನು

ಅಂಬೇಡ್ಕರ್ ವಿರೋಧಿಸಿದರು. ರಾಜಕೀಯ ಸ್ವಾತಂತ್ರ್ಯವು ಉನ್ನತ ಜಾತಿ ಮತ್ತು ವರ್ಗದ ಜನರಿಗಷ್ಟೇ ಉಪಯುಕ್ತವಾಗುತ್ತದೆ. ವಾಸ್ತವವಾಗಿ ನಿಮ್ನ ವರ್ಗಗಳು ಮತ್ತಿತರ ಹಿಂದುಳಿದ ವರ್ಗಗಳನ್ನು ಹೊಸ ರೀತಿಯ ದಾಸ್ಯಕ್ಕೆ ಒಳಪಡಿಸುವ ಸ್ವಾತಂತ್ರ್ಯ ಅರ್ಥಪೂರ್ಣವಲ್ಲ ಎಂದು ಅಂಬೇಡ್ಕರ್ ಪ್ರಬಲವಾಗಿ ವಾದಿಸಿದರು.[4]

ಹೋಂರೂಲ್ ಚಳವಳಿಯವರು ಬೇಡುತ್ತಿದ್ದ ಸ್ವಾಯತ್ತಾಧಿಕಾರವನ್ನು ಕುರಿತು "ಟೈಮ್ಸ್" ಪತ್ರಿಕೆಯಲ್ಲಿ ಗುಪ್ತನಾಮದಿಂದ ಬರೆಯುತ್ತ "ರಾಜ್ಯಾಧಿಕಾರ ಸವರ್ಣೀಯರ ಜನ್ಮಸಿದ್ಧ ಹಕ್ಕಾಗಿದ್ದಷ್ಟೇ ಅಸ್ಪೃಶ್ಯರ ಜನ್ಮಸಿದ್ಧ ಹಕ್ಕೂ ಆಗಿದೆ; ಕೆಳಗಿನವರನ್ನು ಮೇಲಕ್ಕೆತ್ತದೆ ಸ್ವಾಯತ್ತಾಧಿಕಾರ ಸಿದ್ಧಿಸಲಾರದು."[5]

ಅಂಬೇಡ್ಕರ್ ಎಲ್ಲ ಅರ್ಥದಲ್ಲೂ ರಾಷ್ಟ್ರೀಯವಾದಿಯಾಗಿದ್ದರು. ಅವರಲ್ಲಿ ಉತ್ಕಟ ದೇಶಾಭಿಮಾನವಿತ್ತು. ದೇಶದ ಸುಧಾರಣೆ, ಏಕತೆ ಮತ್ತು ಪ್ರಗತಿಗಳನ್ನು ಸಾಧಿಸುವ ಕನಸನ್ನು ಅವರು ಕಂಡಿದ್ದರು. "ಅಸ್ಪೃಶ್ಯರು ಜಾತಿಯಾಗಿ ನಿರ್ಮೂಲನ ಗೊಳ್ಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಮನುಷ್ಯರಾಗಿ ಅಭಿವೃದ್ಧಿ ಹೊಂದುವುದನ್ನು ಆಶಿಸುತ್ತೇನೆ. ದೇಶಕ್ಕೆ ಬೇಕಾಗಿರುವುದು ಜನರ ಗುಣವೇ ಹೊರತು ಜಾತಿಯಲ್ಲ" ಎಂದು ಅಂಬೇಡ್ಕರ್ ಸ್ಪಷ್ಟಪಡಿಸಿದ್ದರು. "ಮೂಕನಾಯಕ" ಕಟ್ಟಕಡೆಯ ದಟ್ಟದಾರಿದ್ರ್ಯಕ್ಕೆ ಸಿಲುಕಿ ತತ್ತರಿಸುತ್ತಿದ್ದ ಅಸ್ಪೃಶ್ಯ ಜನವರ್ಗಗಳಲ್ಲಿ ಮೊಟ್ಟಮೊದಲ ಬಾರಿಗೆ ಜಾಗೃತಿ ಮೂಡಿಸಿತು. ಈ ಪತ್ರಿಕೆಯು ಹೆಚ್ಚುಕಾಲ ಉಳಿಯಲಿಲ್ಲ. ಆದರೂ ಕೂಡ ಭಾರತೀಯ ಪತ್ರಿಕೋದ್ಯಮ ಇತಿಹಾಸದಲ್ಲಿ ಇದೊಂದು ಮೈಲುಗಲ್ಲು. ಅಂಬೇಡ್ಕರ್ ತಮ್ಮ ಕ್ರಾಂತಿಕಾರಕ ಬರಹಗಳ ಮೂಲಕವಾಗಿ ಬಹಳಷ್ಟು ಹಿಂದೆಯೇ "ಕ್ರಾಂತಿಕಾರಕ ಪತ್ರಿಕೋದ್ಯಮ"ವನ್ನು ಈ ಪತ್ರಿಕೆಯ ಮೂಲಕ ಭಾರತದಲ್ಲಿ ಹುಟ್ಟು ಹಾಕಿದರು. ಅಂಬೇಡ್ಕರ್ ರಾಷ್ಟ್ರದಲ್ಲಿ ಸುಧಾರಣೆಯನ್ನುಂಟುಮಾಡುವಲ್ಲಿ ಪತ್ರಿಕೆಯ ಮಹತ್ವವನ್ನು ಅರಿತಿದ್ದರು. ಅಂದು ಮೇಲ್ವರ್ಗದವರ ಪೂರ್ಣ ಹಿಡಿತದಲ್ಲಿ ಪತ್ರಿಕೋದ್ಯಮ ಸಿಲುಕಿದ್ದು ಕೆಳವರ್ಗದ ಜನರ ಆಶೋತ್ತರಗಳೊಂದಿಗೆ ಸ್ಪಂದಿಸುವಂತಿರ ಲಿಲ್ಲ. ಈ ಕಾರಣಕ್ಕಾಗಿಯೇ ಅಂಬೇಡ್ಕರ್ ಜನರವಾಣಿಯಾಗಿ, ವಿಶೇಷವಾಗಿ ಶೋಷಿತ ಜನರ ಧ್ವನಿಯಾಗಿ "ಮೂಕನಾಯಕ" ಪತ್ರಿಕೆಯನ್ನು ಭಾರತೀಯ ಪತ್ರಿಕಾ ಪ್ರಪಂಚಕ್ಕೆ ನೀಡಿದರು.

ಅಂಬೇಡ್ಕರರಿಗೆ ಲಂಡನ್ನಿನಲ್ಲಿ ಉನ್ನತ ಶಿಕ್ಷಣವನ್ನು ಮುಗಿಸಿ ಭಾರತದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರವಾದ ಸುಧಾರಣೆ ಉಂಟುಮಾಡಬೇಕೆಂಬ ಹಂಬಲ ದಿನೇ ದಿನೇ ಹೆಚ್ಚುತ್ತಿತ್ತು. ೧೯೨೦ರ ಜುಲೈ ತಿಂಗಳಲ್ಲಿ ಕೊಲ್ಲಾಪುರದ ಮಹಾರಾಜರು, ಸ್ನೇಹಿತ ನವಲ್ ಬಾಥೆನಾ ಮೊದಲಾದವರ ಸಹಾಯ ಪಡೆದು ಸಿಡೆನ್ ಹ್ಯಾಂ ಕಾಲೇಜಿನ ಪ್ರಾಧ್ಯಾಪಕರ ಹುದ್ದೆಗೆ ರಾಜೀನಾಮೆ ಸಲ್ಲಿಸಿ ಇಂಗ್ಲೆಂಡಿಗೆ ತೆರಳಿದರು. "ಮೂಕನಾಯಕ" ಪತ್ರಿಕೆಯನ್ನು ಎರಡು ವರ್ಷಗಳ

ಕಾಲ ನಡೆಸಲಾಯಿತು. ಅಂಬೇಡ್ಕರ್ ಭಾರತದಲ್ಲಿರುವ ತನಕ ಪತ್ರಿಕೆಗೆ ಬೇಕಾದ ಸಂಪನ್ಮೂಲಗಳನ್ನು ಒದಗಿಸುತ್ತಿದ್ದರು. ಸೆಪ್ಟೆಂಬರ್ ತಿಂಗಳ ಮೊದಲ ವಾರದಿಂದ ಇಂಗ್ಲೆಂಡಿನ ಗ್ರೇಜ್‌ಇನ್‌ನಲ್ಲಿ ಕಾನೂನು ಮತ್ತು ಲಂಡನ್ ಸ್ಕೂಲ್ ಆಫ್ ಇಕಾನಾಮಿಕ್ಸ್‌ನಲ್ಲಿ ಅರ್ಥಶಾಸ್ತ್ರದ ವಿಸ್ತೃತ ವ್ಯಾಸಂಗದಲ್ಲಿ ತೊಡಗಿದರು. ಅಧ್ಯಯನದ ಏಕೈಕ ಉದ್ದೇಶವಿರಿಸಿಕೊಂಡು ಸಮಯ ಹಾಗೂ ಹಣ ಎರಡರಲ್ಲೂ ಅತ್ಯಂತ ಮಿತವ್ಯಯವನ್ನು ಸಾಧಿಸಿ ಅಪರಿಮಿತ ಪರಿಶ್ರಮದಿಂದ ವ್ಯಾಸಂಗ ಮುಂದುವರೆಸಿದರು. ಗಾಢವಾದ ಅಧ್ಯಯನದ ನಡುವೆಯೂ ದಲಿತೋದ್ಧಾರ ಕುರಿತಂತೆ ಅಂಬೇಡ್ಕರ್ ಬಹಳವಾಗಿ ಚಿಂತಿಸಿದರು. ಭಾರತದಲ್ಲಿಯ ಆಗುಹೋಗುಗಳ ಬಗ್ಗೆ ಲಕ್ಷ್ಯವಿರಿಸಿ ಅರಿತುಕೊಳ್ಳುತ್ತಿದ್ದರು. ಪತ್ರಿಕೆಯ ಕಾರ್ಯದಲ್ಲಿ ತೀವ್ರವಾದ ಆಸಕ್ತಿ ಹೊಂದಿದ್ದರು. ಲಂಡನ್ನಿನಿಂದಲೇ ಪತ್ರಿಕೆಗೆ ಮಾರ್ಗದರ್ಶನ ನೀಡುತ್ತಿದ್ದರು. ಅವರು ವಿದೇಶಕ್ಕೆ ತೆರಳಿದ ಕೆಲವೇ ತಿಂಗಳಲ್ಲಿ ಪತ್ರಿಕೆ ನಿಂತುಹೋಯಿತು. ಇದಕ್ಕೆ ಬಂಡವಾಳ ಮತ್ತು ಜನರ ಪ್ರೋತ್ಸಾಹಗಳ ಕೊರತೆ ಪ್ರಧಾನ ಕಾರಣಗಳಾಗಿದ್ದವು.

ಎರಡು ವರ್ಷಗಳ ಅಖಂಡ ಪರಿಶ್ರಮದಿಂದ "ಬ್ರಿಟಿಷ್ ಇಂಡಿಯಾದಲ್ಲಿಯ ಕೇಂದ್ರ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣ" ಎಂಬ ಪ್ರಬಂಧವನ್ನು ರಚಿಸಿ ಲಂಡನ್ ವಿಶ್ವವಿದ್ಯಾನಿಲಯದಿಂದ ಎಂ.ಎಸ್ಸಿ. ಪದವಿಯನ್ನು ಪಡೆದರು. ೧೯೨೨ರ ಅಕ್ಟೋಬರ್ ತಿಂಗಳಲ್ಲಿ "ರೂಪಾಯಿಯ ಸಮಸ್ಯೆ" ಎಂಬ ಬೃಹತ್ ಪ್ರಬಂಧವನ್ನು ಅತ್ಯುನ್ನತ ಡಿ.ಎಸ್‌ಸಿ. ಪದವಿಗಾಗಿ ಸಲ್ಲಿಸಿದರು. ಒಪ್ಪಿಸಲಾಗಿದ್ದ ಬೃಹತ್ ಪ್ರಬಂಧವು ಕ್ರಾಂತಿಕಾರಕ ಅಂಶಗಳನ್ನು ಒಳಗೊಂಡಿತ್ತಲ್ಲದೆ ಅದರ ಕೆಲವು ಭಾಗಗಳು ಬ್ರಿಟಿಷ್ ಸರ್ಕಾರದ ಭಾವನೆಗಳನ್ನು ನೋಯಿಸುವಂಥದ್ದಾಗಿದ್ದವು. ಲಂಡನ್ ವಿಶ್ವವಿದ್ಯಾಲಯದಲ್ಲಿ ಅವರ ಮಾರ್ಗದರ್ಶಕ ಪ್ರಾಧ್ಯಾಪಕರಾಗಿದ್ದ ಪ್ರೊ. ಕೆನ್ನಾನ್‌ಅವರ ಕರೆಗೆ ಓಗೊಟ್ಟು ಅಂಬೇಡ್ಕರ್ ೧೯೨೩ರ ಏಪ್ರಿಲ್‌ನಲ್ಲಿ ಮುಂಬೈಗೆ ಹಿಂತಿರುಗಿದ ನಂತರ ಪ್ರಬಂಧದಲ್ಲಿ ಕೆಲವಾರು ಮಾರ್ಪಾಟುಗಳನ್ನು ಮಾಡಿದರು. ತಿದ್ದಿ ಒಪ್ಪಿಸಲಾದ ಪ್ರಬಂಧವನ್ನು ಲಂಡನ್ ವಿಶ್ವವಿದ್ಯಾನಿಲಯ ಡಿ.ಎಸ್‌ಸಿ. ಪದವಿಗಾಗಿ ಅಂಗೀಕರಿಸಿತು. ಇಲ್ಲಿಗೆ ಅಂಬೇಡ್ಕರ್ ಅವರ ಜೀವನದ ಮತ್ತೊಂದು ಘಟ್ಟ ಮುಗಿದು ಅತ್ಯುನ್ನತ ಪದವಿಗಳಾದ ಬಾರ್ ಅಟ್ ಲಾಗಳನ್ನು ಪಡೆದುಕೊಂಡು ದಲಿತೋದ್ಧಾರದ ಕಾರ್ಯ ರಂಗವನ್ನು ಹೊಸ ಹುರುಪು ಮತ್ತು ಅನುಭವಗಳಿಂದ ಮತ್ತೊಮ್ಮೆ ಪ್ರವೇಶಿಸುತ್ತಾರೆ. ಅಂದಿನ ರಾಜಕೀಯ ಪ್ರಪಂಚದಲ್ಲಿ ಇವರಷ್ಟು ಪ್ರಚಂಡ ಪರಿಣತರು ಬೇರೆ ಯಾರೂ ಇರಲಿಲ್ಲವೆಂದೇ ನಿಖರವಾಗಿ ಹೇಳಬಹುದು. ಭಾರತಕ್ಕೆ ಮರಳಿದ ನಂತರ ವಕೀಲ ವೃತ್ತಿಯನ್ನು ಆರಂಭಿಸಿ ತಮ್ಮ ಬಾಳಿನ ಏಕೈಕ ಗುರಿಯಾದ ಅಸ್ಪೃಶ್ಯರ ಉದ್ಧಾರದ ಕಾರ್ಯ ಯೋಜನೆಯನ್ನು ಅಂಬೇಡ್ಕರ್ ಸಿದ್ಧಪಡಿಸುತ್ತಾರೆ.

ನಂತರದಲ್ಲಿ ಅಂಬೇಡ್ಕರ್ ಸಮಾಜ ಸುಧಾರಣಾ ಕೆಲಸಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅಸ್ಪೃಶ್ಯತೆಗೆ ಸಿಲುಕಿ ನಾಶ ಹೊಂದುತ್ತಿದ್ದ

ದಲಿತ ಜನವರ್ಗಗಳ ಸಂಘಟನೆಯಲ್ಲಿ ತಲ್ಲೀನರಾದರು. ಬ್ರಾಹ್ಮಣರು, ಕ್ಷತ್ರಿಯರು ಮತ್ತು ಬನಿಯಾಗಳು ಬಡವರು ಮತ್ತು ಅಸ್ಪೃಶ್ಯ ಜನರನ್ನು ಬಲಿ ಕೊಟ್ಟು ತಮ್ಮ ಸವಲತ್ತು, ಅಧಿಕಾರ ಮತ್ತು ಸ್ಥಾನಮಾನಗಳ ರಕ್ಷಣೆಯಲ್ಲಿ ತೊಡಗಿರುವುದನು ಮನಗಂಡರು. "ಶೈಕ್ಷಣಿಕ ಹಾಗೂ ಆರ್ಥಿಕ ಪ್ರಯೋಜನಗಳ ಮೂಲಕವಾಗಿ ಅಸ್ಪೃಶ್ಯರ, ತುಳಿತಕ್ಕೊಳಪಟ್ಟ ಜನಾಂಗದ ಹಾಗೂ ಒಟ್ಟಾರೆ ಭಾರತೀಯರ ಜೀವನ ಮಟ್ಟವನ್ನು ಸುಧಾರಿಸಬಹುದಷ್ಟೇ ಅಲ್ಲ, ವೃತ್ತಿಗಳನ್ನು ಗೌರವಾನ್ವಿತಗೊಳಿಸ ಬಹುದು ಹಾಗೂ ಈ ಜನಾಂಗದ ಆತ್ಮಗೌರವಗಳನ್ನು ಉತ್ತೇಜಿತಗೊಳಿಸಬಹುದು", ಎಂಬುದಾಗಿ ಅಂಬೇಡ್ಕರ್ ಜನತೆಗೆ ಕರೆಯಿತ್ತರು.[6]

ಅಂಬೇಡ್ಕರ್ ಅವರಿಗೆ ನೂರಿನ್ನೂರು ವರ್ಷಗಳ ಬ್ರಿಟಿಷರ ದಾಸ್ಯದಿಂದ ಭಾರತವನ್ನು ವಿಮೋಚನೆಗೊಳಿಸುವುದಕ್ಕಿಂತ ಸಾವಿರಾರು ವರ್ಷಗಳ ಅಸ್ಪೃಶ್ಯತೆಯ ಸಂಕೋಲೆಯಿಂದ ದಲಿತರನ್ನು ವಿಮೋಚನೆಗೊಳಿಸುವುದು ಅತ್ಯಂತ ಮುಖ್ಯವಾಗಿ ಕಂಡಿತು. ಆದ್ದರಿಂದ ಸವರ್ಣೀಯರ ವಿಕೋಪದ ಜೊತೆಯಲ್ಲಿ ರಾಜಕೀಯ ಚಳುವಳಿ ಯಲ್ಲಿ ಸೇರಿಕೊಂಡು ಬ್ರಿಟಿಷರ ವಿಕೋಪವನ್ನು ಕಟ್ಟಿಕೊಳ್ಳುವುದು ಅವರಿಗೆ ಬೇಕಿರಲಿಲ್ಲ. ತಮ್ಮ ಜನಗಳ ದಾಸ್ಯ ವಿಮೋಚನೆ ನಾಡಿನ ದಾಸ್ಯ ವಿಮೋಚನೆಗಿಂತ ಕಡಿಮೆಯ ಕೆಲಸ ಎಂದು ಅವರು ಭಾವಿಸಿರಲಿಲ್ಲ. ೧೯೨೪ರಲ್ಲಿ ಮುಂಬೈ ನಗರದಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭೆ" ಎಂಬ ಸಂಸ್ಥೆಯನ್ನು ಅಂಬೇಡ್ಕರರು ಸ್ಥಾಪಿಸಿದರು. ಜಾತಿ ಪದ್ಧತಿ ಯನ್ನು ಇಲ್ಲವಾಗಿಸಿ ಸಮಾನತೆಯ ಆಧಾರದ ಮೇಲೆ ಇಡೀ ಹಿಂದೂ ಸಮಾಜವನ್ನು ಸುಧಾರಿಸಿ ಪುನರ್ ರಚಿಸುವುದು ಅವರ ಉದ್ದೇಶವಾಗಿತ್ತು. ವಿದ್ಯಾ ಪ್ರಸಾರಕ್ಕಾಗಿ ದಲಿತರಿಗೆ ವಸತಿಗೃಹಗಳನ್ನು ತೆರೆಯುವುದು, ಜ್ಞಾನ ಮತ್ತು ಸಂಸ್ಕೃತಿಯ ಪ್ರಸಾರಕ್ಕಾಗಿ ವಾಚನಾಲಯ ಮತ್ತು ಚರ್ಚಾ ಕೇಂದ್ರಗಳ ಸ್ಥಾಪನೆ, ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಉದ್ಯೋಗ ಹಾಗೂ ಕೃಷಿ ತರಬೇತಿ ಶಾಲೆಗಳನ್ನು ತೆರೆಯುವುದು, ದಲಿತರ ಸಮಸ್ಯೆಗಳ ನಿವಾರಣೆ, ದಲಿತೋದ್ಧಾರ ಇವೇ ಮೊದಲಾದವುಗಳು ಸಂಸ್ಥೆಯ ಪ್ರಧಾನ ಉದ್ದೇಶ ಗಳಾಗಿದ್ದವು. ಅವರು ಜಾತಿ ಆಧಾರಿತ ರಾಜಕೀಯ ಮತ್ತು ಸ್ವಾರ್ಥಪರ ರಾಜಕಾರಣಿ ಗಳನ್ನು ನಿಷ್ಠುರವಾಗಿ ಖಂಡಿಸುತ್ತಿದ್ದರು. ಎಡೆಬಿಡದೆ ದಲಿತ ಜನವರ್ಗಗಳನ್ನು ಸಂಘಟಿಸಲಾರಂಭಿಸಿದರು. ಅವರ ಸಾಮಾಜಿಕ ಆಂದೋಲನ, ತಾತ್ವಿಕ ನಿಲುವು ಮತ್ತು ಸಂಘಟನಾ ಕೆಲಸಗಳು ಸವರ್ಣೀಯ ನಾಯಕರಿಗೆ ಹಿಡಿಸಲಿಲ್ಲ. ಅವರ ಸುಧಾರಣಾ ಕೆಲಸಗಳು ಪತ್ರಿಕೆಗಳ ಉಗ್ರ ಪ್ರತಿಭಟನೆಗೆ ಗುರಿಯಾದವು. ಸಾವಿರಾರು ವರ್ಷಗಳ ದಾಸ್ಯದಿಂದ ದಲಿತ ಜನವರ್ಗಗಳನ್ನು ವಿಮೋಚನೆಗೊಳಿಸುವ ಕೆಲಸದಲ್ಲಿ ಅಂಬೇಡ್ಕರ್ ರವರಿಗೆ ಸಹಾಯ ನೀಡುವ ಬದಲು ಸವರ್ಣೀಯ ನಾಯಕರು, ಸಂಘಟನೆಗಳು ಮತ್ತು ಪತ್ರಿಕೆಗಳು ಅವರನ್ನು ಖಂಡಿಸಲಾರಂಭಿಸಿದವು. ಅಂಬೇಡ್ಕರ್ ಅವರು ಭಾರತೀಯ ಪತ್ರಿಕೆಗಳ ದಲಿತ ವಿರೋಧಿ ಧೋರಣೆಗಳು ಮತ್ತು ಕಾರ್ಯ ತಂತ್ರಗಳಿಂದ ಬಹಳಷ್ಟು ಬೇಸತ್ತರು.

ಅಂಬೇಡ್ಕರ್ ಅವರ ಕಾರ್ಯಕ್ಷೇತ್ರ ವಿಶಾಲವಾಗುತ್ತಿದ್ದಂತೆ ಪತ್ರಿಕೆಯ ಅವಶ್ಯಕತೆಯೂ ಹೆಚ್ಚುತ್ತಿತ್ತು. ಪತ್ರಿಕೆಯ ಬೆಂಬಲವಿಲ್ಲದೆ ಪಕ್ಷ ಅಥವಾ ನಾಯಕ ರೆಕ್ಕೆಯಿಲ್ಲದ ಪಕ್ಷಿಯಂತಿರಬೇಕಾಗುತ್ತದೆಂಬುದು ಸ್ವಾನುಭವ ವೇದ್ಯವಾಗಿತ್ತು. ಅಸ್ಪೃಶ್ಯತೆ, ಜಾತಿ ಪದ್ಧತಿ ಮತ್ತು ಯಥಾ ಸ್ಥಿತಿವಾದಗಳನ್ನು ಬಹಿರಂಗವಾಗಿ ಸಮರ್ಥಿಸುವ ವ್ಯಕ್ತಿ ಮತ್ತು ಸಂಘಟನೆಗಳಿಗೆ ಸೂಕ್ತ ರೀತಿಯಲ್ಲಿ ಪಾಠ ಕಲಿಸಬೇಕೆಂಬ ಛಲ ಅದರಲ್ಲಿ ದಿನೇ ದಿನೇ ಹೆಚ್ಚುತ್ತಿತ್ತು. ದಲಿತ ವಿರೋಧಿ ಶಕ್ತಿಗಳ ವಿರುದ್ಧ ತಮ್ಮ ಜನಗಳನ್ನು ಸಂಘಟಿಸಿ ಹೋರಾಟ ನಡೆಸಲು ಪ್ರಚಾರ ಮಾಧ್ಯಮ ಅನಿವಾರ್ಯವೆಂಬುದನ್ನು ಅಂಬೇಡ್ಕರ್ ಮನಗಂಡರು. ಏಪ್ರಿಲ್ ೩, ೧೯೨೭ ರಂದು "ಬಹಿಷ್ಕೃತ ಭಾರತ" (Excluded India) ಎಂಬ ಮತ್ತೊಂದು ಮರಾಠಿ ಪತ್ರಿಕೆಯನ್ನು ಬಾಬಾ ಸಾಹೇಬರು ಪ್ರಾರಂಭಿಸಿದರು. ಜಾತಿ ಆಧಾರಿತ ಮಡಿವಂತಿಕೆಯ ಪತ್ರಿಕೆಗಳು ದಲಿತರ ಸಮಸ್ಯೆಗಳನ್ನು ಮುಚ್ಚಿ ಹಾಕುತ್ತವೆ, ಇಲ್ಲವೆ ಕೆಡಿಸಿ ಹಾಳುಮಾಡಿ ದಲಿತರನ್ನು ದಾರಿ ತಪ್ಪಿಸುತ್ತವೆ ಎಂದು ಅಂಬೇಡ್ಕರ್ ಬಲವಾಗಿ ವಾದಿಸಿದರು. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಅವರು ಹೀಗೆ ತಿಳಿಸುತ್ತಾರೆ: "ನಾನು ಜೀವನೋಪಾಯಕ್ಕಾಗಿ ಈ ಪತ್ರಿಕೆ ನಡೆಸುತ್ತಿಲ್ಲ. ಸಾರ್ವಜನಿಕ ಸೇವೆಗಾಗಿ ಪತ್ರಿಕೆಯನ್ನು ನಡೆಸಹೊರಟಿರುವ ನಾನು ಪತ್ರಿಕೆಯ ಬೆಂಬಲಕ್ಕಾಗಿ ಸ್ವತಂತ್ರ ವಕೀಲಿ ವೃತ್ತಿಯನ್ನು ಕೈಗೊಂಡಿದ್ದೇನೆ. ಈ ಪತ್ರಿಕೆಯು ನಿಮ್ನ ವರ್ಗಗಳ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುವುದು. ನಾಡಿನ ಆಗುಹೋಗುಗಳನ್ನು ಈ ಜನವರ್ಗಗಳಿಗೆ ತಪ್ಪದೆ ತಿಳಿಸುವುದರ ಜೊತೆಗೆ ಅವರ ನೋವು, ನಲಿವು, ಸಲಹೆ ಮತ್ತು ಪ್ರತಿಕ್ರಿಯೆಗಳನ್ನು ಸರ್ಕಾರ ಮತ್ತು ಜನತೆಯ ಮುಂದೆ ಇಡುವುದೂ ಪತ್ರಿಕೆಯ ಕೆಲಸವಾಗಿದೆ...[7]

ಸಂಪಾದಕೀಯ ಹಾಗೂ ಲೇಖನಗಳ ಮೂಲಕ ಅಸ್ಪೃಶ್ಯರಿಗೆ ನ್ಯಾಯವಾಗಿ ದೊರಕಬೇಕಾದ ಹಕ್ಕುಗಳನ್ನು ಕುರಿತು ವಾದವಿವಾದಗಳನ್ನು ಮಂಡಿಸುತ್ತಿದ್ದರು. ಅವರ ಶೈಲಿಯಲ್ಲಿ ವ್ಯಂಗ್ಯ, ವಿಡಂಬನೆಗಳು ಬೆರೆತಿರುತ್ತಿದ್ದವು. ತಮ್ಮ ಚಳವಳಿಯನ್ನು ವಿರೋಧಿಸುತ್ತಿದ್ದವರಿಗೆ ಸೂಕ್ತ ಉತ್ತರಗಳನ್ನು ಪತ್ರಿಕೆಯ ಮೂಲಕ ಅಂಬೇಡ್ಕರ್ ನೀಡುತ್ತಿದ್ದರು. ಸಂಕ್ಷಿಪ್ತತೆ; ನಿಖರತೆ ಮತ್ತು ನಿರ್ಭಿಡೆಗಳಿಗೆ ಅವರ ಸಂಪಾದಕೀಯಗಳು ಹೆಸರಾಗಿದ್ದವು. ನಿಮ್ನ ವರ್ಗದವರಿಗಾಗಿ ಅಗತ್ಯವಾದ ಸುಧಾರಣಾ ಕಾರ್ಯಕ್ರಮಗಳನ್ನು ನೇರವಾಗಿ ಜಾರಿಗೊಳಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರುತ್ತಿದ್ದರು. "ಅಸ್ಪೃಶ್ಯತಾ ನಿವಾರಣೆ ಮಾತ್ರದಿಂದ, ಸಹಭೋಜನ ಮಾತ್ರದಿಂದ ನಮ್ಮ ಕಷ್ಟ ಪರಿಹಾರವಾಗುವುದಿಲ್ಲ. ಸರಕಾರದ, ಸಾರ್ವಜನಿಕ ಜೀವನದ ಎಲ್ಲ ವಿಭಾಗಗಳಲ್ಲೂ ನಮಗೆ ಸಮಾನಾವಕಾಶ ದೊರಕಬೇಕು. ಇದು ಸಾಧ್ಯವಾಗುವುದು ಸಮಾನತೆಯ ಆಧಾರದ ಮೇಲೆ. ಜಾತಿರಹಿತವಾಗಿ ಹಿಂದೂ ಸಮಾಜವನ್ನು ಪುನಾರಚಿಸಿದಾಗಲೇ ಸುಧಾರಣೆ ಸಾಧ್ಯ" ಎಂದು ಅಂಬೇಡ್ಕರ್ ಸವರ್ಣೀಯರು ಮತ್ತು ಅಂದಿನ ಆಡಳಿತಗಾರರನ್ನು ತಮ್ಮ ಪತ್ರಿಕಾ ವೇದಿಕೆಯ ಮೂಲಕ ಎಚ್ಚರಿಸಿದರು.

ತಿಲಕರು ಅಂದು ಸ್ವರಾಜ್ಯ ಹೋರಾಟದ ಮುಂಚೂಣಿಯಲ್ಲಿದ್ದರು. ಅಂಬೇಡ್ಕರರು ಸಾಮಾಜಿಕ ಸಮಾನತೆ ಸಾಧಿಸದ ಹೊರತು ಸ್ವರಾಜ್ಯ ಪರಿಕಲ್ಪನೆಗೆ ಅರ್ಥವಿಲ್ಲ ಎಂದು ಪ್ರತಿಪಾದಿಸಿದರು. "ತಿಲಕರು ಅಸ್ಪೃಶ್ಯರಾಗಿದ್ದರೆ ಸ್ವರಾಜ್ಯವನ್ನು ಆಜನ್ಮಸಿದ್ಧ ಹಕ್ಕು" ಎನ್ನುವುದರ ಬದಲಾಗಿ "ಅಸ್ಪೃಶ್ಯತಾ ನಿರ್ಮೂಲನವೇ ನನ್ನ ಆಜನ್ಮ ಸಿದ್ಧ ಹಕ್ಕು" ಎಂದು ಘೋಷಿಸುತ್ತಿರಲಿಲ್ಲವೇ ?[8] ಎಂದು ಪತ್ರಿಕೆಯಲ್ಲಿ ಪ್ರಶ್ನಿಸಿದರು. ಆಫ್ರಿಕಾದಲ್ಲಿ ಭಾರತೀಯರಿಗಾಗುತ್ತಿರುವ ಅನ್ಯಾಯವನ್ನು ಸಹಿಸದವರು ಇಂಡಿಯಾದಲ್ಲಿ ಅಂತ್ಯಜರಿಗಾಗುತ್ತಿರುವ ಕಿರುಕುಳಗಳ ಕಡೆಗೆ ಕಿವುಡಾಗಿ ಹೊಂದಿರುವುದು ತರವೇ ? "ಕೃತಿಯಲ್ಲಿ ಪ್ರತಿಬಿಂಬಗೊಳ್ಳದ ಅದರ ಸಹಾನುಭೂತಿಯಿಂದಾಗುವ ಲಾಭವೇನು ?" ಹೀಗೆಲ್ಲಾ ಪ್ರಶ್ನಿಸಿ ಗಾಂಧಿ, ಸವರ್ಣೀಯ ನಾಯಕರು ಮತ್ತು ಜಾತಿವಾದಿಗಳಿಗೆ ಅಂಬೇಡ್ಕರ್ ನಡುಕ ಹುಟ್ಟಿಸುತ್ತಿದ್ದರು. ಅಂಬೇಡ್ಕರರು ತಮ್ಮ ಪತ್ರಿಕೆಯ ಮೂಲಕವಾಗಿ ಅಸ್ಪೃಶ್ಯರ ನ್ಯಾಯಬದ್ಧ ಬೇಡಿಕೆಗಳು ಮತ್ತು ಸಮಾನ ಹಕ್ಕುಬಾಧ್ಯತೆಗಳ ಪರವಾಗಿ ವಕಾಲತ್ತು ವಹಿಸುತ್ತಿದ್ದರು. ಇಂಡಿಯಾದಲ್ಲಿ ಅಸ್ಪೃಶ್ಯರ ಬದುಕಿಗೂ ಅರ್ಥ ತಂದುಕೊಡುವುದು ಅವರ ಮೂಲ ಆಶಯವಾಗಿತ್ತು. ಮುಂದುವರೆದು "ಕುಡಿತ ಮತ್ತು ಗೋಮಾಂಸ ಭಕ್ಷಣೆಗಳು ಅಸ್ಪೃಶ್ಯತೆಯ ಲಕ್ಷಣಗಳೆನ್ನುವುದಾದರೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು ಅಸ್ಪೃಶ್ಯ ವರ್ಗಕ್ಕೆ ಸೇರುತ್ತಾರೆಯೋ ? ಸವರ್ಣೀಯರಲ್ಲಿ ಕುಡಿಯುವವರಿಲ್ಲವೇ ?" ಎಂದೆಲ್ಲಾ ಪ್ರಶ್ನಿಸಿ ಮೇಲ್ಜಾತಿಯ ಜನಗಳ ಮನಪರಿವರ್ತನೆಗೆ ಅಂಬೇಡ್ಕರ್ ಪ್ರಯತ್ನಿಸಿದರು. ಇವರ ಟೀಕೆಯ ಮಹಾಪೂರವನ್ನು ಸಹಿಸಲಾರದ ಕೆಲವು ಮಂದಿ ಸುಧಾರಣೆಗೆ ಜನರೇ ಸಿದ್ಧರಿಲ್ಲ ಎಂಬ ಜಾರಿಕೆಯ ಉತ್ತರ ನೀಡುತ್ತಿದ್ದರು. ಅಂಬೇಡ್ಕರ್ ಮತ್ತಷ್ಟು ಉಗ್ರರಾಗಿ "ಇನ್ನೂ ಅಜ್ಞಾನ, ಅಂಧಕಾರದಲ್ಲೇ ಉಳಿದಿರುವ, ಸಾಂಪ್ರದಾಯಿಕತೆಯನ್ನು ನಿರ್ಮೂಲನಗೊಳಿಸಲಾಗದ ಮತ್ತು ರಾಷ್ಟ್ರಾಭಿಮಾನ ಮತ್ತು ಸ್ವಾತಂತ್ರ್ಯಗಳ ಕಲ್ಪನೆಯೇ ಇಲ್ಲದ ನಿರಕ್ಷರಕುಕ್ಷಿಗಳಿಗೇಕೆ ಸ್ವಾತಂತ್ರ್ಯ ?" ಎಂದು ಪ್ರಶ್ನಿಸಿ ಟೀಕಾಕಾರರ ಬಾಯಿ ಮುಚ್ಚಿಸುತ್ತಿದ್ದರು. ಸವರ್ಣೀಯರು ತಮ್ಮ ಪಾಪ ಕಾರ್ಯದ ಭೀಕರತೆಯನ್ನರಿತುಕೊಂಡು ತಾವಾಗಿಯೇ ಅಸ್ಪೃಶ್ಯತಾ ನಿರ್ಮೂಲನಾ ಕಾರ್ಯಕ್ಕೆ ಮುಂದಾಗದಿದ್ದರೆ ಆ ಕರ್ಮ ಅವರಿಗೆ ಮಾರಕವಾಗುತ್ತದೆಂದೂ, ದುಃಖ ಕಾರಕವೆಂದೂ ಎಚ್ಚರಿಕೆ ನೀಡಿದರಲ್ಲದೆ, ಅಸ್ಪೃಶ್ಯರೆಲ್ಲ ಒಗ್ಗಟ್ಟಾಗಿ ಅಂತಿಮ ಸಂಗ್ರಾಮಕ್ಕೆ ಸಿದ್ಧರಾಗಬೇಕೆಂದು ಕರೆಕೊಟ್ಟರು.[9]

ಅಂಬೇಡ್ಕರರು ಅಸ್ಪೃಶ್ಯತೆ ನಿರ್ಮೂಲನೆಗೆ ಒಲವು ತೋರಿದ ಇತರೇ ಜನವರ್ಗಗಳ ನಾಯಕರು ಮತ್ತು ಜನತೆಗೆ ತಮ್ಮೆಲ್ಲ ಸಹಾನುಭೂತಿಯನ್ನು ಕಾರ್ಯರೂಪಕ್ಕಿಳಿಸುವಂತೆ ಮತ್ತು ಅವರ ದಿನನಿತ್ಯದ ಬದುಕಿನಲ್ಲಿ ಸ್ವತಃ ನುಡಿದಂತೆ ನಡೆದು ತೋರಿಸಬೇಕೆಂದು ವಾದಿಸಿ ಮೇಲ್ವರ್ಗದವರ ಅಂತಃಕರಣವನ್ನು ಚುಚ್ಚಿದರು.[10] ಯಾವ ಧರ್ಮವು ನಿಮ್ಮ ವರ್ಗದ ಜನರ ಹಿತರಕ್ಷಣೆ ಬಯಸುವುದೋ ಆ ಧರ್ಮಕ್ಕಾಗಿ ಅಸ್ಪೃಶ್ಯರು ಸಾಯಲೂ ಸಿದ್ಧ ಮತ್ತು ಯಾವ ಧರ್ಮವು ಅಸ್ಪೃಶ್ಯರನ್ನು ದೂರೀಕರಿ

ಸುವುದೋ ಆ ಧರ್ಮವನ್ನು ಅಸ್ಪೃಶ್ಯರೂ ದೂರೀಕರಿಸುವರು ಎಂಬುದಾಗಿ ಸವರ್ಣೀಯರಿಗೆ ನೇರವಾಗಿ ತಮ್ಮ ಪತ್ರಿಕೆಯ ಮೂಲಕ ಅವರು ಸಾರಿ ಹೇಳಿದರು.[11] "ಅಸ್ಪೃಶ್ಯತೆಯು ಅಸ್ಪೃಶ್ಯರು, ಹಿಂದೂಗಳು ಮತ್ತು ಇಡೀ ದೇಶದ ಅವನತಿಗೆ ಕಾರಣವಾಗಿದೆ. ನಿಮ್ಮ ವರ್ಗದ ಜನವರ್ಗಗಳಿಗೆ ಆತ್ಮಗೌರವ ಮತ್ತು ಸ್ವಾತಂತ್ರ್ಯಗಳು ಲಭಿಸಿದ್ದೇ ಆದಲ್ಲಿ ಅವರು ತಮ್ಮ ಬುದ್ಧಿಶಕ್ತಿ, ಪರಿಶ್ರಮ ಮತ್ತು ಧೈರ್ಯಗಳ ಮೂಲಕವಾಗಿ ತಮ್ಮ ಅಭಿವೃದ್ಧಿಯನ್ನು ಸಾಧಿಸುವರಷ್ಟೇ ಅಲ್ಲದೆ ದೇಶದ ಶಕ್ತಿ ಮತ್ತು ಪ್ರಗತಿಗಳಿಗೂ ನಿಚ್ಚಳವಾಗಿ ಕಾಣಿಕೆ ನೀಡಬಲ್ಲರು" ಎಂದು ಎಲ್ಲರ ಮನವೊಲಿಸುವ ಕೆಲಸ ಮಾಡಿದರು.[12]

ಅಂಬೇಡ್ಕರರು ತಮ್ಮ ಪತ್ರಿಕೆ, ವಾಕ್ಚಾತುರ್ಯ ಮತ್ತು ಸಂಘಟನೆಯ ಕೆಲಸಗಳ ಮೂಲಕ ಅಸ್ಪೃಶ್ಯ ಜನರನ್ನು ಎಲ್ಲೆಡೆ ಜಾಗೃತರನ್ನಾಗಿಸುತ್ತಿದ್ದರು. ಅವರು ಧರ್ಮ, ಸಂಸ್ಕೃತಿ, ಕಾಂಗ್ರೆಸ್, ಗಾಂಧಿ ಮೊದಲಾದವರ ಮೇಲೆ ದೊಡ್ಡ ಸಮರವನ್ನೇ ಸಾರಿದರು. ಅಂಬೇಡ್ಕರರ ಪತ್ರಿಕೆಯ ಬರಹಗಳು, ಹೇಳಿಕೆಗಳು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಭೇಟಿಮಾಡಿ ನೀಡುತ್ತಿದ್ದ ವಿವರಣೆಗಳು ಭಾರತದಲ್ಲಿ ಅಸ್ಪೃಶ್ಯರ ಸ್ಥಿತಿಗತಿ ಅಮೆರಿಕೆಯ ನೀಗ್ರೋಗಳಿಗಿಂತ ಕೆಳಮಟ್ಟದಲ್ಲಿದೆಯೆಂಬ ಸತ್ಯವನ್ನು ಮೊಟ್ಟ ಮೊದಲಿಗೆ ಪಾಶ್ಚಾತ್ಯರು ತಿಳಿಯುವಂತಾಯಿತು.[13]

ಧರ್ಮವನ್ನು ಕುರಿತಂತೆ ಅಂಬೇಡ್ಕರ್ ಹೀಗೆ ಬರೆದಿದ್ದಾರೆ : "ಅಸ್ಪೃಶ್ಯತೆಯನ್ನು ಆಚರಿಸುವ, ಕುಡಿಯಲು ನೀರು ಕೊಡದ ಧರ್ಮ ಧರ್ಮವೇ ಅಲ್ಲ. ಅದು ಪಾಪದ ಕೊಚ್ಚೆಯ ರಾಶಿ. ಅಂಥವುದನ್ನು ಧರ್ಮ ಎಂದು ಕರೆಯಬಾರದು. ಹಿಂದೂ ಸಾಮಾಜಿಕ ವ್ಯವಸ್ಥೆಯು ಜಾತಿಗಳ ಶ್ರೇಣಿ ವ್ಯವಸ್ಥೆಯಿಂದ ಕೂಡಿದೆ. ಅದು ಸಾಮಾಜಿಕ ಅಸಮಾನತೆಗಳನ್ನು ಮುಂದುವರೆಸುತ್ತದೆ. ಭಾರತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅಸ್ಪೃಶ್ಯತೆ ಒಂದು ಸಾಮಾಜಿಕ ಅಸಮಾನತೆ. ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಈ ಐತಿಹಾಸಿಕ ಅನ್ಯಾಯ ಸರಿಪಡಿಸಲು ಮತ್ತು ಸಮಾನತೆಯನ್ನು ಆಧರಿಸಿದ ನವ ಸಮಾಜವನ್ನು ನಿರ್ಮಿಸಲು ಸಾಮಾಜಿಕ ಆಂದೋಲನ ಅನಿವಾರ್ಯ." ಹೀಗೆ ಅಂಬೇಡ್ಕರ್ ಪತ್ರಿಕೆಯ ಮೂಲಕ ಧಾರ್ಮಿಕ ಸುಧಾರಣೆಗೆ ಶ್ರಮಿಸಿದರು.

ಅಂಬೇಡ್ಕರ್ ಅವರು ಧರ್ಮವನ್ನು ಖಂಡಿಸಲಿಲ್ಲ. ಅವರು ಮೂಲತಃ ಹಿಂದೂ ಧರ್ಮದ ವಿರೋಧಿಗಳಾಗಿರಲಿಲ್ಲ. ಹಿಂದೂ ಧರ್ಮವು ತನ್ನಲ್ಲೇ ಮೈಗೂಡಿಸಿಕೊಂಡಿದ್ದ ಜಾತಿ ಪದ್ಧತಿ ಎಂಬ ಕಳಂಕವನ್ನು ಕಿತ್ತೊಗೆಯಲು ಅವರು ಪ್ರಯತ್ನಿಸಿದರು. ಹಿಂದೂ ಸಮಾಜದಲ್ಲಿ ದಲಿತರಿಗೆ, ಹಿಂದುಳಿದವರಿಗೆ ಸರಿಸಮಾನ ಸ್ಥಾನ ಸಿಗಬೇಕೆಂದು ಅಂಬೇಡ್ಕರ್ ಬಯಸಿದ್ದರು. ಕೊನೆಗೆ ಹಿಂದೂ ಧರ್ಮದಲ್ಲಿನ ಜಾತೀಯತೆಯನ್ನು ಕಿತ್ತೊಗೆಯಲು ಸಾಧ್ಯವಾಗದಿದ್ದಾಗ ಅವರು ಧರ್ಮವನ್ನು ಅನಿವಾರ್ಯವಾಗಿ ಬಿಡುವಂತಹ ಸ್ಥಿತಿ ಬಂದೊದಗಿತು.

ಹಿಂದೂ ನಾಗರಿಕತೆಯನ್ನು ಕುರಿತಂತೆ, "ಅಸ್ಪೃಶ್ಯತೆಯನ್ನು ಸೃಷ್ಟಿಸಿ ಅದನ್ನು ತನ್ನ ಸಾಮಾಜಿಕ ಹಾಗೂ ಆರ್ಥಿಕ ಅನಿಷ್ಟಗಳೊಂದಿಗೆ ಬಳಸಿಕೊಂಡು ಬಂದಿರುವ ಹಿಂದೂ ನಾಗರಿಕತೆಯನ್ನು ನಾಗರಿಕತೆಯೆಂದು ಕರೆಯಲಾಗದು. ಇದು ಮನುಷ್ಯ ಕುಲವನ್ನು ತುಳಿತಕ್ಕೊಳಪಡಿಸಿ ಗುಲಾಮರನ್ನಾಗಿಸುವ ಪೈಶಾಚಿಕ ಸಂಚು" ಎಂದು ತಮ್ಮ ಪತ್ರಿಕೆಯಲ್ಲಿ ವಿಶ್ಲೇಷಿಸುತ್ತಾರೆ.

ಮಹಾತ್ಮ ಗಾಂಧಿಯವರು ಸ್ವಾತಂತ್ರ್ಯ ಚಳವಳಿಯ ನೇತಾರರಾಗಿ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ ಪಕ್ಷದ ಮೂಲಕ ಹೋರಾಡಿದರು. ಅಲ್ಲದೆ ಹರಿಜನ ಸೇವಕ ಸಂಘಗಳನ್ನು ಸ್ಥಾಪಿಸಿ ಅಸ್ಪೃಶ್ಯರನ್ನು ಅಂಬೇಡ್ಕರರ ಪ್ರಭಾವಕ್ಕೊಳಪಡದಂತೆ ನೋಡಿಕೊಳ್ಳುವ ಪ್ರಯತ್ನ ನಡೆಸಿದರು. ಅಲ್ಲದೆ ತಮ್ಮ 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳ ಮೂಲಕ ಅಂಬೇಡ್ಕರ್ ಅವರ ಹೋರಾಟಗಳನ್ನು ಖಂಡಿಸಿದರು. ಅಂಬೇಡ್ಕರ್ ಮತ್ತು ಗಾಂಧಿ ಇವರೀರ್ವರ ನಡುವೆ ಪತ್ರಿಕಾ ಬರಹಗಳ ಸಮರವೇ ನಡೆಯಿತು. ವಾಸ್ತವವಾಗಿ ಅಂಬೇಡ್ಕರ್ ಮತ್ತು ಗಾಂಧಿ ಹಿಂದೂ ಸಾಮಾಜಿಕ ವ್ಯವಸ್ಥೆಯ ಎರಡು ವಿರುದ್ಧ ದಿಕ್ಕಿನ ಪ್ರಾತಿನಿಧಿಕ ವ್ಯಕ್ತಿಗಳು. ಅಂಬೇಡ್ಕರ್ ಹಿಂದೂ ಸಮಾಜದ ಅತ್ಯಂತ ಕೆಳವರ್ಗವನ್ನು ಪ್ರತಿನಿಧಿಸಿದರೆ ಗಾಂಧಿ ಮೇಲ್ಜಾತಿ ಪರವಾದ ಸನಾತನ ಮನೋಧರ್ಮದ ಪ್ರತಿನಿಧಿ. ಅಂಬೇಡ್ಕರ್ ಸುಧಾರಣಾವಾದಿಯಾಗಿದ್ದರೆ ಗಾಂಧೀ ಯಥಾಸ್ಥಿತಿ ವಾದಿಯಾಗುಳಿದರು. ಅಸಮಾನತೆಗಳ ಆಗರವಾದ ಮನುಸ್ಮೃತಿಗೆ ಅಂಬೇಡ್ಕರ್ ಅಗ್ನಿ ಸ್ಪರ್ಷ ಮಾಡಿದರೆ, ಗಾಂಧಿ ಮನುಸ್ಮೃತಿಯಿಂದ ಸ್ಫೂರ್ತಿ ಪಡೆದವರು. ಅಂಬೇಡ್ಕರ್ ಜಾತಿ ವಿನಾಶದ ಮೂಲಕ ಅಸ್ಪೃಶ್ಯತೆ ನಿವಾರಿಸಿ ಸಮಾನತೆ ತರುಕೊಡುವ ವಾದ ಮುಂಡಿಸಿದರೆ, ಗಾಂಧಿ ಜಾತಿ ವ್ಯವಸ್ಥೆಯನ್ನು ಉಳಿಸಿಕೊಂಡೇ ಅಸ್ಪೃಶ್ಯತೆಯನ್ನು ನಿವಾರಿಸಬಹುದೆಂದು ವಾದಿಸಿದರು. ಗಾಂಧಿ ನೂರಿನ್ನೂರು ವರ್ಷಗಳ ಬ್ರಿಟಿಷರ ದಾಸ್ಯದಿಂದ ಭಾರತೀಯರನ್ನು ವಿಮೋಚನೆಗೊಳಿಸಿ ಜನತೆಗೆ ರಾಜಕೀಯ ಸ್ವಾತಂತ್ರ್ಯಗಳಿಸಿ ಕೊಟ್ಟವರು. ಇವರ ಹೋರಾಟಕ್ಕೆ ಇಡೀ ದೇಶ ಮತ್ತು ಪತ್ರಿಕೆಗಳ ಅಖಂಡ ಬೆಂಬಲ ದೊರಕಿತ್ತು. ಆದರೆ, ಅಂಬೇಡ್ಕರ್ ಸಾವಿರಾರು ವರ್ಷಗಳ ಅಸ್ಪೃಶ್ಯತೆ ಜಾತೀಯತೆ ಮತ್ತು ಅಸಮಾನತೆಗಳಿಂದ ಅಸ್ಪೃಶ್ಯರನ್ನು ವಿಮೋಚನೆಗೊಳಿಸುವ ಕೆಲಸದಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡರು. ಅಲ್ಲದೆ ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳನ್ನು ಆಧರಿಸಿದ ಪ್ರಜಾಪ್ರಭುತ್ವವನ್ನು ದೊರಕಿಸಿಕೊಡಲು ಹೋರಾಡಿದರು. ಈ ಹೋರಾಟವನ್ನು ಇಡೀ ದೇಶ, ಬಂಡವಾಳಶಾಹಿ, ಅಧಿಕಾರಶಾಹಿ ಮತ್ತು ಪತ್ರಿಕೆಗಳು ವಿರೋಧಿಸಿದವು.

ಕಾಂಗ್ರೆಸ್ ಮತ್ತು ಗಾಂಧೀಜಿಯವರನ್ನು ಅಂಬೇಡ್ಕರ್ ತಮ್ಮ ಲೇಖನಗಳ ಮೂಲಕ ವೈಜ್ಞಾನಿಕವಾಗಿ ವಿಶ್ಲೇಷಿಸಿದರು. ಅವರು ತಮ್ಮ ಪತ್ರಿಕೆಯಲ್ಲಿ ಹೀಗೆ ಬರೆದಿದ್ದಾರೆ: "ಗಾಂಧೀಜಿ ಮತ್ತು ಕಾಂಗ್ರೆಸ್ ದಲಿತರಿಗಾಗಿ ಏನೂ ಮಾಡಿಲ್ಲ. ಅವರ ಉಪಚಾರದ ಮಾತುಗಳಿಂದ ದಲಿತರಿಗೆ ಏನೇನೂ ಉಪಯೋಗವಾಗಿಲ್ಲ. ಅವರ

ಸಹಾನುಭೂತಿ ನಮಗೆ ಬೇಕಿಲ್ಲ. ಯಥಾಸ್ಥಿತಿ ವಾದವನ್ನು ಮಂಡಿಸುವ ಗಾಂಧೀಜಿಯವರಿಂದಾಗಲೀ, ಸಂಖ್ಯಾಬಲ ಹೆಚ್ಚಿಸಿಕೊಳ್ಳುವುದೇ ತನ್ನ ಗುರಿಯಾಗಿರುವ ಕಾಂಗ್ರೆಸ್ಸಿನಿಂದಾಗಲೀ ದಲಿತರಿಗೆ ಏನೂ ಪ್ರಯೋಜನವಿಲ್ಲ "14

ಮತ್ತೊಂದು ಸಂದರ್ಭದಲ್ಲಿ ಅಂಬೇಡ್ಕರ್ ಹೀಗೆ ಬರೆದಿದ್ದಾರೆ: "ಕಾರ್ಮಿಕರು ಮತ್ತು ದರಿದ್ರರ ಹಿತಾಸಕ್ತಿ ಪಾಲನೆಯಲ್ಲಿ ಗಾಂಧೀಜಿಯವರಿಗೆ ನಂಬಿಕೆಯಿಲ್ಲ. ಕಾಂಗ್ರೆಸ್ಸು ಶ್ರೀಮಂತರ ಮತ್ತು ಬಂಡವಾಳಗಾರರ ಪಕ್ಷವಾಗಿದೆ. ಉಳ್ಳವರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದೇ ಅದರ ಪ್ರಧಾನ ಧ್ಯೇಯವಾಗಿದೆ. ಅದು ಕ್ರಾಂತಿಕಾರಿ ಪಕ್ಷವಾಗಿದ್ದರೆ ನಾನೆಂದೋ ಅದರೊಳಗಿರುತ್ತಿದ್ದೆ. ಸಾಮಾಜಿಕ–ಆರ್ಥಿಕ ಸಮಾನತೆಯನ್ನು ಕಾರ್ಯಗತಗೊಳಿಸುವಷ್ಟು ಧೈರ್ಯ ಅದಕ್ಕಿಲ್ಲ. ವಿಶೇಷವಾಗಿ ದಲಿತರು ಗಾಂಧಿ ಮತ್ತು ಕಾಂಗ್ರೆಸ್‌ಗಳ ಬಗ್ಗೆ ಎಚ್ಚರ ವಹಿಸಬೇಕು. ಕಾಂಗ್ರೆಸ್ ಉರಿಯುತ್ತಿರುವ ಮನೆ. ಅದರೊಳಗೆ ಹೊಕ್ಕವರು ಜೀವಂತವಾಗಿ ದಹಿಸಲ್ಪಡುತ್ತಾರೆ. ಆ ಪಕ್ಷದ ಕಡೆ ಮುಖ ತಿರುಗಿಸುವುದೂ ಸಲ್ಲದು. ರಾಜಕೀಯ ಉದ್ದೇಶಗಳಿಗಾಗಿ ಕಾರ್ಮಿಕರನ್ನು ಬಳಸಿಕೊಳ್ಳುವ ಕಮ್ಯುನಿಷ್ಟನ್ನೂ ದೂರವಿರಿಸಬೇಕಾಗಿದೆ. ರೈತರು, ಕಾರ್ಮಿಕರು ಆಳುವ ವರ್ಗವಾಗಿ ಪರಿವರ್ತನೆಗೊಳ್ಳಬೇಕು"15 ಅಂಬೇಡ್ಕರ್ ನಿಜಕ್ಕೂ ಎಲ್ಲ ಬಡವರ ಬಂಧು, ನೇತಾರ ಮತ್ತು ಮಾರ್ಗದರ್ಶಿಯಾಗಿದ್ದರೆಂಬುದನ್ನು ಅವರ ಬರಹ, ಬದುಕು ಮತ್ತು ಹೋರಾಟಗಳು ಸಮರ್ಥಿಸುತ್ತವೆ.

ದಲಿತರ ವಿಮೋಚನೆಗಾಗಿ ಪತ್ರಿಕೆಗಳ ಮಹತ್ವ ಮತ್ತು ಅನಿವಾರ್ಯತೆ ಕುರಿತಂತೆ ಅಂಬೇಡ್ಕರ್ ಸ್ಪಷ್ಟ ಕಲ್ಪನೆ ಹೊಂದಿದ್ದರು. ತಮ್ಮ ಕ್ರಾಂತಿಕಾರಕ ಬರಹಗಳ ಮೂಲಕ ಅಸ್ಪೃಶ್ಯರನ್ನು ಜಾಗೃತರನ್ನಾಗಿಸುವುದರ ಜೊತೆಗೆ ಸಾಮಾಜಿಕ ಆಂದೋಲನದಲ್ಲಿ ಅವರನ್ನು ತೊಡಗಿಸುವ ಕೆಲಸದಲ್ಲಿ ಅಂಬೇಡ್ಕರ್ ನಿರತರಾಗಿದ್ದರು. ಪತ್ರಿಕೆಗಳು ಹೋರಾಟದ ಮಾಧ್ಯಮವಾಗಬಹುದು ಎಂಬುದನ್ನು ಸ್ವತಃ ತಾವೇ ಲೋಕಕ್ಕೆ ತೋರಿಸಿಕೊಟ್ಟರು. 'ಮೂಕನಾಯಕ', 'ಬಹಿಷ್ಕೃತ ಭಾರತ' ಪತ್ರಿಕೆಗಳಲ್ಲದೆ 'ಸಮತ' ಮತ್ತು 'ಜನತ' ಪತ್ರಿಕೆಗಳನ್ನೂ ಅಂಬೇಡ್ಕರ್ ಭಾರತೀಯ ಪತ್ರಿಕಾ ಪ್ರಪಂಚಕ್ಕೆ ನೀಡಿದರು. ಸಾಮಾಜಿಕ ಆಂದೋಲನವನ್ನು ಸಂಘಟಿಸಲು ವ್ಯವಸ್ಥಿತವಾಗಿ ಪತ್ರಿಕೆಗಳನ್ನು ಬಳಸಿಕೊಂಡರು. 'ಕ್ರಾಂತಿಕಾರಕ, ವೈಚಾರಿಕ ಮತ್ತು ಜನಪರ ಪತ್ರಿಕೋದ್ಯಮ ಪ್ರಕಾರವನ್ನು ವಾಸ್ತವಿಕವಾಗಿ ಸಾಂಸ್ಥೀಕರಣಗೊಳಿಸಿದರು. ಭಾರತೀಯ ಪತ್ರಿಕೆಗಳು ಹಣ, ಅಧಿಕಾರ ಮತ್ತು ಸವಲತ್ತುಗಳನ್ನು ಗಳಿಸಿಕೊಡುವ ಮಾಧ್ಯಮವಾಗಿ ಬೆಳೆಯುವುದನ್ನು ಅಂಬೇಡ್ಕರ್ ವಿರೋಧಿಸಿದರು. ಅವರು ಪತ್ರಿಕೆಗಳನ್ನು ಜನರ ವಾಣಿಗಳಾಗಿ, ಹೋರಾಟದ ಅಸ್ತ್ರಗಳಾಗಿ, ಸಾಮಾಜಿಕ ನ್ಯಾಯದ ಮಾಧ್ಯಮಗಳಾಗಿ ಬೆಳೆಸಿದರು. ಗಾಂಧೀಜಿಯವರ 'ಹರಿಜನ' ಮತ್ತು 'ಯಂಗ್ ಇಂಡಿಯಾ' ಪತ್ರಿಕೆಗಳು ವಾಣಿಜ್ಯ ಪತ್ರಿಕೆಗಳಾಗಿರದಿದ್ದರೂ ಸಹ ಅವುಗಳು ಪ್ರಧಾನವಾಗಿ ರಾಜಕೀಯ ಸ್ವಾತಂತ್ರ್ಯ ಪಡೆಯಲು ಗಾಂಧಿ ಬಳಸಿದ ಅಸ್ತ್ರಗಳಾಗಿದ್ದವು. ವಾಸ್ತವವಾಗಿ ಸಾಮಾಜಿಕ ನ್ಯಾಯ

ಪರಿಕಲ್ಪನೆಯನ್ನು ಸಾಕಾರಗೊಳಿಸುವಲ್ಲಿ ಗಾಂಧೀಜಿಯವರ ಪತ್ರಿಕೆಗಳು ತಮ್ಮದೇ ಆದ ಇತಿಮಿತಿಗಳನ್ನು ಹೊಂದಿದ್ದವು. ಗಾಂಧೀಜಿಯವರ ಗುರಿ ಸ್ವಾತಂತ್ರ್ಯಗಳಿಕೆಯೇ ಆಗಿತ್ತು. ಆದರೆ ಅಂಬೇಡ್ಕರ್ ಸಮಾನತೆ, ಸಮಾಜವಾದ ಮತ್ತು ಜನತಂತ್ರಗಳ ಮೂಲಕವಾಗಿ ಶೋಷಿತರಿಗಾಗಿ ಸಾಮಾಜಿಕ—ಆರ್ಥಿಕ—ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಡಲು ದುಡಿದರು. ಅಲ್ಲದೆ ತಮ್ಮ ಪತ್ರಿಕೆಗಳಲ್ಲಿ ದಲಿತರು, ರೈತರು, ಕಾರ್ಮಿಕರು ಮಹಿಳೆಯರು, ಅಲ್ಪ ಸಂಖ್ಯಾತರು, ಹಿಂದುಳಿದ ವರ್ಗಗಳು ಮೊದಲಾದ ಶೋಷಿತ ವರ್ಗಗಳ ಏಳ್ಗೆಗಾಗಿ ನಿರಂತರವಾಗಿ ಬರೆದರು. ಅವರು ಮನುಷ್ಯನ ಬದುಕನ್ನು ಹಸನುಗೊಳಿಸುವಲ್ಲಿ ಪೂರಕವಾದ ಎಲ್ಲಾ ವಿಷಯಗಳನ್ನು ತಮ್ಮ ಪತ್ರಿಕೆಗಳಲ್ಲಿ ವಿಶ್ಲೇಷಿಸಿ ಜನ ಶಿಕ್ಷಣವನ್ನು ಪರಿಣಾಮಕಾರಿಯಾಗಿ ನೀಡಿದರು. ಅಂಬೇಡ್ಕರ್ ನೋವುಂಡ ಜನರಿಗಾಗಿ ಮೌಲ್ಯಾಧಾರಿತ ಪತ್ರಿಕಾ ವ್ಯವಸಾಯ ನಡೆಸಿದರು. ಅವರೆಂದೂ ಉಳ್ಳವರ ಏಜೆಂಟ್ ಆಗಲಿಲ್ಲ.'

ಅಂಬೇಡ್ಕರ್ ಮನುಷ್ಯನನ್ನು ಆಧರಿಸಿದಂತಹ ಆಡಳಿತ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳನ್ನು ತಮ್ಮ ಬರಹಗಳ ಮೂಲಕ ಸಮರ್ಥಿಸಿದ್ದರು. ಎಲ್ಲ ವರ್ಗಗಳ ಸರ್ವತೋಮುಖ ಸಾಧನೆಗಾಗಿ ರಾಜಕೀಯ ಅಧಿಕಾರ ಮತ್ತು ರಾಷ್ಟ್ರೀಯ ಸಂಪನ್ಮೂಲಗಳ ವಿಕೇಂದ್ರೀಕರಣವನ್ನು ಪ್ರತಿಪಾದಿಸಿದರು. ಪ್ರಮುಖ ವಿಷಯಗಳನ್ನು ಕುರಿತಂತೆ ತಮ್ಮ ಪತ್ರಿಕಾ ಬರಹಗಳ ಮೂಲಕ ಅಂಬೇಡ್ಕರ್ ಹೀಗೆ ಅರ್ಥೈಸಿದ್ದಾರೆ.

ಮಹಿಳೆಯರ ಹೊಣೆಗಾರಿಕೆ

"ಸಾಮಾಜಿಕ ರೋಗ ರುಜಿನಗಳ ಶೀಘ್ರ ಪರಿಹಾರ ಸ್ತ್ರೀಯರಿಂದ ಮಾತ್ರ ಸಾಧ್ಯ. ಯಾವಾಗಲೂ ಶುಚಿಯಾಗಿರಿ, ದುರ್ಗುಣಗಳನ್ನು ತ್ಯಜಿಸಿ, ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ. ಅವರಲ್ಲಿ ಮಹತ್ವಾಕಾಂಕ್ಷೆಯನ್ನು ಬಿತ್ತಿ. ಅವರಿಗೆ ಮಹಾಭವಿಷ್ಯವಿದೆಯೆಂಬ ಆಸೆಯನ್ನು ಚಿಗುರಿಸಿ. ಬಹು ಸಂತಾನ ಮಹಾಪರಾಧವೆಂಬುದನ್ನು ಮನಗಾಣಿ. ನಿಮಗಿಂತ ನಿಮ್ಮ ಮಕ್ಕಳನ್ನು ಉತ್ತಮ ಸ್ಥಿತಿಯಲ್ಲಿಡುವ ಹೊಣೆಗಾರಿಕೆ ನಿಮ್ಮದಾಗಿದೆ. ತರುಣಿಯರು ತಮ್ಮ ಗಂಡಂದಿರಿಗೆ ಸಮನಾಗಿ, ಗೆಳತಿಯರಾಗಿ ಬೆಂಬಲವಾಗಿ ನಿಲ್ಲಬೇಕೇ ಹೊರತು ಅವರಿಗೆ ದಾಸಿಯರಾಗಕೂಡದು."[16]

ಪ್ರಜಾಪ್ರಭುತ್ವ

"ರಾಷ್ಟ್ರದಲ್ಲಿ ರಕ್ತರಹಿತ ಸಾಮಾಜಿಕ–ಆರ್ಥಿಕ ಸಮಾನತೆಯನ್ನು ತಂದುಕೊಡುವಂತಹ ಆಡಳಿತ ವ್ಯವಸ್ಥೆಯೇ ಪ್ರಜಾಪ್ರಭುತ್ವ. ಜನತಂತ್ರ ವ್ಯವಸ್ಥೆಯಲ್ಲಿ ನಾಯಕರು ಜನತೆಯ ಹೃದಯ ಮತ್ತು ಮನಸ್ಸುಗಳಲ್ಲಿ ರೂಪುಗೊಳ್ಳಬೇಕೇ ಹೊರತಾಗಿ ಹಣ, ಜಾತಿ ಬಲ ಮತ್ತು ಅಬ್ಬರದ ಪ್ರಚಾರಗಳಿಂದಲ್ಲ." ರಾಜಕೀಯ ಪ್ರಜಾಪ್ರಭುತ್ವದ ಯಶಸ್ಸಿಗೆ ಸಾಮಾಜಿಕ ಪ್ರಜಾಪ್ರಭುತ್ವವೇ ಮೂಲ ಕಾರಣ. ರತ್ನತ್ರಯಗಳಾದ

ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳೇ ಸಾಮಾಜಿಕ ಪ್ರಜಾಪ್ರಭುತ್ವದ ಅಡಿಗಲ್ಲು[17].

ಸಮಾಜವಾದ

ಸಮಾಜವಾದಿಗಳು ಸಮಾಜವಾದವನ್ನು ನಿರ್ದಿಷ್ಟ ವಾಸ್ತವತೆಯನ್ನಾಗಿ ಮಾಡ ಬೇಕಾದರೆ ಅವರು ಸಾಮಾಜಿಕ ಸಂಧಾರಣೆಯ ಸಮಸ್ಯೆಯು ಮೂಲಭೂತವೆಂದು ಒಪ್ಪಬೇಕು. ಇದರಿಂದ ಅವರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಸಾಮಾಜಿಕ ಸಂಧಾರಣೆ ಮತ್ತು ಸಮಾನತೆ ಸಮಾಜವಾದಿ ವ್ಯವಸ್ಥೆಯ ಮೂಲಭೂತ ಅವಶ್ಯಕತೆ ಗಳು. ಭಾರತೀಯ ಸನ್ನಿವೇಶದಲ್ಲಿ ಅಸ್ಪೃಶ್ಯತಾ ನಿವಾರಣೆ, ಜಾತಿ ವಿನಾಶ, ವರ್ಗಭೇದ ನಿರ್ಮೂಲನೆ, ಸರ್ವ ಜನರ ಕಲ್ಯಾಣ ಇವುಗಳು ಸಮಾಜವಾದವನ್ನು ಪುಷ್ಟೀಕರಿಸುವ ಅಂಶಗಳು."[18]

ರಾಷ್ಟ್ರೀಕರಣ

ಆರ್ಥಿಕ ಅಸಮಾನತೆ ಮತ್ತು ಶೋಷಣೆಯನ್ನು ಕೊನೆಗಾಣಿಸಲು ಭೂಮಿಯ ಪುನರ್ ಹಂಚಿಕೆ ಆಗಬೇಕು. ಅದರಲ್ಲಿ ಭೂ ಹೀನ ರೈತರಿಗೆ ಆದ್ಯತೆ ನೀಡಬೇಕು. ಪಾಳು ಭೂಮಿಯನ್ನು ಕೃಷಿಯೋಗ್ಯ ಭೂಮಿಯನ್ನಾಗಿ ಮಾಡಿ ಅದರಲ್ಲಿ ಸಾಮೂಹಿಕ ಕೃಷಿ ಮಾಡಲು ಭೂ ಹೀನರಿಗೆ ಸವಲತ್ತುಗಳನ್ನು ಕೊಡಬೇಕು. ಬೀಳು ಭೂಮಿಯಲ್ಲಿ ಖಾಸಗೀ ಬಂಡವಾಳಶಾಹಿ ಕೃಷಿಗೆ ಅನುಮತಿ ನೀಡಬಾರದು. ಬ್ಯಾಂಕು, ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸಬೇಕು. ಕಾರ್ಖಾನೆಗಳ ಒಡೆತನವನ್ನು ಸರಕಾರಕ್ಕೆ ಅಥವಾ ಸ್ವಾಯತ್ತ ಸಂಸ್ಥೆ ಅಥವಾ ಕಾರ್ಮಿಕರ ಸಂಘಗಳಿಗೆ ಒಪ್ಪಿಸಬೇಕು. ಕಲ್ಲಿದ್ದಲು ಮತ್ತಿತರ ಖನಿಜಗಳ ಗಣಿಗಳನ್ನು ರಾಷ್ಟ್ರೀಕರಿಸಬೇಕು. ಏಕ ಸ್ವಾಮ್ಯತೆಯ ಎಲ್ಲ ರೂಪ ಮತ್ತು ಆಕೃತಿಗಳನ್ನು ನಾಶ ಮಾಡಲು ಕಟಿಬದ್ಧರಾಗಿರುವ ಪ್ರಜಾಪ್ರಭುತ್ವ ವಾದಿಗಳನ್ನು ನಾನು ಸೇರುವೆನು."[19]

ಏಕರೂಪ ಕಾನೂನು ವ್ಯವಸ್ಥೆ

"ಹಿಂದೂ ಕಾನೂನಿನಲ್ಲಿ ಏಕರೂಪತೆಯನ್ನು ಸಾಧಿಸುವುದು ಮತ್ತು ರಾಷ್ಟ್ರವು ಅಂಗೀಕರಿಸಿದ ಸಂವಿಧಾನದ ನಿರ್ದೇಶನಗಳಿಗನುಸಾರವಾಗಿ ಇಡೀ ನಾಡಿಗೆ ಒಂದೇ ಕಾನೂನು ರೂಪುಗೊಳ್ಳುವ ದಾರಿಯಲ್ಲಿ ಹಿಂದೂ ಕಾನೂನನ್ನು ಹೊಂದಿಸಿಕೊಳ್ಳುವುದು ಅತ್ಯವಶ್ಯ. ಇಡೀ ದೇಶಕ್ಕೆ ಅನ್ವಯವಾಗುವಂತಹ ಏಕ ರೂಪು ಕಾನೂನಿನ ರಚನೆ ಅತ್ಯಂತ ಪ್ರಸ್ತುತ ಮತ್ತು ಪ್ರಯೋಜನಕಾರಿ".[20]

ಕಾರ್ಮಿಕ ಕಲ್ಯಾಣ

"ನಮ್ಮಲ್ಲಿಯ ಕಾರ್ಮಿಕರ ಸಂಘಗಳು ರಾಜಕೀಯ ಪಕ್ಷಗಳ ನಿಯಂತ್ರಣಕ್ಕೆ ಒಳಪಟ್ಟಿದ್ದು ಆಂತರಿಕ ಕಲಹಗಳಿಂದಾಗಿ ದುರ್ಬಲಗೊಂಡು ನಿಷ್ಪ್ರಯೋಜಕವಾಗಿವೆ,

ಕಾರ್ಮಿಕರು ಹೆಚ್ಚಿನ ವೇತನ, ಸೇವಾ ಸೌಲಭ್ಯಗಳಿಂದ ತೃಪ್ತರಾಗದೆ ರಾಜಕೀಯ ಶಕ್ತಿ ಗಳಿಸುವುದಕ್ಕಾಗಿ ತಮ್ಮೆಲ್ಲ ಬುದ್ಧಿಶಕ್ತಿ, ಸಂಪನ್ಮೂಲಗಳನ್ನು ಬಳಸಿಕೊಳ್ಳಬೇಕು. ಕಾರ್ಮಿಕರ ಸರ್ಕಾರ ಸ್ಥಾಪಿಸುವ ದಿಕ್ಕಿನಲ್ಲಿ ಕಾರ್ಮಿಕ ವರ್ಗ ಸಂಘಟಿತ ಹೋರಾಟ ನಡೆಸಬೇಕು."21

ಭಾಷಾವಾರು ಪ್ರಾಂತ್ಯಗಳ ರಚನೆ

"ಏಕರೂಪವಾಗಿರುವ ಜನಗಳು ಒಟ್ಟಾಗಿರುವುದು ಪ್ರಜಾರಾಜ್ಯ ಪದ್ಧತಿಗೆ ಅನುಕೂಲ. ಅಂತಹ ಅವಕಾಶವನ್ನು ಭಾಷಾವಾರು ಪ್ರಾಂತ್ಯ ರಚನೆ ಒದಗಿಸುತ್ತದೆ ಭಾಷಾವಾರು ಪ್ರಾಂತ್ಯಗಳನ್ನು ರಚಿಸುವುದರಲ್ಲಿ ಅಪಾಯವಿಲ್ಲ. ಅಪಾಯವಿರುವುದು ಆ ಪ್ರಾಂತ್ಯಗಳು ತಮ್ಮ ಭಾಷೆಯನ್ನು ಸರ್ಕಾರೀ ಭಾಷೆಯನ್ನಾಗಿಸುವಲ್ಲಿ. ಅಂಥ ಕ್ರಮ ಪ್ರಾಂತೀಯ ನಿಷ್ಠೆಗಳನ್ನು ಪೋಷಿಸುತ್ತದೆ. ಪ್ರಾಂತೀಯ ಸಂಸ್ಕೃತಿಗಳು ಒಂದರಿಂದೊಂದು ಬೇರ್ಪಟ್ಟು ಅನ್ಯೋನ್ಯ ಸಂಪರ್ಕದ ಲಾಭಗಳಿಗೆ ಎರವಾಗುತ್ತವೆ. ಇದರಿಂದಾಗಿ ಕಾಲಕ್ರಮೇಣ ದೇಶ ಒಡೆದು ಯೂರೋಪಿನಂತಾಗುವುದು ಸಾಧ್ಯವಿದೆ".22

ಮತಾಂತರ

"ಅಸ್ಪೃಶ್ಯರು ಹಿಂದೂಗಳಾಗಿಯೇ ಉಳಿಯುವುದರಿಂದ ಯಾವ ಒಂದು ಪ್ರಯೋಜನವನ್ನೂ ಪಡೆಯಲಾಗುವುದಿಲ್ಲ. ಮತಾಂತರದ ಮೂಲಕ ನೀವು ಕಳೆದು-ಕೊಳ್ಳುವುದು ಏನಾದರೂ ಇದ್ದರೆ ಅದು ನಿಮ್ಮ ಸಂಕೋಲೆಗಳನ್ನು ಮಾತ್ರ. ಭಾರತಕ್ಕೆ ಸ್ವರಾಜ್ಯ ಯಾವ ಕಾರಣಕ್ಕಾಗಿ ಅಗತ್ಯವಾಗಿದೆಯೋ ಅದೇ ಕಾರಣಕ್ಕಾಗಿ ಅಸ್ಪೃಶ್ಯರಿಗೆ ಮತಾಂತರ ಅಗತ್ಯವಾಗಿದೆ. ಧರ್ಮ ಇರುವುದು ಮನುಷ್ಯನಿಗಾಗಿ. ಧರ್ಮಕ್ಕಾಗಿ ಮನುಷ್ಯನಿಲ್ಲ. ಮತಾಂತರದಿಂದ ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ ಎಂದು ಯಾರೂ ನಂಬಕೂಡದು. ಮುಸ್ಲಿಮರಾದ ಮಾತ್ರಕ್ಕೆ ಎಲ್ಲರೂ ನವಾಬರಾಗುವುದಿಲ್ಲ. ಕ್ರಿಶ್ಚಿಯನ್ನರಾದ ಮಾತ್ರಕ್ಕೆ ಪೋಪರಾಗುವುದಿಲ್ಲ. ಎಲ್ಲಿಗೆ ಹೋದರೂ ಹಕ್ಕುಗಳಿಗಾಗಿ ಹೋರಾಟ ಕಟ್ಟಿಟ್ಟದ್ದೇ."23

ಜಾತ್ಯಾತೀತತೆ

ಜಾತ್ಯಾತೀತತೆ ಎಂದರೆ ಜನರ ಧಾರ್ಮಿಕ ಭಾವನೆಗಳನ್ನು ನಾವು ಪರಿಗಣಿಸ ಬಾರದು ಎಂದರ್ಥವಲ್ಲ. ಜಾತ್ಯಾತೀತ ಸರ್ಕಾರವೆಂದರೆ ಒಟ್ಟಾರೆಯಾಗಿ ಈ ಸಂಸತ್ತು ದೇಶದ ಉಳಿದ ಜನತೆಯ ಮೇಲೆ ಯಾವುದೇ ಧರ್ಮವನ್ನು ಹೇರಲು ಅಧಿಕಾರ ಪಡೆದಿಲ್ಲ; ಈ ಮಿತಿಯನ್ನು ಮಾತ್ರವೇ ಸಂವಿಧಾನವು ಗುರ್ತಿಸುತ್ತದೆ."24

ಬ್ರಾಹ್ಮಣವಾದ

ನಾನು ಬ್ರಾಹ್ಮಣರನ್ನು ದೂರುವುದಿಲ್ಲ. ಅವರ ಅಧಿಕಾರ, ಅಂತಸ್ತುಗಳ ಬಗ್ಗೆ ನನಗೆ ದ್ವೇಷವಿಲ್ಲ. ಯಾವುದು ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳಿಗೆ

ವಿರುದ್ಧವಾಗಿದೆಯೋ ಅದನ್ನು ಬ್ರಾಹ್ಮಣಿಕೆ ಎಂದು ಕರೆಯುತ್ತೇನೆ. ಬ್ರಾಹ್ಮಣರೆಲ್ಲ ನಿಮ್ಮ ವರ್ಗದ ಜನರ ಶತ್ರುಗಳಲ್ಲ. ನಾನು ಅಸ್ಪೃಶ್ಯತೆಯನ್ನು ಪೋಷಿಸುವ ಬ್ರಾಹ್ಮಣ್ಯವನ್ನು ವಿರೋಧಿಸುತ್ತೇನೆಯೇ ಹೊರತು ಬ್ರಾಹ್ಮಣರನ್ನಲ್ಲ. ಈ ಬ್ರಾಹ್ಮಣಿಕೆ ಮೊದಲು ಪ್ರಾರಂಭವಾದುದು ಬ್ರಾಹ್ಮಣರಿಂದ. ಅದು ಸಾಮಾಜಿಕ ಜೀವನಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಜೀವನದ ಎಲ್ಲ ಕ್ಷೇತ್ರಗಳನ್ನು ಬ್ರಾಹ್ಮಣಿಕೆ ವ್ಯಾಪಿಸಿಕೊಂಡಿದೆ. ಅನೇಕ ಬ್ರಾಹ್ಮಣೇತರರಲ್ಲೂ ಬ್ರಾಹ್ಮಣ್ಯ ಮನೆ ಮಾಡಿಕೊಂಡಿದೆ. ಅಂತಹವರು ಬ್ರಾಹ್ಮಣರಿಗಿಂತ ಅಪಾಯಕಾರಿ."[25]

ವ್ಯಕ್ತಿಪೂಜೆ

ಒಬ್ಬ ವ್ಯಕ್ತಿ ಸಮಾಜಕ್ಕೆ ಎಂದಿಗೂ ಅನಿವಾರ್ಯ ಅಲ್ಲ. ಮಾನವನನ್ನು ದೈವತ್ವಕ್ಕೇರಿಸುವ ಸಮಾಜ ವಿನಾಶ ಮುಖವಾಗುತ್ತದೆ. ಯಾರಲ್ಲಿಯೂ ದೈವೀ ಅಥವಾ ಅತಿ ಮಾನವ ಲಕ್ಷಣಗಳಿಲ್ಲ. ಪ್ರತಿಯೊಬ್ಬನೂ ಸ್ವಪ್ರಯತ್ನದಿಂದ ಮೇಲೇರುತ್ತಾನೆ. ವ್ಯಕ್ತಿ ಪೂಜೆ ಸಮುದಾಯದ ಪ್ರಗತಿಗೆ ಮಾರಕ."[26]

ದಲಿತೋದ್ಧಾರ

"ಅಸ್ಪೃಶ್ಯರು ಜಾತಿಯಾಗಿ ನಿರ್ಮೂಲನಗೊಳ್ಳುವುದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಮನುಷ್ಯರಾಗಿ ಅಭಿವೃದ್ಧಿ ಹೊಂದುವುದನ್ನು ಆಶಿಸುತ್ತೇನೆ. ದೇಶಕ್ಕೆ ಬೇಕಾಗಿರುವುದು ಜನರ ಗುಣವೇ ಹೊರತು, ಜಾತಿಯಲ್ಲ. ಆರ್ತರಿಗಾಗಲೀ, ಪತಿತರಿಗಾಗಲೀ ಅಥವಾ ಗುಲಾಮರಿಗಾಗಲೀ ಸ್ವಸಾಮರ್ಥ್ಯ ಮತ್ತು ಸ್ವಪ್ರಯತ್ನಗಳಿಂದ ವಿಮೋಚನೆ ಸಾಧ್ಯವೇ ಹೊರತು ಅನ್ಯರ ಕೃಪೆಯಿಂದಲ್ಲ. ಅದು ಚಾರಿತ್ರಿಕ ಸತ್ಯವೂ ಹೌದು. ಆತ್ಮಗೌರವವಿಲ್ಲದ, ಮತ್ತು ಆತ್ಮೋದ್ಧಾರಾಸಕ್ತಿಯಿಲ್ಲದ ಜನರಿಗೆ ಪಾಶವಿಕ ಜೀವನವೇ ಗತಿ. ನೀವು ಚೈತನ್ಯಶಾಲಿಗಳಾಗಿ ಹೊಸ ಬದುಕಿಗೆ ಸಿದ್ಧವಾಗಿರದಿದ್ದರೆ ಸಾಯುವುದೇ ಮೇಲು. ಸವರ್ಣೀಯರಂತೆ ಅವರ್ಣೀಯರೂ ಸಮ ಪ್ರಮಾಣದಲ್ಲಿ ಬದುಕಿನ ಅವಕಾಶಗಳನ್ನು ಪಡೆಯಬೇಕಾದ್ದು ಆಜನ್ಮ ಸಿದ್ಧ ಹಕ್ಕು. ಸ್ವಾವಲಂಬನೆಯೇ ಗೌರವಯುತವಾದ ಬಾಳಿಗೆ ಆಧಾರ. ಒಬ್ಬ ಮಹಾತ್ಮ ಅಥವಾ ಒಂದು ರಾಜಕೀಯ ಪಕ್ಷದಿಂದ ದಲಿತರ ಉದ್ಧಾರ ಖಚಿತವಾಗಿ ಸಾಧ್ಯವಿಲ್ಲ. ನಿಮ್ಮ ಉದ್ಧಾರ ನಿಮ್ಮಿಂದಲೇ ಸಾಧ್ಯವೇ ಹೊರತು ಬೇರಾವುದೇ ದೈವಿಕಶಕ್ತಿ ಅಥವಾ ಪ್ರಭಾವದಿಂದ ಸಾಧ್ಯವಿಲ್ಲ."[27]

ಮೀಸಲಾತಿ

"ಸಮಾಜವಾದವು ಎಲ್ಲ ಜನರ ಸಮಾನ ಅವಕಾಶಗಳಿಗೆ ಒಂದು ಸಾಧನ. ಆದರೆ ಭಾರತದ ವಿಶಿಷ್ಟ ಪರಿಸ್ಥಿತಿಯಲ್ಲಿ ಅಸ್ಪೃಶ್ಯತೆ ಒಂದು ಸಾಮಾಜಿಕ ಅಸಮಾನತೆ.

ಸಾವಿರಾರು ವರ್ಷಗಳಿಂದ ನಡೆದು ಬಂದಿರುವ ಈ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸಲು ಸಮಾಜವಾದಿಗಳು ಅಸ್ಪೃಶ್ಯರಿಗೆ ಮೀಸಲಾತಿಯನ್ನು ನೀಡಬೇಕು."[23]

ಅಂಬೇಡ್ಕರ್ ಮಹತ್ವಪೂರ್ಣ ವಿಚಾರಗಳನ್ನು ತಮ್ಮ ಪತ್ರಿಕೆಗಳಲ್ಲಿ ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಅವುಗಳನ್ನು ಸರಳವಾಗಿಯೂ, ನಿಷ್ಠುರವಾಗಿಯೂ ಮತ್ತು ಅರ್ಥಪೂರ್ಣವಾಗಿಯೂ ಚರ್ಚಿಸಿದ್ದಾರೆ. ಅವರ ವಿಚಾರಧಾರೆಗಳು ಇಂದಿಗೂ ಪ್ರಸ್ತುತವಾಗಿದ್ದು ಶೋಷಿತ ಜನವರ್ಗದ ಮೇಲೆ ವ್ಯಾಪಕವಾದ ಪರಿಣಾಮ ಬೀರುತ್ತವೆ. ರಾಷ್ಟ್ರವು ಇಂದು ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ನೀಡಬಲ್ಲ ಶಕ್ತಿ ಅವರ ವಿಚಾರಧಾರೆಗಳಿಗುಂಟು. ಭಾರತೀಯ ಪತ್ರಿಕೋದ್ಯಮವನ್ನು ತಮ್ಮ ಜನಪರ ಬರಹಗಳ ಮೂಲಕ ಅಂಬೇಡ್ಕರ್ ಶ್ರೀಮಂತಗೊಳಿಸಿದ್ದಾರೆ. ಅಲ್ಲದೆ ಪತ್ರಿಕೋದ್ಯಮಕ್ಕೆ ಸಾಮಾಜಿಕ ನ್ಯಾಯ ಮತ್ತು ಮಾನವೀಯ ಪರಿಕಲ್ಪನೆಗಳ ಆಧಾರವನ್ನು ಒದಗಿಸಿದ್ದಾರೆ. ಭಾರತೀಯ ಪತ್ರಿಕೆಗಳ ವೈಫಲ್ಯತೆಗಳನ್ನು ತಮ್ಮ ಬರಹ ಮತ್ತು ಭಾಷಣಗಳ ಮೂಲಕ ಎತ್ತಿ ಹಿಡಿದಿದ್ದಾರೆ. ಭಾರತೀಯ ಪತ್ರಿಕೆಗಳು ಮತ್ತು ಸಂಪರ್ಕ ಮಾಧ್ಯಮಗಳಿಗೆ ಹೊಸ ದಿಕ್ಕನ್ನು ನೀಡಿದವರಲ್ಲಿ ಅಂಬೇಡ್ಕರ್ ಅಗ್ರಗಣ್ಯರು.

ಭಾರತೀಯ ಪತ್ರಿಕೋದ್ಯಮವನ್ನು ಕುರಿತಂತೆ ಅಂಬೇಡ್ಕರ್ ಅವರು ೧೯೪೩ರ ಜನವರಿಯಲ್ಲಿ ರಾನಡೆಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಪುಣೆಯಲ್ಲಿ ಭಾಷಣ ಮಾಡುತ್ತ ಹೀಗೆ ಹೇಳಿದ್ದಾರೆ : 'ನಮ್ಮ ದೇಶದಲ್ಲಿ ಪತ್ರಿಕಾಪ್ರಪಂಚ ವೃತ್ತಿಯಾಗುವ ಬದಲು ಒಂದು ಉದ್ದಿಮೆಯಾಗಷ್ಟೇ ಬೆಳೆದಿದೆ. ನಾಯಕರ ನಿರ್ಮಾಣಕ್ಕೆ ಅದೊಂದು ಅನುಕೂಲಕರ ವೇದಿಕೆಯಾಗಿದೆ. ಚರಿತ್ರೆಯ ನಿರ್ಮಾಣ ಮನುಷ್ಯನ ಕೆಲಸ ಕಾರ್ಯನಿಷ್ಠೆ ಮತ್ತು ಪ್ರಾಮಾಣಿಕ ಪರಿಶ್ರಮ ಮನುಷ್ಯನನ್ನು ದೊಡ್ಡವನನ್ನಾಗಿಸುತ್ತವೆ ಎಂದು ಹೇಳಿದ ಕಾರ್ಲೈಲ್ ಅವರ ಮಾತುಗಳು ಎಲ್ಲ ಕಾಲಕ್ಕೂ ಪ್ರಸ್ತುತ. ನಮ್ಮ ನಾಯಕರು ಪತ್ರಿಕಾಲಯಗಳಲ್ಲಿ ತಯಾರಾಗುವಂತಹ ಸಾಮಗ್ರಿಗಳಾಗಿದ್ದಾರೆ. ಜನರ ಹೃದಯ ಮತ್ತು ಮನಸ್ಸುಗಳಲ್ಲಿ ರೂಪುಗೊಳ್ಳುವ ಬದಲು ಹಣ ಅಥವಾ ಜಾತಿಯ ಬಲದಿಂದ ಪ್ರಚಾರದ ಅಬ್ಬರದ ಮೂಲಕವಾಗಿ ಚುನಾವಣೆಗಳಲ್ಲಿ ಗೆದ್ದು ಅಧಿಕಾರ ಸೂತ್ರ ಹಿಡಿದು ಜನರನ್ನು ವಂಚಿಸುವ ಪ್ರವೃತ್ತಿ ಅವ್ಯಾಹತವಾಗಿ ಸಾಗಿದೆ. ಇದು ಜನತಂತ್ರಕ್ಕೆ ನಿಚ್ಚಳವಾಗಿ ಮಾರಕ."[29] ಅಂಬೇಡ್ಕರರ ಮಾತುಗಳು ಪತ್ರಿಕೋದ್ಯಮ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ನಡುವಣ ಸಂಬಂಧವನ್ನು ಎತ್ತಿ ಹಿಡಿಯುತ್ತವೆ. ಭಾರತೀಯ ಪತ್ರಿಕೆಗಳು ಜನರ ಬದುಕಿನ ಆಶೋತ್ತರಗಳೊಂದಿಗೆ ನಿರಂತರವಾಗಿ ಸ್ಪಂದಿಸಬೇಕೇ ವಿನಹ ಸ್ವಾರ್ಥಪರ ರಾಜಕೀಯ ನಾಯಕರೊಂದಿಗಲ್ಲ. ಜನತಂತ್ರವು ಜನಪರ ಪತ್ರಿಕೆಗಳ ಮೂಲಕ ಬಲವರ್ಧನೆಗೊಳ್ಳಬೇಕಲ್ಲದೆ ಹಣ ಅಥವಾ ಜಾತೀಯ ಹಿತಾಸಕ್ತಿಗಳ ಮೂಲಕವಲ್ಲ. ಪತ್ರಿಕೆಗಳ ನಿಜವಾದ ಪ್ರಭುಗಳು ಜನತೆಯೇ ಹೊರತಾಗಿ ಬಂಡವಾಳಶಾಹಿ ಬೆಂಬಲಿತ ರಾಜಕಾರಣಿಗಳಲ್ಲ ಎಂಬುದು ಪತ್ರಿಕೋದ್ಯಮ ಕುರಿತಂತೆ ಅಂಬೇಡ್ಕರ್ ಅವರು ಹೊಂದಿದ್ದ ಖಚಿತ ಧೋರಣೆ.

ಸಂವಿಧಾನದತ್ತವಾದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಮೊದಲ ತಿದ್ದುಪಡಿಯನ್ನು ಅಂಬೇಡ್ಕರ್ ಬಲವಾಗಿ ಸಮರ್ಥಿಸಿದ್ದರು. ಅಪರಿಮಿತ ಅಭಿವ್ಯಕ್ತಿ ಸ್ವಾತಂತ್ರ್ಯ ಭಾರತೀಯ ಸನ್ನಿವೇಶದಲ್ಲಿ ಅಪಾಯಕಾರಿ. ರಾಷ್ಟ್ರೀಯ ಹಿತಾಸಕ್ತಿ ದೃಷ್ಟಿಯಿಂದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕೆಲವಾರು ಸಮರ್ಥನೀಯ ಮಿಂತಿಗಳಿಗೆ ಒಳಪಡಿಸಬೇಕು. ರಾಷ್ಟ್ರದ ಹಿತಾಸಕ್ತಿಗೆ ಪೂರಕವಾದ ಸಂವಿಧಾನ ತಿದ್ದುಪಡಿ ಮಾಡುವ ಪರಮಾಧಿಕಾರ ಸಂಸತ್ತಿಗೆ ಇರಬೇಕಾದುದು ಉಚಿತ ಎಂಬುದು ಅಂಬೇಡ್ಕರ್ ಅವರ ನಿಲುವಾಗಿತ್ತು.

ಸ್ವಾತಂತ್ರ್ಯಪೂರ್ವದ ಪತ್ರಿಕೆಗಳನ್ನು ಅಂಬೇಡ್ಕರ್ 'ಕಾಂಗ್ರೆಸ್ ಪತ್ರಿಕೆಗಳು' ಎಂದು ಕರೆದಿದ್ದಾರೆ. ೧೯೪೩ನೇ ಇಸವಿ ಮಾರ್ಚ್ ತಿಂಗಳಲ್ಲಿ ರಾನಡೆ, ಗಾಂಧಿ ಮತ್ತು ಜಿನ್ನಾ ಅವರನ್ನು ಕುರಿತು ರಚಿಸಿದ ಗ್ರಂಥದ ಮುನ್ನುಡಿಯಲ್ಲಿ ಅವರು ಹೀಗೆ ಬರೆದಿದ್ದಾರೆ: "ಭಾರತೀಯ ರಾಜಕಾರಣವನ್ನು ಕಲುಷಿತಗೊಳಿಸಿರುವ ಗಾಂಧಿ ಮತ್ತು ಜಿನ್ನಾರನ್ನು ನಾನು ಟೀಕೆ ಮಾಡಿರುವ ಕಾರಣಕ್ಕಾಗಿ ನನ್ನನ್ನು ತುಚ್ಛೀಕರಿಸಲಾಗಿದೆ. ನಾನು ಸರ್ವಾಧಿಕಾರತ್ವ, ಅನ್ಯಾಯ, ಬೂಟಾಟಿಕೆ ಮತ್ತು ಹುಂಬತನಗಳನ್ನು ದ್ವೇಷಿಸುತ್ತೇನೆ. ಅಷ್ಟೇ ಅಲ್ಲ, ಈ ಲಕ್ಷಣಗಳನ್ನು ಹೊಂದಿರುವ ಎಲ್ಲರನ್ನೂ ದ್ವೇಷಿಸುತ್ತೇನೆ. ಈ ಕಾರಣದಿಂದ ಕಾಂಗ್ರೆಸ್ ಪಕ್ಷದ ವಕ್ತಾರನಂತಿರುವ ಪತ್ರಿಕೆಗಳು ನನ್ನನ್ನು ತುಚ್ಛೀಕರಿಸುತ್ತವೆ. ನಾನು ಕಾಂಗ್ರೆಸ್ ಪತ್ರಿಕೆಗಳನ್ನು ಚೆನ್ನಾಗಿ ಬಲ್ಲೆನು. ಇಂತಹ ಟೀಕೆಗಳನ್ನು ನಾನು ಮಾನ್ಯ ಮಾಡುವುದಿಲ್ಲ. ಈ ಪತ್ರಿಕೆಗಳು ನನ್ನ ವಾದವನ್ನು ಎಂದೂ ವಸ್ತುನಿಷ್ಠವಾಗಿ ಮತ್ತು ಪ್ರಾಮಾಣಿಕವಾಗಿ ಅಲ್ಲಗಳೆದಿಲ್ಲ. ನಾನು ಮಾಡುವ ಎಲ್ಲ ಕೆಲಸಗಳನ್ನು ಸಾರಾಸಗಟಾಗಿ ಟೀಕಿಸಿ ಜನರಲ್ಲಿ ನನ್ನ ಬಗ್ಗೆ ತಪ್ಪು ಕಲ್ಪನೆ ಮೂಡಿಸುವುದೊಂದೇ ಕಾಂಗ್ರೆಸ್ ಪತ್ರಿಕೆಗಳಿಗೆ ತಿಳಿದಿರುವ ಕೆಲಸ. ಕಾಂಗ್ರೆಸ್ ಪಕ್ಷಗಳು ನನ್ನ ಬಗ್ಗೆ ಹೊಂದಿರುವ ದ್ವೇಷಾಸೂಯೆಗಳು ಅಸ್ಪೃಶ್ಯರ ಬಗ್ಗೆ ಸವರ್ಣೀಯ ಹಿಂದೂಗಳು ಹೊಂದಿರುವಂತಹ ದ್ವೇಷವನ್ನು ನಿಚ್ಚಳವಾಗಿಯೂ ಪ್ರತಿಬಿಂಬಿಸುತ್ತವೆ. ಕಾಂಗ್ರೆಸ್ ಪತ್ರಿಕೆಗಳು ನನ್ನ ಮೇಲೆ ಎಷ್ಟೇ ನಿಂದನೆಯ ಮಳೆಗರೆದರೂ ನಾನು ನನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ. ನಾನಂತೂ ಮೂರ್ತಿಪೂಜೆ ಮಾಡುವವನಲ್ಲ. ಬದಲಾಗಿ ಅವುಗಳನ್ನು ಒಡೆಯುವಂಥವನು. ನಾನು ಗಾಂಧಿ ಮತ್ತು ಜಿನ್ನಾರನ್ನೂ ದ್ವೇಷಿಸುವುದಿಲ್ಲ, ಆದರೆ ಅವರನ್ನು ಇಷ್ಟಪಡುವುದಿಲ್ಲ. ನಾನು ಭಾರತ ದೇಶವನ್ನು ಪ್ರೀತಿಸುವೆ. ಆದರೆ ಅವರನ್ನು ದ್ವೇಷಿಸುವುದಿಲ್ಲ. ನನ್ನ ದೇಶದ ಜನ ಮುಂದೊಂದು ದಿನ ಕೆಲ ಮನುಷ್ಯರಿಗಿಂತ ದೇಶವೇ ಶ್ರೇಷ್ಠ. ಗಾಂಧಿ ಮತ್ತು ಜಿನ್ನಾರ ಆರಾಧನೆ ಮತ್ತು ದೇಶಸೇವೆ ಎರಡೂ ವಿಭಿನ್ನವಾದ ವಿಚಾರಗಳು; ಮತ್ತು ಇವೆರಡೂ ಪರಸ್ಪರ ಘರ್ಷಿಸುವ ವಿಚಾರಗಳು ಎಂಬುದನ್ನು ಮನಗಾಣುವರೆಂಬ ನಂಬಿಕೆ ನನಗಿದೆ".30

ಅಂಬೇಡ್ಕರ್ ವ್ಯಕ್ತಿ ಪೂಜೆಯ ಕಡು ವಿರೋಧಿಯಾಗಿದ್ದರು. ಅವರಿಗೆ ಗಾಂಧಿ, ಜಿನ್ನಾ ಮೊದಲಾದ ರಾಷ್ಟ್ರ ನಾಯಕರ ಬಗ್ಗೆ ಯಾವುದೇ ರೀತಿಯ ವೈಯಕ್ತಿಕ ದ್ವೇಷ ಇರಲಿಲ್ಲ. ರಾಷ್ಟ್ರ ವ್ಯಕ್ತಿಗಿಂತ ಶ್ರೇಷ್ಠ. ಪತ್ರಿಕೋದ್ಯಮ ವ್ಯಕ್ತಿಯೊಬ್ಬನ ಪ್ರತಿಷ್ಠೆಯನ್ನು

ಹೆಚ್ಚಿಸುವ ಮಾಧ್ಯಮವಾಗಬಾರದು. ವ್ಯಕ್ತಿಗತ ಪ್ರತಿಷ್ಠೆಗಳನ್ನು ಬದಿಗೊತ್ತಿ ಸಾಮೂಹಿಕ ಹಿತಾಸಕ್ತಿಗಳಿಗೆ ಪೂರಕವಾದ ವಿಚಾರಗಳನ್ನು ಪತ್ರಿಕೆಗಳು ಓದುಗರಿಗೆ ನೀಡಬೇಕು. ಜನತಂತ್ರ ವಿರೋಧಿಯಾದ ವ್ಯಕ್ತಿಪೂಜೆ ಪತ್ರಿಕೋದ್ಯಮದಲ್ಲಿನ ಆದ್ಯತೆಯಾಗಕೂಡದು. ಕುರುಡು ವ್ಯಾಮೋಹ ಅಥವಾ ಸ್ವಾಮಿನಿಷ್ಠೆ ಜನತಂತ್ರದ ಬೇರುಗಳನ್ನು ದುರ್ಬಲಗೊಳಿಸುತ್ತವೆ. ವೈಜ್ಞಾನಿಕ ವಿಶ್ಲೇಷಣೆ, ಪ್ರಾಮಾಣಿಕ ವಿಮರ್ಶೆ ಮತ್ತು ವಸ್ತುನಿಷ್ಠ ವಿಚಾರಗಳ ತಳಹದಿಯ ಮೇಲೆ ಪತ್ರಿಕೋದ್ಯಮ ಬೆಳೆಯಬೇಕೆಂಬುದು ಅಂಬೇಡ್ಕರರ ಕನಸಾಗಿತ್ತು.

ಇನ್ನೊಂದು ಸಂದರ್ಭದಲ್ಲಿ ಭಾರತೀಯ ಪತ್ರಿಕೋದ್ಯಮವನ್ನು ಕುರಿತಂತೆ ಅಂಬೇಡ್ಕರ್ ಹೀಗೆ ವಿಶ್ಲೇಷಿಸಿದ್ದಾರೆ : "ಹಿಂದೊಮ್ಮೆ ವೃತ್ತಿಯಾಗಿದ್ದ ಪತ್ರಿಕೋದ್ಯಮವು ಇಂದು ಒಂದು ಉದ್ದಿಮೆಯಾಗಿ ಬೆಳೆದಿದೆ. ಅದಕ್ಕೆ ಮೈ ಸಾಬೂನು ಉತ್ಪಾದಿಸುವುದನ್ನು ಬಿಟ್ಟು ಬೇರಾವ ನೈತಿಕ ಕೆಲಸಗಳೂ ಇಲ್ಲವಾಗಿವೆ. ಅದು ತಾನು ಪ್ರಜೆಗಳ ಮಾರ್ಗದರ್ಶಿ ಎನ್ನುವುದನ್ನು ಮರೆತಿದೆ. ವಸ್ತುನಿಷ್ಠವಾದ ಸುದ್ದಿ ನೀಡಿಕೆ, ಸಮುದಾಯಕ್ಕೆ ಒಳಿತನ್ನುಂಟುಮಾಡಬಲ್ಲ ಸಾರ್ವಜನಿಕ ನೀತಿ ನಿರೂಪಣೆ, ತಪ್ಪು ಮಾರ್ಗ ತುಳಿದಿರುವ ವ್ಯಕ್ತಿಗಳನ್ನು ಅವರೆಷ್ಟೇ ದೊಡ್ಡವರಿರಲಿ ಸರಿ ದಾರಿಗೆ ತರುವುದು, ಇವೇ ಮೊದಲಾದವುಗಳನ್ನು ಭಾರತೀಯ ಪತ್ರಿಕೋದ್ಯಮ ಪ್ರಧಾನ ಉದ್ದೇಶಗಳೆಂದು ಪರಿಗಣಿಸಿಲ್ಲ. ಒಬ್ಬ ನನ್ನು ನಾಯಕನೆಂದು ಒಪ್ಪಿಕೊಂಡು ಕುರುಡಾಗಿ ಆರಾಧಿಸುವುದಷ್ಟೇ ಇಂದಿನ ಪತ್ರಿಕೋದ್ಯಮದ ಪ್ರಧಾನ ಕೆಲಸವಾಗಿದೆ. ಸುದ್ದಿಗೆ ಬದಲಾಗಿ ಉದ್ರೇಕಕಾರಿ ಬರಹ, ಅರ್ಥಪೂರ್ಣ ಅಭಿಪ್ರಾಯಕ್ಕೆ ಬದಲಾಗಿ ಅನರ್ಥಕಾರಿ ಭಾವನೆ, ಜವಾಬ್ದಾರಿಯುತ ವ್ಯಕ್ತಿಗಳನ್ನು ಮನವೊಲಿಸುವುದರ ಬದಲಾಗಿ ಬೇಜವಾಬ್ದಾರಿಯುತ ವ್ಯಕ್ತಿಗಳನ್ನು ಓಲೈಸುವುದು ಇವೇ ಮೊದಲಾದ ಪ್ರವೃತ್ತಿಗಳನ್ನು ಇಂದಿನ ಭಾರತೀಯ ಪತ್ರಿಕೋದ್ಯಮ ವಿಪುಲವಾಗಿ ಪ್ರತಿಬಿಂಬಿಸುತ್ತದೆ. ಸ್ಯಾಲಿಸ್‌ಬರಿ ಅವರು ನಾರ್ತ್‌ಕ್ಲಿಫ್ ಪತ್ರಿಕೋದ್ಯಮವನ್ನು 'ಕಛೇರಿ ಹುಡುಗರು ಕಛೇರಿ ಹುಡುಗರಿಗಾಗಿ ಬರೆಯುವಂತಹ ಪತ್ರಿಕೋದ್ಯಮ' ಎಂದು ವ್ಯಾಖ್ಯಾನಿಸಿರುವಂತೆ ಭಾರತೀಯ ಪತ್ರಿಕೋದ್ಯಮವೂ ಇಂತಹುದೇ ಮತ್ತು ಇದಕ್ಕಿಂತ ಹೆಚ್ಚಿನದನ್ನು ಒಳಗೊಂಡ ಪತ್ರಿಕೋದ್ಯಮವಾಗಿದೆ. ಇಷ್ಟೇ ಅಲ್ಲದೆ ತಮ್ಮ ನಾಯಕರನ್ನು ವೈಭವೀಕರಿಸುವ ಸಲುವಾಗಿ ಡೋಲು ಬಾರಿಸುವ ಹುಡುಗರು ಬರೆದಂತಹ ಪತ್ರಿಕೋದ್ಯಮ ನಮ್ಮದಾಗಿದೆ. ವ್ಯಕ್ತಿಪೂಜೆ ಮಾಡುವ ಸಲುವಾಗಿ ರಾಷ್ಟ್ರೀಯ ಹಿತಾಸಕ್ತಿಯನ್ನು ಹಿಂದೆಂದಿಗಿಂತಲೂ ಬಲಿ ಕೊಡಲಾಗಿದೆ. ಕುರುಡಾದ ವ್ಯಕ್ತಿ ಪೂಜೆ ಹಿಂದೆಂದಿಗಿಂತಲೂ ಈಗ ಹೆಚ್ಚಾಗಿದೆ. ಇವುಗಳ ಮಧ್ಯೆಯೂ ಕೆಲವಾರು ಗೌರವಾನ್ವಿತ ವಿನಾಯಿತಿಗಳುಂಟು. ಆದರೆ ಅಂಥವರ ಸಂಖ್ಯೆ ಬಹಳ ಕಡಿಮೆಯಿದ್ದು ಅವರ ಧ್ವನಿ ಈ ಗದ್ದಲದಲ್ಲಿ ಕೇಳಿಸದಂತಾಗಿದೆ."[31]

ಅಂಬೇಡ್ಕರ್ ಪತ್ರಿಕಾ ಪ್ರಪಂಚವನ್ನು ಕುರಿತಂತೆ ಜನಪರ, ಪ್ರಗತಿಪರ ಮತ್ತು ಕ್ರಾಂತಿಕಾರಕ ದೃಷ್ಟಿಕೋನ ಹೊಂದಿದ್ದರು. ಪತ್ರಿಕಾ ಪ್ರಪಂಚವು ಪಟ್ಟಭದ್ರ ಹಿತಾಸಕ್ತಿ

ಗಳು ಪಟ್ಟಭದ್ರ ಹಿತಾಸಕ್ತಿಗಳಿಂದಲೇ ಮತ್ತು ಪಟ್ಟಭದ್ರ ಹಿತಾಸಕ್ತಿಗಳಿಗೋಸ್ಕರವೇ ಇರುವಂತಹ ಉದ್ಯಮವಾಗಿರಬಾರದು ಎಂಬ ಖಚಿತ ನಿಲುವು ಹೊಂದಿದ್ದರು. ಕೆಲವೇ ಮಂದಿ ನಾಯಕರನ್ನು ತಯಾರಿಸುವ ಮತ್ತು ಅವರಿಗೆ ರಕ್ಷಣೆ ನೀಡುವುದಕ್ಕೇ ಮೀಸಲಾದ ಕ್ಷೇತ್ರವಾಗಿ ಪತ್ರಿಕೋದ್ಯಮ ಬೆಳೆಯುವುದನ್ನು ಅವರು ಬಲವಾಗಿ ವಿರೋಧಿಸಿದರು. ಸರ್ಕಾರೀ ಮತ್ತು ಖಾಸಗೀ ಏಕಸ್ವಾಮ್ಯಕ್ಕೆ ಒಳಪಡದೆ ಸಮಾಜದ ಸೇವಾ ಸಂಸ್ಥೆ ಮತ್ತು ಸಮುದಾಯದ ಆಸ್ತಿಯಾಗಿ ಪತ್ರಿಕೋದ್ಯಮ ಬೆಳೆಯಬೇಕೆಂಬುದು ಅವರ ಮನದಾಳದ ಆಶಯವಾಗಿತ್ತು. ಮನುಷ್ಯರಾಗಿ ಮನುಷ್ಯರಂತೆ ಬಾಳಲು ಪೂರಕವಾದ ಪತ್ರಿಕಾ ಸ್ವಾತಂತ್ರ್ಯವನ್ನು ಅವರು ಪ್ರತಿಪಾದಿಸಿದರು. ಇಂತಹ ಪತ್ರಿಕಾ ಸ್ವಾತಂತ್ರ್ಯ ಕೇವಲ ಪತ್ರಿಕೆಗಳು ಮತ್ತು ಅವುಗಳ ಮಾಲೀಕರಿಗೆ ಸೀಮಿತಗೊಳ್ಳದೆ ಸಮಸ್ತ ಪ್ರಜೆಗಳಿಗೂ ಲಭಿಸುವಂತಹ ಅಭಿವ್ಯಕ್ತಿ ಸ್ವಾತಂತ್ರ್ಯವಾಗಬೇಕೆಂದು ವಾದಿಸಿದರು. ಪತ್ರಿಕೆಗಳು ಸಮಾಜದಲ್ಲಿ ಮೇಲ್ಜಾತಿ ಮತ್ತು ಉಳ್ಳವರ ವರ್ಗ ಹಿತಾಸಕ್ತಿಗಳನ್ನಷ್ಟೇ ಪ್ರತಿನಿಧಿಸದೇ ಎಲ್ಲ ಧರ್ಮ, ಜಾತಿ, ಪ್ರಾಂತ್ಯ, ಭಾಷೆ ಮತ್ತು ವೃತ್ತಿಗಳ ಜನತೆಗೆ ದಾರಿ ದೀಪವಾಗಬೇಕು ಎಂಬುದು ಅವರ ನಿಲುವಾಗಿತ್ತು. ತಾವೇ ಸ್ವತಹ ಪತ್ರಿಕೋದ್ಯಮಿಯಾಗಿ ವೃತ್ತಿಪರ ಮೌಲ್ಯಗಳನ್ನು ತಮ್ಮ ಪತ್ರಿಕಾ ಸೇವೆಯ ಮೂಲಕವಾಗಿ ಅಭಿವ್ಯಕ್ತಪಡಿಸಿದರು. ಹಣ ಅಥವಾ ಅಧಿಕಾರಗಳಿಸಲು ಅವರು ಪತ್ರಿಕೋದ್ಯಮ ಕ್ಷೇತ್ರವನ್ನು ಪ್ರವೇಶಿಸಲಿಲ್ಲ. ಬಾಯಿಲ್ಲದವರ, ಕಣ್ಣಿಲ್ಲದವರ ಮತ್ತು ಅಸಹಾಯಕರಾಗಿ ಮಲಗಿದ್ದವರ ಸಂಘಟನೆ, ಜಾಗೃತಿ ಮತ್ತು ವಿಮೋಚನೆಗಳಿಗಾಗಿ ಪತ್ರಿಕೆ ನಡೆಸಿದರು. ಶೋಷಿತ ವರ್ಗದ ಬದುಕಿನ ಆಶೋತ್ತರಗಳೊಂದಿಗೆ ಅಂಬೇಡ್ಕರ್ ಅವರ ಪತ್ರಿಕೆಗಳು ನಿರಂತರವಾಗಿ ಸ್ಪಂದಿಸಿದವು. ಶೋಷಿತರು ಸಂಘಟಿತರಾಗಬೇಕು, ಹೋರಾಟ ನಡೆಸಬೇಕು ಮತ್ತು ಆತ್ಮವಿಶ್ವಾಸವನ್ನು ಬೆಳೆಸಿಕೊಂಡು ಹೊಸ ದಿಕ್ಕಿನಲ್ಲಿ ಸಾಗಿ ಪ್ರಗತಿ ಸಾಧಿಸಬೇಕು ಎನ್ನುವುದೇ ಅವರ ಪತ್ರಿಕೋದ್ಯಮ ಸಂದೇಶ. ಜನರ ಮನಸ್ಸುಗಳನ್ನು ಕೆಲವೇ ಮಂದಿ ಪ್ರಭಾವಶಾಲಿಗಳು ನಿಯಂತ್ರಿಸಬಾರದು ಮತ್ತು ಇಂತಹ ಮಾನಸಿಕ ನಿಯಂತ್ರಣ ಸಾಮೂಹಿಕ ವಿಕಸನಕ್ಕೆ ಅಡ್ಡಗಲ್ಲು ಎಂದು ಅವರು ಅಚಲವಾಗಿ ನಂಬಿದ್ದರು. ಪತ್ರಿಕೆಗಳು ಮತ್ತು ಶಿಕ್ಷಣ ಸಂಸ್ಥೆಗಳ ಮೂಲಕ ಜನರ ಮನಸ್ಸನ್ನು ನಿಯಂತ್ರಿಸಿ ಸ್ವಾರ್ಥ ಸಾಧನೆ ಮಾಡುವುದನ್ನು ಅಂಬೇಡ್ಕರ್ ಉಗ್ರವಾಗಿ ವಿರೋಧಿಸಿದರು. ಜ್ಞಾನಭಂಡಾರವನ್ನು ಮುಕ್ತಗೊಳಿಸುವುದು ಮತ್ತು ತನ್ಮೂಲಕ ಸಾಮಾಜಿಕ ವಿಕಸನಕ್ಕೆ ಪೂರಕವಾದ ವಾತಾವರಣವನ್ನು ಸೃಷ್ಟಿ ಮಾಡುವುದು ಪತ್ರಿಕೆಗಳ ಸಾಮಾಜಿಕ ಹೊಣೆಗಾರಿಕೆ ಎಂದು ಅಂಬೇಡ್ಕರ್ ಪ್ರತಿಪಾದಿಸಿದರು. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರವರ ವೈಚಾರಿಕತೆ ಮತ್ತು ಪತ್ರಿಕಾ ಧರ್ಮ–ಅರಿಯುವ, ಅಭಿವ್ಯಕ್ತಪಡಿಸುವ ಮತ್ತು ವಾದಿಸುವ ಸ್ವಾತಂತ್ರ್ಯದ ಮಹತ್ವವನ್ನು ಗೌರವಿಸುವ ಎಲ್ಲರಿಗೂ ಪ್ರಸ್ತುತವೆನಿಸುತ್ತದೆ. ಪತ್ರಿಕೆಗಳು ಕೆಲವೇ ಮಂದಿ ಭ್ರಷ್ಟರು, ಜಾತೀವಾದಿಗಳು ಮತ್ತು ಜನವಿರೋಧಿ ವ್ಯಕ್ತಿಗಳ ಕೈಗೊಂಬೆಯಾಗಬಾರದು. ಪತ್ರಿಕೆಗಳು ನೈತಿಕ ನೆಲೆಗಟ್ಟಿನಲ್ಲಿ

ಕೆಲಸ ಮಾಡಬೇಕು. ಜನರ ಇಚ್ಛಾಶಕ್ತಿ, ಅಗತ್ಯಗಳು ಮತ್ತು ಆಶೋತ್ತರಗಳೊಂದಿಗೆ ಪತ್ರಿಕೆಗಳು ನಿರಂತರವಾಗಿ ಸ್ಪಂದಿಸಬೇಕು. ಇಂತಹ ಪರಿಸ್ಥಿತಿ ನಿರ್ಮಾಣವಾದಾಗಲೇ ಪ್ರಜಾಪ್ರಭುತ್ವ ವಿಕಾಸ, ಸಾರ್ವಭೌಮತ್ವ ರಕ್ಷಣೆ ಮತ್ತು ರಾಷ್ಟ್ರೀಯ ಪ್ರಗತಿ ಸಾಧ್ಯವಾಗುತ್ತದೆ. ಇದೇ ಅಂಬೇಡ್ಕರ್ ಅವರ ಪತ್ರಿಕಾ ಧರ್ಮ ಮತ್ತು ದೃಷ್ಟಿಕೋನ.

ಅಡಿಟಿಪ್ಪಣಿ

೧. ಇನಾಂದಾರ್ ವಿ. ಎಂ. (೧೯೮೫) "ಡಾ. ಅಂಬೇಡ್ಕರ್—ವ್ಯಕ್ತಿ ಮತ್ತು ವಿಚಾರ", ಉಷಾ ಸಾಹಿತ್ಯ ಮಾಲೆ, ಮೈಸೂರು, ಪುಟ ಸಂಖ್ಯೆ–೪೩.
೨. ಇನಾಂದಾರ್ ವಿ. ಎಂ. (೧೯೮೫) –ಅದೇ–, ಪುಟ ಸಂಖ್ಯೆ–೪೩.
೩. ಧನಂಜಯ ಕೀರ್ (೧೯೫೪) "ಡಾ. ಬಿ. ಆರ್. ಅಂಬೇಡ್ಕರ್ : ಲೈಫ್ ಅಂಡ್ ಮಿಷನ್" ಪಾಪ್ಯುಲರ್ ಪ್ರಕಾಶನ, ಬೊಂಬಾಯಿ, ಪುಟ ಸಂಖ್ಯೆ–೪೧.
೪. ಧನಂಜಯ ಕೀರ್ (೧೯೫೪) –ಅದೇ–, ಪುಟ ಸಂಖ್ಯೆ–೪೨.
೫. ಇನಾಂದಾರ್ ವಿ. ಎಂ. (೧೯೮೫) ಪೂ ರ್ವೋ ಕ್ತ, ಪುಟ ಸಂಖ್ಯೆ–೪೪.
೬. ಇನಾಂದಾರ್ ವಿ. ಎಂ. (೧೯೮೫) –ಅದೇ–, ಪುಟ ಸಂಖ್ಯೆ–೫೭.
೭. ಧನಂಜಯ ಕೀರ್ (೧೯೫೪) ಪೂ ರ್ವೋ ಕ್ತ, ಪುಟ ಸಂಖ್ಯೆ–೮೦.
೮. ಸಂಪಾದಕೀಯ, ಬಹಿಷ್ಕೃತ ಭಾರತ, ದಿನಾಂಕ ಜೂನ್ ೨೯, ೧೯೨೭.
೯. ದೇ. ಜವರೇಗೌಡ (೧೯೫೪) "ಕ್ರಾಂತಿಕಾರಿ ಅಂಬೇಡ್ಕರ್ (ಸಂಕ್ಷಿಪ್ತ ಆವೃತ್ತಿ) ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು–೫೬, ಪುಟ ಸಂಖ್ಯೆ ೬೨–೬೩.
೧೦. ಧನಂಜಯ ಕೀರ್ (೧೯೫೪) ಪೂ ರ್ವೋ ಕ್ತ, ಪುಟ ಸಂಖ್ಯೆ–೮೨.
೧೧. ಧನಂಜಯ ಕೀರ್ –ಅದೇ–, ಪುಟ ಸಂಖ್ಯೆ–೯೦.
೧೨. ಧನಂಜಯ ಕೀರ್ (೧೯೫೪) –ಅದೇ–, ಪುಟ ಸಂಖ್ಯೆ–೯೩.
೧೩. ದೇ. ಜವರೇಗೌಡ (೧೯೮೪) ಪೂ ರ್ವೋ ಕ್ತ, ಪುಟ ಸಂಖ್ಯೆ–೮೧.
೧೪. ಇನಾಂದಾರ್ ವಿ. ಎಂ. (೧೯೮೫) ಪೂ ರ್ವೋ ಕ್ತ, ಪುಟ ಸಂಖ್ಯೆ–೭೯.
೧೫. ದೇ. ಜವರೇಗೌಡ (೧೯೮೪) ಪೂ ರ್ವೋ ಕ್ತ, ಪುಟ ಸಂಖ್ಯೆ–೧೨೫.
೧೬. ದೇ. ಜವರೇಗೌಡ (೧೯೮೪) , –ಅದೇ–ಪುಟ ಸಂಖ್ಯೆ–೧೩೯, ೧೪೦.
೧೭. ವಿ. ಲಕ್ಷ್ಮೀನಾರಾಯಣ (೧೯೮೧) "ಬಿ ಆರ್. ಅಂಬೇಡ್ಕರ್‌ರವರ ರಾಜಕೀಯ ವಿಚಾರ ಧಾರೆ: ಒಂದು ಅಧ್ಯಯನ", ಅಂಬೇಡ್ಕರ್ : ಒಂದು ಅಧ್ಯಯನ, ಕರ್ನಾಟಕ ಅಧ್ಯಯನ ವೇದಿಕೆ, ಶಿವಮೊಗ್ಗ, ಪುಟ ಸಂಚ್ಯೆ–೫.
೧೮. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್ : ಒಂದು ಅಧ್ಯಯನ –ಅದೇ–, ಪುಟ ಸಂಖ್ಯೆ–೪, ೫.
೧೯. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್ : ಒಂದು ಅಧ್ಯಯನ –ಅದೇ– ಪುಟ ಸಂಖ್ಯೆ–೫
೨೦. ಡಾ. ಬಿ. ಆರ್ ಅಂಬೇಡ್ಕರ್ "ಸಮಗ್ರ ಹಿಂದೂ ಕಾನೂನು ಮಸೂದೆ" ಕುರಿತಂತೆ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ ಬಳಿಕ ನೀಡಿದ ಪತ್ರಿಕಾ ಹೇಳಿಕೆ.
೨೧. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್ : ಒಂದು ಅಧ್ಯಯನ. –ಅದೇ–, ಪುಟ ಸಂಖ್ಯೆ–೯.

೨೨. "ಡಾ. ಬಿ. ಆರ್. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು", ಸಂಪುಟ ೧ ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಬೊಂಬಾಯಿ, ಪುಟ ಸಂಖ್ಯೆ–

೨೩. ೧೯೩೬ನೇ ಇಸವಿ ಮೇ ತಿಂಗಳಿನಲ್ಲಿ ದಾದರ್‌ನಲ್ಲಿ ನಡೆದ ಮಹರ್ ಸಮ್ಮೇಳನದಲ್ಲಿ ಅಂಬೇಡ್ಕರ್ ಮಾಡಿದ ಭಾಷಣ.

೨೪. ಒಡೆಯರ್. ಡಿ. ಹೆಗ್ಗಡೆ (   ) "ಅಂಬೇಡ್ಕರ್ ಜೀವನ ಮತ್ತು ವಿಚಾರಧಾರೆ", –ಅದೇ–, ಪುಟ ಸಂಖ್ಯೆ–೬೭.

೨೫. ದೇ. ಜವರೇಗೌಡ (೧೯೮೪) ಪೂರ್ವೋಕ್ತ, ಪುಟ ಸಂಖ್ಯೆ–೧೨೬.

೨೬. ದೇ. ಜವರೇಗೌಡ (೧೯೮೪) –ಅದೇ–, ಪುಟ ಸಂಖ್ಯೆ–೧೩೭.

೨೭. ದೇ. ಜವರೇಗೌಡ (೧೯೮೪) –ಅದೇ–, ಪುಟ ಸಂಖ್ಯೆ–೫೪.

೨೮. ಹನುಮಂತ (೧೯೮೧) "ಅಂಬೇಡ್ಕರ್ ಮತ್ತು ಸಮಾಜವಾದ", ಅಂಬೇಡ್ಕರ್ : ಒಂದು ಅಧ್ಯಯನ –ಅದೇ–, ಪುಟ ಸಂಖ್ಯೆ–೪, ೫.

೨೯. ೧೯೪೩ನೇ ಇಸವಿ ಜನವರಿ ತಿಂಗಳಲ್ಲಿ ಪುಣೆ ನಗರದಲ್ಲಿ ರಾನಡೆಯವರ ಜನ್ಮದಿನೋತ್ಸವ ಸಂದರ್ಭದಲ್ಲಿ ಅಂಬೇಡ್ಕರ್ ಮಾಡಿದ ಭಾಷಣ.

೩೦. "ರಾನಡೆ, ಗಾಂಧಿ ಮತ್ತು ಜಿನ್ನಾ 'ಗ್ರಂಥದ ಮುನ್ನುಡಿ' ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಸಂಪುಟ ೧, ಶಿಕ್ಷಣ ಇಲಾಖೆ, ಮಹಾರಾಷ್ಟ್ರ ರಾಜ್ಯ ಸರ್ಕಾರ, ಬೊಂಬಾಯಿ, ಪುಟ ಸಂಖ್ಯೆ–೨೦೮, ೨೦೯.

೩೧. "ಅಂಬೇಡ್ಕರ್ ನುಡಿ", ದಲಿತ ವಾಯ್ಸ್, ಜನವರಿ ೧೬–೩೧, ೧೯೮೭, ಸಂಪುಟ ೬, ಸಂಖ್ಯೆ ೫. ದಲಿತ ಸಾಹಿತ್ಯ ಅಕಾಡೆಮಿ. ಬೆಂಗಳೂರು. ಪುಟ ಸಂಖ್ಯೆ–೬.

ಡಾ. ಕೆ. ಚಂದ್ರಶೇಖರ್

ಕೆಂಗಲ್ ಹನುಮಂತಯ್ಯನವರ ರಾಜಕೀಯ ಜೀವನ ಮತ್ತು ಸಾಧನೆ

ಕರ್ನಾಟಕ ರಾಜಕೀಯ ಇತಿಹಾಸ ವೈವಿಧ್ಯಮಯವೂ, ವರ್ಣರಂಜಿತವೂ ಆಗಿದೆ. ಆ ಕುರಿತ ಸಂಶೋಧನ ಚಟುವಟಿಕೆಗಳು ನಡೆಯುತ್ತಿದ್ದರೂ, ಅವರ ಅಗಾಧತೆಯ ಐತಿಹಾಸಿಕ ಸಂಗತಿಗಳ ಸೂಕ್ಷ್ಮ ಎಳೆಗಳನ್ನು ಪರಿಶೋಧಿಸುವ ಕೆಲಸ ಇನ್ನು ನಡೆಯಬೇಕಿದೆ. ಸಮಕಾಲೀನ ರಾಜಕೀಯಕ್ಕೆ ಹೊಂದಿಕೊಂಡ ಇತಿಹಾಸದ ಘಟನೆಗಳು ಸಂಬಂಧಪಟ್ಟ ಪಾತ್ರಗಳು ನಮಗೆ ದೊರಕುವುದು ಅಪರೂಪವಾಗಿದ್ದರೂ ಅವುಗಳನ್ನು ಪರಿಶೋಧಿಸುವುದು ಕಷ್ಟ ಸಾಧ್ಯ. ಭಾರತದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯದಂಥ ಆಳ್ವಿಕೆಯನ್ನೊಳಗೊಂಡು ಉಜ್ವಲ ಪರಂಪರೆಯಿಂದ ಮೆರೆದ ನಾಡು ಕರ್ನಾಟಕವಾಗಿದೆ. ಅದರ ಸಂಸ್ಕೃತಿಯ ಕೀರ್ತಿ ವಿಶ್ವ ವ್ಯಾಪ್ತಿ. ಅದನ್ನು ಆಳಿದ ಅರಸರ, ದಿವಾನರ ಮಂತ್ರಿಗಳ ಕಾಲದಲ್ಲಿ ಜನರ ಜೀವನ ನೆಮ್ಮದಿಯಿಂದ ಕೂಡಿತ್ತು. ಕಲೆ, ಸಾಹಿತ್ಯ ಸಂಸ್ಕೃತಿಯ ಆಗರವಾಗಿತ್ತು. ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೈಸೂರು ರಾಜ್ಯದ ಕೊಡುಗೆ ಮಹತ್ವವಾದುದು. ಅಂದಿನ ಮೈಸೂರು ಸಂಸ್ಥಾನದ ರಾಜಧಾನಿ ಬೆಂಗಳೂರು. ಅವರ ಸಂಸ್ಥಾಪಕರಾದ ಕೆಂಪೇಗೌಡರ ಕಾಲದಿಂದಲೂ ಉದ್ಯಾನನಗರ ಎಂದು ಕೀರ್ತಿ ಹೊಂದಿತು. ಈ ಉದ್ಯಾನನಗರದ ಮಧ್ಯೆ ಭವ್ಯವಾಗಿ ನಿಂತಿರುವ ಪ್ರತಿಮೆ ವಿಧಾನಸೌದ. ಈ ವಿಧಾನಸೌಧವು ನಾಡಿನ ಆಡಳಿತದ ಅಗತ್ಯಕ್ಕೆ ಅನುಗುಣವಾಗಿ ಸೌಂದರ್ಯ ಹೊಂದಿದ ವಾಸ್ತುಶಿಲ್ಪ. ಇದು ಇಪ್ಪತ್ತನೆಯ ಶತಮಾನದ ಕರ್ನಾಟಕ ಸಂಸ್ಕೃತಿಯ ಬಂಗಾರದ ಅಧ್ಯಾಯ. ಕನ್ನಡ ನಾಡಿನ ಅಭೂತಪೂರ್ವ ಕಲಾ ಪರಂಪರೆಯನ್ನು, ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಪ್ರತಿಬಿಂಬಿಸುವ ಸುಂದರ ನಿರ್ಮಾಣವಾಗಿದೆ. ಜೊತೆಗೆ ಇದು ಕೆಂಗಲ್ ಹನುಮಂತಯ್ಯನವರ ಬಾಳಿನ ಮಹಾಕಾವ್ಯ. ಹನುಮಂತಯ್ಯನವರ ಬದುಕಿನ ಕಿರೀಟಪ್ರಾಯವಾದ ಸಾಧನ ಈ ವಿಧಾನಸೌಧ. ವಿಧಾನಸೌಧವು ಸೌಂದರ್ಯ ಕಲೆ, ಸಂಸ್ಕೃತಿಯ ಸಂಗಮವಾಗಿದೆ. ಇಂಥ ಅಪೂರ್ವ ಮಹೋನ್ನತ ಕಲಾಸೌಧದ ನಿರ್ಮಾಣಕ್ಕೆ ಚೈತನ್ಯ ಪುರುಷರಾಗಿ ನಿಂತವರು ಕೆಂಗಲ್ ಹನುಮಂತಯ್ಯನವರು. ಅದು ಅವರ ಮಾನಸ ಶಿಶು; ಹನುಮಂತಯ್ಯನವರ

ಹೆಸರನ್ನು ಇತಿಹಾಸದಲ್ಲಿ ಶಾಶ್ವತವಾಗಿ ಸ್ಮರಣಯೋಗ್ಯವಾಗಿಸಿರುವ ಪ್ರಯತ್ನ ಇದಾಗಿದೆ.

ಅತಿ ಗಂಬೀರವಾಗಿ ಸದೃಢವಾಗಿ ಚಾಣಕ್ಯನೋಪಾಧಿಯಲ್ಲಿ ಮೆರೆದ ಪ್ರಮುಖ ರಾಜಕೀಯ ಆಡಳಿತದ ಇತಿಹಾಸ ಪುರುಷರಲ್ಲಿ ಕೆಂಗಲ್ ಹನುಮಂತಯ್ಯನವರು ಪ್ರಮುಖರು. ಕೆಂಗಲ್‌ರ ವ್ಯಕ್ತಿತ್ವ ರಾಜಕೀಯ ಹಾಗೂ ಆಡಳಿತ ಸಂಧಾರಣೆ ಕರ್ನಾಟಕ ಇತಿಹಾಸದ ಒಂದು ಮೈಲಿಗಲ್ಲು. ಕರ್ನಾಟಕದ ಇತಿಹಾಸದಲ್ಲಿ ಕರ್ನಾಟಕದ ದಿಕ್ಕನ್ನು ನಿರ್ಧರಿಸಿದ ದಿನಗಳಲ್ಲಿ ಇಂತಹ ಒಬ್ಬ ಆಡಳಿತ ತಜ್ಞ, ಸಂವಿಧಾನ ನಿರ್ಮಾಪಕ, ರಾಜಕೀಯ ಧುರೀಣರ ಬಗ್ಗೆ ಇದುವರೆವಿಗೂ ಒಂದು ಸಮಗ್ರ ಸಂಶೋಧನಾತ್ಮಕ ಗ್ರಂಥ ಪ್ರಕಟವಾಗದಿರುವುದು ಆಶ್ಚರ್ಯದ ಸಂಗತಿ. ಸಾರ್ವಜನಿಕರ ಜೀವನವನ್ನು ಹಸನಾಗೊಳಿಸುವ ಜವಾಬ್ದಾರಿ ಹೊತ್ತ ಪ್ರಭಾವಿ ವ್ಯಕ್ತಿಗಳ ಜೀವನ ಆಯಾಕಾಲದ ಚರಿತ್ರೆಯೊಂದಿಗೆ ಬೆರತು ಹೋಗಿರುತ್ತದೆ. ಇಂಥ ಮಹಾವ್ಯಕ್ತಿಗಳ ಶ್ರೇಣಿಯಲ್ಲಿ ಒಬ್ಬರಾದ ಕೆಂಗಲ್‌ರ ಸಂಧಾರಿತ ಆಡಳಿತದ ವಿಚಾರಧಾರೆಯ ಕಡೆಗೆ ಬುದ್ಧಿಜೀವಿ ವರ್ಗ ಅವರಲ್ಲೂ ವಿಶೇಷವಾಗಿ ರಾಜಕೀಯ ತಜ್ಞರು ಹೆಚ್ಚು ಗಮನ ನೀಡಲಿಲ್ಲ. ಕೆಂಗಲ್‌ರ ಆಡಳಿತದ ಜೀವನದ ಪ್ರಮುಖ ಘಟನೆಗಳನ್ನು ಕುರಿತು ಸ್ಪಷ್ಟ, ನಿಷ್ಪಕ್ಷಪಾತ ವೈಜ್ಞಾನಿಕ ಹಾಗೂ ವಿಮರ್ಶಾತ್ಮಕ ಅಧ್ಯಯನ ನಡೆದಿಲ್ಲ. ಈ ಬಗೆಯ ಸಂಶೋಧನಾತ್ಮಕ ಅಧ್ಯಯನದಿಂದ ಮಾತ್ರ ರಾಜಕೀಯ ಇತಿಹಾಸದ ಹೆಜ್ಜೆಗಳನ್ನು ತಿಳಿಯಲು ಸಾಧ್ಯ. ಇದರಿಂದ ಅನೇಕ ಪಾಠಗಳನ್ನು ಕಲಿಯುವ ಸಾಧ್ಯತೆ ಇದ್ದರೂ ಅಧ್ಯಯನದ ಗೋಜಿಗೆ ಹೋಗದಿರುವುದು ಇಂದಿನ ಅನೇಕ ಸಾಮಾಜಿಕ ಪಿಡುಗುಗಳಿಗೆ ಕಾರಣ. ಸ್ವಾತಂತ್ರ್ಯ ಪಡೆದು ಐವತ್ತು ವರ್ಷಗಳಾಗಿದ್ದರೂ ನಿರಾಶೆಯ ಧ್ವನಿ ಕೇಳುವ ದುರ್ಗತಿಗೆ ನಾವು ಬಂದಿದ್ದೇವೆ. ಅಸಮರ್ಥರು ಅನರ್ಹರು ಅಧಿಕಾರದಲ್ಲಿ ಕುಳಿತು ಬೊಬ್ಬೆ ಎಬ್ಬಿಸಿದ್ದಾರೆ. ಸ್ವಾರ್ಥ ಮತ್ತು ಸಮಯ ಸಾಧಕತನವೇ ರಾಷ್ಟ್ರದ ಚರಿತ್ರೆಗಳೆನಿಸಿದೆ. ಭ್ರಷ್ಟಾಚಾರ, ಲಂಚಗುಳಿತನ, ಜಾತೀಯತೆ ಪ್ರಮುಖವಾಗಿದೆ. ಮಹಾತ್ಮರ ನಂತರ ರಾಷ್ಟ್ರ ಅನಾಯಕತ್ವಕ್ಕೆ ಗುರಿಯಾಗಿದೆ ದುರ್ಬಲ ರಾಜಕೀಯ ವ್ಯಕ್ತಿತ್ವಗಳು ಯಾವುದೇ ಗಣನೀಯ ಸಾಮಾಜಿಕ ಪರಿಣಾಮಗಳನ್ನು, ರಾಜಕೀಯ ಪರಿವರ್ತನೆಗಳನ್ನು ತರಲು ಸಾಧ್ಯವಿಲ್ಲ. ಸ್ವಾರ್ಥ ರಾಜಕಾರಣಿಗಳಿಂದ ಜನರ ಜೀವನ ದಾರಿ ತಪ್ಪಿದೆ. ಇದಕ್ಕೆ ಸಾಕಷ್ಟು ಕಾರಣಗಳಿವೆ. ಜನಸಾಮಾನ್ಯರಿಗೆ ತಮ್ಮ ಬಲದ ಅರಿವಿಲ್ಲದಿರುವುದು, ರಾಜಕೀಯ ಪ್ರಜ್ಞೆಯ ಕೊರತೆ, ಅನಕ್ಷರತೆ ಈ ಜನರ ಅಜ್ಞಾನ ಇಂದಿನ ದುಸ್ಥಿತಿಗೆ ಕಾರಣವಾಗಿದೆ. ಈ ಜನರ ಅಜ್ಞಾನದ ಲಾಭ ಪಡೆವ ರಾಜಕಾರಣಿಗಳು ತಮ್ಮ ಉದ್ಧಾರವೇ ರಾಷ್ಟ್ರದ ಉದ್ಧಾರವೆಂದು ಭಾವಿಸಿರುವುದು, ಇವೆಲ್ಲವನ್ನೂ ವೀಕ್ಷಿಸಿ ಬುದ್ಧಿಜೀವಿಗಳು ಮೌನವ್ರತ ತಾಳಿರುವುದು, ರಾಜಕೀಯ ವಿಪ್ಲವತೆಗೆ ಕಾರಣವಾಗಿದೆ. ಇಂತಹ ವಿವೇಚನಾ ವಿಚಾರಹೀನ ಪರಿಸರದಲ್ಲಿ ನವಪೀಳಿಗೆಯಲ್ಲಿ ಶ್ರೇಷ್ಠ ನಾಯಕತ್ವ ಹೇಗೆ ರೂಪುಗೊಳ್ಳುತ್ತದೆ ? ಮುತ್ಸದ್ದಿತನ ಕ್ರಿಯಾಶೀಲತೆ, ಜವಾಬ್ದಾರಿ ಹೇಗೆ

ಮಹತ್ವಾಕಾಂಕ್ಷೆ ಅವರನ್ನು ಅವಿಶ್ರಾಂತ ನಾಯಕರನ್ನಾಗಿ ಮಾಡಿತು. ೧೯೫೦ ರಲ್ಲಿ ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ೧೯೫೨ರಲ್ಲಿ ಮೈಸೂರು ವಿಧಾನ ಸಭೆಯ ಸದಸ್ಯರಾದರು. ಹಾಗೂ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತ ರಾದರು. ಅನಂತರ ಇವರೇ ಮೈಸೂರು ರಾಜ್ಯದ ಮೊಟ್ಟ ಮೊದಲಿನ ಚುನಾಯಿತ ಮುಖ್ಯ ಮಂತ್ರಿಯಾಗಿ ಮಾರ್ಚ್ ೧೯೫೨ ರಿಂದ ಆಗಸ್ಟ್ ೧೯೫೬ ರವರೆಗೆ ಕೆಲಸ ಮಾಡಿದರು.

ಕರ್ನಾಟಕದ ಏಕೀಕರಣದಲ್ಲಿ ಹನುಮಂತಯ್ಯನವರ ಪಾತ್ರ

ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ ನಾಯಕರಲ್ಲಿ ಕೆಂಗಲ್ ಹನುಮಂತಯ್ಯ ನವರು ಅದ್ವಿತೀಯ ಸ್ಥಾನ ಹೊಂದಿದ್ದಾರೆ. ಈ ಸಂದರ್ಭದಲ್ಲಿ ಅವರ ರಾಜಕೀಯ ನೈಪುಣ್ಯತೆ, ಧುರೀಣತ್ವ, ಮುಂದಾಲೋಚನೆ ಶ್ಲಾಘನೀಯವಾದದ್ದು. ಸ್ವಾತಂತ್ರ್ಯ ನಂತರ ಭಾರತದ ವಿವಿಧ ಭಾಗಗಳ ಜನರು ಭಾಷೆ, ಆಡಳಿತ ಮತ್ತು ಪ್ರಾಂತ್ಯದ ಆಧಾರದ ಮೇಲೆ ರಾಜ್ಯಗಳನ್ನು ಪುನರ್ವಿಂಗಡಿಸಬೇಕೆಂಬ ಬೇಡಿಕೆ ಕಂಡು ಬಂದಿತು. ಕರ್ನಾಟಕದ ಅನೇಕ ರಾಜಕಾರಣಿಗಳು, ಭಾಷಾಪ್ರೇಮಿಗಳು ವಿಶಾಲ ಕರ್ನಾಟಕ ರಚಿಸ ಬೇಕೆಂದು ಕೇಂದ್ರಸರ್ಕಾರಕ್ಕೆ ಮನವಿ ಸಲ್ಲಿಸಿದರು. ಆದರೆ ಕೇಂದ್ರಸರ್ಕಾರ ಇದರ ಬಗ್ಗೆ ಯಾವುದೇ ಖಚಿತವಾದ ಧೋರಣೆಯನ್ನು ಜಾರಿಗೆ ತರಲಿಲ್ಲ. ಈ ಪರಿಸ್ಥಿತಿಯಲ್ಲಿ ೧೯೫೩ರಲ್ಲಿ ಹೈದರಾಬಾದ್‌ನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಕೆಂಗಲ್ ಹನುಮಂತಯ್ಯನವರು "ಕರ್ನಾಟಕ ಏಕೀಕರಣ"ವನ್ನು ಬೆಂಬಲಿಸಿ ಭಾಷಣ ಮಾಡಿದರು. ಹಾಗೂ ಅತಿ ಸಮರ್ಥ ರೀತಿಯಲ್ಲಿ ಭಾಷಾನ್ವಯ ರಾಜ್ಯಗಳ ಅವಶ್ಯಕತೆ ಯನ್ನು ಪ್ರತಿಪಾದಿಸಿದರೆಂಬುವುದು ಉಲ್ಲೇಖನೀಯ ಅಂಶವಾಗಿದೆ.[2] ಸಾಂಸ್ಕೃತಿಕವಾಗಿ ಹಾಗೂ ಭಾಷಾದೃಷ್ಟಿಯಿಂದ ಏಕರೂಪವಾಗಿರುವ, ಆರ್ಥಿಕವಾಗಿ ಸ್ವಯಂಪೂರ್ಣ ವಾಗಿರುವ ಭೌಗೋಳಿಕವಾಗಿ ಸಾಮೀಪ್ಯತೆಯನ್ನು ಹೊಂದಿರುವ ಪ್ರದೇಶಗಳು ಆಡಳಿತ ಘಟಕಗಳಾಗುವಂತೆ ರಾಜ್ಯಗಳನ್ನು ಪುನರ್‌ಸಂಘಟಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಮೈಸೂರು ರಾಜ್ಯದಲ್ಲಿ ಅದಕ್ಕೆ ಹೊಂದಿಕೊಂಡಂತೆ, ಮುಂಬೈ, ಮದ್ರಾಸ್ ಕೊಡಗು ರಾಜ್ಯಗಳ ಕನ್ನಡ ಪ್ರದೇಶಗಳನ್ನು ಸೇರಿಸುವುದರಿಂದ ಕರ್ನಾಟಕ ರಾಜ್ಯವನ್ನು ನಿರ್ಮಿಸಬಹುದೆಂದು ಹೇಳಿದರು.[3] ಈ ವೇಳೆಯಲ್ಲಿಯೇ ಹಲವು ರಾಜಕೀಯ ಮುಖಂಡರುಗಳಲ್ಲಿ ತೀವ್ರವಾದ ವಿರೋಧಗಳು, ಭಿನ್ನಾಭಿಪ್ರಾಯಗಳು ಕಂಡುಬಂದವು. ಇದಕ್ಕೆ ಪ್ರಮುಖ ಕಾರಣ ಹಳೇ ಮೈಸೂರು ಪ್ರಾಂತ್ಯವನ್ನು ಹೊರತುಪಡಿಸಿ ಉಳಿದ ಕನ್ನಡದ ಪ್ರದೇಶಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದೆ. ಈ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಅಗಾಧ ಹಣ ವೆಚ್ಚ ಮಾಡಬೇಕಾಗಿರುವುದರಿಂದ ಹಳೆ ಮೈಸೂರಿನ ಅಭಿವೃದ್ಧಿಕಾರ್ಯಗಳು ಕುಂಠಿತಗೊಳ್ಳುತ್ತವೆ. ಹಾಗೂ ಪ್ರಾಂತ್ಯ ಆರ್ಥಿಕವಾಗಿ ಸ್ವಾವಲಂಬಿಯಾಗಲಾರದು ಎಂಬುದಾಗಿದ್ದಿತು. ಆದರೆ ಈ ಬಗ್ಗೆ

ಮುಖ್ಯಮಂತ್ರಿ ಹನುಮಂತಯ್ಯನವರ ಸರ್ಕಾರದಿಂದ ನೇಮಿಸಲ್ಪಟ್ಟ ಶೇಷಾದ್ರಿ ಸಮಿತಿ ಹಲವು ವಿಷಯಗಳನ್ನು ಪರಿಶೀಲಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಏಕೀಕರಣದಿಂದಾಗಿ ಆರ್ಥಿಕವಾಗಿ ಹಳೇ ಮೈಸೂರಿಗೆ ಹೊರೆ ಹೆಚ್ಚುತ್ತದೆ. ಇತರ ಭಾಗಗಳ ಸಂಪತ್ತು ಎಷ್ಟು? 'ಏಕೀಕರಣದಿಂದ ಸಮಗ್ರ ಕನ್ನಡ ನಾಡಿನ ಏಳಿಗೆಯಾಗುತ್ತಿದೆಯೇ'? ಇತ್ಯಾದಿ ಅಂಶಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿತು. ಹಳೆಯ ಮೈಸೂರಿಗೆ ಆರ್ಥಿಕ ಹೊರೆ ಏನೂ ಹೆಚ್ಚಾಗುವುದಿಲ್ಲವೆಂದೂ ಹೊಸದಾಗಿ ಸೇರುವ ಭಾಗಗಳ ಸಂಪನ್ಮೂಲಗಳಿಂದ, ನದಿಗಳಿಂದ ಉತ್ಪನ್ನವಾಗಬಹುದಾದ ನೀರಾವರಿ ಸೌಲಭ್ಯ, ವಿದ್ಯುತ್ ಸೌಲಭ್ಯ ಹೆಚ್ಚಾಗಿ ದೊರಕುವ ಭೂಭಾಗ, ಇವುಗಳೆಲ್ಲದರಿಂದ ಒಟ್ಟು ಪ್ರಾಂತ್ಯವು ಆರ್ಥಿಕವಾಗಿ ಸ್ವಾವಲಂಬಿಯಾಗಬಲ್ಲದೆಂದು ತಿಳಿಸಿತು. ನಂತರ ಮೈಸೂರು ವಿಧಾನಸಭೆಯಲ್ಲಿ ೧೯೫೩ರ ಏಪ್ರಿಲ್ ೩ನೇ ತಾರೀಖು ರಾಜ್ಯ ಪುನರ್ ವಿಂಗಡಣಾ ಮಸೂದೆಯನ್ನು ಮಂಡಿಸಿ ಕರ್ನಾಟಕದ ಇತಿಹಾಸ ಮತ್ತು ಅದರ ಮಹತ್ವವನ್ನು ವಿಧಾನಸಭೆಯ ಸದಸ್ಯರಿಗೆ ಮನವರಿಕೆ ಮಾಡಿಕೊಟ್ಟು ಎಲ್ಲಾ ವರ್ಗಗಳ ಮನವೊಲಿಸಿ ಸುದೀರ್ಘ ಭಾಷಣ ಮಾಡಿದರು. ಹಾಗೂ ಶಾಸಕಾಂಗದ ಉಭಯ ಸದನಗಳ ಒಪ್ಪಿಗೆಯನ್ನು ಪಡೆಯುವಲ್ಲಿ ಯಶಸ್ವಿಯಾದರು. ಈ ಕಾರಣದಿಂದಾಗಿಯೇ ಏಕೀಕರಣದ ಬಗ್ಗೆ ಕೆಲವು ನಾಯಕರಲ್ಲಿ ತೀವ್ರವಾದ ಅತೃಪ್ತಿ, ಸಿಟ್ಟು, ಅಸಹನೆ ಉಂಟಾಗಿ ಅಂತಿಮವಾಗಿ ಹನುಮಂತಯ್ಯನವರು ಮುಖ್ಯಮಂತ್ರಿ ಸ್ಥಾನವನ್ನು ತ್ಯಜಿಸಬೇಕಾಯಿತು.

ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಹನುಮಂತಯ್ಯನವರ ಪಾತ್ರ

ಮೈಸೂರು ರಾಜ್ಯದ ಮೊಟ್ಟಮೊದಲ ಚುನಾಯಿತ ಮುಖ್ಯಮಂತ್ರಿಯಾಗಿ ಕೆಂಗಲ್ ಹನುಮಂತಯ್ಯನವರು ಮಾರ್ಚ್ ೧೯೫೨ರಂದು ನೇಮಕಗೊಂಡರು. ಇವರು ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ ಕಾಲವನ್ನು ಕರ್ನಾಟಕದ ಇತಿಹಾಸದ ಸುವರ್ಣಾಕ್ಷರದಲ್ಲಿ ಬರೆದಿಡಬೇಕು. ಹನುಮಂತಯ್ಯನವರಿಗೆ ಮುಖ್ಯಮಂತ್ರಿ ಪದವಿಯಿಂದ ಗೌರವ ಬರಲಿಲ್ಲ. ಬದಲಾಗಿ ಅವರ ವ್ಯಕ್ತಿತ್ವ, ಘನತೆ, ಗಾಂಭೀರ್ಯದಿಂದ ಮುಖ್ಯಮಂತ್ರಿ ಪದವಿಗೆ ಗೌರವ ಬಂದಿತು.

ಕರ್ನಾಟಕ ರಾಜ್ಯ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಸ್ಕೃತಿಗಳ ತವರು. ಕರ್ನಾಟಕವು ಭಾರತದ ಇತಿಹಾಸಕ್ಕೆ ಚಿರಸ್ಮರಣೀಯವಾದಂತಹ ಕೊಡುಗೆಗಳನ್ನು ಕೊಟ್ಟಿದೆ. ಈ ಕರ್ನಾಟಕದ ಭವ್ಯ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ಶತಶತಮಾನಗಳಿಂದ ಬೆಳೆದು ಬಂದಿರುವ ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ರಕ್ಷಿಸಿ ಪ್ರೋತ್ಸಾಹಿಸಿ ಕಾಪಾಡಿಕೊಂಡು ಬರಲು ೧೯೫೪ರಲ್ಲಿ ರಾಷ್ಟ್ರದಲ್ಲಿಯೇ ಪ್ರಪ್ರಥಮ ಬಾರಿಗೆ "ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆಯನ್ನು" ಕರ್ನಾಟಕದಲ್ಲಿ ಸ್ಥಾಪಿಸಿದರು. ಒಳ್ಳೆಯ ಉಡುಪಿ

ನಿಂದ ದೇಹವನ್ನು ಅಲಂಕಾರ ಮಾಡಿಕೊಳ್ಳುವಂತೆ ಉತ್ತಮ ಸಾಹಿತ್ಯ ಅಧ್ಯಯನದಿಂದ ಆತ್ಮವನ್ನು ಸುಂದರಗೊಳಿಸಬಹುದು. ಇಂದು ನಾವೆಲ್ಲ ಯಾವ ಭ್ರಷ್ಟಾಚಾರದ ನಿರ್ಮೂಲನೆ, ದರೋಡೆ, ಕಾಳಸಂತೆ, ಅಪ್ರಾಮಾಣಿಕತೆ ನಿರ್ಮೂಲನ, ಪರಿಶುದ್ಧ ಜೀವನಕ್ಕಾಗಿ ಮತ್ತೆ ಪಣತೊಟ್ಟು ಹೋರಾಡಬೇಕೆಂದು ಕೇಳುತ್ತಿರುವೆವೋ ಆ ಧ್ಯೇಯಗಳಿಂದಲೇ ಹನುಮಂತಯ್ಯನವರು ಸಾರ್ವಜನಿಕ ಜೀವನವನ್ನು ಶುದ್ಧೀಕರಿಸಲು "ಸಂಸ್ಕೃತಿ" ಪ್ರಚಾರವನ್ನು ಆರಂಭಿಸಿದರು. ಅದು ಆ ಧ್ಯೇಯಗಳಿಂದ ನೈಜವಾಗಿ ಅಥವಾ ಪ್ರಾಯೋಜಿಕವಾಗಿ ಕೆಲಸ ಮಾಡಿದ್ದರೆ ಜನತೆಯು ನೈತಿಕ ಮೌಲ್ಯದ ಅಧಃಪತನ ಇಷ್ಟು ಕೆಳಮಟ್ಟಕ್ಕೆ ಇಳಿಯುತ್ತಿರಲಿಲ್ಲ. ಸರ್ಕಾರದ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ಅನೇಕ ಯೋಜನೆಗಳನ್ನು ಹಾಕಿಕೊಂಡಿತು. ಪ್ರಥಮವಾಗಿ ಸಮಾಜದ ಮೇಲೆ ದೀರ್ಘಕಾಲ ಪ್ರಭಾವ ಬೀರಬಹುದಾದ ಪುಸ್ತಕಗಳನ್ನು ಪ್ರಕಟಿಸುವುದು. ಅವುಗಳಿಂದಲೇ ಪ್ರಸಿದ್ಧವಾದ ಹಳೆಗನ್ನಡ, ನಡುಗನ್ನಡ ಕಾವ್ಯಗಳ ಪುನರ್ ಮುದ್ರಣ, ರಾಮಾಯಣ, ಮಹಾಭಾರತಗಳಂತಹ ಪುರಾತನ ಗ್ರಂಥಗಳನ್ನು ಅನುವಾದ ಮಾಡಿಸಿ ಅಗ್ಗದ ಬೆಲೆಗೆ ಜನ ಸಾಮಾನ್ಯರಿಗೆ ದೊರಕುವಂತೆ ಮಾಡಿದರು. ಈ ಯೋಜನೆಯಲ್ಲಿ ಪ್ರಕಟವಾದ "ಗದುಗಿನ ಭಾರತ" ಮತ್ತು "ಹರಿಶ್ಚಂದ್ರ ಕಾವ್ಯಗಳು" ಲಕ್ಷಗಟ್ಟಲೆ ಮಾರಾಟವಾದವು.

ಎರಡನೆಯದಾಗಿ ಕನ್ನಡಕ್ಕೊಂದು ವಿಶ್ವಕೋಶವನ್ನು ತಯಾರಿಸುವ ಯೋಜನೆ. ಕರ್ನಾಟಕದ ಹೆಚ್ಚಿನ ಜನತೆಗೆ ಆಂಗ್ಲ ಭಾಷೆ ಗೊತ್ತಿಲ್ಲದಿರುವುದರಿಂದ ಅದರ ಜ್ಞಾನ ಹೆಚ್ಚಾಗಬೇಕಾದರೆ ಕನ್ನಡದಲ್ಲಿ ಒಂದು ವಿಶ್ವಕೋಶವನ್ನು ಹೊರತರಬೇಕೆಂಬ ಬೃಹತ್ ಯೋಜನೆಯನ್ನು ಅವರು ಹಾಕಿಕೊಂಡು ಕೆಲಸವನ್ನು ಪ್ರಾರಂಭ ಮಾಡಿಸಿದರು. ಈ ಬಗೆಯ ಸಾರ್ಥಕ್ಯ ಯೋಜನೆಯ ಕೀರ್ತಿಯು ಹನುಮಂತಯ್ಯನವರಿಗೆ ಸಲ್ಲುವುದು.

ಒಂದು ರಾಷ್ಟ್ರದ ಪ್ರಗತಿಗೆ ಆ ರಾಷ್ಟ್ರದ ಸಾರ್ವಜನಿಕ ಆಡಳಿತದ ದಕ್ಷತೆಯನ್ನು ಅವಲಂಬಿಸಿರುತ್ತದೆ. ಪ್ರಜಾಪ್ರತಿನಿಧಿಗಳು ಹಾಗೂ ಸರ್ಕಾರ ಜನರ ಒಳಿತಿಗಾಗಿ ಎಷ್ಟೇ ಉದಾತ್ತ ಯೋಜನೆಗಳನ್ನು ಕಾರ್ಯಗಳನ್ನು ನಿರೂಪಿಸಿದರೂ ವಾಸ್ತವಿಕವಾಗಿ ಅವುಗಳು ಕಾರ್ಯಗತವಾಗಬೇಕಾದರೆ ಅಥವಾ ಫಲಪ್ರದವಾಗಬೇಕಾದರೆ ಅಧಿಕಾರಿ, ನೌಕರರಲ್ಲಿ ಪ್ರಾಮಾಣಿಕತೆ ದಕ್ಷತೆ ಇರಬೇಕಾದದ್ದು ಅತ್ಯಾವಶ್ಯಕ. ಅಧಿಕಾರಿಶಾಹಿವರ್ಗ ಪ್ರಾಮಾಣಿಕವಾಗಿ ದಕ್ಷವಾಗಿ ಕೆಲಸ ಮಾಡಬೇಕಾದರೆ ಪ್ರಜಾಪ್ರತಿನಿಧಿಗಳಲ್ಲಿ ಆಡಳಿತದ ಬಗ್ಗೆ ಹಾಗೂ ಆಳ್ವಿಕೆಯ ಬಗ್ಗೆ ಸೂಕ್ಷ್ಮಜ್ಞಾನ, ಅನುಭವ, ಮುಂಜಾಗ್ರತೆಯ ಆಲೋಚನೆ ಅಥವಾ ದೂರದೃಷ್ಟಿ ಅತ್ಯಗತ್ಯ. ಸಮಾಜದ ಎಲ್ಲರಿಗೂ ಮಾದರಿಯಾಗಿ ಸಮಾಜದ ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳನ್ನು ಯಶಸ್ವಿಯಾಗಿ ಬಗೆಹರಿಸಬಲ್ಲಂತಹ ನಾಯಕರು ಅತ್ಯಾವಶ್ಯಕ. ಸಮಾಜದ ವಿವಿಧ ವರ್ಗಗಳ ನಡುವೆ ಸಮನ್ವಯ, ಹೊಂದಾಣಿಕೆ ಸಾಮರಸ್ಯವನ್ನುಂಟುಮಾಡಿ ಸಾರ್ವಜನಿಕ ಆಡಳಿತದ ಅಧಿಕಾರಶಾಹಿದು ಕೆಲಸಗಳ ಬಗ್ಗೆ ಪರಿಣಾಮಕಾರಿಯಾಗಿ ಉಸ್ತುವಾರಿ ವಹಿಸಿ ಆಡಳಿತ ಚುರುಕುಗೊಳ್ಳು ವಂತಾಗಬೇಕಾದರೆ, ನಿರ್ಭೀತಿಯಿಂದ ಸ್ವತಂತ್ರ ಮನೋಭಾವನೆಯಿಂದ ನಿಷ್ಪಕ್ಷಪಾತವಾಗಿ

ದಕ್ಷತೆಯಿಂದ ಕೆಲಸ ಮಾಡುವಂತಹ ಪ್ರಜಾಪ್ರತಿನಿಧಿ ನಾಯಕರು ಅತ್ಯಾವಶ್ಯಕ. ಇಂತಹ ಆದರ್ಶ ಉದಾತ್ತವಾದಿ ನಾಯಕತ್ವದ ಎಲ್ಲಾ ಗುಣಗಳನ್ನು ಹೊಂದಿದ್ದವರು ಶ್ರೀಯುತ ಕೆಂಗಲ್ ಹನುಮಂತಯ್ಯನವರು.

ಶಿಸ್ತು, ಕರ್ತವ್ಯಪ್ರಜ್ಞೆ ಹಾಗೂ ಸಮಯಪ್ರಜ್ಞೆ ಅವರ ಜೀವನದ ಉಸಿರಾಗಿದ್ದಿತು. ಇದೇ ಬಗೆಯ ಗುಣಗಳನ್ನು ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಕೂಡ ಹೊಂದಿದ್ದರು. ರಾಜ್ಯದ ಸಾರ್ವಜನಿಕವಾದ ಎಲ್ಲಾ ಸಭೆ ಸಮಾರಂಭದ ಕಾರ್ಯಕ್ರಮಗಳಿಗೂ ಸಹ ಸರಿಯಾದ ಕರಾರುವಕ್ಕಾದ ಸಮಯದಲ್ಲಿಯೇ ಹಾಜರಿರುತ್ತಿದ್ದರು. ಒಮ್ಮೆ ತಮ್ಮ ಕುಟುಂಬ ಸಮೇತವಾಗಿ ಒಂದು ಸಮಾರಂಭಕ್ಕೆ ಹೊರಡಬೇಕಾಗಿತ್ತು. ಆದರೆ ಸರಿಯಾದ ಸಮಯಕ್ಕೆ ತಮ್ಮ ಕುಟುಂಬದವರು ಬರಲಿಲ್ಲವಾದ್ದರಿಂದಾಗಿ ಅವರಿಗೋಸ್ಕರ ಸಮಯವನ್ನು ವ್ಯಯಮಾಡದೆ ಸಮಾರಂಭಕ್ಕೆ ಅವರನ್ನು ಬಿಟ್ಟು ಹೊರಟುಹೋದರಂತೆ. ಈ ಘಟನೆ ಕೆಂಗಲ್ ಹನುಮಂತಯ್ಯನವರು ಸಮಯಕ್ಕೆ ಎಷ್ಟು ಮಹತ್ವವನ್ನು ನೀಡಿದ್ದರು ಎಂಬುದಕ್ಕೆ ನಿದರ್ಶನವಾಗಿದೆ.

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಇವರ ಆಡಳಿತ ಅವಧಿಯಲ್ಲಿ ಇವರು ಮಾಡಿದ ಜನ ಮೆಚ್ಚುವಂತಹ ಕಾರ್ಯಗಳು ಯಾವುವೆಂದರೆ : (೧) ಶುದ್ಧ ಮತ್ತು ದಕ್ಷ ಆಡಳಿತ (೨) ಎಲ್ಲಾ ಜಿಲ್ಲೆಗಳಿಗೂ ನೀರಾವರಿ ಸೌಲಭ್ಯವನ್ನು ಒದಗಿಸಲು ಪ್ರಯತ್ನಿಸಿದುದು (೩) ಪ್ರಾಥಮಿಕ ದರ್ಜೆಯಿಂದ ಹಿಡಿದು ಕಾಲೇಜು ಮಟ್ಟದವರೆಗೂ ವಿದ್ಯಾಭ್ಯಾಸ ಸುಧಾರಣೆಗೆ ಕೈಗೊಂಡ ಕಾರ್ಯಕ್ರಮಗಳು.

ಹನುಮಂತಯ್ಯನವರು ಮುಖ್ಯಮಂತ್ರಿಯಾದ ತಕ್ಷಣ ಹೆಚ್ಚು ಗಮನಕೊಟ್ಟ ಕ್ಷೇತ್ರವೆಂದರೆ ಶಿಕ್ಷಣ. ಇವರು ೧೯೫೨ ರಲ್ಲಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯನ್ನು ರಚಿಸಿ ದೇಶದ ಎಲ್ಲಾ ಕಡೆಗಳಿಂದ ಶಿಕ್ಷಣ ತಜ್ಞರನ್ನು ಕರೆಸಿ, ಹೊಸ ಶಿಕ್ಷಣ ಕ್ರಮವನ್ನು ಪರಿಚಯಿಸಲು ಯೋಚಿಸಿ ಕಾರ್ಯಗತಗೊಳಿಸಿದರು. ಶಿಕ್ಷಣ ಕ್ರಮವು ಪ್ರಯೋಜನಕಾರಿಯಾಗಬೇಕು, ಸುವ್ಯವಸ್ಥಿತವಾಗಿಯೂ ಇರಬೇಕು. ಅದು ನಮ್ಮ ತರುಣ, ತರುಣಿಯರು ವಿದ್ಯಾಭ್ಯಾಸ ಮುಗಿಸಿದ ಮೇಲೆ, ತಮಗೂ ತಮ್ಮ ನಾಡಿಗೂ ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ಕೆಲಸಮಾಡಲು ಶಕ್ತರನ್ನಾಗಿ ಮಾಡುವಂತಿರಬೇಕು. ಬಡತನ, ರೋಗ, ನಿರುದ್ಯೋಗ, ಅಜ್ಞಾನಗಳಿಂದ ನಾಡನ್ನು ಉದ್ಧರಿಸುವುದೇ ನಮ್ಮ ಹೆಗ್ಗುರಿ. ನಮ್ಮ ನಾಡನ್ನು ಸಮೃದ್ಧಿಯಿಂದ ತುಂಬಿ, ಉನ್ನತಿಗೆ ತರುವುದೇ ಆದರ್ಶ. ನಮ್ಮ ಯುವಕರು ಈ ಹೆಗ್ಗುರಿ ಮತ್ತು ಆದರ್ಶಗಳನ್ನು ಸಾಧಿಸಲು ಸೂಕ್ತ ಶಿಕ್ಷಣ ದೊರೆಯಬೇಕು.[4]

ಪ್ರಾಥಮಿಕ ಮತ್ತು ಪ್ರೌಢ ಶಾಲಾ ತರಗತಿಗಳ ವಿದ್ಯಾರ್ಥಿಗಳಿಗೆ ದೈಹಿಕ ಶ್ರಮ ಕೊಡುವುದಕ್ಕಾಗಿ ಇಂದು ದೈಹಿಕ ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಅಲ್ಲದೆ ಕೆಲವು ಸಮಯ ಶಾಲೆಗೆ ಸಂಬಂಧಿಸಿದ ತೋಟಗಾರಿಕೆ ಕೆಲಸಗಳನ್ನು ವಿದ್ಯಾರ್ಥಿಗಳಿಂದಲೇ

ಮಾಡಿಸುತ್ತಿರುವುದನ್ನು ನೋಡುತ್ತಿದ್ದೇವೆ. ಇವುಗಳ ಮೂಲ ಕರ್ತೃ ಶ್ರೀಯುತ ಕೆಂಗಲ್ ಹನುಮಂತಯ್ಯನವರು.

ಭಾರತ ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳಲ್ಲಿ ತಿಳಿಸಿರುವಂತೆ ೧೪ ವರ್ಷ ವಯಸ್ಸಿನ ಒಳಪಟ್ಟು ಎಲ್ಲಾ ಮಕ್ಕಳಿಗೂ ಉಚಿತವಾದ ಹಾಗೂ ಸಾರ್ವತ್ರಿಕವಾದ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕೆಂದು ಘೋಷಿಸಲಾಗಿದೆ. ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣ ಪೂರ್ಣ ಯಶಸ್ವಿಯಾಗಬೇಕಾದರೆ ಭಾರತದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳಿಗೆ ಅನುಗುಣವಾಗಿ ಶಿಕ್ಷಣ ಪದ್ಧತಿ ಇರಬೇಕು. ಭಾರತ ರಾಷ್ಟ್ರ ಅನಕ್ಷರತೆ, ಅಜ್ಞಾನ, ಬಡತನ, ಮೌಢ್ಯತೆ, ಕಂದಾಚಾರವನ್ನು ಹೊಂದಿರುವ ಗ್ರಾಮಗಳ ರಾಷ್ಟ್ರ. ಶಾಲಾ ಮಕ್ಕಳು ಮನೆಯ ಕೆಲಸದಲ್ಲಾಗಲೀ ಹೊರಗಿನ ಕೆಲಸದಲ್ಲಿಯಾಗಲೀ ತೊಡಗಲು ಅವಕಾಶವಾಗುವಂತೆ ಶಾಲೆಯ ವೇಳೆಯನ್ನು ಹೊಂದಿಸಿಕೊಳ್ಳಬೇಕು. ಅಂದರೆ ಕೃಷಿ ಕೆಲಸದಲ್ಲಿ ವಿದ್ಯಾರ್ಥಿಗಳು ತಂದೆ ತಾಯಿಯರಿಗೆ ನೆರವಾಗಲು ಸೂಕ್ತ ಸನ್ನಿವೇಶ ಸಂದರ್ಭಗಳಿಗೆ ಹೊಂದಾಣಿಕೆಯೋ ಆಗುವಂತೆ ಶಾಲಾ ರಜೆಯ ದಿನಗಳನ್ನು ಇವರು ಬದಲಾಯಿಸಿದರು. ವಿದ್ಯಾರ್ಥಿಗಳು ಶಾಲಾ ವೇಳಾ ಪಟ್ಟಿ ಅನುಕೂಲಕರವಾಗಿದ್ದಲ್ಲಿ ಜೊತೆ ಜೊತೆಯಾಗಿಯೇ ಕಲಿಕೆ ದುಡಿಮೆಗಳೆರಡನ್ನೂ ಸಾಧಿಸಬಹುದು. ಹೀಗೆ ಮಾಡುವುದರಿಂದ ಸರ್ಕಾರಿ ಕೆಲಸವನ್ನೇ ನಂಬಿ ಕೂರದೆ ವಿದ್ಯಾವಂತ ಯುವಕರೂ ಸ್ವತಂತ್ರ ಉದ್ಯೋಗ ನಡೆಸಲು ಶಕ್ತರಾಗುವರೆಂದು ಇವರು ನಂಬಿದ್ದರು. ರಚನಾತ್ಮಕ ವಿದ್ಯಾಭ್ಯಾಸದ ಮೂಲ ತತ್ವ ಪರಿವರ್ತನಾಶೀಲತೆಯಲ್ಲಿದೆ. ಅಲ್ಲದೆ ಶಿಕ್ಷಣ ತಜ್ಞರ ಪ್ರಕಾರ ವಿದ್ಯಾಭ್ಯಾಸವು ಒಂದು ಕಬ್ಬಿಣದ ಕಟ್ಟಲ್ಲ. ಅದು ಬೆಳೆದಂತೆ, ಕಾಲ ಕಾಲಕ್ಕೆ ತಕ್ಕಂತೆ ನಾವು ಬದಲಾವಣೆಗಳನ್ನು ಮಾಡದಿದ್ದ ಪಕ್ಷದಲ್ಲಿ ಅಂತಹ ವಿದ್ಯಾಭ್ಯಾಸ ಶ್ರೇಯಸ್ಕರ ವಿದ್ಯಾಭ್ಯಾಸವಾಗಲಾರದು[5] ಎಂದು ಹೇಳಿದರು. ಹನುಮಂತಯ್ಯನವರ ಶಿಕ್ಷಣ ಪದ್ಧತಿಯ ಮುಖ್ಯಾಂಶಗಳು ಯಾವುವು ಎಂದರೆ[6] :

೧. ಸರ್ವೋದಯ ದಿನಾಚರಣೆಯಿಂದ ಶಾಲಾ ವರ್ಷ ಆರಂಭ ಮತ್ತು ಆ ಮೂಲಕ ಸರ್ವೋದಯದ ಶಕೆಯ ನಾಂದಿ
೨. ಕನ್ನಡ ಲಿಪಿಯೊಡನೆ ದೇವನಾಗರಿ ಲಿಪಿಯ ಕಲಿಕೆ
೩. ಕಡ್ಡಾಯ ಹಾಗೂ ದೈಹಿಕ ಸಮಾಜ ಸೇವೆ
೪. ನೈತಿಕ ಮತ್ತು ಸಾಂಸ್ಕೃತಿಕ ಶಿಕ್ಷಣ
೫. ಮಹಿಳಾ ಶಿಕ್ಷಣದಲ್ಲಿ ಪ್ರಥಮ ಚಿಕಿತ್ಸೆ ಮತ್ತು ಮನೆಗೆಲಸಗಳ ಅಳವಡಿಕೆ
೬. ಸಂಗೀತ, ಭರತನಾಟ್ಯ ಶಿಕ್ಷಣ
೭. ಕ್ರಿಯಾತ್ಮಕ ಶಿಕ್ಷಣ ೮. ಭೂದಾನ ೯. ವಿದ್ಯಾದಾನ

ಗಾಂಧೀಜಿಯ ಅನುಯಾಯಿ ಹಾಗೂ ಮೂಲ ಶಿಕ್ಷಣದ ಪ್ರವರ್ತಕರಾದ ಶ್ರೀ ರಾಮಚಂದ್ರನ್ ಅವರು ಈ ಸುಧಾರಣೆಗಳು ಕ್ರಾಂತಿಕಾರಕವಾದವು ಎಂದಿದ್ದಾರೆ. ಕನ್ನಡ ಭಾಷೆ ಸಾಹಿತ್ಯ ಕಲೆ, ಇತಿಹಾಸದ ಹಿರಿಮೆ ಪರಂಪರೆ ಹಾಗೂ ಸಂಸ್ಕೃತಿಗಳು

ಬೆಳೆಯಬೇಕು ಹಾಗೂ ಕನ್ನಡ ಬೋಧನ ಮಾಧ್ಯಮವಾಗಬೇಕು ಎಂದು ಕೂಗಾಡುವ ರಾಜಕಾರಣಿಗಳು ಇವರಿಂದ ಪಾಠ ಕಲಿಯಬೇಕು. ಉತ್ಸವಮೂರ್ತಿಯನ್ನು ಉತ್ಸವದಲ್ಲಿ ಕೊಂಡೊಯ್ಯಬೇಕಾದರೆ ಅದಕ್ಕೆ ರಥ, ಛತ್ರಿ ಚಾಮರಗಳು ಬೇಕಾಗುತ್ತವೆ. ಹಾಗೆಯೇ ಕನ್ನಡ ಭಾಷೆ ಶಿಕ್ಷಣ ಮತ್ತು ಆಡಳಿತ ಮಾಧ್ಯಮವಾಗಬೇಕಾದರೆ ವಿಶ್ವಕೋಶ ಮತ್ತು ಇತರೆ ಸಹಾಯಕ ಗ್ರಂಥಗಳನ್ನು ಅಚ್ಚು ಹಾಕಿಸಿ ಸುಲಭ ಬೆಲೆಗೆ ಕೊಡುವ ಪ್ರಯತ್ನ ಮಾಡಬೇಕು ಎಂದು ಅವರು ಹೇಳುತ್ತಿದ್ದರು. ಇವರ ವಿದ್ಯಾಭ್ಯಾಸದ ಸುಧಾರಣೆಗಳನ್ನು ಆಗ ಭಾರತದ ಪ್ರಧಾನಿಯಾಗಿದ್ದ ಜವಹರಲಾಲ್ ನೆಹರು ಮತ್ತು ಉಪಾಧ್ಯಕ್ಷರಾದ ಡಾ. ರಾಧಕೃಷ್ಣನ್ ಅವರು ಮೆಚ್ಚಿಕೊಂಡಿದ್ದರು. ಶ್ರೀ ರಾಜಗೋಪಾಲಾಚಾರಿಯವರು ಸಹ ಮುಕ್ತಕಂಠದಿಂದ ಹೊಗಳಿದ್ದರು.

ವಿಧಾನಸೌಧದ ನಿರ್ಮಾಣದಲ್ಲಿ ಹನುಮಂತಯ್ಯನವರ ಪಾತ್ರ

ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಮಾಡಿದಂತಹ ಕಾರ್ಯ ಸಾಧನೆಗಳು ಕರ್ನಾಟಕದ ಇತಿಹಾಸದಲ್ಲಿ ಮರೆಯಲಾರದಂತಹವುಗಳು. ಅವರ ಹೆಗ್ಗಳಿಕೆಯ ಅದ್ಭುತವಾದ ಸಾಧನೆಯೆಂದರೆ ವಿಧಾನಸೌಧದ ನಿರ್ಮಾಣ.

ಸ್ವಾತಂತ್ರ್ಯದ ನಂತರ ಸರ್ಕಾರವು ಜನತೆಯ ಸ್ವಾಯತ್ತತೆಯ ಸಂಕೇತಗಳಾದ ಸಂಸತ್ ಸಭಾಭವನಗಳು ಪೌರಸಭಾಭವನಗಳು ಇತ್ಯಾದಿ ಸಾರ್ವಜನಿಕ ಉಪಯೋಗಿ ಭವನಗಳ ನಿರ್ಮಾಣಕ್ಕೆ ಆದ್ಯತೆಯನ್ನು ನೀಡಿತು. ಅಮೆರಿಕಾದ ಶ್ವೇತಭವನ, ಬ್ರಿಟನ್ನಿನ ಸಂಸತ್ ಭವನಗಳು ದೇಶವಿದೇಶಗಳಿಂದ ಬಂದ ಪ್ರವಾಸಿ ವೀಕ್ಷಕರನ್ನು ಆಕರ್ಷಿಸುತ್ತವೆ. ಅದಕ್ಕೆ ಕಾರಣ ಅವುಗಳ ಕಲಾಮೌಲ್ಯವೊಂದೇ ಅಲ್ಲ : ಚಾರಿತ್ರಿಕ ಮಹತ್ವವೂ ಹೌದು,[7] ಭವ್ಯ ಪರಂಪರೆಯನ್ನು ಹೊಂದಿದ್ದಂತಹ ಕರ್ನಾಟಕದ ಮಹತ್ವದ ಬಗ್ಗೆ ಅರಿವಿದ್ದ ಹನುಮಂತಯ್ಯನವರು ಬೆಂಗಳೂರಿನಲ್ಲಿ ವಿಧಾನಸೌಧವನ್ನು ಕಟ್ಟಿಸಿದರು. ಸ್ವಾತಂತ್ರ್ಯ ಪೂರ್ವದ ಅರಮನೆ ಒಬ್ಬ ವ್ಯಕ್ತಿಯದ್ದಾದರೆ ಸ್ವಾತಂತ್ರ್ಯ ನಂತರದ ಜನತಾ ಸರ್ಕಾರದ ಭವನ ಸಮಸ್ತ ಪ್ರಜೆಗಳದ್ದು, ಆದ್ದರಿಂದ ಅದು ಅರಮನೆಗಿಂತ ದೊಡ್ಡದಾಗಿ, ಸುಂದರವಾಗಿ, ಭದ್ರವಾಗಿ ಪೂಜ್ಯವಾಗಿ ನಿರ್ಮಿಸಲ್ಪಡಬೇಕು. ಜನತೆಯೇ ಜನಾರ್ದನ. ಅವನ ಸೇವೆ ದೇವರ ಸೇವೆ. ಅವನ ಕೆಲಸ ದೇವರ ಕೆಲಸ ಅವನ ಧರ್ಮ ಸರ್ಕಾರದ ಧರ್ಮ, ಅವನು ಧರ್ಮವನ್ನು ಕಾಪಾಡಿದರೆ ಧರ್ಮ ಅವನನ್ನು ಕಾಪಾಡುತ್ತದೆ. ಈ ಭಾವನೆ ಜನರಲ್ಲಿ ಮೂಡಿ ಬರಬೇಕಾದರೆ, ಆಳ್ವಿಕೆದಾರನ ಸ್ಥಳ ಹೇಗಿರಬೇಕೆಂಬ ಬಗ್ಗೆ ಸ್ಪಷ್ಟ ಕಲ್ಪನೆ ಚಿತ್ರಣ ಹನುಮಂತಯ್ಯನವರಿಗಿದ್ದಿತು. ಇಂತಹ ಕಲ್ಪನೆಯ ಅಭಿಪ್ರಾಯದೊಂದಿಗೆ ವಿಧಾನಸೌಧದ ಹೆಬ್ಬಾಗಿಲುಗಳಲ್ಲಿ ಆದರ್ಶ ಸೂಕ್ತಿಗಳನ್ನು ಕೆತ್ತಲಾಯಿತು. ದೇವಾಲಯದ ವಿಷಯದಲ್ಲಿ ಮೂಡುವ ಪವಿತ್ರ ಭಾವನೆ ಪವಿತ್ರ ವಾತಾವರಣದ ಪ್ರಭಾವ ಹೊಂದಿರುವ ಕಟ್ಟಡ ಗೋಪುರಗಳು, ಪ್ರವೇಶದ್ವಾರಗಳು ಕಂಬದ ಸಾಲುಗಳು ಕಟ್ಟಡದ ಸುತ್ತಲೂ ದೃಷ್ಟಿಗೆ ತುಂಪನ್ನೀಯುವ ರಮ್ಯ ಉದ್ಯಾನ ಸಂಪತ್ತು, ದೀಪದ ಅಲಂಕಾರ, ಕಟ್ಟಡದ ಒಳಗೆ ಅಲ್ಲಲ್ಲಿ ರಾಷ್ಟ್ರಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ

ಮಹಾತ್ಮರ ಹುತಾತ್ಮರ ಪ್ರತಿಮೆಗಳು ಮೈಸೂರಿನ ಹಿರಿಮೆಯನ್ನು ವೈಶಿಷ್ಟ್ಯವನ್ನು ಸಾರುವ ನೈಸರ್ಗಿಕ ಪ್ರತಿಕೃತಿಗಳನ್ನು ಕೆತ್ತಿಸಿದರು.[8]

ವಿಧಾನಸೌಧದ ಖರ್ಚು ಪ್ರಾರಂಭದಲ್ಲಿ ೫೦ ಲಕ್ಷ ರೂಪಾಯಿಗಳಾಗಿ ಅಂದಾಜು ಮಾಡಲಾಗಿತ್ತು. ಕ್ರಮೇಣ ಕಟ್ಟಡ ಪೂರ್ಣಗೊಳ್ಳಬೇಕಾದರೆ ಎರಡು ಕೋಟಿ ರೂಪಾಯಿಗಳಿಗೆ ಏರಿತು. ವಿಧಾನಸೌಧದ ಖರ್ಚು ಹೆಚ್ಚಾದಂತೆಲ್ಲಾ ಟೀಕೆಗಳು ತೀವ್ರವಾದವು. ಸ್ವಜಾತಿಯವರೇ ಅವರನ್ನು ದೂರಿದರು. ಆದರೆ ಟೀಕೆಗಳಿಗೆ ಅವರು ಗಮನ ಕೊಡಲಿಲ್ಲ. ಎಷ್ಟೇ ಕೆಲಸದ ಒತ್ತಡಗಳಿದ್ದರೂ, ಪ್ರತಿದಿನವೂ ಸ್ಥಳಕ್ಕೆ ಭೇಟಿಕೊಟ್ಟು, ನಡೆಯುತ್ತಿದ್ದ ಕೆಲಸಗಳನ್ನು ಸ್ವತಃ ಉಸ್ತುವಾರಿಕೆಯನ್ನು ವಹಿಸಿದ್ದರು. ಭಾರತದ ಕಟ್ಟಡಗಳಲ್ಲಿ ಒಂದು ದೊಡ್ಡದಾದ ಸುಂದರವಾದ ಮತ್ತು ವಿಶಾಲವಾದ ವಿಧಾನಸೌಧದ ಭವನವು ಕರ್ನಾಟಕ ರಾಜ್ಯದ ಪ್ರತಿಷ್ಠೆಯಾಗಿ ಪ್ರಕಾಶಿಸಿತು. ಹನುಮಂತಯ್ಯನವರ ೭೦ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಡಿ. ಲಿಂಗಯ್ಯನವರು ವಿಧಾನಸೌಧದ ಕಲ್ಪನೆ ನಿಮಗೆ ಹೇಗೆ ಉಂಟಾಯಿತು ? ಎಂದು ಹನುಮಂತಯ್ಯನವರನ್ನು ಪ್ರಶ್ನಿಸಿದ್ದರು. ಅದಕ್ಕೆ ಹನುಮಂತಯ್ಯನವರ ಪ್ರತಿಕ್ರಿಯೆ ಹೀಗಿದ್ದಿತು : "ಹಿಂದೆ ಪ್ರಭುತ್ವ ಇತ್ತು. ಅದರ ನಿವಾಸ ಮತ್ತು ಸಂಕೇತ ರಾಜರು ವಾಸಮಾಡುತ್ತಿದ್ದ ಅರಮನೆ. ಒಂದು ರಾಜ್ಯದಲ್ಲಿ ಅರಮನೆ ಭವ್ಯವಾದ ಭವನವೂ ಹೌದು. ಅದು ರಾಜ್ಯಶಕ್ತಿಯ ನಿವಾಸವೂ ಹೌದು. ಪ್ರಜಾಪ್ರಭುತ್ವ ಬಂದಮೇಲೆ ಪ್ರಭುತ್ವ ಪ್ರಜೆಗಳದಾಯಿತು. ಅವರ ಪ್ರತಿನಿಧಿಗಳು ಶಾಸಕರಾಗಿ ಆಡಳಿತದ ಶಕ್ತಿಯನ್ನು ಪಡೆದರು. ಅದಕ್ಕೆ ಅನುಗುಣವಾದ ನಿವಾಸ ಅವಶ್ಯಕವೆಂದು ಯೋಚಿಸಿ ವಿಧಾನಸೌಧವನ್ನು ಕಟ್ಟಿಸಿದೆ. ಇದರ ಜೊತೆಗೆ ನಮ್ಮ ಕರ್ನಾಟಕದ ಕಲೆಗಳಿಗೆ ಅದು ಮಾದರಿಯಾಗಬೇಕೆಂಬ ಆಸೆಯೂ ಇದ್ದಿತು. ಏಕೀಕೃತ ಕರ್ನಾಟಕಕ್ಕೆ ಕಲಶಪ್ರಾಯವಾದ ಒಂದು ಸೌಧದಲ್ಲಿ ಶಾಸನಸಭೆ ಹಾಗೂ ಸರ್ಕಾರದ ಕೆಲಸಗಳು ನಡೆಯಬೇಕೆಂದು ಪ್ರೇರಿತನಾಗಿದ್ದೆ. ಈ ಭಾವನೆಗಳು ವಿಧಾನಸೌಧವನ್ನು ನಿರ್ಮಿಸುವಂತೆ ಮಾಡಿತು[9]" ಎಂದು ಹೇಳಿದರು.

ಹನುಮಂತಯ್ಯನವರ ಪ್ರಕಾರ ದೇವರು ಎಂದರೆ ಜನತೆ. ದೇವರ ಬಗ್ಗೆ ವ್ಯಕ್ತಿ ಯಾವ ರೀತಿಯ ಶ್ರದ್ಧೆ ಗೌರವಗಳನ್ನು ತಾಳುತ್ತಿದ್ದಾರೋ ಯಾವ ಭಕ್ತಿಯಿಂದ ಸೇವೆಸಲ್ಲಿಸುತ್ತಿದ್ದಾರೋ ಅದೇ ಪ್ರವೃತ್ತಿ ಎಂದರೆ ಆತ್ಮನಿಷ್ಠೆಯಿಂದ ಕೆಲಸ ಮಾಡುವ ಮನೋಭಾವ ಶಾಸಕರಲ್ಲಿ, ಅಧಿಕಾರ ವರ್ಗದವರಲ್ಲಿ, ನೌಕರವರ್ಗದಲ್ಲಿ ಮೂಡಬೇಕು ಎಂಬ ಉದ್ದೇಶದಿಂದಲೇ ವಿಧಾನಸೌಧದ ಕಟ್ಟಡದ ಮಹಾದ್ವಾರದ ಮೇಲ್ಭಾಗದಲ್ಲಿ "ಸರ್ಕಾರಿ ಕೆಲಸ ದೇವರ ಕೆಲಸ" ಎಂಬ ನೀತಿ ಬೋಧಕವಾದ ವಾಕ್ಯವನ್ನು ಕೆತ್ತಿಸಿದರು. ಹನುಮಂತಯ್ಯನವರು ವಿಧಾನಸೌಧ ಕಟ್ಟಿಸಿದರೂ ಅದರಲ್ಲಿ ಕುಳಿತು ಆಡಳಿತ ನಡೆಸುವ ಅವಕಾಶವೇ ಇಲ್ಲವಾಯಿತು. ಆದರೆ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಎಲ್ಲಿಯವರೆಗೆ ವಿಧಾನಸೌಧ ನಿಂತಿರುವುದೋ ಅಲ್ಲಿಯವರೆಗೆ ಶ್ರೀ ಹನುಮಂತಯ್ಯನವರ ಹೆಸರು ಶಾಶ್ವತವಾಗಿ ಇರುತ್ತದೆ. ವಿಧಾನಸೌಧ ಕಟ್ಟಡ ಅವರನ್ನು ಅಮರರನ್ನಾಗಿಸಿದೆ.

ಅಖಿಲ ಭಾರತ ಆಡಳಿತ ಸುಧಾರಣೆಯ ಸಮಿತಿಯ ಅಧ್ಯಕ್ಷರಾಗಿ

ಕೆಂಗಲ್ ಹನುಮಂತಯ್ಯನವರು ವಿಧಾನಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಮತ್ತೆ ತಮ್ಮ ಸ್ವಕ್ಷೇತ್ರವಾದ ರಾಮನಗರದಿಂದಲೇ ಸ್ಪರ್ಧಿಸಿ ಚುನಾಯಿತರಾಗಿ ವಿಧಾನಸಭೆಯ ಸದಸ್ಯರಾದರು.

ರಷ್ಯಾಕ್ಕೆ ಭಾರತದ ಪ್ರತಿನಿಧಿಯಾಗಿ ತೆರಳಿ ಅಲ್ಲಿಯ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರು ೧೯೬೨ರಲ್ಲಿ ಪಾರ್ಲಿಮೆಂಟಿನ ಸದಸ್ಯರಾದರು. ೧೯೬೭ರಲ್ಲಿ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿ ಕೆಲಸ ಮಾಡಿದರು. ಇದೇ ಅವಧಿಯಲ್ಲಿ ಪಂಜಾಬ್ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಅಮೋಘ ಸೇವೆ ಸಲ್ಲಿಸಿದರು. ಇದಾದಮೇಲೆ ಅಖಿಲ ಭಾರತ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಅನಂತರ ಅಂದರೆ ೧೯೬೭ರಿಂದ ೧೯೭೧ರವರೆಗೆ ಅಖಿಲ ಭಾರತ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಪ್ರತಿಯೊಂದು ರಾಜ್ಯದಲ್ಲೂ ಯಾವ ರೀತಿಯ ಆಡಳಿತ ನಡೆಸುತ್ತಿದ್ದಾರೆಂದು ವೀಕ್ಷಿಸಿ ಪ್ರತಿಯೊಂದು ಸರ್ಕಾರದ ಇಲಾಖೆಗಳ ಕಾರ್ಯ ವೈಖರಿಯನ್ನು ಪರಿಶೀಲಿಸಿ ಉತ್ತಮ ರಾಜಕೀಯ ಮತ್ತು ಸರ್ಕಾರಿ ಪದ್ಧತಿಯನ್ನು ಪ್ರತಿಪಾದಿಸಿ ಆಡಳಿತ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ನಡೆಯುವಂತಾಗಬೇಕೆಂಬುದು ಕೆಂಗಲ್ ಹನುಮಂತಯ್ಯನವರ ಸ್ಥಿರ ಸಂಕಲ್ಪವಾಗಿದ್ದಿತು.[10] ಈ ಸಂದರ್ಭದಲ್ಲಿಯೇ ಪ್ರಪಂಚದ ಮುಂದುವರೆದ ರಾಷ್ಟ್ರಗಳ ಆಡಳಿತದ ಬಗ್ಗೆ ಹೆಚ್ಚು ಜ್ಞಾನವನ್ನು ಪಡೆಯಲು ವಿದೇಶಿ ರಾಷ್ಟ್ರಗಳಿಗೆ ಭೇಟಿ ನೀಡಿದರು. ಕೆನಡದ ಒಟ್ಟೋವಾದಲ್ಲಿ ೧೯೬೬ರಲ್ಲಿ ನಡೆದ **'ಕಾಮನ್‌ವೆಲ್ತ್ ಸಂಸದೀಯ ಸಮ್ಮೇಳನದಲ್ಲಿ'** ಭಾರತದ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ನಂತರ ಬ್ರಿಟನ್, ಅಮೆರಿಕಾ ಮತ್ತು ಕೆನಡಾಗಳ ಸಾರ್ವಜನಿಕ ಆಡಳಿತದ ವಿವಿಧ ಭಾಗಗಳು ಮತ್ತು ಅವುಗಳ ಕಾರ್ಯ ವೈಖರಿಯನ್ನು ಅಧ್ಯಯನ ಮಾಡಿದರು. ಭಾರತದ ರಾಜಕೀಯ ಪರಿಸ್ಥಿತಿಯ ಚಿತ್ರಣವನ್ನು ವಿದೇಶಿಯರಿಗೆ ತಮ್ಮ ಉಪನ್ಯಾಸಗಳ ಮೂಲಕ ಪರಿಚಯಿಸಿ ಭಾರತದ ಘನತೆಯನ್ನು ಎತ್ತಿಹಿಡಿದರು. ೧೯೬೮ರಲ್ಲಿ ಬರ್ಲಿನ್ ನಗರದಲ್ಲಿ ನಡೆದ **ಅಂತರರಾಷ್ಟ್ರೀಯ ಆಡಳಿತ ವಿಜ್ಞಾನ ಸಮ್ಮೇಳನದಲ್ಲಿ** ಭಾಗವಹಿಸಿ ವಿವಿಧ ದೇಶಗಳ ವಿದ್ವಾಂಸರ ಜೊತೆ ಆಡಳಿತದ ಬಗ್ಗೆ ಚರ್ಚಿಸಿದರು ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಆಡಳಿತವನ್ನು ವಿಶ್ಲೇಷಿಸಿ ಭಾರತದ ಸಾರ್ವಜನಿಕ ಆಡಳಿತದಲ್ಲಿ ಹೇಗೆ ಸುಧಾರಣೆಯನ್ನು ಜಾರಿಗೆ ತರಬೇಕೆಂಬುದರ ಬಗ್ಗೆ ಇಪ್ಪತ್ತೈದು ಸಾವಿರ ಪುಟಗಳ ವರದಿಯನ್ನು ಹನುಮಂತಯ್ಯನವರು ಸರ್ಕಾರಕ್ಕೆ ಸಲ್ಲಿಸಿದರು (೧೯೭೧ರಲ್ಲಿ). **"ಅಖಿಲಭಾರತ ಆಡಳಿತ ಸುಧಾರಣ ಸಮಿತಿ"** ಆಡಳಿತ ಸುಧಾರಣೆಗಾಗಿ ಮಾಡಿರುವ ಶಿಫಾರಸ್ಸುಗಳಲ್ಲಿ ಈ ಕೆಳಕಂಡ ವಿಷಯಗಳು ಮಹತ್ವದ್ದಾಗಿವೆ :

೧. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಆಡಳಿತಾತ್ಮಕ ಹಾಗೂ ಶಾಸನಾತ್ಮಕ ಅಧಿಕಾರಗಳ ಸಂಬಂಧದ ಬಗ್ಗೆ.

೨. ಶಾಸಕಾಂಗ ಮತ್ತು ಕಾರ್ಯಾಂಗ ಒಂದು ಮತ್ತೊಂದಕ್ಕೆ ಅನ್ಯೋನ್ಯವಾಗಿ, ಸಹಕಾರಿಯುತವಾಗಿ, ಜವಾಬ್ದಾರಿಯಾಗಿ ಹೇಗೆ ಕಾರ್ಯ ನಿರ್ವಹಿಸಬೇಕೆಂಬುದರ ಬಗ್ಗೆ : ಶಾಸಕಾಂಗದ ಸದಸ್ಯರ ದಕ್ಷತೆ ಹೆಚ್ಚಿಸಲು, ಸಂಸದೀಯ ಕಾರ್ಯಕಲಾಪಗಳ ಗುಣಮಟ್ಟವನ್ನು ಹೆಚ್ಚಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಲಾಗಿದೆ. ಹಾಗೆಯೇ ಸರ್ಕಾರದ ಕಾರ್ಯಕ್ರಮಗಳು, ನಿರ್ಣಯಂಗಳು ಪರಿಣಾಮಕಾರಿಯಾಗಿ ಕಾರ್ಯಗತ ಗೊಳ್ಳಬೇಕಾದರೆ ಸರ್ಕಾರಿ ನೌಕರ ವರ್ಗದ ಪಾತ್ರ ಪ್ರಮುಖವಾದದು. ಈ ನಿಟ್ಟಿನಲ್ಲಿ ಮಂತ್ರಿಗಳು ಹೇಗೆ ವಿವಿಧ ಇಲಾಖೆಗಳ ಸರ್ಕಾರಿ ನೌಕರರ ಕಾರ್ಯ ವೈಖರಿಯ ಮೇಲೆ ಉಸ್ತುವಾರಿಯನ್ನು ವಹಿಸಬೇಕು ಎಂಬುದರ ಬಗ್ಗೆ ಸೂಕ್ತ ಸಲಹೆ, ಆದೇಶ, ನಿರ್ದೇಶನ ಗಳನ್ನು ನೀಡಿ ಸರ್ಕಾರಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳು ವಂತೆ ಮಾಡಬೇಕು ಎಂದು ತಿಳಿಸಿದ್ದಾರೆ. ಸರ್ಕಾರಿ ನೌಕರರ ನೇಮಕ, ವರ್ಗ, ಬಡ್ತಿ, ಹಾಗೂ ಶಿಸ್ತು ಕ್ರಮಗಳ ಬಗ್ಗೆ ಆಡಳಿತ ಸುಧಾರಣಾ ಆಯೋಗ ಮಾಡಿರುವ ಶಿಫಾರಸ್ಸು ಗಳನ್ನು ಇಂದು ಸರ್ಕಾರ ಅಂಗೀಕರಿಸಿ ಕಾನೂನು ಮಾಡಿದೆ.

೩. ನ್ಯಾಯಾಂಗವು ಕಾರ್ಯಾಂಗದಿಂದ ಸ್ವತಂತ್ರವಾಗಿ ನಿಷ್ಪಕ್ಷಪಾತವಾಗಿ ಕೆಲಸ ಮಾಡಲು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಾಧೀಶರನ್ನು ರಾಷ್ಟ್ರಪತಿಯವರು ನೇಮಕ ಮಾಡುವ ಮೊದಲು ರಾಷ್ಟ್ರ ಮಟ್ಟದ ಸಮಿತಿಯೊಂದು ನೇಮಕಗೊಂಡು ಸಮಿತಿಯ ಶಿಫಾರಸ್ಸಿಗೆ ಅನುಗುಣವಾಗಿ ನ್ಯಾಯಾಧೀಶರು ನೇಮಕಗೊಳ್ಳಬೇಕು. ರಾಷ್ಟ್ರಪತಿಯವರು ನ್ಯಾಯಾಧೀಶರನ್ನು ನೇಮಕ ಮಾಡುವಾಗ ಸೇವಾ ಹಿರಿತನ ಒಂದನ್ನೇ ಕಡ್ಡಾಯವಾಗಿ ಪರಿಗಣನೆಗೆ ತೆಗೆದು ಕೊಳ್ಳಬೇಕೆಂಬ ನಿರ್ಬಂಧವಿರಬಾರದು. ಏಕೆಂದರೆ ಸರ್ಕಾರಕ್ಕೆ ಬೇಕಾಗಿರುವುದು ಪ್ರಗತಿಪರವಾದಂತಹ ನ್ಯಾಯಾಧೀಶರೇ ಹೊರತು ಪ್ರತಿಗಾಮಿಂತನವಿರುವ ನ್ಯಾಯಾಧೀಶರಲ್ಲ.

೪. ಒಟ್ಟು ಶಾಸಕಾಂಗದ ಸದಸ್ಯರಲ್ಲಿ ಶೇಕಡ ೧೦ಕ್ಕಿಂತ ಹೆಚ್ಚು ಮಂತ್ರಿಗಳು ಕೇಂದ್ರ ಮತ್ತು ರಾಜ್ಯ ಮಂತ್ರಿಮಂಡಲದಲ್ಲಿ ಇರಬಾರದೆಂದು ಶಿಫಾರಸ್ಸು ಮಾಡಿದೆ.

೫. ಶಾಸಕರು ಮತ್ತು ಸಂಸತ್ ಸದಸ್ಯರ ಪಕ್ಷಾಂತರವನ್ನು ನಿಷೇಧಿಸಬೇಕು.

೬. ಆಡಳಿತದಲ್ಲಿ ಲಂಚಗುಳಿತನ, ಭ್ರಷ್ಟಾಚಾರವನ್ನು ತಡೆಗಟ್ಟಲು ಕೇಂದ್ರ ಮತ್ತು ರಾಜ್ಯದಲ್ಲಿ ಲೋಕಾಯುಕ್ತ ಸಮಿತಿಯನ್ನು ರಚಿಸಬೇಕೆಂದು ಶಿಫಾರಸ್ಸು ಮಾಡಿದೆ.

೭. ಕೇಂದ್ರದ ಸಂಸತ್ ಮತ್ತು ರಾಜ್ಯಶಾಸಕಾಂಗಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆಗಳು ಮುಕ್ತವೂ ನ್ಯಾಯಯುತವೂ ಆಗಿ ನಡೆಯುವಂತಾಗಬೇಕಾದರೆ ಕೆಲವು ಚುನಾವಣಾ ಸುಧಾರಣೆಗಳಿಗೆ ಶಿಫಾರಸ್ಸು ಮಾಡಲಾಗಿದೆ.

೮. ರಾಷ್ಟ್ರದಲ್ಲಿ ವಿವಿಧ ಪ್ರಾಂತೀಯ ರಾಜಕೀಯ ಪಕ್ಷಗಳು ಹಾಗೂ ರಾಷ್ಟ್ರೀಯ ರಾಜಕೀಯ ಪಕ್ಷಗಳನ್ನು ಮಾನ್ಯ ಮಾಡುವಂತಹ ಸಂದರ್ಭಗಳಲ್ಲಿ ಪರಿಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳ ಬಗ್ಗೆ.

೯. ನೈಜ ಸಂಯುಕ್ತ ಸರ್ಕಾರದ ವ್ಯವಸ್ಥೆಯನ್ನು ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯನ್ನು ಬಲಪಡಿಸಲು : ರಾಜ್ಯಗಳ ರಾಜ್ಯಪಾಲರನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ ಪರಿಗಣಿಸಬೇಕಾದ ವಿಷಯಗಳ ಬಗ್ಗೆ ಶಿಫಾರಸ್ಸುಗಳನ್ನು ಮಾಡಲಾಗಿದೆ.

ಭಾರತ ಸಂವಿಧಾನದಷ್ಟೇ ಮುಖ್ಯವಾದ ಅಖಿಲ ಭಾರತ ಆಡಳಿತ ಸುಧಾರಣಾ ಸಮಿತಿಯ ಎಲ್ಲಾ ಶಿಫಾರಸ್ಸುಗಳನ್ನು ಪೂರ್ಣವಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲ ವಾದರೂ ಬಹುತೇಕ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡು ಕಾನೂನು ಗಳನ್ನು ರಚಿಸಿದೆ.

ಕೇಂದ್ರ ಸಚಿವ ಸಂಪುಟದಲ್ಲಿ ಮಂತ್ರಿಯಾಗಿ

ಕಾಂಗ್ರೆಸ್ ಪಕ್ಷವು ಇಬ್ಭಾಗವಾದ ಮೇಲೆ ಇವರು ಅಂದಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದ ಪಕ್ಷಕ್ಕೆ ಸೇರಿಕೊಂಡರು. ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಯಾಗಿ ಕೆಲಸ ಮಾಡಿದರು. ೧೯೭೧ರ ಚುನಾವಣೆ ಯಲ್ಲಿ ಅಪಾರ ಮತಗಳನ್ನು ಗಳಿಸಿ ಪಾರ್ಲಿಮೆಂಟ್‌ಗೆ ಆಯ್ಕೆಯಾಗಿ ಕೇಂದ್ರದ ರೈಲ್ವೆ ಮಂತ್ರಿಯಾಗಿ ದಿನಾಂಕ : ೧೮-೩-೧೯೭೧ರಿಂದ ಆಗಸ್ಟ್ ೧೯೭೨ರವರೆಗೆ ಸೇವೆ ಸಲ್ಲಿಸಿದರು. ಭಾರತ ಸರ್ಕಾರದ ಸ್ವಾಧೀನದಲ್ಲಿರುವ ಅತ್ಯಂತ ಅಧಿಕ ಮೊತ್ತದ ಬಂಡವಾಳ ಹೊಂದಿರುವ ಸಾರಿಗೆ ಸಂಪರ್ಕವೆಂದರೆ ರೈಲು ಸಾರಿಗೆ ವ್ಯವಸ್ಥೆ. ಈ ಬೃಹತ್ ರೈಲ್ವೆಯ ಕಾರ್ಯಭಾರಗಳು ಹಾಗೂ ನಿರ್ವಹಣೆಯ ಮೇಲೆ ಉಸ್ತುವಾರಿ ವಹಿಸುವುದು—ಅಷ್ಟೇನು ಸುಲಭದ ಕೆಲಸವಲ್ಲ. ಅಂದು ರೈಲ್ವೆ ಇಲಾಖೆಯೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿತ್ತು. ಅವುಗಳೆಂದರೆ ರೈಲ್ವೆ ಇಲಾಖೆಯ ಹಣಕಾಸಿನ ತೊಂದರೆ, ರೈಲು ಸರಕು ಸಾಗಾಣಿಕೆಯಲ್ಲಿ ಕಳವುಗಳು, ಬೆಲೆ ಬಾಳುವ ರೈಲು ಆಸ್ತಿಗಳ ಕಳ್ಳತನ, ಟಿಕೆಟ್ ರಹಿತವಾಗಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದವರ ಸಂಖ್ಯೆ ಹಾಗೂ ರೈಲುಗಳಲ್ಲಿ ಪ್ರಯಾಣಿಕರ ದರೋಡೆ ಇನ್ನೂ ಮುಂತಾದ ಸಮಸ್ಯೆಗಳು. ರೈಲ್ವೆ ಇಲಾಖೆಯ ಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ರೈಲ್ವೆ ಇಲಾಖೆಯ ಎಲ್ಲಾ ತೊಂದರೆಗಳನ್ನು ನಿವಾರಿಸಲು, ರಾಷ್ಟ್ರ ಮಟ್ಟದಲ್ಲಿ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳ ಮತ್ತು ಉನ್ನತ ಅಧಿಕಾರಿಗಳ ಸಭೆಯನ್ನು ಕರೆದು ಸಮಸ್ಯೆಗಳನ್ನು ದೀರ್ಘವಾಗಿ ಚರ್ಚಿಸಿ, ಕೆಲವು ನಿರ್ಧಾರಗಳನ್ನು ಕೈಗೊಂಡರು. ರೈಲುಗಳಲ್ಲಿ ನಡೆಯುವ ಅಪರಾಧಗಳನ್ನು ತಡೆಯಲು ಹಾಗೂ ಅಪರಾಧಿಗಳಿಗೆ ಕಠಿಣವಾದ ಶಿಕ್ಷೆ ಯುಂಟಾಗುವಂತೆ ಕಾನೂನುಗಳನ್ನು ಜಾರಿಗೊಳಿಸಿದರು. ಅಪರಾಧಗಳನ್ನು ತಡೆದು ಹಾಗೂ ರೈಲುಗಳಿಗೆ ಸೂಕ್ತ ರಕ್ಷಣೆ ನೀಡುವುದು ಆಯಾ ರಾಜ್ಯ ಸರ್ಕಾರಗಳ

ಜವಾಬ್ದಾರಿಯಂತ ಕೆಲಸವೆಂದು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಿದರು. ಹನುಮಂತಯ್ಯನವರು ರೈಲ್ವೆ ಇಲಾಖೆಯ ಎಲ್ಲಾ ನೌಕರರಿಗೂ ಅಂದರೆ ಕೆಳಹಂತದ ನೌಕರರಿಂದ ಉನ್ನತ ಮಟ್ಟದ ಅಧಿಕಾರಿಗಳವರೆಗೆ ದಕ್ಷತೆಯಿಂದ ಕಾರ್ಯಕ್ಷಮತೆಯಿಂದ, ಜವಾಬ್ದಾರಿಯಿಂದ ಕೆಲಸ ಮಾಡುವಂತೆ ಸ್ಫೂರ್ತಿ ನೀಡಿದರು. ಹನುಮಂತಯ್ಯನವರು ರೈಲ್ವೆ ಇಲಾಖೆಯ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರು ಅನುಸರಿಸಿದ ಮಾರ್ಗಗಳು, ಕಟ್ಟುನಿಟ್ಟಾದ ನಿರ್ದಾಕ್ಷಿಣ್ಯವಾದ ಕ್ರಮಗಳು, ಆರ್ಥಿಕವಾಗಿ ನಷ್ಟವನ್ನು ಅನುಭವಿಸುತ್ತಿದ್ದ ರೈಲ್ವೆ ಇಲಾಖೆಯೂ ಒಂದೇ ವರ್ಷದಲ್ಲಿಯೇ ಲಾಭವನ್ನು ಗಳಿಸುವಂತಾಯಿತು. ಹನುಮಂತಯ್ಯನವರ ಸಮಯ ಪ್ರಜ್ಞೆ ಮತ್ತು ಕಾರ್ಯದಕ್ಷತೆಯಿಂದಾಗಿ ಇವರ ಅಧಿಕಾರ ಅವಧಿಯಲ್ಲಿ ಒಂದೇ ಒಂದು ರೈಲು ಸಹ ಅಪಘಾತಕ್ಕೀಡಾಗಲಿಲ್ಲ ಹಾಗೂ ರೈಲ್ವೆ ನೌಕರರ ಮುಷ್ಕರ ನಡೆಯಲಿಲ್ಲ.

ಹನುಮಂತಯ್ಯನವರು ರೈಲ್ವೆ ಇಲಾಖೆಯ ಮಂತ್ರಿಗಳಾಗಿ ನೇಮಕವಾಗುವ ಮೊದಲು ರೈಲುಗಳು ನಿಯಮಿತ ಸಮಯಕ್ಕೆ ಬರುತ್ತಿರಲಿಲ್ಲ. ಯಾವ ಜನಾಂಗ ನಿಯಮಿತ ಕೆಲಸಗಳನ್ನು ನಿಗದಿತ ವೇಳೆಯಲ್ಲಿ ಮಾಡುವುದಿಲ್ಲವೋ ಆ ಜನಾಂಗ ಮುಂದುವರೆಯುವುದು ಕಷ್ಟ ಹಾಗೂ ಕೀರ್ತಿ ಗಳಿಸುವುದು ಅಸಾಧ್ಯ. ಶಿಸ್ತು ಸಮಯ ಪ್ರಜ್ಞೆಗೆ ಶ್ರೇಯಸ್ಸು ಉಂಟು ಮಾಡುವ ಶಕ್ತಿಯಿದೆ. ಇವರ ಕಾಲದಲ್ಲಿ ರೈಲ್ವೆ ವಿಭಾಗದಲ್ಲಿ ನಡೆದ ಸುಧಾರಣೆಗಳನ್ನು ಅಧಿಕಾರಿಗಳು ಇಂದಿಗೂ ಸ್ಮರಿಸಿಕೊಳ್ಳುತ್ತಾರೆ. ಇವರು ರೈಲ್ವೆ ಮಂತ್ರಿಯಾಗುವುದಕ್ಕಿಂತ ಹಿಂದೆ ಪಾಟ್ನದಿಂದ ದೆಹಲಿಗೆ ಬರುವ ರೈಲು ಯಾವಾಗಲೂ ಒಂದೆರಡು ಗಂಟೆಗಳು ತಡವಾಗಿ ಬರುತ್ತಿತ್ತು. ಜಯಪ್ರಕಾಶ್ ನಾರಾಯಣ ಅವರು ಆ ರೈಲಿನಲ್ಲಿ ಸದಾ ಪ್ರಯಾಣ ಮಾಡುತ್ತಿದ್ದರು. ಅವರು ರೈಲು ಸರಿಯಾದ ವೇಳೆಗೆ ಬರುತ್ತಿರುವ ಬಗ್ಗೆ ಮಾತನಾಡುತ್ತಾ "ಏನು ಹನುಮಂತಯ್ಯ ನನಗೆ ಇವತ್ತು ಎರಡು ಗಂಟೆ ನಿದ್ದೆ ಹೋಯಿತು ನಿಮ್ಮಿಂದ" ಅಂದರು. ಅಂತೆಯೇ ರೈಲುಗಳು ಸರಿಯಾದ ವೇಳೆಯಲ್ಲಿ ಚಲಿಸಿ ನಿಗದಿತ ವೇಳೆಯಲ್ಲಿ ತಲುಪಲು ಕಟ್ಟುನಿಟ್ಟಾದ ಆದೇಶವನ್ನು ಹೊರಡಿಸಿದರು. ನಿಗದಿತ ವೇಳೆಗೆ ರೈಲುಗಳು ತಲುಪದಿದ್ದಾಗ ಸಂಬಂಧಿಸಿದ ಅಧಿಕಾರಿಗಳ ಮೇಲೆ ನಿರ್ದಾಕ್ಷಿಣ್ಯವಾದ ಶಿಸ್ತುಕ್ರಮಗಳನ್ನು ಕೈಗೊಂಡರು. ಸಾರ್ವಜನಿಕ ಸರ್ಕಾರಿ ಕೆಲಸಗಳನ್ನು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಹಾಗೂ ಶಿಸ್ತಿನಿಂದ ಮಾಡುವುದೇ ದೇಶಕ್ಕೆ ಕೊಟ್ಟಂತಹ ಕೊಡುಗೆ ಎಂದು ನೌಕರರಲ್ಲಿ ಆತ್ಮ ವಿಶ್ವಾಸ ಬರುವಂತೆ ಮಾಡಿ ಜಡತ್ವದಿಂದ ಕೂಡಿದ್ದ ರೈಲ್ವೆ ವಿಭಾಗವನ್ನು ಕ್ರಿಯಾಶೀಲಗೊಳಿಸಿದರು. ಇಷ್ಟೇ ಅಲ್ಲದೆ ದೇಶದ ವಿವಿಧ ಭಾಗಗಳಲ್ಲಿ ಹೊಸದಾದ ಒಂದು ಸಾವಿರ ಕಿ.ಮೀ. ಉದ್ದದ ರೈಲು ಹಳಿಗಳನ್ನು ಹಾಕಿಸಲು ಹಾಗೂ ಮೀಟರ್‌ಗೇಜ್‌ನ್ನು ಬ್ರಾಡ್‌ಗೇಜನ್ನಾಗಿ ಪರಿವರ್ತಿಸಲು ಕ್ರಮಕೈಗೊಂಡರು.

ಭಾರತ ಸರ್ಕಾರದ ರೈಲ್ವೆ ಇಲಾಖೆಯ ಉನ್ನತ ಅಧಿಕಾರಿಯಾಗಿದ್ದ ಶ್ರೀಯುತ ಗಂಗೂಲಿಯವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ

ಅಂದಿನ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿ ಹಾಗೂ ಹನುಮಂತಯ್ಯನವರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಇವರ ಪರಿಣಾಮವಾಗಿ ಹನುಮಂತಯ್ಯನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದರು. ೧೯೭೫ರ ಜೂನ್ ೨೫ರಲ್ಲಿ ತುರ್ತು ಪರಿಸ್ಥಿತಿ ಆರಂಭವಾಯಿತು. ಅಂತಹ ಸಂದಿಗ್ಧ ಸಮಯದಲ್ಲಿ ಸಂಸತ್ತಿನ ಸದಸ್ಯರಾಗಿದ್ದರು. ಆ ಕಗ್ಗತ್ತಲೆಯ ಸಮಯದಲ್ಲಿ ನಡೆದ ಕೆಲವು ಕಾರ್ಯಕಲಾಪಗಳಿಗೆ ಇವರು ಭಾಗಿಯಾದರು ಎಂದು ಜನತೆ ಬಹಳ ಬೇಸರಪಟ್ಟಿತು. ಈ ಸಂದರ್ಭದಲ್ಲಿ ಇಂದಿರಾಗಾಂಧಿಯವರ ಸರ್ಕಾರಕ್ಕೆ ಬೆಂಬಲ ಕೊಟ್ಟರೆಂದು ಅನೇಕ ಬುದ್ಧಿಜೀವಿಗಳು ನೊಂದುಕೊಂಡರು. ಇದರ ಫಲವಾಗಿ ೧೯೭೭ರ ಮಾರ್ಚಿಯಲ್ಲಿ ಲೋಕಸಭೆಗೆ ನಡೆದ ಮಹಾಚುನಾವಣೆಯಲ್ಲಿ ಅವರು ಪರಾಭವಗೊಂಡರು. ನಂತರ ಕೆಲವು ಕಾಲ ಸಾಮಾಜಿಕ ಸೇವೆಗಳಲ್ಲಿ ನಿರತರಾಗಿದ್ದರು. ಎಲ್ಲಾ ರಾಜಕೀಯ ಪಕ್ಷಗಳು ಮೌಲ್ಯಗಳನ್ನು ಕಳೆದುಕೊಂಡಿದ್ದನ್ನು ಯೋಚಿಸಿ ಮೌಲ್ಯಾಧಾರಿತ **''ಸುರಾಜ್ಯ''** ಎಂಬ ಹೊಸ ಪಕ್ಷವನ್ನು ಕಟ್ಟಿದರು. ಸುರಾಜ್ಯ ಪಕ್ಷವು ಅನೇಕ ಧ್ಯೇಯೋದ್ದೇಶಗಳನ್ನು ಒಳಗೊಂಡಿದ್ದಿತು. ಭ್ರಷ್ಟಾಚಾರ, ಜಾತೀಯತೆ ಮತ್ತು ನಿರುದ್ಯೋಗಗಳನ್ನು ಹೋಗಲಾಡಿಸುವುದು ಪಕ್ಷದ ಧ್ಯೇಯ ವಾಗಿದ್ದಿತು. ಆದರೆ ಸತ್ಯ, ನ್ಯಾಯ, ಧರ್ಮಗಳನ್ನು ಒಳಗೊಂಡ ಪಕ್ಷಕ್ಕೆ ಭಾರತದಲ್ಲಿ ಸ್ಥಾನವೇ ಇಲ್ಲದಂತಾಗಿ ಈ ಪಕ್ಷವು ಚುನಾವಣೆಯಲ್ಲಿ ಗಣನೀಯ ಸಾಧನೆಯನ್ನು ಮಾಡಲಾಗಲಿಲ್ಲ. ಏನೇ ಆಗಲಿ, ಪ್ರಜಾಪ್ರಭುತ್ವ ಪ್ರಬಲವಾಗಿ ಬೆಳೆಯಬೇಕಾದರೆ, ರಾಜಕೀಯದಲ್ಲಿ ಸತ್ಯ, ಧರ್ಮ ನ್ಯಾಯಗಳನ್ನು ಕಾಪಾಡಿಕೊಂಡು ಬರಬೇಕಾದರೆ ಇಂತಹ ಮೌಲ್ಯಾಧಾರಿತ ಪಕ್ಷ ಮತ್ತು ನಾಯಕರು ಬೇಕೇಬೇಕು.

ಕೆಂಗಲ್ ಹನುಮಂತಯ್ಯನವರು ೧೯೮೦ನೇ ಡಿಸೆಂಬರ್ ೧೮ರಂದು ಹೃದಾಯಘಾತ ದಿಂದ ಮರಣ ಹೊಂದಿದರು. ಕರ್ನಾಟಕ ರಾಜ್ಯ ಮತ್ತು ಭಾರತ ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿ ಅವಿಶ್ರಾಂತವಾಗಿ ದುಡಿದು, ತಮ್ಮ ಧೀಮಂತಿಕೆ, ಧೈರ್ಯ ಹಾಗೂ ಕಠೋರ ನಿಷ್ಠೆ ವ್ಯಕ್ತಿತ್ವಗಳಿಂದ ಅವಿಸ್ಮರಣೀಯ ನಾಯಕರಾಗಿದ್ದಾರೆ. ಸಮಕಾಲೀನ ರಾಜಕೀಯ ನಾಯಕರುಗಳಿಗೆ ಆದರ್ಶವಾಗಿದ್ದಾರೆ.

ಉಪಸಂಹಾರ

ಪ್ರಸ್ತುತ ಮೌಲ್ಯಾಧಾರಿತ ರಾಜನೀತಿಯೂ ಕ್ಷೀಣಿಸುತ್ತಿದೆ. ವಾಸ್ತವಿಕ ರಾಜಕಾರಣದಲ್ಲಿ ಕೆಲವೇ ಗಣ್ಯ ವ್ಯಕ್ತಿಗಳ ಹಿತವನ್ನು ರಾಜ್ಯದ ಹಿತವೆಂದು ಭಾವಿಸುವ ಇಂದಿನ ರಾಜಕೀಯ ಆಡಳಿತದ ಕ್ರಮವಾಗಿದೆ. ಒಂದು ಸಮಾಜವಲ್ಲಿ ವ್ಯಕ್ತಿಗಳು ನೀತಿ ವಂತರಾಗಿದ್ದರೆ ಸಮಾಜದ ಧ್ಯೇಯ, ಆದರ್ಶ ಗುರಿಗಳು ನೀತಿಯುಳ್ಳದ್ದಾಗಿರುತ್ತದೆ. ರಾಜಕೀಯ ದುಸ್ಥಿತಿಯ ಸಮಾಜದಲ್ಲಿ ವ್ಯಕ್ತಿಗಳ ಘನತೆ, ಗೌರವ ಗಾಂಭೀರ್ಯ, ಸಭ್ಯತೆಗಳು ಅಪರೂಪದ ವಸ್ತುಗಳೆಂದು ಪರಿಗಣಿಸಲ್ಪಡುತ್ತವೆ. ಇದಕ್ಕೆ ಸೇವೆಗಿಂತ ಧನ ಸಂಪಾದನೆಯೇ ಮುಖ್ಯ ಉದ್ದೇಶವಾಗಿರುವುದು ಮತ್ತು ಆಡಂಬರದ, ಉನ್ನತ

ಮಟ್ಟದ ಜೀವನ ಹಾಗೂ ಡಂಭಾಚಾರಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿರುವುದು ಮುಖ್ಯ ಕಾರಣಗಳಾಗಿವೆ.

ಭಾರತದ ಸರ್ವತೋಮುಖ ಅಭಿವೃದ್ಧಿಗೆ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಪರಸ್ಪರ ಸಹಕರಿಸಿ ಶ್ರಮಿಸುತ್ತಿರುವುದು ಪ್ರಶಂಸನೀಯವಾದುದ್ದು. ಆದಾಗ್ಯೂ ದೇಶದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದೆ. ಭ್ರಷ್ಟಾಚಾರ ಕಪ್ಪು ಹಣದ ಚಲಾವಣೆ ಮತ್ತು ನಿರುತ್ಸಾಹದ ಆಡಳಿತದಿಂದ ಜನರು ನೊಂದು ನರಳುತ್ತಿದ್ದಾರೆ. ಆದಾಯದ ಅಸಮಾನತೆ, ಅಸಮರ್ಪಕವಾದ ಆರ್ಥಿಕ ನೀತಿ, ದೋಷಪೂರಿತ ಬ್ಯಾಂಕಂಗಳ ರಚನೆ, ಪಂಚವಾರ್ಷಿಕ ಯೋಜನೆಗಳ ನಿಷ್ಕ್ರಿಯತೆ, ಅನಕ್ಷರತೆ, ಭಯಂಕರ ಬಡತನ ಮತ್ತು ಬೆಳೆಯುತ್ತಿರುವ ಜನಸಂಖ್ಯೆ ಇವುಗಳು ಇಂದಿನ ಭಾರತದಲ್ಲಿ ಎದ್ದು ಕಾಣುತ್ತಿರುವ ಕ್ಲೇಶಗಳು. ಮತ್ತೊಂದೆಡೆ ರಾಷ್ಟ್ರದ ಏಕತೆ ಐಕ್ಯತೆ ಸಮಗ್ರತೆಗೆ ಸವಾಲಾಗಿರುವ ಜಾತೀಯತೆ, ಮತೀಯತೆ, ಭಯೋತ್ಪಾದನೆ ಸಂಕುಚಿತವಾದ ಪ್ರಾಂತೀಯತೆ, ಭಾಷೆಯ ದುರಾಭಿಮಾನ, ಅಂಧಾನುಕರಣೆಗಳು, ಅಪ್ರಾಮಾಣಿಕತೆ, ಕಾಯಿದೆ ಉಲ್ಲಂಘನೆ, ಸಾರ್ವಜನಿಕ ಹಿತಾಸಕ್ತಿಯ ಬಗ್ಗೆ ಅಲಕ್ಷ್ಯ, ಸ್ವಾರ್ಥಪರತೆ ಮುಂತಾದವುಗಳು ಸಮಾಜದಲ್ಲಿ ತಾಂಡವವಾಡುತ್ತಿವೆ. ಇದರಿಂದಾಗಿ ರಾಷ್ಟ್ರದಲ್ಲಿ ಸತತ ಘರ್ಷಣೆಗಳು, ಹೋರಾಟಗಳು, ಪದೇ ಪದೇ ಉದ್ಭವಿಸಿ ಜನತೆಯಲ್ಲಿ ಅಶಾಂತಿ ತಲೆದೋರುತ್ತಿದೆ. ಇದಕ್ಕೆ ಮುಖ್ಯ ಕಾರಣ ಸಾಮಾಜಿಕ ಅವ್ಯವಸ್ಥೆಯೇ. ಇದು ರಾಜಕೀಯ ಅವ್ಯವಸ್ಥೆಗೆ ನಾಂದಿಯಾಗಿದೆ.

ಪ್ರಸ್ತುತ ಮಂತ್ರಿಗಳ ನಿರ್ಲಕ್ಷ್ಯ ಮನೋಭಾವನೆ, ಗುಂಪುಗಾರಿಕೆ, ಅಧಿಕಾರದಾಹ, ಶಾಸಕಾಂಗ ಸದಸ್ಯರ ನಿರಾಸಕ್ತಿ ಮತ್ತು ಗೈರುಹಾಜರಿ ಹಾಗೂ ಶಾಸಕಾಂಗ ಸದನಗಳಲ್ಲಿ ಸದಸ್ಯರ ಅಶಿಸ್ತು, ಅಶಾಂತಿ, ಅಸಭ್ಯ ವರ್ತನೆಗಳು ಶಾಸಕಾಂಗ ಪಾವಿತ್ರ್ಯತೆಗೆ ಧಕ್ಕೆ ಉಂಟಾಗಿದೆ. ಸಚಿವ ಸಂಪುಟದ ಸಚಿವರ ಸಂಖ್ಯೆ ಏರುತ್ತಿರುವಂತೆ ಸಚಿವರ ಗುಣಮಟ್ಟ ದಕ್ಷತೆ, ನಿಷ್ಠೆ, ಪ್ರಾಮಾಣಿಕತೆ, ಧರ್ಮಶ್ರದ್ಧೆಗಳು ಇಳಿಮುಖವಾಗಿದೆ. ನಾಡಿನ ಮುಖಂಡರುಗಳು ದೊಡ್ಡ ದೊಡ್ಡ ಆದರ್ಶ ಧ್ಯೇಯಗಳ ಬಗ್ಗೆ ಪ್ರತಿನಿತ್ಯವೂ ಭಾಷಣ ಬಿಗಿಯುತ್ತಾರೆ. ಆದರೆ ಅವರ ಭಾಷಣದಲ್ಲಿ ಸೂಚಿಸಲ್ಪಡುವ ಧ್ಯೇಯ ಆದರ್ಶಗಳು ಅವರ ಕೃತಿಯಲ್ಲಿ ಕಂಡುಬರುವುದಿಲ್ಲವಾದ್ದರಿಂದ ಸಾಮೂಹಿಕ ಧ್ಯೇಯ ಆದರ್ಶಗಳಿಗೂ ಮತ್ತು ಸ್ವಾರ್ಥಪರತೆಯಿಂದ ಕೂಡಿದ ವ್ಯಕ್ತಿಗಳ ಆಸೆ ಆಕಾಂಕ್ಷೆಗಳಿಗೂ ಸಾಕಷ್ಟು ಅಂತರವಿದೆ.

ರಾಜ್ಯದ ಅನುಕೂಲಗಳು ಅವಕಾಶಗಳು ಎಲ್ಲರಿಗೂ ಸಮಾನವಾಗಿರಬೇಕು ಎಂಬುದು ಸಂವಿಧಾನಾತ್ಮಕ ಹಾಗೂ ತಾತ್ವಿಕವಾಗಿದ್ದರೂ ನೈಜ ಜೀವನದಲ್ಲಿ ನಿರ್ಜೀವವಾಗಿರುವುದನ್ನು ಕಾಣಬಹುದು. ಇದನ್ನು ಸಜೀವಗೊಳಿಸಬೇಕಾದರೆ ಹಾಗೂ ಒಂದು ಸಮಾಜದ ವಿವಿಧ ಕಾಲ, ಪರಿಸ್ಥಿತಿ ಸಂದರ್ಭಗಳಲ್ಲಿ ಎದುರಾಗಬಹುದಾದಂತಹ ವಿಚಿತ್ರ ಸವಾಲುಗಳನ್ನು ಸಮಸ್ಯೆಗಳನ್ನು ಬಗೆಹರಿಸಲು ಶ್ರೀಯುತ ಕೆಂಗಲ್

ಹನುಮಂತಯ್ಯನವರ ದಕ್ಷತೆ ನಿಷ್ಠೆ; ಪ್ರಾಮಾಣಿಕತೆ ಸತ್ಯ, ನ್ಯಾಯ, ಧರ್ಮ ಶ್ರದ್ಧೆಯನ್ನು ಹೊಂದಿರುವಂತಹ ನಿಸ್ಪೃಹ ಹಾಗೂ ನಿಷ್ಠ ನಾಯಕರು ಬೇಕು.

ಯಾವುದೇ ಧ್ಯೇಯವನ್ನು ಸಾಧಿಸಲು ಗುರಿ ಎಷ್ಟು ಮುಖ್ಯವೋ ಸಾಧನವು ಅಷ್ಟೇ ಮುಖ್ಯ. ಆದರೆ ಕಾರ್ಲ್‌ಮಾರ್ಕ್ಸ್ ಮತ್ತು ಮೆಕಿವಲ್ಲಿ ಸಾಧನಕ್ಕಿಂತ ಗುರಿಯೇ ಮುಖ್ಯವೆಂದು ಪ್ರತಿಪಾದಿಸಿದ್ದಾರೆ. ಆದರೆ ಗಾಂಧೀಜಿಯವರ ಪ್ರಕಾರ ಯಾವುದೇ ಧ್ಯೇಯವನ್ನು ಸಾಧಿಸಲು ನಮ್ಮ ಗುರಿ ಎಷ್ಟು ಮುಖ್ಯವಾಗಿರುತ್ತದೆಯೊ ಸಾಧನವು ಕೂಡ ಅಷ್ಟೇ ಮುಖ್ಯವಾದುದು. ಗುರಿ ಮತ್ತು ಸಾಧನಗಳು ಎರಡೂ ಪರಿಶುದ್ಧವಾದಾಗ ಮಾತ್ರ ಶಾಶ್ವತವಾದ ಸುಧಾರಣೆಗಳು ಸಾಧ್ಯ. ನಮ್ಮ ರಾಜಕೀಯ ಮುಖಂಡರುಗಳು ಬಾಹ್ಯವಾದ (ಪೋಲೀಸ್, ಕಾನೂನು ಬಲ, ಹೆದರಿಕೆ, ಸರ್ಕಾರ) ಅಂಶಗಳ ಪ್ರಭಾವಕ್ಕೆ ಒಳಗಾಗಿ ವರ್ತಿಸುವ ಇಲ್ಲವೆ ನಿರ್ಣಯ ಕೈಗೊಳ್ಳುವ ಬದಲು ಆಂತರಿಕ ಪ್ರಜ್ಞೆ ಅಂದರೆ ಮನಸಾಕ್ಷಿಗೆ ಅನುಗುಣವಾಗಿ ಕೆಲಸ ಮಾಡಬೇಕು. ಆದ್ದರಿಂದ ಸಚ್ಚಾರಿತ್ರ್ಯ, ಸದೃಢ ಸಭ್ಯವಾದ ರಾಷ್ಟ್ರ ನಿರ್ಮಾಣವಾಗಬೇಕಾದರೆ ಕೆಂಗಲ್ ಹನುಮಂತಯ್ಯನವರಂತಹ ನಿರ್ಭಯರಾದ, ಸುಸಂಸ್ಕೃತರಾದ ಸಚ್ಚಾರಿತ್ರ್ಯ, ಸಭ್ಯಗುಣಗಳನ್ನು ಹೊಂದಿರುವಂತಹ ನಾಯಕರಿಂದ ಮಾತ್ರ ಸಾಧ್ಯ.

ಹನುಮಂತಯ್ಯನವರು ಕುಗ್ರಾಮವೊಂದರ ಅನಕ್ಷರಸ್ಥ ಕುಟುಂಬದಲ್ಲಿ ಜನಿಸಿ ಹಲವು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಕರ್ನಾಟಕ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದ ಇತಿಹಾಸದ ಪುಟಗಳಲ್ಲಿ ಕಂಗೊಳಿಸುವ ಧ್ರುವತಾರೆಯಾಗಿದ್ದಾರೆ. ಇವರು ಗಾಂಧಿಯುಗದ ಅನರ್ಘ್ಯರತ್ನ. ಹನುಮಂತಯ್ಯನವರ ವ್ಯಕ್ತಿತ್ವ ವರ್ಣರಂಜಿತ ವ್ಯಕ್ತಿತ್ವ. ಅವರೊಬ್ಬ ದೇಶಪ್ರೇಮಿ, ರಾಜಕಾರಣಿ, ಹೋರಾಟಗಾರ, ಸುಧಾರಕ, ಚಿಂತಕ, ಖಂಡಿತವಾದಿ, ಕ್ರಾಂತಿವಾದಿ, ಧೀಮಂತ ರಾಜಕಾರಣಿ, ಪ್ರತಿಭಾವಂತ ದೈವಭಕ್ತ. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಮುಖ್ಯಮಂತ್ರಿಯಾಗಿ, ರೈಲ್ವೆ ಸಚಿವರಾಗಿ ಹಾಗೂ ಭಾರತದ ಆಡಳಿತ ಸುಧಾರಣಾ ಸಮಿತಿಯ ಅಧ್ಯಕ್ಷರಾಗಿ ಮಾಡಿದಂತಹ ಸಾಧನೆಗಳು ಚಿರಸ್ಮರಣೀಯವಾದವುಗಳು.

ಅಡಿ ಟಿಪ್ಪಣಿ

1. Speech of K. Hanumanthaiah (in constituent Assembly Debate) quoted by: Morries Johnes—Parliament in India...p. 88.
2. ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ಮೈಸೂರು ವಿಧಾನಮಂಡಲದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಸಮಿತಿಯ ವರದಿಯ ಮತ್ತು ಮಸೂದೆಯ ಬಗ್ಗೆ ಮಾಡಿದ ಭಾಷಣಗಳು.

3. ಎಸ್. ನಿಜಲಿಂಗಪ್ಪ : ಕರ್ನಾಟಕ ಪರಂಪರೆ. ನಂ–೨ ಪುಟ–೫೬೨.
4. ನೂತನ ವಿದ್ಯಾಭ್ಯಾಸ : ಕೆ. ಹನುಮಂತಯ್ಯನವರ ಭಾಷಣಗಳ ಸಂಕಲನ ಸಂ : ಎಚ್. ಎಸ್. ಅಣ್ಣಯ್ಯಗೌಡ ಪುಟ–೧.
5. ನೂತನ ವಿದ್ಯಾಭ್ಯಾಸ : ಸಂ : ಎಚ್. ಎಸ್. ಅಣ್ಣಯ್ಯಗೌಡ
6. ಸಿ. ಸಿದ್ದರಾಮಯ್ಯ : ಕರ್ನಾಟಕ ದಿಗ್ಗಜ : ಕೆಂಗಲ್ ಪುಟ–೫೬.
7. ಸಿ. ಸಿದ್ದರಾಮಯ್ಯ : ಕರ್ನಾಟಕ ದಿಗ್ಗಜ : ಕೆಂಗಲ್ ಹನುಮಂತಯ್ಯ ಪುಟ–೩೪
8. ಸಿ. ಸಿದ್ದರಾಮಯ್ಯ : ಕರ್ನಾಟಕ ದಿಗ್ಗಜ : ಕೆಂಗಲ್ ಹನುಮಂತಯ್ಯ ಪುಟ–೩೬
9. ಡಿ. ಲಿಂಗಯ್ಯ (ಸಂ) : ರಾಜಕೀಯ ಪಟು ಕೆಂಗಲ್ ಹನುಮಂತಯ್ಯನವರ ಅಭಿನಂದನ ಗ್ರಂಥ ಪುಟ–೬೫
10. ಡಿ. ಲಿಂಗಯ್ಯ (ಸಂ) : ರಾಜಕೀಯ ಪಟು ಕೆಂಗಲ್ ಹನುಮಂತಯ್ಯನವರ ಸನ್ಮಾನ ಗ್ರಂಥ ಪುಟ–೬೩

ಜಿ. ಎಸ್. ಭಟ್ಟ

ಶಿವರಾಮ ಕಾರಂತರ ಯಕ್ಷಗಾನ ಪ್ರಯೋಗಗಳು

'ಕಡಲತೀರದ ಭಾರ್ಗವ' ಭಾರತೀಯ ಜ್ಞಾನಪೀಠ ಪ್ರಶಸ್ತಿಯ ವಿಜೇತ ಶಿವರಾಮ ಕಾರಂತರು ಅರ್ಧ ಶತಮಾನಕ್ಕೂ ಹೆಚ್ಚಿನ ಕಾಲ ಯಕ್ಷಗಾನದಲ್ಲಿ ನಡೆಸಿದ ಆಳವಾದ ಅಧ್ಯಯನ, ಸಂಶೋಧನೆ ಮತ್ತು ಪ್ರಯೋಗಗಳು ಭಾರತೀಯ ರಂಗಭೂಮಿಯಲ್ಲಿ ಅವರಿಗೊಂದು ವಿಶಿಷ್ಟ ಸ್ಥಾನ ಕಲ್ಪಿಸಿದೆ. ಕಾರಂತರು ಹುಟ್ಟಿದ್ದು ಬೆಳೆದು ಬಂದಿದ್ದು ಯಕ್ಷಗಾನದ ಪರಿಸರವಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಎಳವೆಯಿಂದಲೂ ಯಕ್ಷಗಾನ ಬಯಲಾಟಗಳನ್ನು ನೋಡಿ ಅವರು ಆ ಕಲೆಯ ಸೌಂದರ್ಯಕ್ಕೆ ಮಾರುಹೋದವರು. "ಯಕ್ಷಗಾನ ಕುಣಿತವಂತೂ ನನಗೆ ನಿತ್ಯ ಪರಿಚಯವಾದದ್ದು" ಎಂದು ಹೇಳಿಕೊಂಡ ಅವರು 'ನಮ್ಮ ಜಿಲ್ಲೆಯ ಅತ್ಯುತ್ತಮ ಕಲೆ ಯಕ್ಷಗಾನ. ಆಧುನಿಕ ಯುಗಕ್ಕೆ ಬೆಳೆಯಿಸಿ ತೋರಿಸಬಹುದಾದ ಅನೇಕ ಬಗೆಯ ವೈವಿಧ್ಯ, ಪರಿಪುಷ್ಟತೆಯುಳ್ಳದ್ದು ಎಂದು ಕಾಸರಗೋಡಿನಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನುಡಿದರು. ಯಕ್ಷಗಾನವನ್ನು ಕಾರಂತರು ಬಹುವಾಗಿ ಮೆಚ್ಚಿಕೊಂಡಿದ್ದೇಕೆ? ಅದಕ್ಕೆ ಅವರೇ ನೀಡುವ ಕಾರಣಗಳಿವು : 'ಇದೊಂದು ನಾಟಕ ಮಾಧ್ಯಮ, ಈ ದೇಶದಲ್ಲಿ ವಾಸ್ತವತೆಯನ್ನು ಬಳಸದೆ ಕಲ್ಪನಾ ವಿಲಾಸದ ಬಲದಿಂದಲೇ ಬೆಳೆದುಬಂದ ವಿಶಿಷ್ಟವಾದ ಮಾಧ್ಯಮ. ಇದರ ಯೋಗ್ಯತೆ ಬಾಲಿದ್ವೀಪ ಮತ್ತು ಥೈಲ್ಯಾಂಡಿನ ದೇಶೀ ನಾಟ್ಯ ವಿಭಾಗಗಳಷ್ಟೇ ಉತ್ಕೃಷ್ಟವಾದದ್ದು. ಇದರ ಸೌಂದರ್ಯವೆ ಸೃಷ್ಟಿ. ಇದರದೇ ಗೀತ ಮತ್ತು ಪ್ರದರ್ಶನ ಶೈಲಿಗಳಿಂದ ಹುಚ್ಚೆದ್ದು ನಾನು ಹಲವು ತರದ ನಾಟಕ ಪ್ರಯೋಗಗಳನ್ನು ಮಾಡಿದವನಾದ್ದರಿಂದ ಈ ದಾರಿಯ ಕೆಲವು ಮಿಂತಿಗಳನ್ನು ಕಂಡುಕೊಂಡೆ'. ಯಕ್ಷಗಾನ ಕುರಿತಂತೆ ಕಾರಂತರು ಬರೆಯಲು ಪ್ರಾರಂಭಿಸಿದ್ದು ೧೯೩೦ರ ದಶಕದಲ್ಲಿ, ಕಾರಂತರು ಯಕ್ಷಗಾನ ಕುರಿತಂತೆ ಬರೆದ ಪ್ರಥಮ ಲೇಖನ ಪ್ರಕಟವಾದದ್ದು 'ಜಯಕರ್ನಾಟಕ'ದಲ್ಲಿ (೧೯೩೪). 'ಕನ್ನಡ ನಾಟಕೂ ನರ್ತನವೂ' ಎಂಬ ಲೇಖನದಲ್ಲಿ ಅವರು ಯಕ್ಷಗಾನದ ರಾಕ್ಷಸ ವೇಷ ಅವರ ಮುಖವರ್ಣಿಕೆಗಳನ್ನು ಕುರಿತಂತೆ ವಿಶೇಷವಾಗಿ ಪರಿಚಯಿಸಿದರು. ದಸ್ಯುಗಳು ಮತ್ತು ಮಲೆಯರಿ ಕಾಡು ಜನರು ಮುಖಕ್ಕೆ ಚಿಟ್ಟೆಗಳನ್ನು ಬಳಿದುಕೊಳ್ಳುತ್ತಿದ್ದರು. ಇದೇ ರಾಕ್ಷಸವೇಷದ ಮೂಲ ಪ್ರೇರಣೆ ನೀಡಿರಬಹುದೆ ? ಎಂಬುದು ಅವರ ಊಹೆ.

ಅಮೆರಿಕದ ಖ್ಯಾತ ಕಾದಂಬರಿಕಾರ್ತಿ ಪರ್ಲ್‌ಬಕ್ ಅವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ 'ಏಷ್ಯಾ' ಪತ್ರಿಕೆಯಲ್ಲಿ ಕಾರಂತರು 'ಯಕ್ಷಗಾನದ ಸಿರಿವಂತಿಕೆ' ಲೇಖನವೊಂದನ್ನು ಬರೆದರು (೧೯೩೮). 'ಇಲ್‌ಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯ'ದಲ್ಲಿ ಯಕ್ಷಗಾನ ಕುರಿತಂತೆ ಅವರ ಸಚಿತ್ರ ಲೇಖನವೊಂದು ಪ್ರಕಟವಾಯಿತು. ಯಕ್ಷಗಾನ ಕುರಿತಂತೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರು ಮೂರು ಉಪನ್ಯಾಸಗಳನ್ನು ನೀಡಿದರು (೧೯೫೫). ಅವರ ಸುದೀರ್ಘ ಅಧ್ಯಯನದ ಫಲವೇ ೧೯೫೮ರಲ್ಲಿ ಪ್ರಕಟವಾದ 'ಯಕ್ಷಗಾನ ಬಯಲಾಟ' ಎಂಬ ಗ್ರಂಥ. ಈ ಪುಸ್ತಕದಲ್ಲಿ ಯಕ್ಷಗಾನದ ಪುನರುಜ್ಜೀವನಕ್ಕೆ ಅವರು ಹಲವು ಸಲಹೆಗಳನ್ನು ನೀಡಿದರು. ಅವರು ಮುಂದೆ ಕೈಗೊಂಡ ಹಲವು ಪ್ರಯೋಗಗಳ ಚಿಂತನೆ ಈ ಗ್ರಂಥದಲ್ಲಿದೆ. ಅವರು ಯಕ್ಷಗಾನ ಬಯಲಾಟದಲ್ಲಿ ಹೀಗೆ ಹೇಳಿದ್ದಾರೆ: 'ಯಕ್ಷಗಾನದ ಪಾಲಿಗೆ ಈಗ ಸಂಧಿಕಾಲವೇ ಬಂದಂತಿದೆ. ಅದನ್ನು ಜನರು ಪ್ರೋತ್ಸಾಹಿಸದೆ ಬೀಳು ಬಿಡುತ್ತಿದ್ದಾರೆ ಎನ್ನುವುದಕ್ಕಿಂತಲೂ ಹೆಚ್ಚಿನ ದುಃಖ ಆ ಕಲೆಯ ಆಳ ಶಕ್ತಿಯನ್ನರಿಯದೆ ಅದಕ್ಕೆ ಅಪಚಾರ ಮಾಡುತ್ತಿದ್ದಾರಲ್ಲ ಎಂಬುದು. ಇದನ್ನು ತಡೆಯುವ ದಾರಿ ಯಾವುದು ಎಂದು ನಾವು ಯೋಚಿಸಬೇಕಾದ ಕಾಲ ಬಂದಿದೆ. ನಾವೀನ್ಯತೆ ಈ ದೇಶೀಯ ಕಲೆಗೆ ವ್ಯತ್ಯಯವಾಗಿದೆ. ಯಕ್ಷಗಾನ ಉಳಿದು ಬಂದದ್ದು ಅದರ ಸಂಪ್ರದಾಯದಿಂದಲೇ ಹೊರತು ಕೇವಲ ಸಾಂಪ್ರದಾಯಿಕ ಅರಿವಿನಿಂದಲ್ಲ. ಸೃಷ್ಟಿಯ ಸ್ಫೂರ್ತಿಯಲ್ಲಿ ಹುಟ್ಟಿದ ನಾದ, ನೃತ್ಯ, ಬಣ್ಣಗಳು ಆಕಾರಗಳು, ಸಾಂಪ್ರದಾಯಿಕ ಅನುಸರಣೆಯಿಂದ ನಾವು ಉಳಿಸಿಕೊಳ್ಳಬಹುದು. ಆದರೆ ಅದನ್ನು ಬೆಳೆಸುವುದಕ್ಕೆ, ಸುಧಾರಿಸುವುದಕ್ಕೆ ಆ ಕ್ಷೇತ್ರದ ಪರಿಪೂರ್ಣ ಜ್ಞಾನವುಳ್ಳ ಪ್ರತಿಭಾವಂತ ಸೃಷ್ಟಿಕಾರರೇ ಬರಬೇಕು.'

"ಜ್ಞಾನವಿಲ್ಲದೆ ಗಣಪತಿ ಮಾಡಹೋಗಿ ಮಂಗನ ಮುಸುಡನ್ನು ನಿರ್ಮಿಸುವ ಮಹಾನುಭಾವರ ಹಾವಳಿಯಿಂದ ಯಕ್ಷಗಾನ ಕಲೆ ಪಾರಾಗಬೇಕು" ಎಂಬ ಕಳಕಳಿಯೇ ಅವರು ಆಳವಾಗಿ ಅಧ್ಯಯನ ನಡೆಸಿದ 'ಯಕ್ಷಗಾನ ಬಯಲಾಟ'. ಕಾರಂತರ ಯಕ್ಷಗಾನ ಬಯಲಾಟಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿತು. ಸ್ವೀಡೀಶ್ ಅಕಾಡೆಮಿ ಕಾರಂತರ ಈ ಗ್ರಂಥಕ್ಕೆ ಕಂಚಿನ ಪದಕ ನೀಡಿ ಗೌರವಿಸಿತು (೧೯೬೦). ತಮ್ಮ ಗ್ರಂಥದ ಬಗ್ಗೆ ಕಾರಂತರು ಹೀಗೆ ಹೇಳಿಕೊಂಡಿದ್ದಾರೆ—'ಪ್ರಾಮಾಣಿಕವಾಗಿ ನನಗೆ ಅನಿಸಿದ್ದನ್ನು ಹೇಳಿದ್ದೇನೆ, ಕೆಲವರ ಪ್ರಶ್ನೆ ಇದ್ದೀತು, ಕಾರಂತರಿಗೆ ಯಕ್ಷಗಾನದ ಮೇಲೆ ಬರೆಯುವ ಅಧಿಕಾರವೆಲ್ಲಿ? ಸಾಹಿತಿಗೆ ಸಂಶೋಧನೆ ಮಾಡುವ ಅಧಿಕಾರವೆಲ್ಲಿ ಎಂದು, ಅಂತಹ ಪ್ರಶ್ನೆಯೆಂದರೆ ಹಕ್ಕಿಯೊಡನೆ ನೀನೇಕೆ ಹಾರುತ್ತಿ? ಹೂವಿನೊಡನೆ ನೀನ್ಯಾಕೆ ಅರಳುತ್ತಿ? ಜೀವಿಯೊಡನೆ ನೀನ್ಯಾಕೆ ಬಾಳುತ್ತಿ? ಎಂದು ಕೇಳುವಷ್ಟೇ ವ್ಯರ್ಥ ಸಾಹಸವಾದೀತು". ತಮ್ಮ ಗ್ರಂಥದಲ್ಲಿ ಯಕ್ಷಗಾನದ ಪುನರುಜ್ಜೀವನಕ್ಕೆ ಕಾರಂತರು ಹಲವು ಅಮೂಲ್ಯ ಸಲಹೆಗಳನ್ನು ನೀಡಿದರು, ಅವುಗಳಲ್ಲಿ ಮುಖ್ಯವಾದವುಗಳೆಂದರೆ :

೧. ಬಯಲಾಟ ದೀರ್ಘ ಎಂಟು ಗಂಟೆಗಳ ಕಥಾಕಾಲಕ್ಷೇಪ
೨. ಭಾಗವತನ ಹಾಡುಗಾರಿಕೆಯನ್ನು ಮದ್ದಲೆಯ ಪೆಟ್ಟುಗಳಿಂದ ಮುಳುಗಿಸಬಾರದು.
೩. ರಂಗಸ್ಥಳ ಮುಖ್ಯಾಲು ವರ್ತುಲ ಮಟ್ಟದಲ್ಲಿರಬೇಕು.
೪. ತೆರೆ ಹಿಡಿಯುವ ಸಂಪ್ರದಾಯ ಮುಂದುವರೆಯಬೇಕು.
೫. ಸಭಾಲಕ್ಷಣ ಹೊತ್ತು ಕಳೆಯುವ ಸಾಧನವಾಗಬಾರದು.
೬. ಶೃಂಗಾರ ದುಃಖಗಳಲ್ಲಿ ನೃತ್ಯ ಮೇಳ ಬಡಕಲಾಗಿವೆ.
೭. ದುಃಖ ತೋಡಿಕೊಳ್ಳಲು ನಾವು ಬರಿಯ ಮಾತುಗಳಿಗೇನೆ ಶರಣು ಹೋಗಬೇಕಾಗಿಲ್ಲ.
೮. ವೇಷಭೂಷಣಗಳಲ್ಲಿ ಹಳೆಯ ಆಭರಣಗಳೇ ಉತ್ತಮವಾಗಿವೆ. ಅವನ್ನು ಇನ್ನಷ್ಟು ಹಗುರ ಮಾಡಬೇಕು.

೧೯೭೫ರಲ್ಲಿ ಕಾರಂತರ 'ಯಕ್ಷಗಾನ'ವೆಂಬ ಪುಸ್ತಕ ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಗಳಲ್ಲಿ ಪ್ರಕಟವಾಯಿತು. ಇದನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿತು. ಯಕ್ಷಗಾನದ ಬಗ್ಗೆ ಕಾರಂತರ ಕಲ್ಪನೆ ಹಾಗೂ ವರ್ಣರಂಜಿತ ಚಿತ್ರಗಳು ಈ ಗ್ರಂಥಗಳಲ್ಲಿವೆ.

ಕಾರಂತರು ಯಕ್ಷಗಾನ ಬಳಸಿಕೊಂಡು ತಮ್ಮ ಪ್ರಯೋಗ ಆರಂಭಿಸಿದ್ದು ೧೯೩೩ರಲ್ಲಿ ಪುತ್ತೂರಿನಲ್ಲಿ. ಅವರು ಕಿನ್ನರಿ ನೃತ್ಯ ಪ್ರದರ್ಶಿಸಿದರು. ಪಂಚವಟಿ, ಇಂದ್ರಕೀಲಿಕ, ಕೀಚಕವಧೆ ಮೊದಲಾದ ಯಕ್ಷಗಾನ ಪ್ರಸಂಗಗಳನ್ನು ಆಯ್ದುಕೊಂಡು, ನೃತ್ಯ ನಾಟಕಗಳನ್ನು ರಂಗದ ಮೇಲೆ ತಂದರು. ಈ ನೃತ್ಯ ನಾಟಕಗಳಿಗೆ ಹಿನ್ನೆಲೆಯಾಗಿ ಗಾಯನವಿತ್ತು. ಮಾತು ಹಾಡುಗಾರಿಕೆ ಇರಲಿಲ್ಲ. ೧೯೩೫–೩೭ರಲ್ಲಿ ಪುತ್ತೂರಿನಲ್ಲಿ ನವರಾತ್ರಿ ಹಬ್ಬದ ಕಾಲದಲ್ಲಿ ಇಂತಹ ನೃತ್ಯಗಾಯನ ಪ್ರಯೋಗಗಳನ್ನು ಅವರು ನಡೆಸಿದ್ದುಂಟು. ಯಕ್ಷಗಾನದ ಪ್ರಸಂಗಗಳನ್ನು ಮಾತ್ರ ಆಯ್ದುಕೊಂಡು ನೃತ್ಯಗಾಯನ ಮೊದಲಾದವುಗಳನ್ನು ಕಾರಂತರು ನೀಡಿದ್ದು ತಮ್ಮ ಕಲ್ಪನೆಯಿಂದ. ಕಾರಂತರ ಮುಂದಿನ ಹಲವು ಪ್ರಯೋಗಗಳಿಗೆ ಇದು ನಾಂದಿ ಎನಿಸಿತು. ಕಿನ್ನರ ನೃತ್ಯ ನಿರ್ದೇಶಿಸುವಾಗ ಕಾರಂತರು ಭಾವಿಸಿದ್ದು ಹೀಗೆ 'ಯಕ್ಷಗಾನ ಧಾಟಿಗಳು ರಾಗಗಳಲ್ಲಿ ವೈವಿಧ್ಯವಿಲ್ಲವಾದರೂ ಕುಣಿತಕ್ಕಾಗಿಯೇ ಮಾಡಿದ ರಚನೆಗಳು ಅವು. ಅವುಗಳ ನಾದ ತರಂಗತೆಯ Rhythm ನೃತ್ಯಗಳಿಗೆ ತುಂಬಾ ಅನುಕೂಲವಾದವು. ಎಲ್ಲಾ ರಸಗಳನ್ನು ಚಿತ್ರಿಸುವ ಶಕ್ತಿಯುಳ್ಳವು. ರೌದ್ರರಸಕ್ಕೆ ಲಾಲಿತ್ಯಕ್ಕೆ ಬೇಕಾಗುವ ವರ್ಚಸ್ಸು ಅವುಗಳಲ್ಲಿ ಬಹಳ. ಹೀಗಾಗಿ ಹಾಡುಗಳಿಗೆ ಹೊಂದಿ ಕುಣಿಯುವಾಗ ಭಾವವನ್ನು ಪ್ರದರ್ಶಿಸುವ ಕೆಲಸ ಸುಲಭವಾಯಿತು.

ಕಾರಂತರು ಕಿನ್ನರ ನೃತ್ಯ ಪ್ರಯೋಗವನ್ನು ೧೯೪೦ರವರೆಗೂ ಮುಂದುವರಿಸಿದರು. ಇದೇ ಸಂದರ್ಭದಲ್ಲಿ ಕಾರಂತರು ಯಕ್ಷಗಾನ ಪ್ರಚಾರವನ್ನು ಕೈಗೊಂಡಿದ್ದು ಉಲ್ಲೇಖನೀಯ. ಸಾಂಪ್ರದಾಯಿಕ ಯಕ್ಷಗಾನ ಕಲಾವಿದರನ್ನು ಸಂಘಟಿಸಿ ಬೆಂಗಳೂರು,

ಹುಬ್ಬಳ್ಳಿ, ಬೆಳಗಾವಿ, ಮುಂಬೈ ನಗರಗಳಲ್ಲಿ ಪ್ರದರ್ಶನ ನೀಡಿದ್ದುಂಟು. ತಮ್ಮ ಯಕ್ಷಗಾನಕ್ಕೆ ಸುಪ್ರಸಿದ್ಧ ಪಿಟೀಲು ವಾದಕ ವಿ.ಜೆ. ಜೋಗ್ ಅವರ ನೆರವನ್ನು ಕಾರಂತರು ಪಡೆದುಕೊಂಡರು. ಇಂತಹ ಸಾಂಪ್ರದಾಯಿಕ ಯಕ್ಷಗಾನ ವೀಕ್ಷಿಸಿದ ಅನೇಕ ಪಾಶ್ಚಾತ್ಯರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಆದರೆ ಆರ್ಥಿಕವಾಗಿ ನಷ್ಟ ಅನುಭವಿಸಿದ ಕಾರಂತರು ಯಕ್ಷಗಾನ ಕಲೆಯ ಉದ್ಧಾರ ಮತ್ತು ಪ್ರಚಾರದ ಗೀಳು ತಮಗೆ ಬೇಡವೆಂದು ಭಾವಿಸಿದರು. ಆದರೂ ಈ ಕಲೆಯ ಸಮ್ಮೋಹಿನಿಯಿಂದ ಹೊರಬರುವುದು ಅವರಿಗೆ ಸಾಧ್ಯವಾಗಲಿಲ್ಲ. ೧೯೩೦ರಿಂದ ೧೯೫೦ರವರೆಗೂ ಕಾರಂತರು ಯಕ್ಷಗಾನ ಅಧ್ಯಯನ ಹಾಗೂ ಸಂಶೋಧನೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. 'ಯಕ್ಷಗಾನದಂತಹ ಕಲೆಯು ತಿರುಗಿ ಉಚ್ಛ್ರಾಯ ಸ್ಥಿತಿಗೆ ಬಂದು ಜನರ ಸಂಸ್ಕೃತಿಗೆ ಚೆಲುವನ್ನು ಕೊಡಬೇಕಾದರೆ ಕೊರತೆಗಳು ಹೋಗಲೇಬೇಕಾಗುತ್ತವೆ. ಅಲ್ಲದೆ ಅವು ಇನ್ನೂ ಶಕ್ತಿಯುತವಾಗಿ ಬೆಳೆಯಬೇಕಾಗುತ್ತವೆ. ಅದು ಸುಧಾರಿಸಬೇಕು ಎಂಬ ಮಾತು ನಿಜ. ಈ ಸುಧಾರಣೆ ತನ್ನ ಹಾದಿ ಬಿಟ್ಟು ಅನ್ಯ ದಾರಿಯಲ್ಲಿ ಸರಿದು ಹೋದರೆ ಆಗ ಈ ಕಲೆ ಉಳಿಯುವುದಿಲ್ಲ; ಇನ್ನೊಂದು ಕಲೆ ಬರುತ್ತದೆ'. ಕಾರಂತರು ಯಕ್ಷಗಾನದ ಪುನರುಜ್ಜೀವನ ಅನಿವಾರ್ಯವೆಂದು ಭಾವಿಸಿದರು. ಕೇರಳದ ವಲ್ಲತ್ತೋಳ್, ಕಥಕ್ಕಳಿಯನ್ನು ಅಂತಾರಾಷ್ಟ್ರೀಯಗೊಳಿಸಿದರು. ಅಂತಹುದೇ ಸತ್ತ್ವಶಾಲಿಯಾದ ನಮ್ಮ ಮಣ್ಣಿನ ಕಲೆ ಯಕ್ಷಗಾನಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರೆಯಬಾರದೇಕೆ? ಎಂಬುದು ಕಾರಂತರ ಯೋಚನೆಯಾಗಿತ್ತು. ಕಾರಂತರು ವಿಶ್ವಸಂಚಾರಿ, ಅವರು ಹಲವಾರು ದೇಶಗಳಲ್ಲಿ ಪ್ರವಾಸ ಕೈಗೊಂಡು ಅಲ್ಲಿಯ ಜನಪದ ಕಲೆಗಳನ್ನು ಸ್ವತಃ ನೋಡಿದ್ದಷ್ಟೇ ಅಲ್ಲದೆ ಆ ಕಲೆಗಳ ಬಗ್ಗೆ ಆಳವಾಗಿ ಅಧ್ಯಯನ ಕೂಡ ಮಾಡಿದ್ದರು. 'ಹತ್ತು ದೇಶ ತಿರುಗಿ ಹಲವಾರು ನಾಟ್ಯ ಪರಂಪರೆಗಳನ್ನು ಕಂಡು ಅವುಗಳ ಸೊಗಸು ಎಲ್ಲಿದೆ ಎಂದು ಕಂಡುಕೊಂಡ ನಾನು ಕಲೆಯನ್ನು ಕಾಣುವಾಗಲೆಲ್ಲಾ ಕನ್ನಡದ ಮಿತಿ ಹಾಕಿಕೊಳ್ಳಲಿಲ್ಲ. ಯುಗೊಸ್ಲೋವಿಯಾದಲ್ಲಿ ಕಂಡದ್ದು ನ್ಯೂಯಾರ್ಕ್‌ನಲ್ಲಿ ಸವಿದಿದ್ದು ಸ್ಪೇನ್‌ನಲ್ಲಿ ಮೆಚ್ಚಿದ್ದು—ಹೀಗೆ ಒಂದೊಂದನ್ನೇ ಅಳೆದು ಸುರಿದು ಕಂಡಾಗ ಯಕ್ಷಗಾನದಲ್ಲಿ ಏನಿದೆ ಏನಿಲ್ಲ ಎಂಬುದರ ಪರಿಚಯ ನನಗಾಗುತ್ತದೆ. ನಾನು ಯಕ್ಷಗಾನವನ್ನು ನೋಡುವ ದೃಷ್ಟಿ ಈ ತೆರನಾದದ್ದು.' ಅವರು ಮುಂದುವರೆದು ಹೀಗೆ ಹೇಳಿದ್ದಾರೆ: 'ಯಾವುದೇ ಕಲೆ ಉಳಿಯಬೇಕಾದರೆ ಅದು ಮನ್ನಣೆಗಳಿಸಬೇಕಾದರೆ ಅದಕ್ಕೆ ಅಂತಾರಾಷ್ಟ್ರೀಯ ಸ್ವರೂಪ ಬರಲೇಬೇಕು. ಕಲೆಯ ಆಸ್ವಾದನಕ್ಕೆ ಕಾಲ ದೇಶ ಭಾಷೆಗಳ ಮಿತಿ ಇರಬಾರದು. ಭಾಷೆಬಾರದವರಿಗೂ ಯಕ್ಷಗಾನದ ಕಲೆಯ ಆಸ್ವಾದನೆ ಸಾಧ್ಯವಾಗಬೇಕು. ಕನ್ನಡ ಬಾರದವರಿಗೆ ಪ್ರವೇಶವಿಲ್ಲ ಎಂಬ ಬೋರ್ಡ್ ಹೊರಗಡೆ ತೂಗು ಹಾಕಿ ಪ್ರದರ್ಶಿಸುವ ಕಲೆ ಯಕ್ಷಗಾನ ಆಗುವುದಿಲ್ಲ.

೧೯೫೦ರಲ್ಲಿ ನವದೆಹಲಿಯಲ್ಲಿ ಸಂಗೀತ ನಾಟಕ ಅಕಾಡೆಮಿ ಆಶ್ರಯದಲ್ಲಿ ಭಾರತೀಯ ನೃತ್ಯಗಳನ್ನು ಕುರಿತಂತೆ ವಿಚಾರ ಗೋಷ್ಠಿ ಜರುಗಿತು. ಕರ್ನಾಟಕದ

ಪ್ರತಿನಿಧಿಯಾಗಿ ಕಾರಂತರು ಅದರಲ್ಲಿ ಪಾಲ್ಗೊಂಡರು. ಅಲ್ಲಿ ಯಕ್ಷಗಾನದ ಪ್ರಾತ್ಯಕ್ಷಿಕೆಯೊಂದನ್ನು ಕಾರಂತರು ನಡೆಸಿಕೊಟ್ಟರು. ಇದು ದೆಹಲಿಯಲ್ಲಿ ಯಕ್ಷಗಾನದ ಬಗ್ಗೆ ಆಸಕ್ತಿ ತಳೆಯಲು ಕಾರಣವಾಯಿತು ಎನ್ನಬಹುದು. ಕಾರಂತರು ತಾವು ಯೋಚಿಸಿದ್ದ ಪ್ರಯೋಗಕ್ಕೆ ಮುನ್ನ ಹಲವು ಗೋಷ್ಠಿಗಳನ್ನು ನಡೆಸಿದರು. ಯಕ್ಷಗಾನ ಶೈಲಿ ನಾಟ್ಯಗಳಲ್ಲಿ ಸುಧಾರಣೆ ಸಾಂಪ್ರದಾಯಿಕ ವೇಷಭೂಷಣಗಳ ರಕ್ಷಣೆ ಮೊದಲಾದವುಗಳನ್ನು ಬ್ರಹ್ಮಾವರದಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಚರ್ಚಿಸಲಾಯಿತು (೧೯೫೮). ಈ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಸಂಗೀತ ನಾಟಕ ಅಕಾಡೆಮಿಯ ಗೋವಿಂದ ವಿದ್ಯಾರ್ಥಿ ಹೀಗೆ ಬರೆದಿದ್ದಾರೆ: 'ಮುಂದಿನ ದಿನಗಳಲ್ಲಿ ಭಾರತೀಯ ಸಂಸ್ಕೃತಿಯ ಭೂಪಟದಲ್ಲಿ ಸಾಂಪ್ರದಾಯಿಕ ಯಕ್ಷಗಾನಕ್ಕೆ ಸಮುಚ್ಚಿತ ಸ್ಥಾನ ದೊರೆತಲ್ಲಿ ಅದರ ಪುನಶ್ಚೇತನದ ಆರಂಭ ಈ ವಿಚಾರ ಗೋಷ್ಠಿಯಲ್ಲಿ ಆಯಿತೆಂದು ನಿಶ್ಚಿಂತೆಯಿಂದ ಹೇಳಬಹುದು.' ಕಾರಂತರು ಕಲಾವಿದರು, ವಿದ್ವಾಂಸರೊಂದಿಗೆ ವಿಚಾರ ವಿನಿಮಯ ನಡೆಸಿದರು. ಅನಂತರ ೧೯೫೯–೬೧–೬೨ ರಲ್ಲಿ ಬ್ರಹ್ಮಾವರ, ಉಡುಪಿ, ಸಾಗರಗಳಲ್ಲಿ ಇಂತಹ ಗೋಷ್ಠಿಗಳನ್ನು ಏರ್ಪಡಿಸಿದರು. ಬ್ರಹ್ಮಾವರ ಉಡುಪಿಗಳಲ್ಲಿ ಅವರು ರಾಗ ಸಂಶೋಧನಾ ಶಿಬಿರವನ್ನು ಏರ್ಪಡಿಸಿದ್ದರು. ಸುಮಾರು ಅರವತ್ತು ವಿಶಿಷ್ಟ ರಾಗಗಳು ಯಕ್ಷಗಾನದಲ್ಲಿವೆ ಎಂಬುದನ್ನು ಅವರು ಕಂಡುಕೊಂಡರು. ಹಳೆಯ ಭಾಗವತರ ನೆರವು ಪಡೆದು ತಾವು ಕಂಡುಕೊಂಡ ರಾಗಗಳಿಗೆ ಕಾರಂತರು ಸ್ವರಪ್ರಸ್ಥಾನ ಹಾಕಿದರು. ಅವರು ಯಕ್ಷಗಾನ ಗೀತ ರೂಪಕವೊಂದನ್ನು ಪ್ರದರ್ಶಿಸಿದ್ದು ೧೯೫೨ ರಲ್ಲಿ. ಪ್ರಸಂಗ–ಶ್ರೀಕೃಷ್ಣಾರ್ಜುನ ಕಾಳಗ–ಮಾತು ಕುಣಿತಗಳೆರಡೂ ಇಲ್ಲದೆ ಇದೊಂದು ಯಕ್ಷಗಾನ ಗೀತನಾಟಕವಾಗಿತ್ತು. ಇದನ್ನು ಸ್ವತಃ ಕಾರಂತರೇ ನಿರ್ದೇಶಿಸಿದರು. ಯಕ್ಷಗಾನದ ಹೆಸರಾಂತ ಭಾಗವತರ ಸಹಕಾರವನ್ನು ಅವರು ಈ ಪ್ರಯೋಗಕ್ಕೆ ಪಡೆದರು.

ಕಾರಂತರ ಕನಸಿನ ಬ್ಯಾಲೆ ರೂಪುಗೊಂಡಿದ್ದು ೧೯೬೨ ರಲ್ಲಿ. 'ಭೀಷ್ಮವಿಜಯ' ಮತ್ತು 'ಅಭಿಮನ್ಯು ವಧೆ' ಪ್ರಸಂಗಗಳನ್ನು ಈ ಬ್ಯಾಲೆಗೆ ಅವರು ಆಯ್ದುಕೊಂಡಿದ್ದು. ಇದಕ್ಕೆ ಬೇಕಾದ ಕಲಾವಿದರನ್ನು ಕೂಡ ಸಾಂಪ್ರದಾಯಿಕ ಕಲಾವಿದರನ್ನೇ ಆಯ್ದುಕೊಂಡರು. ಆದರೆ ಅವರಿಗೆ ಕಾರಂತರು ಯುಕ್ತ ತರಬೇತಿ ನೀಡಿದರು. 'ಯಕ್ಷಗಾನ ಬಯಲಾಟವು ಮಾತಿನ ಮೇಲೆ ಅವಲಂಬಿಸದೆ ತನ್ನ ಗೀತ ನೃತ್ಯ ವೇಷ–ಭೂಷಣಗಳಿಂದ ನಾಡಿನ ಮೇರೆಯನ್ನು ಮೀರಲು ಸಾಧ್ಯವಾದೀತೆಂದು ಅವರು ಭಾವಿಸಿದರು. ೧೯೬೩ರಲ್ಲಿ 'ಬಭ್ರುವಾಹನ ಕಾಳಗ' 'ರತಿ ಕಲ್ಯಾಣ' ಬ್ಯಾಲೆಗಳನ್ನು ರೂಪಿಸಿದರು. 'ಶ್ರೀಕೃಷ್ಣಾರ್ಜುನ ಕಾಳಗ' ಸಿದ್ಧವಾದದ್ದು ೧೯೬೮ ರಲ್ಲಿ. ಇಂತಹ ಬ್ಯಾಲೆಗಳನ್ನು ರಂಗಕ್ಕೆ ತರಲು ಕಾರಂತರು ಪಟ್ಟ ಪರಿಶ್ರಮ ಅಸಾಧ್ಯವಾದದ್ದು. ಪ್ರದರ್ಶನದ ಕಾಲವನ್ನು ಅವರು ಇಳಿಸಿದ್ದು ಮೂರು ತಾಸಿಗೆ. ಯಕ್ಷಗಾನದ ಮಾತುಗಳನ್ನು ಸಂಪೂರ್ಣವಾಗಿ ತೆಗೆದುಹಾಕಿದರು. ತಮ್ಮ ಬ್ಯಾಲೆಯನ್ನು ಕನ್ನಡೇತರ ಪ್ರೇಕ್ಷಕರು ವೀಕ್ಷಿಸಿ ಸಂತೋಷಪಡಬೇಕೆಂಬುದು ಅವರ ಇಚ್ಛೆಯಾಗಿತ್ತು ಆದ್ದರಿಂದಲೇ ಸಂಭಾಷಣೆರಹಿತ ಪ್ರಯೋಗ ಅನಿವಾರ್ಯ

ವೆನಿಸಿತು. ತಮ್ಮ ಪ್ರಯೋಗಗಳಿಗೆ ಅವರು ಆರಿಸಿಕೊಂಡಿದ್ದು ಸಾಧ್ಯವಾದಷ್ಟು ತರುಣ ಕಲಾವಿದರನ್ನೇ. ಪ್ರತಿಯೊಂದು ಪ್ರದರ್ಶನಕ್ಕೆ ಮೊದಲು ಕಾರಂತರು ಈ ಕಲಾವಿದರಿಗೆ ಕನಿಷ್ಠ ಒಂದು ತಿಂಗಳ ಕಾಲ ತರಬೇತಿ ನೀಡಿದ್ದುಂಟು. 'ಯಕ್ಷಗಾನದಲ್ಲಿ ಸಂಗೀತ ಮತ್ತು ಕುಣಿತ ಸತ್ತ್ವಶಾಲಿಯಾದುದಾಗಿದೆ. ಆದ್ದರಿಂದ ಇದು ನೃತ್ಯರೂಪಕ ಇಲ್ಲವೆ ಬ್ಯಾಲೆಯಾಗಿ ಪ್ರದರ್ಶನಗೊಳ್ಳಲು ಯೋಗ್ಯವಾದ ಕಲೆಯೆಂದು' ಅವರು ಭಾವಿಸಿದರು. ರೂಪಕದಲ್ಲಿ ಕುಣಿತ ಮತ್ತು ಅಭಿನಯಗಳಿಗೆ ಹೆಚ್ಚು ಒತ್ತು ನೀಡಿದರು. ಕಲಾವಿದ ತನ್ನ ಭಾವವನ್ನು ಅಭಿವ್ಯಕ್ತಪಡಿಸಲು ಅವರು ಹೆಚ್ಚಿನ ಅವಕಾಶ ಕಲ್ಪಿಸಿದರು. ಸಾಂಪ್ರದಾಯಿಕ ಯಕ್ಷಗಾನದಲ್ಲಿ ಒಂದು ಮದ್ದಳೆ ಬಳಸಿದರೆ ಕಾರಂತರು ಎರಡು ಅಥವಾ ಮೂರು ಮದ್ದಳೆ ಬಳಸಿದರು. ಶೃಂಗಾರ. ವೀರ, ರೌದ್ರ–ಹೀಗೆ ವಿವಿಧ ಭಾವಗಳಿಗೆ ತಕ್ಕಂತೆ ಒಂದೊಂದು ಮದ್ದಳೆಗೆ ಬಾರಿಸಲಾಗುತ್ತಿತ್ತು. ಹಿಮ್ಮೇಳದ ವಾದ್ಯಗಳು ಹಾಡಿಗೆ ಪೂರಕವಾಗಿರಬೇಕೆಂದು ಕಾರಂತರು ಭಾವಿಸಿದ್ದರು. ವೈಲಿನ್ ಮತ್ತು ಸೆಕ್ಸೊಫೋನ್ ಗಳಂತಹ ಆಧುನಿಕ ವಾದ್ಯ ಪರಿಕರಗಳನ್ನು ತಮ್ಮ ಬ್ಯಾಲೆಗೆ ಬಳಸಿಕೊಂಡರು· ಹಿನ್ನೆಲೆಯು ಪ್ರಸಂಗ ಸರಳ ಭಾಷೆಯಲ್ಲಿರುವಾಗ ಭಾಗವತನ ಹಾಡುಗಾರಿಕೆಯೇ ಮಾತಿನ ಕೆಲಸ ಮಾಡಲಾರದೆ ? ಆತ ಕಿರುಚದೆಯೇ ಮಾತುಗಳ ಸ್ಪಷ್ಟತೆಯನ್ನು ಇರಿಸಿಕೊಂಡು ಶಬ್ದಗಳನ್ನು ಒಡೆದು ಅಭಾಸಗೊಳಿಸಬಾರದು. ಕೆಲವರಿಗೆ ತಾವು ಹಾಡುವಂತಹ ಹಾಡುಗಳಿಗೆ ಭಾವ ಅರ್ಥಗಳು ಇವೆ ಎಂದೆನಿಸುವುದಿಲ್ಲ. ಅದು ತಿಳಿದಮೇಲೆ ದುಃಖವನ್ನು ದುಃಖವಾಗಿಯೇ, ಹಿಗ್ಗನ್ನು ಹಿಗ್ಗಾಗಿಯೂ ಹಾಡಿಯೇ ತೋರಿಸಬೇಕು. ಹಿಮ್ಮೇಳದವರು ಹಾಡುಗಳನ್ನು ಮದ್ದಲೆಯ ಪೆಟ್ಟುಗಳಿಂದ ಮುಳುಗಿಸಬಾರದು. ಸಮರ್ಥ ಭಾಗವತ ತನ್ನ ಹಾಡುಗಾರಿಕೆಯಿಂದಲೇ ಕಥೆಯನ್ನು ನಿರೂಪಿಸಬಲ್ಲನೆಂಬು ದನ್ನು ಕಾರಂತರು ತೋರಿಸಿಕೊಟ್ಟರು. ಹಿಮ್ಮೇಳದ ವಾದ್ಯ ಕುರಿತಂತೆ ಇದು ಅವರ ಅನಿಸಿಕೆ 'ಹಿಮ್ಮೇಳದ ವಾದ್ಯಪರಿಕರಗಳನ್ನು ಇನ್ನೂ ಹೆಚ್ಚಿಸಿಕೊಳ್ಳಬೇಕು, ವಾದ್ಯ ಮೇಳ ಗಳಲ್ಲಿ ನಮ್ಮಲ್ಲಿ ಪ್ರಚಾರದಲ್ಲಿರುವ ಎರಡು ಮೂರು ತರದ ಮದ್ದಲೆಗಳನ್ನು ಸಂದರ್ಭಕ್ಕೆ ತಕ್ಕಂತೆ ಹೊಂದಿಸಬಹುದು. ಚಂಡೆಯನ್ನು, ರೌದ್ರಕ್ಕಷ್ಟೆ ಕಾದಿರಿಸುವುದು ಒಳ್ಳೆಯದು· ಭಾಗವತನಿಗೆ ವಿಶ್ರಾಂತಿಕೊಡಲು ಪಿಟೀಲನ್ನು ಸಹಾಯಕ ವಾದನವನ್ನಾಗಿ ಬಳಸ ಬಹುದು. ಆಧುನಿಕ ಕ್ಲ್ಯಾರೋನೆಟ್ ಇದಕ್ಕೊದಗಿಸಬಹುದು. ಉಗ್ರ ಸನ್ನಿವೇಶಗಳಲ್ಲಿ ಚರ್ಮವಾದ್ಯಗಳದ್ದೇ ಆರ್ಕೆಸ್ಟ್ರಾ ಬಳಸಿಕೊಳ್ಳಬಹುದು. ತಬಲ ತರಂಗಗಳಂತೆ ವಿವಿಧ ಗಾತ್ರದ ಚಂಡೆಗಳ ನಾದ ತರಂಗವು ವಿಶಿಷ್ಟ ಪರಿಣಾಮವೆಸಗೀತು ; ಶೃಂಗಾರ ದುಃಖ ಪ್ರಸಂಗಗಳಲ್ಲಿ ಯಕ್ಷಗಾನ ಕುಣಿತ ತುಂಬಾ ಬಡಕಲು ಎಂದು ಭಾವಿಸಿದ ಕಾರಂತರು ಅದಕ್ಕಾಗಿಯೇ ತಮ್ಮ ಸಂಶೋಧನೆಯನ್ನು ಈ ನಿಟ್ಟಿನಲ್ಲಿ ಮುಂದುವರಿಸಿದ್ದುಂಟು.

ಕಾರಂತರು ಬ್ಯಾಲೆಗಳಲ್ಲಿ ಸಂಪ್ರದಾಯವನ್ನು ಬಿಡಲಿಲ್ಲ, ಸಂಪ್ರದಾಯದ ಭಾಗವತರನ್ನು ಬಳಸಿಕೊಂಡರು. ಆದರೆ ವೈವಿಧ್ಯಮಯ ನೃತ್ಯ ಮತ್ತು ವಿಸ್ತಾರವಾದ ಭಾವವನ್ನು ಅಭಿವ್ಯಕ್ತಗೊಳಿಸುವಂತೆ ಮಾಡಿದರು. ಕಾರಂತರ ಯಕ್ಷಗಾನ ಬ್ಯಾಲೆ

ರೂಪುಗೊಂಡಿದ್ದು ಅವರ ಪರಿಪಕ್ವವಾದ ಅನುಭವದಿಂದ. ಅವರು ಬಳಸಿದ್ದು ಸರಳವಾದ ದೀಪದ ವ್ಯವಸ್ಥೆ. ಪಾತ್ರಗಳ ಚಲನೆಯ ಕಡೆ ಅವರು ವಿಶೇಷ ಗಮನ ಹರಿಸಿದರು. ಪ್ರತಿಯೊಬ್ಬ ಕಲಾವಿದನೂ ತನ್ನ ಕುಣಿತ ಮುಗಿದ ಬಳಿಕವೂ ಭಾವವನ್ನು ಅಭಿವ್ಯಕ್ತಿಗೊಳಿಸುವುದು ಅನಿವಾರ್ಯವೆನಿಸಿತು. ರಂಗದ ಹಿಂದೆ ಅವರು ಬಳಸಿದ್ದು ಸಾದಾ ಹಿಂದೆರೆಯನ್ನು. ಸ್ತ್ರೀವೇಷ, ಖಂಪಿ, ಬ್ರಾಹ್ಮಣ ಮೊದಲಾದ ವೇಷಗಳಲ್ಲಿ ಅವರು ಅಲ್ಲಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡರು. ರಟ್ಟು ಬಣ್ಣ ಬೇಗಡೆಗಳಿಂದ ಸ್ತ್ರೀವೇಷದ ಆಭರಣಗಳನ್ನು ಸ್ವತಃ ಕಾರಂತರೇ ಸಿದ್ಧಪಡಿಸಿದ್ದುಂಟು. ಕಿರಾತ ವೇಷಕ್ಕೂ ಅವರೊಂದು ರೂಪು ಕೊಟ್ಟರು. ಅದನ್ನು ಕಾರಂತರು ರೂಪಿಸಿದ್ದು ಸಾಂಪ್ರದಾಯಿಕವಾಗಿ. ದೂತನಿಗೆ ಹಳೆಯ ವೇಷಭೂಷಣ ಜಾರಿಗೆ ತಂದರು. ರಂಗದಲ್ಲಿ ವರ್ಣಸ್ವಾಮ್ಯ ಇರಬೇಕು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಉಡುಗೆ ತೊಡುಗೆಗಳು ಅವುಗಳ ಬಣ್ಣ ಪರಸ್ಪರ ಹೊಂದಿಕೆಯಾಗಬೇಕು ಎನ್ನುವುದು ಅವರ ಕಲ್ಪನೆಯ ಉದ್ದೇಶವಾಗಿತ್ತು. ಆಭರಣಗಳು ಭಾರವಿರುವುದರಿಂದ ಕುಣಿಯುವುದು ಕಷ್ಟವಾಗುತ್ತದೆಯೆಂದು ಅವರು ಭಾವಿಸಿದರು. ಸಾಂಪ್ರದಾಯಿಕ ಮುಂಡಾಸಿನ ಭಾರವನ್ನು ಕಡಿಮೆ ಮಾಡಿದರು. ಕೆ. ವಿ. ಸುಬ್ಬಣ್ಣ ಅವರು ಬರೆದಂತೆ 'ಇಡೀ ವೇಷಭೂಷಣ ಪ್ರಸಾದನಗಳಲ್ಲಿ ಯಕ್ಷಗಾನದ ಮೂಲ ಕಲ್ಪನೆ ಯಾವ ಕನಸಿನ ಬೆಡಗಿಗೆ ರೂಪು ಕೊಟ್ಟಿತೊ, ಅಂತಹ ಬೆಡಗಿಗೆ ಪೋಷಕವಾಗುವ ಹಾಗೂ ನೃತ್ಯ ಚಲನೆಯಲ್ಲಿ ಸೊಗಸುವ ವರ್ಣರೇಖೆಗಳ ಸಂಯೋಜನೆ ಕಲ್ಪಿತವಾಗುವಂತೆ ಅವರು ವಸ್ತ್ರ, ಒಡವೆ, ಅಲಂಕಾರಗಳನ್ನು ಯೋಜಿಸಿಕೊಂಡರು. ಉಡುಪುಗಳನ್ನು ಆಯ್ದುಕೊಳ್ಳುವಾಗಲೂ ಕಾರಂತರು ರಂಗದಮೇಲೆ ಹೊಂದುವಂತಹ ಬಣ್ಣವನ್ನೇ ಆರಿಸಿದರು.' ಕಾರಂತರ ಬ್ಯಾಲೆಯಲ್ಲಿ ಪಾಲ್ಗೊಂಡಿದ್ದ ಕಲಾವಿದರೊಬ್ಬರು ಹೀಗೆ ದಾಖಲಿಸಿದ್ದಾರೆ: "ಹಿರಿಯ ನರ್ತಕರ ಹಿಂದೆ ಬಹುಕಾಲ ಕುಣಿತ ನಡೆಸಿದ ಅಭ್ಯಾಸ ನಮ್ಮದು. ಕಾರಂತರು ಯಾವ ಲೆಕ್ಕ? ಇವರಿಂದೇನು ನಮಗೆ ಶಿಕ್ಷಣ ಎನ್ನುತ್ತಿದ್ದ ನಮ್ಮ ಒಬ್ಬೊಬ್ಬ ಕಲಾವಿದರೂ ಕಾರಂತರ ಕುಣಿತದ ವೈಖರಿ ಮುಖಮಂಡಲದಿಂದ ಹೊಮ್ಮುತ್ತಿದ್ದ ಭಾವ ಇವುಗಳನ್ನು ನೋಡಿಯೇ ನಾವು ಇವರಲ್ಲಿ ಕಲಿಯುವುದು ಉಂಟು ಎಂದು ಆಮೇಲೆ ಅಂದುಕೊಂಡಿದ್ದು".

ಕಾರಂತರ ಬ್ಯಾಲೆ ರಂಗದ ಮೇಲೆ ಬಂದಾಗ ಹಲವು ಪ್ರತಿಕ್ರಿಯೆಗಳು ಬಂದವು. 'ಸ್ವಾಮಿ ಮಾತು ತೆಗೆದು ಯಕ್ಷಗಾನವನ್ನು ಕಥಕ್ಕಳಿ ಮಾಡಿಬಿಟ್ಟಿರಿ' ಎನ್ನುವುದು ಅಂತಹವುದರಲ್ಲಿ ಒಂದು. ಕಲೆಯ ಕುಲಗೆಡಿಸದಂತೆ ಕಾರಂತರ ತಡೆಯಿರಿ ಎಂಬ ಮನವಿ ಪತ್ರಗಳು ಸರ್ಕಾರಕ್ಕೆ ಹೋದುವು. ಇದಕ್ಕೆಲ್ಲಾ ಕಾರಂತರ ಪ್ರತಿಕ್ರಿಯೆ ಹೀಗಿತ್ತು: "ಅಷ್ಟು ಸುಂದರವಾದ ವೇಷ ಅಷ್ಟು ಸುಂದರವಾದ ಸಂಗೀತ ಅಷ್ಟು ಸುಂದರವಾದ ಕುಣಿತ ಇವನ್ನೆಲ್ಲಾ ತೆಗೆದುಬಿಟ್ಟು ಗುಬ್ಬಚ್ಚಿಗಳ ಹಾಗೆ ಕುಳಿತುಕೊಂಡು ಮಾತನಾಡುವುದು ಅಪಚಾರವಲ್ಲ, ನಾನು ಮಾತು ತೆಗೆದುಬಿಟ್ಟದ್ದು ಮಾತ್ರ ಈ ಬುದ್ಧಿವಂತರಿಗೆ ಮಹಾಪರಾಧವಾಯಿತು. ನನಗೆ ಯಕ್ಷಗಾನದಲ್ಲಿ ಸತ್ತ್ವ ಕಾಣುತ್ತಾ ಇದೆ. ಅದನ್ನು

ನನಗೆ ಕಾಣಿಸಿದವರು ಕಲಾವಿದರು. ಅಂದರೆ ಈ ಕಲೆಯು ವ್ಯವಸಾಯನಿರತ ಕಲಾವಿದರು. ಕಾರಂತರ ಬ್ಯಾಲೆಯನ್ನು ಬ್ರಿಲಿಯಂಟ್ ಕೊರಿಯಾಗ್ರಫಿ ಎಂದು ಕರೆದವರುಂಟು. ಕಾರಂತರ ಕಲ್ಪನೆ ಹಲವು ದೃಶ್ಯಗಳಲ್ಲಿ ಸಾಕಾರ ರೂಪುಗೊಂಡಿತು. ಆಯುಧವಿಲ್ಲದೆ, ಯುದ್ಧ ಪ್ರದರ್ಶನ, ಅವರ ಅಭಿಮನ್ಯುವಧೆಯ ಚಕ್ರವ್ಯೂಹ ರಚನೆ ಅದ್ಭುತವಾದುದು. ಕನಕಾಂಗಿ ಕಲ್ಯಾಣದಲ್ಲಿ ಪಾತ್ರಧಾರಿಗಳು ಗೊಂಬೆಯಂತೆ ನಿಂತಿದ್ದ ದೃಶ್ಯ ರಮ್ಯವಾದುದು. ಜಲಕ್ರೀಡಾ ನೃತ್ಯವನ್ನು ಕಾರಂತರು ರೂಪಿಸಿದ್ದನ್ನು ಅನೇಕ ವ್ಯವಸಾಯಿ ಮೇಳಗಳು ಇಂದು ಅನುಸರಿಸುತ್ತಾ ಇವೆ. ಮೂಲೆಪಾಲಾದ ಹಳೆಯದೊಂದು ಕಥಾನಕವನ್ನು (ನಳದಮಯಂತಿ) ಕಾರಂತರು ಹಿಂದಿನ ಕಾಲಕ್ಕೆ ಒಪ್ಪುವ ರೀತಿಯಲ್ಲಿ ಅದನ್ನು ಆಧುನೀಕರಿಸಿದ್ದಾರೆ. ಅದರ ಅಂಕು ಡೊಂಕುಗಳನ್ನು ನಿವಾರಿಸಿದ್ದಾರೆ. ಅಲ್ಲದೆ ಅಲ್ಲಿನ ಮಾತುಗಾರಿಕೆಯನ್ನು ತೆಗೆದುಹಾಕಿ ಭಾವರಸಗಳು ನಿರಾಯಾಸವಾಗಿ ಹರಿಯುವಂತೆ ಮಾಡಿದ್ದಾರೆ. ಕಾರಂತರ ಈ ಬ್ಯಾಲೆಡ್ ಎಂಬುದು ಭಾರತದ ಬ್ಯಾಲೆಡ್ ಕ್ಷೇತ್ರದಲ್ಲಿ ಕಾಣಿಸಿಕೊಂಡ ನವನವೀನ ಪ್ರಯೋಗವೆಂದು 'ಟೈಮ್ಸ್ ಆಫ್ ಇಂಡಿಯಾ' ಬಣ್ಣಿಸಿತು.

ಕಾರಂತರ ಪ್ರಯೋಗಗಳ ಮುಂದುವರಿಕೆಗೆ ಒಂದು ವೇದಿಕೆ ಅಗತ್ಯವೆಂಬುದು ಅವರ ಸ್ನೇಹಿತರ ಹಾಗೂ ಯಕ್ಷಗಾನ ಪ್ರೇಮಿಗಳ ಅನಿಸಿಕೆಯಾಗಿತ್ತು. ಇದು ಸಾಕಾರ ರೂಪ ಪಡೆದದ್ದು ೧೯೭೧ರಲ್ಲಿ. ಕಾರಂತರ ನಿರ್ದೇಶನ, ಕು. ಶಿ. ಹರಿದಾಸ ಭಟ್ಟರ ಸಂಘಟನೆ, ಗುರು ವೀರಭದ್ರನಾಯಕ, ಹಿರಿಯಡ್ಕ ಗೋಪಾಲರಾವ್ ಇವರ ಸಹಕಾರದಿಂದ ಉಡುಪಿಯಲ್ಲಿ ಯಕ್ಷಗಾನ ಕೇಂದ್ರ ಮೈದಳೆಯುವಂತಾಯಿತು. ನಳದಮಯಂತಿ ಮತ್ತು ಕನಕಾಂಗಿ ಕಲ್ಯಾಣಗಳನ್ನು ಮೊದಲ ವರ್ಷ ಕಾರಂತರು ನಿರ್ದೇಶಿಸಿ ಪ್ರಯೋಗಿಸಿದರು. ಇಲ್ಲಿ ಕಾರಂತರ ಶಿಸ್ತು ಸೌಂದರ್ಯ ಪ್ರಜ್ಞೆಗಳು ಅಭಿವ್ಯಕ್ತಗೊಂಡವು. ಮಾಯಾದಿಬ್ಬಣ, ಸರ್ಪದ ರಕ್ಷಣೆಗಾಗಿ ಧಾವಿಸಿದ ನಳ-ಇವು ಅಪೂರ್ವ ದೃಶ್ಯಗಳೆನಿಸಿದವುಗಳಲ್ಲದೆ ಯಕ್ಷಗಾನ ಪ್ರೇಕ್ಷಕರು ಹಲವು ಕಾಲ ಮೆಲುಕು ಹಾಕುವಂತಹವುಗಳಾಗಿದ್ದುವು. ಸುದೀರ್ಘಕಾಲ ಕಾರಂತರು ನಡೆಸಿದ ಚಿಂತನೆ ಕಲ್ಪನೆಗಳು ಗರಿಗೆದರಿದವು. ಜಿ. ಆರ್. ಪಾಂಡೇಶ್ವರ್ ಅವರು ಈ ಪ್ರಯೋಗಗಳ ಬಗ್ಗೆ ಹೀಗೆ ಬರೆದಿದ್ದಾರೆ: 'ಮಾನ್ಯ ಕಾರಂತರು ಯಕ್ಷಗಾನವನ್ನು ದೇಶವಿದೇಶದ ಕಲಾತಜ್ಞರ ಅವಗಾಹನೆಗಾಗಿ ಮಾಡಿರುವ ಈ ಸಾಹಸವು ಒಂದು ಸೂಕ್ತ ಯತ್ನ'.

ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಡೈರೆಕ್ಟರ್ ಆಗಿದ್ದ ಅಲ್ಕಾಜಿ ಉಡುಪಿಗೆ ಭೇಟಿ ನೀಡಿದಾಗ ಹೀಗೆ ಹೇಳಿದರು: 'ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಸಂಸ್ಥೆಯಲ್ಲಿ ತರಬೇತಿ ಹೊಂದಲು ಬರುವ ಕನ್ನಡಿಗರಿಗೆ ವಿಶಿಷ್ಟವಾದ ಈ ಕಲಾಪ್ರಕಾರದ ಹಾಗೂ ಕಲೆಯ ಗಂಧಗಳೆರಡೂ ಏಕೆ ಇರುವುದಿಲ್ಲ ಎಂಬುದು ಸಖೇದಾಶ್ಚರ್ಯವನ್ನುಂಟು ಮಾಡುವ ಸಂಗತಿ. ಅದು ಹೇಗೇ ಇರಲಿ, ಇನ್ನು ಮುಂದೆ ನಮ್ಮ ಸಂಸ್ಥೆಯಲ್ಲಿ ತರಬೇತಿ ಬಯಸುವ ಕನ್ನಡಿಗರಿಗೆ ಕನಿಷ್ಠ ಒಂದು ವರ್ಷ ಕಾಲ ಇಲ್ಲಿ ತರಬೇತಿ ಕೊಡುವುದು ಅವಶ್ಯಕವೆನಿಸಿದೆ. ರಾಷ್ಟ್ರದ ಈ ಅಮೂಲ್ಯ ಕಲೆ ಕಲಾ ಸಂಪತ್ತಿನ ರಕ್ಷಣೆಯಾಗಬೇಕು".

೧೯೭೩ರಲ್ಲಿ ಕಾರಂತರು ರಾಷ್ಟ್ರೀಯ ನಾಟಕ ಶಾಲೆ ವಿದ್ಯಾರ್ಥಿಗಳಿಗೆ 'ಭೀಷ್ಮ ವಿಜಯ' ಹಿಂದಿ ಯಕ್ಷಗಾನವನ್ನು ನಿರ್ದೇಶಿಸಿದರು. ಅವರೊಂದಿಗೆ ಸಹಕರಿಸಿದವರು ಬಿ. ವಿ. ಕಾರಂತರು. ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ರಾಮಗಾಣಿಗ, ಹಿರಿಯಡ್ಕ ಗೋಪಾಲರಾವ್, ಹೆರಂಜಾಲ ವೆಂಕಟರಮಣ ಮೊದಲಾದವರ ನೆರವನ್ನು ಅವರು ಪಡೆದುಕೊಂಡರು. ಹೀಗೆ ಕಾರಂತರು ಯಕ್ಷಗಾನದಲ್ಲಿ ನಿರಂತರವಾಗಿ ಪ್ರಯೋಗ ನಡೆಸುತ್ತಲೇ ಬಂದರು. ಅವರು ನಡೆಸಿದ ಪ್ರಯೋಗಗಳು ಅವರಿಗೆ ತೃಪ್ತಿ ತಂದಿವೆಯೇ? ಇದಕ್ಕೆ ಅವರೇ ಒಂದೆಡೆ ಉತ್ತರಿಸುತ್ತಾರೆ: "ನಾನು ಮಾಡಿದ ಹಲವಾರು ಸೃಷ್ಟಿಗಳು ಕೊನೆಯ ಹಂತದಲ್ಲಿ ನನಗೂ ತೀರ ತೃಪ್ತಿ ಕೊಡದೆ ಹೋಗಲೂ ಬಹುದು. ಒಂಟಿ ವೇಷವೊಂದು ರಂಗಸ್ಥಳಕ್ಕೆ ಬಂದಾಗ ತೃಪ್ತಿ ಕೊಡಬಹುದಾದ ವೇಷಭೂಷಣ, ಅದೇ ವೇಷ ಒಂದು ಗುಂಪಿನ ಜೊತೆಯಲ್ಲಿ ಕಾಣಿಸಿಕೊಂಡಾಗ ಅತೃಪ್ತವಾಗಿ ಕಾಣಿಸಬಹುದು. ಆದರೂ ಪ್ರಯತ್ನ ಮಾಡುತ್ತಾ, ಮಾಡುತ್ತಾ, ನಾಲ್ಕು ಹೆಜ್ಜೆ ಮುಂದಿಟ್ಟು ಒಂದಲ್ಲ ಒಂದು ದಿನ ತೃಪ್ತಿ ತಂದುಕೊಳ್ಳುವ ವಿಶ್ವಾಸ ನನ್ನದು".

ಸಂದರ್ಶನವೊಂದರಲ್ಲಿ ಕಾರಂತರು ಹೀಗೆ ಹೇಳಿದ್ದಾರೆ: 'ಕಲೆಯ ಸ್ವಭಾವ ತಿಳಿದು ದುಡಿಯುವುದು ನನ್ನ ಕೆಲಸ. ನನಗದರಿಂದ ಸಂತೋಷ. ಆದರೆ ಅದು ಪುನರುಜ್ಜೀವನಗೊಳ್ಳುತ್ತದೆಯೋ ಇಲ್ಲವೋ ಎಂಬ ವಿಚಾರ ಸಮಾಜವನ್ನೂ ಆ ಕಲೆಯನ್ನೂ ಅನುಸರಿಸಿಕೊಂಡಿರುವ ವ್ಯಕ್ತಿಗಳನ್ನು ಹೊಂದಿದೆ. ಯಕ್ಷಗಾನ ಉಳಿಯಬೇಕಾದ್ದು ಆ ವ್ಯವಸಾಯ ಮಾಡುವವರಿಂದ. ಅವರಿಗೆ ಯಕ್ಷಗಾನ ಕಲೆಯ ಆಳವಾದ ಪರಿಚಯ ಮಾಡಿಕೊಡುವ ಹಂಬಲ ನನ್ನದು. ಅದು ಯಶಸ್ವಿ ಆಗುತ್ತದೋ ಇಲ್ಲವೋ ಹೇಳಲಾರೆ. ಕೆಲವರಿಗಾದರೂ ಅದರ ನಿಜವಾದ ಸ್ವರೂಪ ತಿಳಿದೀತೆನ್ನುವುದು ನನ್ನ ನಂಬಿಕೆ. ಅವರು ಶಕ್ತಿ ಇರುವಷ್ಟು ನನ್ನ ಪ್ರಯತ್ನವನ್ನು ಅರ್ಥಮಾಡಿಕೊಂಡು ವ್ಯವಸಾಯದಲ್ಲಿ ಬಳಸಿಕೊಂಡರೆ ಅದೇ ಪ್ರಯೋಜನ. ನನಗೆ ಅವರಿಂದ ಪ್ರತ್ಯೇಕ ಸಿದ್ಧಿ ಆಗಬೇಕಾದ್ದೇನೂ ಇಲ್ಲ' ಇದು ಕಾರಂತರ ನಿಲವು.

ಡಾ. ಕೆ. ವೈ. ಬಾಲರಾಜ್

ಸಾಮಾಜಿಕ ಮತ್ತು ನೈತಿಕ ಸುಧಾರಕರಾಗಿ— ಕನಕದಾಸರು

ಕ್ರಿ.ಶ. ೧೨ನೆಯ ಶತಮಾನದಿಂದ ೧೬ನೆಯ ಶತಮಾನದ ಅಂತ್ಯದವರೆಗಿನ ಕಾಲವೆಂದರೆ ಕರ್ನಾಟಕದ ಅತಿ ಅದ್ಭುತ ತತ್ವಗಳ ಉನ್ನತ ವಿಚಾರಗಳ ತಾಕಲಾಟದ ಕಾಲವಾಗಿದೆ. ಈ ಕಾಲದಲ್ಲಿ ಬಸವಣ್ಣನವರ ವೀರಶೈವಧರ್ಮವು, ಶ್ರೀ ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತವು ಮತ್ತು ಶ್ರೀ ಮಧ್ವಾಚಾರ್ಯರ ದ್ವೈತ ಸಿದ್ಧಾಂತವು ಉಗಮಹೊಂದಿ, ಪರತತ್ವ ವಿವೇಚನೆಯನ್ನು ಅವರು ಉನ್ನತ ಮಟ್ಟಕ್ಕೇರಿಸಿದರು. ತಮ್ಮ ತಮ್ಮ ಮತ ಪ್ರಚಾರಕ್ಕೆ ಇವರೆಲ್ಲರೂ ಭಕ್ತಿಪಂಥವನ್ನೇ ಬಳಸಿಕೊಂಡಿದ್ದಾರೆ.

ತತ್ತ್ವವಿವೇಚನೆಗೂ ಭಕ್ತಿಮಾರ್ಗಕ್ಕೂ ತಳಕು ಹಾಕಿ ಹೃದಯಂಗಮವಾಗಿ ಉಪದೇಶ ಮಾಡಿದವರೆಂದರೆ ದ್ವೈತ ಸಿದ್ಧಾಂತದ ಪ್ರವರ್ತಕರಾದ ಶ್ರೀ ಮಧ್ವಾಚಾರ್ಯರೆಂದು ಹೇಳಬಹುದು. ಕರ್ನಾಟಕದ ಹರಿದಾಸ ಪರಂಪರೆಗೆ ಶ್ರೀ ಮಧ್ವಾಚಾರ್ಯರೇ ಮೂಲ ಪುರುಷರು. ತಮ್ಮ ಸಿದ್ಧಾಂತದಲ್ಲಿ ಪ್ರಮಾಣಗಳ ಸ್ವರೂಪವನ್ನು ಕೂಲಂಕಷವಾಗಿ ನಿರೂಪಿಸಿದ್ದಾರೆ. ಇದೇ ಕಾರ್ಯವು ಮುಂದೆ ಅನೇಕ ಜನರಿಂದ ಮುಂದುವರೆಯಲ್ಪಟ್ಟಿತು. ಮಧ್ವಾಚಾರ್ಯರ ನಂತರದ ಹರಿದಾಸರೆಲ್ಲರೂ ತಮ್ಮ ಕೀರ್ತನೆಗಳಿಗೆ ಮಧ್ವಮತವನ್ನು ಅಡಿಕಟ್ಟಾಗಿ ಮಾಡಿಕೊಂಡು ನೀತಿಬೋಧನದ ಜೊತೆಗೆ ಸಾಮಾಜಿಕ ಕಳಕಳಿಯನ್ನು ತಮ್ಮತಮ್ಮ ಹಾಡುಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಕರ್ನಾಟಕದಲ್ಲಿ ನೂರಾರು ಜನ ದಾಸರು ಆಗಿಹೋದರೂ, ಅವರಲ್ಲಿ ವಿಶೇಷ ಮಹತ್ವವುಳ್ಳವರೂ ಕೇವಲ ಕೆಲವರು ಮಾತ್ರ. ಅವರಲ್ಲಿ ಕನಕದಾಸರು ಕೂಡ ಒಬ್ಬರು. ದಾಸರು ತಮ್ಮ ಕೀರ್ತನೆಗಳನ್ನು ಎಲ್ಲಿಯೂ ಬರೆದಿಡಲಿಲ್ಲ. ತಮ್ಮ ಸಂಚಾರೀ ಜೀವನಾನುಭವದ ತಾಣದಲ್ಲಿ ಒಂದೊಂದು ನುಡಿಮುತ್ತು ಚೆಲ್ಲಿದ್ದಾರೆ. ಅವರ ಭಕ್ತರಲ್ಲಿ ಕೆಲವರು ಈ ನುಡಿಮುತ್ತುಗಳನ್ನು ಸಂಗ್ರಹಿಸಿದ್ದಾರೆ. ಅವೆಲ್ಲವೂ ಪರಿಪೂರ್ಣ ಹಾಡುಗಳು ಎಂದೆನಿಸುವುದಿಲ್ಲವಾದರೂ ದಾಸರ ಮನೋಭಾವನೆ, ಸಾಮಾಜಿಕ ಕಳಕಳಿಗಳನ್ನು ಅರ್ಥಮಾಡಿಕೊಳ್ಳಲು ನಮಗೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತದೆ.

ಹರಿದಾಸರಂತೆ ಕನಕದಾಸರು ಬ್ರಾಹ್ಮಣ ವರ್ಗದಲ್ಲಿ ಹುಟ್ಟಿದವರಲ್ಲ; ಆದರಂತೆಯೇ ಅವರು ದ್ವೈತ ಪ್ರಧಾನ ಭಕ್ತಿಪಂಥದ ಅನುಯಾಯಿಗಳೇ ?—ಎಂಬುದು ಸಂಶಯದ ಸಂಗತಿಯಾಗಿದೆ. ಕನಕದಾಸರು ತಮ್ಮ ಜಾತಿಯನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲವಾದರೂ, ತಾವು ಅನುಸರಿಸಿದ ಮತದ ಆಚಾರ್ಯ ಪುರುಷರನ್ನು, ತಮಗೆ ಆ ಮತದ ದೀಕ್ಷೆ ಕೊಟ್ಟಿರಬಹುದಾದ ಗುರುಗಳನ್ನು ತುಂಬು ಭಕ್ತಿಯಿಂದ ಹೆಸರೆತ್ತಿ ಹೇಳಿದ್ದಾರೆ. ಇವರು ರಚಿಸಿದ "ಮೋಹನ ತರಂಗಿಣಿ" ಎಂಬ ಶ್ರೀಕೃಷ್ಣ ಕಥಾವಸ್ತುವನ್ನು ಒಳಗೊಂಡ ಸಾಂಗತ್ಯ ಕಾವ್ಯದ ಪ್ರಾರಂಭದಲ್ಲಿ ಮೊತ್ತಮೊದಲು ಕಾಗಿನೆಲೆಯ ಆದಿಕೇಶವ ಸ್ವಾಮಿಯನ್ನು ಸ್ತುತಿಸಿದ್ದಾರೆ.

ಕನಕದಾಸರು ಶ್ರೀ ರಾಮಾನುಜಾಚಾರ್ಯರನ್ನು ಪರಿಪೂರ್ಣ ಭಕ್ತಿಯಿಂದ ಸ್ಮರಿಸಿರುವುದು ಅವರ ಕೀರ್ತನೆಯೊಂದರಲ್ಲಿ ಕಾಣಬಹುದು. "ರಾಮಾನುಜರೇ ನಮೋ ನಮೋ। ಸ್ವಾಮಿ ಲಕ್ಷ್ಮಣರೂಪ ನಮೋ ನಮೋ" ಎಂಬ ಹಾಡೊಂದನ್ನು ರಚಿಸಿದ್ದಾರೆ. ರಾಮಾನುಜರ ಗುರುಪರಂಪರೆಯ ತಾತಾಚಾರ್ಯರನ್ನು ತಮ್ಮ ಗುರುಸ್ಥಾನದಲ್ಲಿ ಇರಿಸಿಕೊಂಡು ಸ್ತುತಿಸಿದ್ದಾರೆ.

ಕನಕದಾಸರು ಹುಟ್ಟಿದ ಜಾತಿ ಯಾವುದೇ ಇರಲಿ—ಅವರು ಅನುಸರಿಸಿದ ಮತತತ್ತ್ವವು ರಾಮಾನುಜಾಚಾರ್ಯರ ವಿಶಿಷ್ಟಾದ್ವೈತವೆಂಬುದು ಕೂಡ ಒಂದಾಗಿದೆ ಎಂದು ನಮಗೆ ಕಂಡುಬರುತ್ತದೆ. ರಾಮಾನುಜಾಚಾರ್ಯರು ಮಾನವನ ದೈವಸಾಧನೆಗೆ ಭಕ್ತಿಯನ್ನೇ ಪ್ರಾಧಾನ್ಯವಾಗಿ ಹೇಳಿದ್ದಾರೆ. ಸರ್ವೋತ್ತಮನಾದ ಶ್ರೀ ಹರಿಯೇ ಭಕ್ತರ ಉಪಾಸ್ಯದೈವವೆಂದು ಉಪದೇಶಿಸಿದ್ದಾರೆ.

ಕನಕದಾಸರು ಬಾಡ ಎಂಬ ಗ್ರಾಮದಲ್ಲಿ ಕುರುಬ ಜಾತಿಯಲ್ಲಿ ಹುಟ್ಟಿ ಕಾಗಿನೆಲೆ ಎಂಬ ಇನ್ನೊಂದು ಗ್ರಾಮದಲ್ಲಿ ನೆಲೆಸಿದ್ದು ಹರಿದಾಸರಾದ ಮೇಲೆ ಕನ್ನಡನಾಡಿನ ಎಲ್ಲ ಭಾಗಗಳಲ್ಲಿಯೂ ಸಂಚರಿಸಿದರು. ಇವರು ವಿಜಯನಗರ ಸಾಮ್ರಾಜ್ಯವನ್ನು ಸಂದರ್ಶಿಸಿದಾಗ ವ್ಯಾಸರಾಯರ ಪ್ರಿಯಶಿಷ್ಯರಾಗಿ ಅವರಿಂದ ಉಪದೇಶ ಪಡೆದು ವೈಷ್ಣವಧರ್ಮ ಪ್ರಚಾರ ದೀಕ್ಷೆಯನ್ನು ಕೈಗೊಂಡು ದೇಶದಲ್ಲೆಲ್ಲಾ ಸಂಚರಿಸಿದರು.

ಮತಬೋಧನೆಯ ದೃಷ್ಟಿಯಿಂದ ವಿಚಾರಿಸಲು ಹರಿದಾಸರ ಕೀರ್ತನೆಗಳಲ್ಲಿ ಸಾಮಾನ್ಯವಾಗಿ ಮಧ್ವಮತ ತತ್ತ್ವಗಳು ಅಳವಟ್ಟಿರುವುದು ನಿಜ. ಆದರಿವು ಕೇವಲ ಮಧ್ವಮತ ಪ್ರಚಾರಕ್ಕಾಗಿಯೇ ಬರೆದವುಗಳೆಂದಲ್ಲ, ಈ ಮಾತನ್ನು ನಾವು ಲಕ್ಷ್ಯದಲ್ಲಿಡತಕ್ಕದ್ದು. ಮಧ್ವಮತ ತತ್ತ್ವಗಳನ್ನು ಹೊಂದಿವೆಯೆಂದ ಮಾತ್ರಕ್ಕೆ ಮಧ್ವಮತ ಪ್ರಸಾರವೆಂದು ತಿಳಿಯುವುದು ಉಚಿತವೆನಿಸಲಾರದು.

ಕನಕದಾಸರ ಪಾಲಿಗೆ ಸಿದ್ಧಾಂತಕ್ಕಿಂತ ಸಾಧನೆ ಮುಖ್ಯವಾದುದು. ಇಲ್ಲಿ ಇನ್ನೊಂದು ಮುಖ್ಯ ವಿಷಯವನ್ನು ಪ್ರಸ್ತಾಪಿಸಲೇಬೇಕು. ಅದು ಮಧ್ವಾಚಾರ್ಯರ ನಂತರ ಬೆಳೆದುಬಂದ ವ್ಯಾಸಕೂಟ-ದಾಸಕೂಟಗಳ ಭೇದವನ್ನು ನಾವು ಗಮನಿಸಬೇಕು.

ನಿಷ್ಠಾವಂತರಾದ, ಶಾಸ್ತ್ರೈಕನಿಷ್ಠರಾದ, ಸ್ವಮತಮಂಡನೆ—ಪರಮತಖಂಡನೆಯೇ ಪರಮಾರ್ಥಕ್ಕೆ ದಾರಿ ಎಂದು ಹಠ ಹಿಡಿದ ಮಡಿಯಗುಂಪಿಗೆ ವ್ಯಾಸಕೂಟದ ಹೆಸರಾಯಿತು. ಇದಕ್ಕೆ ಸೇರಿದವರಿಗೆ ಸಂಸ್ಕೃತಪಾಂಡಿತ್ಯ, ಸಚ್ಛಾಸ್ತ್ರ ವ್ಯಾಸಂಗ, ಸಿದ್ಧಾಂತ ಪ್ರಮೇಯಗಳ ಯುಕ್ತಾಯುಕ್ತ ಸಾಧನೆ, ಶಾಸ್ತ್ರಾಭ್ಯಾಸದಿಂದ ಬಂದ ಜ್ಞಾನ, ವರ್ಣಾಶ್ರಮ ಧರ್ಮಗಳಪಾಲನೆ ಇವು ಮುಖ್ಯವಾದವು. ಭಕ್ತಿಯ ಅಗತ್ಯವನ್ನು ಪ್ರಮೇಯವಾಗಿ ಗ್ರಹಿಸಿದರೂ ಅವರ ಒಲವೆಲ್ಲ ಜ್ಞಾನದ ಕಡೆಯೇ. ಸಾಧನೆಯ ಸ್ವಾರಸ್ಯವನ್ನು ಅವರು ಗ್ರಂಥಗಳಲ್ಲಿ ಬಲ್ಲರೇ ವಿನಾ ಅನುಭವದಲ್ಲಿ ಕಂಡರಿಯರು. ಆದರೆ ದಾಸಕೂಟದವರಿಗೆ ಭಕ್ತಿ ಮುಖ್ಯ. ಶಾಸ್ತ್ರಜ್ಞಾನ ಗೌಣ; ಸಾಧನೆಯ ಅನುಭವ ಮುಖ್ಯ. ಸಿದ್ಧಾಂತ ಗೌಣ, ದಾಸರು ವಾದ ವಿವಾದಗಳಿಗೆ ಮನ-ಸೋತವರಲ್ಲ: ವ್ಯಾಸಂಗ-ಪ್ರವಚನಗಳಲ್ಲಿ ಬಾಳನ್ನು ಕಳೆದವರಲ್ಲ. ಅವರ ಬಾಳಿನಲ್ಲಿ ಸಾಧನೆಗೆ ಹಿರಿಯ ಪಟ್ಟ, ಸಾಧನೆಯೆಂದರೆ ಭಗವತ್ತತ್ವ, ಸಾಕ್ಷಾತ್ಕಾರ, ಭಕ್ತಿ, ಇವುಗಳಿಗೆ ಯಾವುದೇ ಮತನಿಷ್ಠವಾದ ಸಿದ್ಧಾಂತವೊಂದರ ಕಟ್ಟುಪಾಡನ್ನು ತೊಡಿಸುವುದು ಸರಿಯಲ್ಲ. ಎಲ್ಲ ಸಂತರ, ಮಹಾತ್ಮರ ಸಮಾನವಾದ ಗುಣವನ್ನು ನಾವು ಕನಕದಾಸರಲ್ಲಿ ಗುರುತಿಸಬೇಕು. ಅವರು ಕೇವಲ ಮಾಧ್ವಸಂಪ್ರದಾಯದ ಪ್ರಚಾರಕರು ಎಂದು ಕಾಣಿಸಿದರೆ ತಪ್ಪಾಗುತ್ತದೆ; ಅವರ ಎತ್ತರವನ್ನು ಮುಟ್ಟಿದಂತೆ ಆಗುವುದಿಲ್ಲ.

ಕನಕದಾಸರ ನೀತಿಬೋಧೆ ಅಗಾಧವಾದದ್ದಾಗಿದೆ. ಭಕ್ತಿಯ ಮಹಿಮೆಯನ್ನು ಸಾರಿದ ದಾಸರು ಆದರ್ಶ ನೀತಿಬೋಧಕರಾಗಿದ್ದಾರೆ. ತಮ್ಮ ಜೀವಿತ ಕಾಲದಲ್ಲಿ ಸಮಾಜದಲ್ಲಿ ನಡೆದ ಅನ್ಯಾಯ, ಅನೀತಿ, ದರ್ಪಪ್ರತಿಷ್ಠೆ, ವರ್ಗಕಲಹ, ಜಾತೀಯತೆ, ಕುರುಡುನಂಬಿಕೆಗಳು, ಕಪಟ ಭಕ್ತಿಗಳನ್ನು ಬಲವಾಗಿ ಖಂಡಿಸಿದ್ದಾರೆ. ಇವರ ಸಾಹಿತ್ಯವು ಸಮಾಜದ ಲೋಪದೋಷಗಳಿಗೆ ಹಿಡಿದ ಕೈಗನ್ನಡಿಯೆಂಬಂತೆ ಅವರ ಹಾಡುಗಳಲ್ಲಿ ಸಮಾಜದ ಚಿತ್ರಣ ಮತ್ತು ಸುಧಾರಣೆಯ ಅಂಶಗಳು ದೊರೆಯುತ್ತವೆ.

ಸಂಸಾರ ಕೂಪದಲ್ಲಿ ಬಿದ್ದು ತೊಳಲುತ್ತಿರುವವರನ್ನು ಉದ್ದೇಶಿಸಿ ಕನಕದಾಸರು ಮಿತ್ರಸಮ್ಮಿತವಾದ ಉಪದೇಶ ಮಾಡಿದ್ದಾರೆ. ಕನಿಕರದಿಂದ ಮರುಗಿದ್ದಾರೆ. ಈ ಸಂಸಾರವನ್ನು ತ್ಯಜಿಸು ಎಂದಾಗಲಿ ಸಂನ್ಯಾಸಿಯಾಗಿ ತಪಸ್ಸನ್ನು ಆಚರಿಸು ಎಂದಾಗಲಿ ಇವರು ಹೇಳುವುದಿಲ್ಲ. ಮಾನವ ತನ್ನ ಅಜ್ಞಾನದಿಂದ ತೊಂದರೆಗಳನ್ನು ಸೃಷ್ಟಿಸಿಕೊಂಡು ಅದರಲ್ಲಿಯೇ ಸಿಲುಕಿ ಒದ್ದಾಡುತ್ತಾನೆ. ಇದು ತಿಳಿದೋ ತಿಳಿಯದೆಯೋ ನಡೆಯುವ ತಪ್ಪು. ಇಲ್ಲಿ ನಿರಾಶವಾದಕ್ಕೆ ಆಸ್ಪದವಾಗಬೇಕಿಲ್ಲ. ಸತ್ಯ, ಸದ್ವರ್ತನೆ, ಸಚ್ಚಾರಿತ್ರ್ಯ, ನಿರಹಂಕಾರ, ನಿರಾಡಂಬರ ಜೀವನ ಮುಂತಾದ ಸದ್ಗುಣಗಳು ನಮ್ಮ ಜೀವನಕ್ಕೆ ಬೆಳಕು ತರಬಲ್ಲ ಸುಲಭ ಸಾಧನಗಳು ಎಂದು ಸಾರಿ ಆಶಾವಾದದ ಮೂಲಕ ಜೀವನಕ್ಕೆ ಒಂದು ಅರ್ಥವನ್ನು ತೋರಿಸಿ, ಸಾರ್ಥಕ ಜೀವನ ಬಾಳಲು ಸಾಂಸಾರಿಕರನ್ನು ಹುರಿದುಂಬಿಸಿದ್ದಾರೆ.

ಕೇವಲ ಠಕ್ಕುದೇವತೆಗಳ, ಭೂತಗಳ ಗೊಡವೆ ಬಿಟ್ಟು ವಿಷ್ಣುವೇ ಪರದೈವವೆಂದು ನಂಬಿ ಉಳಿದ ದೇವರುಗಳ ಪೂಜೆ ವ್ಯರ್ಥವೆಂದು ಲೋಕಕ್ಕೆ ಸಾರಿ ಹೇಳಿದರು. ಇದರರ್ಥ ಉಗ್ರಪೂಜೆಗಳು, ಪ್ರಾಣಿ ಬಲಿಗಳು, ಮಾರಿ ಮಸಣಿ, ಚಂಡಿ, ಎಕ್ಕನಾತಿ, ಕಾಟಜಕ್ಕಿ ಯವರ ಪೂಜೆಗಳು ಬೇಡ ಎಂದಿದ್ದಾರೆ. ನಿನ್ನನ್ನೇ ಬೇಡಿ ತಿನ್ನುವ ದೈವಗಳು ನಿನಗೇನು ಕೊಡಬಲ್ಲವು ಅಥವಾ ಶಾಶ್ವತವಾದುದನ್ನು ಏನೂ ದಯಪಾಲಿಸವು ಎಂದು ಹೇಳಿದರು.

"ಕಣಿಯ ಹೇಳಬಂದೆ ನಾರಾಯಣನಲ್ಲದಿಲ್ಲವೆಂದು, ಬಿನಗು ದೈವದ ಗೊಡವೆ ಬೇಡಿ ನರಕ ತಪ್ಪದೋ" ಎಂದು ಕೀರ್ತನೆ ಪ್ರಾರಂಭಿಸಿ ಕುರಿ ಕೋಣಗಳ ಬಲಿ, ಚಿತ್ತಲೆ ಸೇವೆ, ಬೇವಿನುಡಿಗೆಯ ಸೇವೆಗಳನ್ನು ಉಗ್ರವಾಗಿ ಖಂಡಿಸಿ ಇಂತಹ ಸಿಕ್ಕ ಬಿನಗು ದೈವಗಳ ಗೊಡವೆಬೇಡ ಎಂದು ಹೇಳಿ "ದಾನಧರ್ಮವ ಮಾಡಿ ಸುಖಿಯಾಗು ಮನವೆ। ಹೀನವೃತ್ತಿಯಲಿ ನೀ ಕೆಡಬೇಡ ಮನವೆ। ಸಿರಿಯಾದಿಕೇಶವರಾಯನ ನೆರೆನಂಬಿ। ಸ್ಥಿರವಾದ ಪದವಿಯ ಪಡೆ ಹುಚ್ಚು ಮನವೆ? ಎಂದು ಕನಕದಾಸರು ಉಪದೇಶಿಸಿದರು. ಈ ರೀತಿಯ ಉಪದೇಶ ಅವರ ಸ್ವ-ಜಾತಿಯವರಿಗೆ ಸಹನೆಯಾಗ ಲಿಲ್ಲ. ಅವರು ಕನಕದಾಸರ ಮೇಲೆ ಸಿಟ್ಟಾಗಿ ಅವರಿಗೆ ಕಿರುಕುಳ, ಹಿಂಸೆ ಕೊಟ್ಟರೆಂದು ತೋರುತ್ತದೆ. ಆದ್ದರಿಂದಲೇ ಕನಕದಾಸರು "ಮುಟ್ಟಲಮ್ಮರು ಎನ್ನ ಬಂಧುಗಳು ಕಂಡರೆ ಅಟ್ಟಿ ಬಡಿವುತಲಿಹರೋ ಕೃಷ್ಣಾ" ಎಂದು ಮೊರೆಯಿಟ್ಟಿದ್ದಾರೆ. ಅದುವರೆಗೂ ಆ ಜನ ಯಾವ ದೇವರುಗಳನ್ನು ಪೂಜಿಸುತ್ತಿದ್ದರೋ, ಆರಾಧಿಸುತ್ತಿದ್ದರೋ ಆ ದೇವರು ಗಳನ್ನು ಠಕ್ಕುದೈವಗಳು, ಪೊಳ್ಳುದೈವಗಳೆಂದು ನಿಂದಿಸಿದರೆ ಅವರಿಗೆ ಹೇಗೆ ಸಹನೆಯಾಗ ಬೇಕು? ಮೇಲ್ಜಾತಿಯವರು ಕನಕದಾಸರನ್ನು ಹೀನಕುಲವೆಂದು ಜರಿಯುತ್ತಿದ್ದರು. ಅದರಂತೆಯೇ ಕುರುಬರು ನಮ್ಮ ಕನಕ ಮೇಲ್ಜಾತಿಯ ದೇವರಿಗೆ ಮನಸೋತು ನಮ್ಮ ದೈವಗಳನ್ನೇ ಟೀಕಿಸಿದ್ದಾನೆ ಎಂದು ಸ್ವ-ಜಾತಿಯವರಿಂದಲೇ ಹಿಂಸೆಗೆ ಗುರಿಯಾದನು. ಇಂತಹ ಹಿಂಸೆಗೆ, ಜನರ ಅಜ್ಞಾನಕ್ಕೆ ಬೇಸತ್ತು ಕನಕದಾಸರು "ನಾವು ಕುರುಬರು ನಮ್ಮ ದೇವರು ಬೀರಯ್ಯ" ಎಂದು ಹಾಡಿದರೂ ಕುರುಬ, ಕುರಿ, ಟಗರು, ತೋಳ, ಶ್ವಾನ ಈ ಪದಗಳನ್ನು ಸಾಂಕೇತಿಕ ಅರ್ಥದಲ್ಲಿ ಅರ್ಥೈಸಿ ಕೊನೆಯಲ್ಲಿ ಕಾಗಿನೆಲೆಯಾದಿಕೇಶವನ ಮನವೊಲಿಸಿ ಭಜಿಸದವನು ಹುಚ್ಚು ಕುರುಬ ಎಂದಿದ್ದಾರೆ. ಇಲ್ಲಿ ಯಾರ ಹಿಂಸೆಗೂ ಜಗ್ಗದೆ ಅಳುಕದೆ ಏಕಚಿತ್ತದಿಂದ ಹರಿಧ್ಯಾನ ಮಾಡಿದ್ದಾರೆ ಕನಕದಾಸರು. ಹಾಗೆಯೇ ಹರಿ ಮಹಿಮೆಯನ್ನು ಕೊಂಡಾಡಿ ಜನರಿಗೆ ಉಪದೇಶ ಮಾಡಿದ್ದಾರೆ.

ಕನಕದಾಸರ ಆಳವಾದ ಭಕ್ತಿ, ಸಾಧನೆ ಸಾಮಾನ್ಯ ಜನರಿಗೆ ಅರ್ಥವಾಗಲಿಲ್ಲ. ಒಬ್ಬ ಮಹಾಪುರುಷನ ಮನೋಧರ್ಮವನ್ನು ಅರ್ಥ ಮಾಡಿಕೊಳ್ಳಬೇಕಾದರೂ ಅವರಿಗೊಂದು ಯೋಗ್ಯತೆಯಿರಬೇಕು. ಆದರೆ ಆ ಯೋಗ್ಯತೆ ಎಲ್ಲರಲ್ಲೂ ಇರುವುದಿಲ್ಲ. ನಮ್ಮ ಧಾರ್ಮಿಕ, ತಾತ್ವಿಕ ಪರಂಪರೆಯಲ್ಲಿ ಈ ವಿಚಿತ್ರಗಳನ್ನು ಕಾಣಬಹುದು. ಮಹಾಪುರುಷರನ್ನು ಬದುಕಿದ್ದಾಗ ಚಿತ್ರಹಿಂಸೆಗೆ ಗುರಿಮಾಡಿ, ಅವರ ಸಾವಿಗೂ ಕಾರಣ

ವಾಗಿ ನಂತರ ಅವರನ್ನು ಪೂಜಿಸುವುದೋ, ಸ್ಮರಿಸುವುದೋ ಸಾಮಾನ್ಯ. ಸಾಕ್ರಿಟೀಸ್, ಏಸುಕ್ರಿಸ್ತ ಮುಂತಾದವರ ಜೀವನದಲ್ಲಿ ಇಂಥವುಗಳನ್ನು ಕಾಣುತ್ತೇವೆ.

ಕನಕದಾಸರ ಜೀವನದಲ್ಲೂ ಇಂಥ ದುರ್ದಶೆಯನ್ನು ಕಾಣುತ್ತೇವೆ. ಅಜ್ಞಾನಿಗಳ, ದುರಹಂಕಾರಿಗಳ, ಮೇಲ್ಜಾತಿಯವರ ದುರ್ವರ್ತನೆಯಿಂದ ಕನಕರು ಬಹಳವಾಗಿ ನೊಂದಿದ್ದರು. ಕೇವಲ ಕೀಳುಜಾತಿಯವನೆಂಬ ಅಪವಾದದಿಂದ ಅವಮಾನಿಸಲ್ಪಟ್ಟರು. ಕನಕರ ಧ್ಯಾನ, ತ್ಯಾಗ, ಭಕ್ತಿ ವಿಚಾರಗಳು ಮೇಲ್ಜಾತಿಯವರಿಗೆ ಅರ್ಥವಾಗಲಿಲ್ಲ. ಒಂದು ಕಡೆ ಅವರಿಗೆ ದೇವಾಲಯದಲ್ಲಿಯೇ ಪ್ರವೇಶ ಸಿಗಲಿಲ್ಲವೆಂದು ಕಾಣುತ್ತದೆ. ಮನನೊಂದು "ಬಾಗಿಲನು ತೆಗೆದು ಸೇವೆಯನು ಕೊಡೋ ಹರಿಯೆ, ಕೂಗಿದರೂ ದನಿ ಕೇಳಲಿಲ್ಲವೆ ನರಹರಿಯೇ ?" ಎಂದು ದೇವರಲ್ಲಿ ಮೊರೆಯಿಟ್ಟು ಕೊನೆಗೆ ಸವಿಯಾಸವಿಯವುಂಟೆ ನಿನಗೆ ಭಕ್ತವತ್ಸಲ, ಕಮಲಾಕ್ಷ ಕಾಗಿನೆಲೆಯಾದಿ ಕೇಶವನೆ' ಎಂದು ಭಗವಂತನನ್ನು ಮನಮುಟ್ಟಿ ಭಜಿಸಿದ್ದಾರೆ. ಇಲ್ಲಿ ನಾವು ಅವರ ತೀವ್ರಭಕ್ತಿಯ, ಶರಣಾಗತಿಯ ಭಾವವನ್ನು ಕಂಡರೂ ಈ ಘಟನೆಗಳು ಸಮಾಜದ ದುರಂತದ ಕಡೆಗೆ ಬೆರಳುಮಾಡಿ ತೋರುತ್ತವೆ.

ಕನಕದಾಸರು ವಿಜಯನಗರಕ್ಕೆ ಹೋಗಿ ಶ್ರೀವ್ಯಾಸತೀರ್ಥರ ದಿವ್ಯಸಂದರ್ಶನದಿಂದ ಅವರ ಪರಮಾನುಗ್ರಹಕ್ಕೆ ಪಾತ್ರರಾದರು. ವ್ಯಾಸತೀರ್ಥರಿಗೆ ಮೊದಲ ನೋಟದಲ್ಲಿಯೇ ಕನಕದಾಸರ ಮಹಿಮೆ ಅವರ ಆಳವಾದ ಅರಿವು, ಭಕ್ತಿ ತಿಳಿಯಿತು. ಆದರೆ ಆ ವ್ಯಾಸ ಮಠದ ಜನರಿಗೆ ಕನಕದಾಸರ ವ್ಯಕ್ತಿತ್ವ ತಿಳಿಯಲಿಲ್ಲ. ಸದಾ ವೇದಾಂತ ಪಾರಾಯಣ ಪಂಡಿತೋತ್ತಮರಾಗಿ ಗುರುವಿನಿಂದ.ಅನೇಕ ಉಪದೇಶ, ಚಾರಿತ್ರ್ಯಗಳ ಬೋಧನೆಯನ್ನು ಮಾಡಿದ ಆ ಉತ್ತಮ ಜಾತಿಯವರಲ್ಲಿ ಅಜ್ಞಾನವೇ ತುಂಬಿಕೊಂಡಿತ್ತು. ಕೇವಲ ಪಾಂಡಿತ್ಯ, ತರ್ಕ, ಶ್ರುತಿಗಳಿಗೆ ಮೊರೆ ಹೋಗುವ ಈ ಮಂದಿಯಲ್ಲಿ ನಿಷ್ಕಳಂಕ ಹರಿಭಕ್ತಿಯಿರಲಿಲ್ಲ. ದೀಪದ ಬುಡದಲ್ಲಿಯೇ ಕತ್ತಲು ಎಂಬಂತಿತ್ತು ಅವರ ಸ್ಥಿತಿ. ಇಲ್ಲಿ ವ್ಯಾಸ ಮಠದವರ ತಿರಸ್ಕಾರಕ್ಕೆ ಕನಕದಾಸರು ಸಿಲುಕಿ ನೊಂದಿದ್ದಾರೆ ಎಂಬುದು ಸಂದೇಹವಿಲ್ಲ. ಗುರುವಿನ ಪರಮಾನುಗ್ರಹ, ದೈವಾನುಗ್ರಹಕ್ಕೆ ಪಾತ್ರರಾದ ಕನಕದಾಸರು ಇಂತಹ ವಿಚಾರಗಳಿಗೆ ಕಂಗೆಡಲಿಲ್ಲ. ಅವರು ನೊಂದರೂ ಮಾನವರ ಏಳಿಗೆಗೆ ಇದ್ದ ಅವರ ಕಳಕಳಿ ಆಸಕ್ತಿಯನ್ನು ನಾವು ಗುರುತಿಸಬಹುದು.

ಈ ರೀತಿಯ ಕೀಟಲೆಯ ಜನರಿಗೆ ಕನಕದಾಸರು "ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ?" ಎಂದು ಕುಲಮದ ದೂಷಿತರಿಗೆ ವಿವೇಕವನ್ನು ಹೇಳಿದ್ದಾರೆ. ಮುಂದೆ ಕನಕದಾಸರು ಶ್ರೀಕೃಷ್ಣನ ದರ್ಶನಾರ್ಥವಾಗಿ ಉಡುಪಿಗೆ ಹೋದಾಗ ಅಲ್ಲಿಯೂ ಪುನಃ ಕುಲಜಾತಿಯ ಪ್ರಸ್ತಾಪ ತಲೆಯೆತ್ತಿ ದೇವಾಲಯದಲ್ಲಿ ಪ್ರವೇಶ ದೊರೆಯಲಿಲ್ಲ. ಆದರೆ ಕನಕದಾಸರು ನಿರಾಶೆಗೊಳ್ಳದೆ ದೇವಾಲಯದ ಹಿಂಬದಿಯಲ್ಲಿ ಹೋಗಿ ಭಕ್ತಿಯಿಂದ ಭಗವಂತನನ್ನು ಪ್ರಾರ್ಥಿಸಲು ಆಲಯದ ಹಿಂಬದಿಯ ಗೋಡೆ ಒಡೆದು ಶ್ರೀ ಕೃಷ್ಣನ ದರ್ಶನ ಕಿಂಡಿಯಿಂದಲೇ

ದೊರೆಯಿತು. ಒಬ್ಬ ಭಕ್ತಾಗ್ರೇಸರನಾದ ಕನಕನಿಗೆ ಅಂದು ಮಾಡಿದ ಅಪಚಾರಕ್ಕೆ ತಕ್ಕ ಪ್ರಾಯಶ್ಚಿತ್ತ ! ಇಲ್ಲಿ ಜಾತಿ, ಮತ, ಕುಲಕ್ಕಿಂತ ಪರಿಶುದ್ಧ ಹೃದಯ ಮುಖ್ಯ. ಪರಮಾತ್ಮನು ಒಲಿಯುವುದು ಪರಿಶುದ್ಧ ಹೃದಯದಿಂದ ಹೊಮ್ಮಿದ ಕಳಂಕರಹಿತ ಪ್ರೀತಿಗೆ ಎಂದು ಸಿದ್ಧಮಾಡಿ ತೋರಿದರು. "ಸತ್ಯ ಸುಖವುಳ್ಳ ಮನುಜರಿಗೆ ಕುಲ ಯಾವುದಯ್ಯ", "ಕೇಶವನ ಒಲುಮೆಯಾದ ಮೇಲೆ ಯಾವುದರ ಕುಲವಯ್ಯ" ಎಂಬ ಮಾತುಗಳು ಅವರ ಹಾಡುಗಳಲ್ಲಿ ಹೊರಹೊಮ್ಮುವುದನ್ನು ಕಾಣಬಹುದು.

ಕನಕದಾಸರು ತೀವ್ರವಾದ ಹರಿಭಕ್ತಿಯನ್ನು ಪ್ರಕಟಿಸಿದರು. ಹೃದಯ ಪರಿಶುದ್ಧತೆಯಿಂದ ಮನಮುಟ್ಟುವಂತೆ ಕೂಗಿದರೆ ನಮ್ಮ ಕೂಗಿಗೆ ಬಾರದಿರುವನೇ ಶ್ರೀ ಕೃಷ್ಣ ? ಎಂದು ಹೇಳುತ್ತಾರೆ. ದೃಢಭಕ್ತಿಯಿಲ್ಲದವನ ಭಕ್ತಿಯು ಭಕ್ತಿಯೇ ಅಲ್ಲ. ಆದ್ದರಿಂದಲೇ ಅವರು ಹರಿಯಲ್ಲಿಯೇ ಪ್ರಾರ್ಥಿಸಿ ನಿಜವಾದ ಭಕ್ತಿ ಉದಿಸುವಂತೆ ಮಾಡು ಎಂದು ಬೇಡಿಕೊಳ್ಳುತ್ತಾರೆ. ಈ ಮಾತುಗಳು ಆಗಿನ ಕಾಲಕ್ಕೆ ವ್ಯಾಸಕೂಟದ ಪಂಡಿತೋತ್ತಮರ ಬೂಟಾಟಿಕೆಯ ಸಂಪ್ರದಾಯವನ್ನು, ನಾಟಕೀಯ ಭಕ್ತಿಯನ್ನು ತೋರಿಸುವುದನ್ನು ಕನಕದಾಸರು ತೀವ್ರವಾಗಿ ಖಂಡಿಸುತ್ತಾರೆ.

ಎಷ್ಟೋ ಸಂದರ್ಭಗಳಲ್ಲಿ ಕನಕದಾಸರು ದೇವರನ್ನು ವಿಧವಿಧವಾಗಿ ಪ್ರಾರ್ಥಿಸಿದರೂ, ದೀನರಾಗಿ ಮೊರೆಯಿಟ್ಟರೂ ಭಗವಂತನ ಕೃಪೆ ಅವರಿಗೆ ದೊರೆಯಲಿಲ್ಲ. ಒಮ್ಮೊಮ್ಮೆ ಮನಸ್ಸನ್ನು ಕಲ್ಲು ಮಾಡಿಕೊಂಡು ತಮಗೆ ಇಹಜನ್ಮದಲ್ಲಿ ಹರಿಯ ಕೃಪೆಯು ದೊರೆಯುವುದಿಲ್ಲವೆಂದೇ ಭಾವಿಸಿದರು. ಇಷ್ಟೆಲ್ಲ ನೋವು ಅಳಲನ್ನು ತೋಡಿಕೊಂಡರೂ ಭಗವಂತನನ್ನು ದೂರಲು ಬೈಯಲು ಹೋಗಲಿಲ್ಲ, ಕಾರಣ ತಪ್ಪನ್ನು ತನ್ನ ಮೇಲೆಯೇ ಹಾಕಿಕೊಂಡು "ಪ್ರಾಚೀನ ಕರ್ಮ ಬಿಡಲರಿಯದೋ ಯೋಚನೆಯ ಮಾಡಿ ಬಳಲುವುದೇಕೆ" ಎಂದು ತಮಗೆ ತಾವೇ ಸಮಾಧಾನ ಮಾಡಿಕೊಂಡರು. "ಒಲ್ಲೆನೆಂದರಾಗುವುದೆ ಅಲ್ಲಿ ಪಡೆದು ಬಂದುದನೆಲ್ಲವನ್ನುಂಡು ತೀರಿಸಬೇಕು ಹರಿಯೇ" ಎಂದು ಹೇಳಿಕೊಂಡರು.

ಒಟ್ಟಿನಲ್ಲಿ ಈ ಕರ್ಮದ ನಂಬಿಕೆಯು ಉಂಟುಮಾಡುವ ಈ ಮನೋಭಾವಕ್ಕೆ ಅನೇಕ ಪರಿಣಾಮಗಳು ಉಂಟು. ಎಂದರೆ ಕ್ಲೇಶಕ್ಕೆ ಒಳಗಾದ ವ್ಯಕ್ತಿಯು ತನ್ನ ತೊಂದರೆಯನ್ನು ಅನುಭವಿಸುವ ಶಕ್ತಿಯನ್ನು ಕರ್ಮದ ಮೇಲಿನ ನಂಬಿಕೆಯಿಂದ ಪಡೆದ ಎಂದರೆ ಆ ನಂಬಿಕೆಯು ನಮಗೆ ಜೀವನವನ್ನು ಅಥವಾ ಜೀವನದ ಸಂಕಷ್ಟಗಳನ್ನು ನಿಷ್ಪಕ್ಷಪಾತವಾಗಿ ವಸ್ತುನಿಷ್ಠವಾಗಿ ತೆಗೆದುಕೊಳ್ಳಲು ಸಹಕಾರಿ. ಹಾಗೆಯೇ ಬೇರೆಯವರ ನಡತೆಯನ್ನು ತುಲನೆ ಮಾಡುವಲ್ಲಿ ಅದು ವೈಶಾಲ್ಯತೆಯನ್ನು ಮೂಡಿಸುವಲ್ಲಿ ಸಹಕಾರಿಯಾಗುತ್ತದೆ. ಒಬ್ಬನು ಯಾವುದೋ ಸಂಸ್ಕಾರದಿಂದಾಗಲೀ ಅಥವಾ ಪ್ರಕೃತಿಯ ಸ್ವಭಾವದಿಂದಾಗಲಿ ಕೆಟ್ಟ ಕೆಲಸವನ್ನು ಮಾಡಿದಾಗ ಬೇರೆಯವರು ಅವನನ್ನು ದೂಷಿಸುವುದಕ್ಕೆ ಬದಲಾಗಿ ಅವನನ್ನು ಔದಾರ್ಯ ತೋರಲು ಕರ್ಮ ನಿಯಮವು ಸಹಕಾರಿಯಾಗುತ್ತದೆ.

ಇದೇ ಕಾರಣಕ್ಕಾಗಿ ಜೀವನದಲ್ಲಿ ಯಶಸ್ವಿಯಾಗಿರುವವರ ಮೇಲೆ ಅದು ಬೀರುವ ಪ್ರಭಾವ ಗಮನಾರ್ಹವಾದುದು. ಅಂತಹವರು ತಮ್ಮ ಯಶಸ್ಸಿಗೆ ಪೂರ್ವಜನ್ಮದ ಕರ್ಮಗಳನ್ನು ಕಾರಣವಾಗಿಸುತ್ತಾರೆಯೇ ಹೊರತು ಈಗಿನ ಜನ್ಮದ ಕರ್ಮಗಳನ್ನಲ್ಲ. ಈ ರೀತಿಯ ಭಾವನೆಯಿಂದ ಕನಕದಾಸರು ಹರಿಧ್ಯಾನ ಮಗ್ನರಾದರು. ಅವರ ದೃಢ ವಿಶ್ವಾಸ, ಏಕಚಿತ್ತದಿಂದ ಶ್ರೀ ಹರಿಯ ಅನುಗ್ರಹವಾಯಿತು. ದೇವರ ದರ್ಶನವಾಯಿತು. "ಬದುಕಿದೆನು ಭವ ಎನಗೆ ಹಿಂಗಿತು । ಪದುಮನಾಭನ ಪಾದದೊಲುಮೆ ಎನಗಾಯಿತು" ಎಂದು ಹರ್ಷದಿಂದ ಕನಕರು ಉದ್ಗರಿಸುತ್ತಾರೆ. ಹರಿಯ ಅನುಗ್ರಹವಾದ ಮೇಲೆ ಪರಮ ಒಲುಮೆಯಿಂದಲೇ ದಾಸರು "ಎಲ್ಲಿರುವನು ರಂಗ ಎಂಬ ಸಂಶಯಬೇಡ । ಎಲ್ಲಿ ಭಕ್ತರು ಕರೆಯೇ ಅಲ್ಲಿ ಬಂದೊದಗುವನು". "ಸಂಸಾರವೆಂಬ ಸಾಗರವನುತ್ತರಿಸು ವರೆ । ಸಂಸಾರಿಯೆಂಬ ನಾಮವೊಂದೆ ಸಾಕು ಮರುಳೆ ॥ ಯತಿಯಾಗಬೇಡ ವೈರಾಗ್ಯ ವರಿತು ಸಕಲ । ವ್ರತವ ಮಾಡುವೆನೆಂಬ ನೇಮಬೇಡ ॥ ಶ್ರುತಿ ಸ್ಮೃತಿಗಳನರಿತು ನಡೆವೆನೆನಬೇಡ ಶ್ರೀ ಪತಿಯ ಶ್ರೀನಾಮವೊಂದೇ ಸಾಕು ಮರುಳೆ ...ಎಂದು ಭಕ್ತರಿಗೆ ನಿಸ್ಸಂಶಯವಾಗಿ ತಿಳಿಯಹೇಳಿ ಕನಕರು ಹರಿನಾಮ ಕೀರ್ತನದ ಅಗತ್ಯವನ್ನು ಮತ್ತೆ ಮತ್ತೆ ಹೇಳಿದ್ದಾರೆ.

"ಭಜಿಸಿ ಬದುಕೆಲೋ ಮನುಜ ಮನಮುಟ್ಟಿ ಹರಿಯ"
"ನಾರಾಯಣ ಎಂಬ ನಾಮದ ಬೀಜವನು ನಾಲಿಗೆಯ ಕೂರಿಗೆಯ
ಮಾಡಿ ಬಿತ್ತೀರಯ್ಯ"
"ರಾಮನಾಮವ ನೆನೆಮನವೆ"
"ಕೇಶವ ಎನ್ನಿರೋ ಕ್ಲೇಶನಾಶನನ ಕೇಶವ ಎನ್ನಿರೋ"

ಎಂಬ ಅಣಿಮುತ್ತುಗಳಂಥ ಉಪದೇಶ ವಾಕ್ಯಗಳು ಕನಕದಾಸರ ಕೀರ್ತನೆಗಳಲ್ಲಿ ಹಲವೆಡೆ ಬಂದಿವೆ.

ದೇವರ ಮಹಿಮೆಯನ್ನು ಅರಿತು ಭಜಿಸುವವನು ಧನ್ಯಶಾಲಿ. ಶ್ರೀ ಹರಿಯ ಸ್ವರೂಪವನ್ನು ತಿಳಿಯಲು ಅಜಭವೇಂದ್ರಾದಿಗಳಿಗೂ ಸಾಧ್ಯವಿಲ್ಲ. ಇನ್ನು ಸಾಮಾನ್ಯ ಮಾನವನಿಗೆ ಇದೆಲ್ಲ ಸಾಧ್ಯವೇ ? ಆದ್ದರಿಂದ ಮಾನವನಿಗೆ ದಿವ್ಯಜ್ಞಾನವಿಲ್ಲದಿದ್ದರೂ ಚಿಂತೆಯಿಲ್ಲ; ಒಂದೇ ಮನಸ್ಸಿನಿಂದ ಶ್ರೀ ಹರಿಯ ಅನುಗ್ರಹದಲ್ಲಿ ನಂಬಿಕೆಯಿಟ್ಟು ಅವನ ಧ್ಯಾನ, ನಾಮಸಂಕೀರ್ತನೆ ಮಾಡಬೇಕು. ಸಾಧಕನಾದವನು ವಿಷಯಲೋಲುಪನಾಗದೆ ದೀರ್ಘಕಾಲದ ಸಾಧನೆಯನ್ನು ನಡೆಸಬೇಕು. ಸತ್ಸಂಗವೆಂಬುದು ಬಹಳ ಮುಖ್ಯ ವಾದುದು. ಹರಿಧ್ಯಾನ ಪಾರಾಯಣ ಮಾಡುವ ಸದ್‌ಭಕ್ತರ ಸಹವಾಸದಲ್ಲಿರಬೇಕು. "ಸಜ್ಜನರ ಸಂಗದೊಳಗಿರಿಸೆನ್ನ ರಂಗ ದುರ್ಜನರ ಸಂಗ ನಾನೊಲ್ಲೆ ಮಂಗಳಾಂಗ" ಎಂದು ದೇವರನ್ನು ಬೇಡಿಕೊಂಡಿದ್ದಾರೆ. ಸಂಸಾರದಿಂದ ಬಿಡುಗಡೆಯಾಗಬೇಕು. ಅಂದರೆ ಆಸೆ-ಆಮಿಷ ಸ್ವಾರ್ಥಗಳಿಗೆ ಒಳಗಾಗದೆ ನಿಷ್ಕಾಮನಾಗಿ ದುಡಿಯಬೇಕು. ಆಗ ಸಂಸಾರ ದಲ್ಲಿದ್ದರೂ ಸಂಸಾರದ ಕ್ಲೇಶಗಳಿಂದ ಅವನು ಮುಕ್ತನಾಗಬಹುದು. ಇಲ್ಲಿ ದಾಸರು

ಹೇಳುವಂತೆ ಸಂಸಾರದ ತ್ಯಾಗವಿಲ್ಲ, ಸಂಸಾರದಲ್ಲಿಯು ಸ್ವಾರ್ಥಲೋಭಗಳ ತ್ಯಾಗವಾಗ ಬೇಕು ಎಂಬುದು ಅವರ ಮೂಲ ಉಪದೇಶದ ಸಾರವಾಗಿದೆ.

"ಜಪವ ಮಾಡಿದರೇನು ತಪವ ಮಾಡಿದರೇನು, ಕಪಟಗುಣ ವಿಪರೀತ ಕಲುಷ ವಿದ್ದವರು ?" ಮಧ್ಯರಾತ್ರಿಯಲ್ಲಿ ಎದ್ದು ಚಳಿ-ಮಳೆಯೆನ್ನದೆ ನದಿಯಲ್ಲಿ ಮಿಂದು ಮುಳುಗಿ ಜಪ-ತಪವಮಾಡಿ ಪುನಃ ಕಳವಳಿಸುತ್ತ ನೂರೆಂಟು ಆಸೆ ಆಮಿಷಗಳಿಗೆ ಹಲುಬಿ ಬಳಲುವ ಇಂತಹ ಮಂದಿಯನ್ನು ಕಂಡು ಕನಕರು ನೊಂದು ನುಡಿಯುತ್ತಾರೆ. ನಳಿನಾಕ್ಷ ಆದಿಕೇಶವನ ನೆನೆಮನವೇ ಎಂದು ಹೇಳುತ್ತಾರೆ. ಇಲ್ಲಿ ಮನೋನೈರ್ಮಲ್ಯ ಅಗತ್ಯ. ಭಕ್ತ ಶೀಲವಂತನಾಗಬೇಕು. ಶೀಲಭ್ರಷ್ಟನಾದವನು ಜಪತಪಗಳಿಂದ ಭಕ್ತ ನಾಗುವುದಕ್ಕೆ ಸಾಧ್ಯವಿಲ್ಲ. ಅಂಥವನಿಗೆ ಭಗವಂತನು ಒಲಿಯುವುದಿಲ್ಲ. ಹಾಗೆಯೇ ವೇದಶಾಸ್ತ್ರಗಳ ಪಾಂಡಿತ್ಯ, ಹಿರಿಮೆ ತಮಗುಂಟೆಂಬ ಅಹಂಕಾರದಿಂದ ಭಗವಂತನಲ್ಲಿ ಭಕ್ತಿಯಿರದವನು ಎಂದಿಗೂ ಉದ್ಧಾರವಾಗಲಾರನೆಂಬುದೇ ಕನಕದಾಸರ ದೃಢ ವಿಶ್ವಾಸ. "ಬಲ್ಲವರೆ ಬಲ್ಲರು ಆದರೆ ಎಲ್ಲರರಿಯರು, ಫುಲ್ಲಲೋಚನ ಪರ ಬ್ರಹ್ಮವೆಂಬುದನು" ಎಂದು ಕನಕರು ತಿಳಿಯ ಹೇಳಿದ್ದಾರೆ.

ಕನಕದಾಸರು ಆರಂಭದಲ್ಲಿ ತಮ್ಮ ಲೌಕಿಕ ವ್ಯವಹಾರಗಳನ್ನು ಎಷ್ಟು ದೀಕ್ಷೆಯಿಂದ ನಡೆಸಿ ಗುರಿ ಮುಟ್ಟುತ್ತಿದ್ದರೋ ಅಷ್ಟೇ ತೀವ್ರವಾದ ನಿಷ್ಠೆಯಿಂದ ಭಕ್ತಿಸಾಧನೆ ಮಾಡಿ ಸಿದ್ಧಪುರುಷರಾದರು. ಹರಿಸಾಕ್ಷಾತ್ಕಾರವಲ್ಲದೆ ಬೇರೆ ಯಾವ ಅಪೇಕ್ಷೆಯೂ ಅವರದಲ್ಲ. ಅದು ಸಿದ್ಧಿಸುವ ತನಕ ಕನಕರಿಗೆ ತೃಪ್ತಿಯಿರಲಿಲ್ಲ. "ಎಲ್ಲಿರುವನೋ ರಂಗ" ಎಂಬ ಸಂಶಯ ಸಲ್ಲದು. ಭಕ್ತರು ಎಲ್ಲಿ ಕರೆದರೆ ಅಲ್ಲಿಗೇ ಆತ ಬಂದು ಒದಗುವನು. ಹೀಗೆ ಸಮಾಜದಲ್ಲಿರುವ ನ್ಯೂನತೆಗಳನ್ನು ತಿದ್ದುವುದರೊಂದಿಗೆ ಹರಿಭಕ್ತಿಯ ಸಾಧನೆ ಸಿದ್ಧಿಗಳ ಬಗ್ಗೆ ಕನಕರು ಉಪದೇಶಿಸಿದರು.

ಕನಕದಾಸರು ತಮ್ಮ ಜೀವನ ಯಾತ್ರೆಯ ಪ್ರವಾಸದಲ್ಲಿ ಕಂಡು ಅನುಭವಿಸಿದ ಅನೇಕ ವಿಷಯಗಳ ಬಗ್ಗೆ ಸ್ವಾರಸ್ಯವಾಗಿ ಮಾತನಾಡುತ್ತ ಭಕ್ತರ ಆಚಾರ ವ್ಯವಹಾರಗಳ ಮಧ್ಯೆ ಸಿಲುಕಿ ಮೌನಿಯಾಗಿರುವ ಭಗವಂತನ ಬಗ್ಗೆಯೂ ಕರುಣೆಯಿಂದ ಮಾತನಾಡು ತ್ತಾರೆ. ತಿರುಪತಿಯ ದೇವಾಲಯದ ನಡವಳಿಕೆಗಳನ್ನು ಕಂಡು ಕನಕದಾಸರು ವೆಂಕಟೇಶ ನನ್ನು ಒಬ್ಬ ಶೆಟ್ಟಿಗೆ ಹೋಲಿಸಿ ವರ್ಣನೆ ಮಾಡಿರುವುದು ಬಹಳ ವಿಶೇಷವಾಗಿದೆ. "ಬಂದೆವಯ್ಯಾ ಗೋವಿಂದ ಶೆಟ್ಟಿ । ನಿನ್ನ ಹರಿವಾಣತೀರ್ಥ ಪ್ರಸಾದ ಉಂಟೆನಲಾಗಿ" ಎಂದು ಕೀರ್ತನೆಯನ್ನು ಪ್ರಾರಂಭಿಸಿ 'ಅಪರೂಪವಾದ ಕಜ್ಜಾಯ ರಾಶಿಗಳ । ಛಪ್ಪನ್ನ ದೇಶಕೆ ಮಾರುವ ಶೆಟ್ಟಿ' ಎಂದು ದೇವರನ್ನು ಸಂಬೋಧಿಸುತ್ತಾರೆ. "ಶೇಷಗಿರಿಯ ಮೇಲೆ ಇರುವ ತಿಮ್ಮಶೆಟ್ಟಿ, ದೇಶಕ್ಕೆಲ್ಲ ಪ್ರಸಾದವನ್ನು ಮಾರುವ ಶೆಟ್ಟಿ, ಒಡಲು ತುಂಬಿ ಮಿಕ್ಕ ಅನ್ನವ ಮಾರಿಸಿ ಒಡವೆಯ ಗಳಿಸುವ ಕಡುಲೋಭಿ ಶೆಟ್ಟಿ. ಆಸೆಯಿಂದ ಕಾಸು ಕಾಸನ್ನು ಕೂಡಿಸುವ ಆದಿಕೇಶವ ನಾರಾಯಣನೆಂಬ ಶೆಟ್ಟಿ" ಎಂದು ದೇವರಿಗೆ ಹಾಸ್ಯ ಮಾಡುತ್ತಾರೆ. ಇಲ್ಲಿ ಕಜ್ಜಾಯ, ಪ್ರಸಾದ ಮಾರುವವರು ದೇವರ ಪೂಜಾರಿಗಳು,

ಪರಿಚಾರಕರು, ಅವನ ಸುತ್ತಮುತ್ತಲೂ ಇರುವ ಪರಿವಾರದವರೇ ಹೊರತು ದೇವರಲ್ಲ. ಆದರೂ ಆಳುಮಾಡಿದ ತಪ್ಪಿಗೆ ಅರಸ ಹೊಣೆಯಲ್ಲವೇ ? ಎಂಬುದು ಕನಕರ ಇಂಗಿತ. ಹಾಗೆಯೇ ತಮ್ಮ ಮತ್ತೊಂದು ಕೀರ್ತನೆಯಲ್ಲಿ ಶ್ರೀರಂಗಪಟ್ಟಣದ ರಂಗನಾಥನನ್ನು ಕಂಡು "ಯಾಕೆ ನೀನಿಲ್ಲಿ ಪವಡಿಸಿದೆ ಹರಿಯೇ ?" ಎಂದು ಪ್ರಶ್ನೆ ಮಾಡುತ್ತಾರೆ. ಭಗವಂತನಿಗೆ ನಿದ್ದೆಯಾದರೆ ಭಕ್ತರ ಗತಿಯೇನು ? ಭಗವಂತನಿಗೂ ಆಯಾಸವೇ ? ಎಂದುಕೊಂಡರೂ ವಿವಿಧ ಅವತಾರಗಳನ್ನು ಎತ್ತಿ ಧರ್ಮ ಸಂರಕ್ಷಣೆಮಾಡಿ, ನಾನಾ ರಾಕ್ಷಸರನ್ನು ಕೊಂದು ಸಜ್ಜನರನ್ನು ರಕ್ಷಿಸಿದ ಭಗವಂತನಿಗೆ ನಿಜವಾಗಿಯೂ ಆಯಾಸವಾಗಿ ಮಲಗಿರಬಹುದು ಎಂದು ಅವರೇ ಹೇಳಿ "ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ ನಿನ್ನನ್ನು ಎಬ್ಬಿಸುವರೊಬ್ಬರನ್ನು ಕಾಣೆ" ಎಂದು ತಮ್ಮ ಹೃದಯಾಂತರಾಳದ ಭಾವನೆಯನ್ನು ಕನಕದಾಸರು ವ್ಯಕ್ತಪಡಿಸುತ್ತಾರೆ.

ಕನಕದಾಸರು ಜನರಿಗೆ ಸನ್ಮಾರ್ಗದ ಮೂಲಕ ತಿದ್ದಿ ಉಪದೇಶ ಮಾಡಿದರೂ ಅನೇಕ ಸಂದರ್ಭಗಳಲ್ಲಿ ವಿಧಿವಿಲಾಸವನ್ನು ಹೇಳಿದ್ದಾರೆ. "ಆವ ಬಲವಿದ್ದರೇನು ದೈವ ಬಲವಿಲ್ಲದವಗೆ", ಎಂದು ಹೇಳುತ್ತಾ, ನೀನು ಏನೇ ಕಷ್ಟಪಟ್ಟರೂ, ಕಳವಳಿಸಿದರೂ ನಿನ್ನ ಹಣೆಬರಹದಂತೆ ಎಲ್ಲವೂ ನಡೆಯುತ್ತದೆ. ಯಾರಿಗೇ ಆಗಲಿ ಪೂರ್ವಕರ್ಮ ಬಿಡದು, ಅವರು ದೇವ, ಗಂಧರ್ವ, ಮನುಷ್ಯೋತ್ತಮರೇ ಆಗಿರಲಿ ಎಂದು ನುಡಿಯುತ್ತಾರೆ. ಇಲ್ಲಿ ಕನಕರು ತಾವು ಜೀವನದಲ್ಲಿ ಅನುಭವಿಸಿದ ನೋವುಗಳು, ಕ್ಲೇಶ ಪರಂಪರೆಯಿಂದ ಹೀಗೆ ಹೇಳಿರಬಹುದು ಎಂದುಕೊಂಡರೂ ಅವರು ನಿರಾಶಾವಾದಿಗಳಲ್ಲ, ಆಶಾವಾದದಿಂದ ಪುನಃ ಅವರೇ ಹೇಳುತ್ತಾರೆ "ತಲ್ಲಣಿಸದಿರು ಕಂಡ್ಯ ತಾಳು ಮನವೇ। ಎಲ್ಲರನು ಸಲಹುವನು ಇದಕ್ಕೆ ಸಂಶಯುವಿಲ್ಲ" ಎಂದು ಲೋಕದ ಎಲ್ಲರಿಗೂ ಧೈರ್ಯ ಅಭಯುವನ್ನು ನೀಡುತ್ತಾರೆ.

ಒಟ್ಟಿನಲ್ಲಿ ಕನಕದಾಸರ ಕೀರ್ತನೆಗಳು ಸಾಮಾಜಿಕ ಸುಧಾರಣೆ, ಹರಿಭಕ್ತಿಯೊಂದಿಗೆ ಹಾಸ್ಯ, ವ್ಯಂಗ್ಯ, ಶೃಂಗಾರ ಮೊದಲಾದ ವಿವಿಧ ಅಂಶಗಳನ್ನು ಒಳಗೊಂಡಿವೆ. ಇವೆಲ್ಲವೂ ದಾಸರ ಜೀವನದ ಅನುಭವಗಳ ಸರಪಳಿಯನ್ನು ಹೆಣೆದಿವೆ. ಕನಕದಾಸರು ತಮ್ಮ ಜೀವಿತ ಕಾಲದಲ್ಲಿ ಸಮಾಜದಲ್ಲಿ ನಡೆದ ಅನ್ಯಾಯ, ಅನೀತಿ, ಜಾತೀಯತೆಗಳನ್ನು ಬಲವಾಗಿ ಖಂಡಿಸಿದ್ದಾರೆ. ಮಾನವನು ಎಲ್ಲರೊಂದಿಗೂ ಕೂಡಿಕೊಂಡು ಸಹಬಾಳ್ವೆ ನಡೆಸುವ ಸಮಾಜಜೀವಿ. ಆತನು ಇತರರೊಡನೆ ಹೇಗೆ ಸಹಕಾರದಿಂದ ಬಾಳಬೇಕು, ಬದುಕಬೇಕೆಂಬುದನ್ನು ದಾಸರು ಪುನಃ ಪುನಃ ನುಡಿದಿದ್ದಾರೆ. ಅನುಭಾವಿಗಳಾದ ಕನಕರ ಕೀರ್ತನೆಗಳು ನೀತಿಯ ನೆಲೆಗಟ್ಟಿನ ಮೇಲೆ ಸಾಮಾಜಿಕ ಲೋಪದೋಷಗಳನ್ನು ಎತ್ತಿ ತೋರುವಲ್ಲಿ ಪ್ರತಿಬಿಂಬಿತವಾಗಿವೆ.

ಸಮಾಜೋದ್ಧಾರದ ಕಾರ್ಯದಲ್ಲಿ ನಿರತನಾದವನಿಗೆ ಅನೇಕ ಎಡರು–ತೊಡರುಗಳು, ಸಮಸ್ಯೆಗಳು ಎದುರಾಗುವುದು ಸಹಜ. ಅದರಂತೆ ಇವರನ್ನು ಅನೇಕರು ನಿಂದಿಸಿರಬೇಕು. ಈ ಮಾತು ಅವರ ಕೀರ್ತನೆಗಳಲ್ಲಿ ಕಂಡುಬರುತ್ತದೆ. ಆತ್ಮೋದ್ಧಾರ

ದೊಂದಿಗೆ, ಜನಸೇವೆಗಾಗಿ ಕಂಕಣಬದ್ಧರಾದ ಕನಕದಾಸರು ಸಕಲವೆಲ್ಲವೂ ಹರಿಸೇವೆ ಎಂದು ಧೈರ್ಯದಿಂದ ಎಲ್ಲವನ್ನೂ ಸಹಿಸಿದರು. 'ನಾನು ಮೇಲು, ನೀನು ಕೀಳು' ಎಂಬ ಸಂಘರ್ಷದಿಂದ ಕೂಡಿದ ಅಂದಿನ ಸಮಾಜದ ಜನರಿಗೆ 'ಕುಲ ಕುಲವೆಂದು ಬಡಿದಾಡದಿರಿ, ನಿಮ್ಮ ಕುಲದ ನೆಲೆಯೇನಾದರೂ ಬಲ್ಲಿರಾ'? ಎಂದು ಪ್ರಶ್ನಿಸಿದ್ದಾರೆ. ಅನೇಕ ಉದಾಹರಣೆಗಳ ಮೂಲಕ ದುರ್ಮಾರ್ಗಿಗೆ ಒದಗುವ ದುರ್ಗತಿ, ಸಜ್ಜನನಿಗೆ ಒದಗುವ ಸದ್ಗತಿಯ ಬಗ್ಗೆ ದಾಸರು ಎಚ್ಚರಿಸಿದ್ದಾರೆ. ಭುಜಬಲ, ಧನಬಲ, ಸೈನ್ಯಬಲ ವಿದ್ದ ದುರ್ಯೋಧನ, ರಾವಣರು ದುರ್ಮಾರ್ಗದಿಂದ ಮಣ್ಣುಮುಕ್ಕಿ ಹೋದರೆಂದಾಗ, ನಿನ್ನಂಥ ಬಡಪಾಯಿಯ ಗತಿಯೇನು ? ಎಂದಿದ್ದಾರೆ.

ಸ್ತ್ರೀಯರ ಜೀವನವನ್ನು ಕುರಿತಂತೆ ಕನಕದಾಸರು ಬಹಳ ಒಳ್ಳೆಯ ವಿಶ್ಲೇಷಣೆ ಯನ್ನು ನೀಡಿದ್ದಾರೆ. ತಾಯಿಯಾಗಿ, ಮಡದಿಯಾಗಿ, ಮಗಳಾಗಿ, ಸೊಸೆಯಾಗಿ, ಅಕ್ಕ–ತಂಗಿಯಾಗಿ ಈ ಎಲ್ಲ ಪಾತ್ರಗಳನ್ನು ಜೀವನದಲ್ಲಿ ಆಕೆ ವಹಿಸುವ ಹೊಣೆಗಾರಳಾದ್ದ ರಿಂದ ಅವಳ ಕರ್ತವ್ಯ ನಿರ್ವಹಣೆಯನ್ನು ಹೃದಯಂಗಮವಾಗಿ ವಿವರಿಸಿದ್ದಾರೆ.

ಈಗಿನಂತೆ ಅಂದಿನ ಸಮಾಜವು ಅನೇಕ ದೋಷಗಳನ್ನು ಹೊಂದಿತ್ತು. ಧರ್ಮದ ಹೆಸರಲ್ಲಿ ಭ್ರಷ್ಟಾಚಾರವೆಸಗುವ ಧರ್ಮಗುರುಗಳು, ಡಾಂಭಿಕರು, ಆಚಾರವಂತರು ಇದ್ದಿರಬೇಕು. ಇವರೆಲ್ಲರನ್ನೂ ಉದ್ದೇಶಿಸಿ ಇವೆಲ್ಲ ಉದರ ವೈರಾಗ್ಯವೆಂದು ದಾಸರು ಖಂಡಿಸಿದ್ದಾರೆ. ಅದನ್ನು ತೊರೆಯಲು ಸಲಹೆ ಮಾಡಿದ್ದಾರೆ.

ಜನಸಾಮಾನ್ಯರಿಗೆ ಅತಿ ಕ್ಲಿಷ್ಟವಾದ ವೇದ ಉಪನಿಷತ್ತುಗಳು, ಶಾಸ್ತ್ರ–ಪುರಾಣ ಗಳನ್ನು ಜೀವನದ ಅನುಭವಗಳೊಂದಿಗೆ ಹೋಲಿಸಿ ನೀತಿ ಸುಧೆಗಳೊಂದಿಗೆ ಕನಕದಾಸರು ಸುಲಭವಾದ ಆಡುಭಾಷೆಯಲ್ಲಿ ಬೋಧಿಸಿದರು. ಇಲ್ಲಿ ಭಕ್ತಿಪ್ರಚಾರ, ನೀತಿನಿರೂಪಣೆ ಎರಡೂ ಒಟ್ಟೊಟ್ಟಿಗೆ ಕನಕದಾಸರ ಉಪದೇಶಸಾರದಲ್ಲಿ ವೇದ್ಯವಾಗುತ್ತದೆ.

ಕೊನೆಯದಾಗಿ ಈ ಎಲ್ಲ ವಿಚಾರಗಳು ಆಧುನಿಕ ಸಮಾಜದಲ್ಲಿ ಎಷ್ಟರಮಟ್ಟಿಗೆ ಸಂಗತ ? ಎಂಬ ಪ್ರಶ್ನೆ ಉದಯಿಸುತ್ತದೆ. ಎಂದರೆ ಸಾಮಾಜಿಕ ಮತ್ತು ಧಾರ್ಮಿಕ ಜೀವನದಲ್ಲಿ ವ್ಯಕ್ತಿಯ ವ್ಯಕ್ತಿತ್ವದ ವಿಕಾಸಕ್ಕೆ ಶ್ರೀ ಕನಕದಾಸರ ಕೊಡುಗೆಯೇನು ಎಂಬುದನ್ನು ಇದು ನಿರ್ಧರಿಸುತ್ತದೆ. ಸಾಮಾನ್ಯವಾಗಿ ಯಾವುದೇ ಒಬ್ಬ ಮಹಾತ್ಮನ ಬೋಧನೆಯು ಸಮಾಜವನ್ನು ಎಷ್ಟರಮಟ್ಟಿಗೆ ಸ್ಪಂದಿಸುತ್ತದೆ ಎಂಬ ಪ್ರಶ್ನೆ ಆಗಾಗ್ಗ ಕೇಳಿ ಬರುತ್ತದೆ. ಆದರೆ ಇದರ ಜೊತೆಗೆ ನಾವು ನಮ್ಮನ್ನೇ ಮತ್ತೊಂದು ಪ್ರಶ್ನೆಯನ್ನು ಕೇಳಿಕೊಳ್ಳಲು ಮರೆತಿದ್ದೇವೆ. ಈ ಬೋಧನೆಗಳನ್ನು ನಾವು ನಮ್ಮ ಬದುಕಿನಲ್ಲಿ ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೇವೆ ಎಂಬುದು. ಸಾಮಾನ್ಯರ ನಡುವೆ ಕನಕದಾಸರ ಹಿರಿಮೆ ಹರಡಿರುವುದು ಅವರ ಭಾವನೆಗಳು, ಅವರ ಬೋಧನೆ ಎಲ್ಲರ ನಿತ್ಯಜೀವನದಲ್ಲಿ ಬೆಳಕನ್ನು ನೀಡಬಲ್ಲವು ಮತ್ತು ನೈತಿಕ ತಳಹದಿಯ ಮೇಲೆ ಜಾತ್ಯಾತೀತ ಸುವ್ಯವಸ್ಥಿತ ಸಮಾಜದ ಸ್ಥಾಪನೆಯಾಗಬಲ್ಲದು ಎಂಬ ಕಾರಣದಿಂದ.

ಕಡೆಯಂದಾಗಿ ಈ ಲೇಖನವನ್ನು ಕನಕದಾಸರ ಒಂದು ಹಾಡಿನಿಂದ ಮುಕ್ತಾಯ ಗೊಳಿಸುತ್ತಿದ್ದೇನೆ :

"ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ
ನಿತ್ಯ ಜ್ಞಾನಿಯಾದ ಮೇಲೆ ಚಿಂತೆಯಾತಕೆ ॥
ತಾನು ಉಣ್ಣದೆ ಪರರಿಗಿಕ್ಕದ ಧನವಿದ್ಯಾತಕೆ
ಮಾನಹೀನನಾಗಿ ಬಾಳ್ವ ಮನುಜನ್ಯಾತಕೆ
ಜ್ಞಾನವಿಲ್ಲದೆ ನೂರುಕಾಲ ಬದುಕಲ್ಯಾತಕೆ
ಮಾನಿನೀಯು ತೊರೆದವಗೆ ಭೋಗವ್ಯಾತಕೆ ॥
ಮಾತು ಕೇಳದ ಮರೆತು ನಡೆಯುವ ಮಕ್ಕಳ್ಯಾತಕೆ
ಪ್ರೀತಿಯಿಲ್ಲದೆ ಎಡೆಯಲಿಕ್ಕಿದ ಅನ್ನವ್ಯಾತಕೆ
ನೀತಿಯರಿತು ನಡೆಯದಿರುವ ಬಂಟನ್ಯಾತಕೆ
ಸೋತು ಹೆಣ್ಣಿಗೆ ಹೆದರಿ ನಡೆಯುವ ಪುರುಷನ್ಯಾತಕೆ ॥
ಸನ್ನೆಯರಿತು ನಡೆಯದಿರುವ ಸತಿಯು ಯಾತಕೆ
ಮನ್ನಣೆಯ ನಡೆಸದಿರುವ ದೊರೆಯು ಯಾತಕೆ
ಮುನ್ನಕೊಟ್ಟು ಪಡೆಯದನ್ನು ಬಯಸಲ್ಯಾತಕೆ
ಚನ್ನ ಆದಿಕೇಶವನಲ್ಲದ ದೈವವ್ಯಾತಕೆ"

ಹೀಗೆ ಕನಕದಾಸರು ಸಾಮಾಜಿಕ ಜೀವನದಲ್ಲಿ ಉಂಟಾಗುವ ದೋಷಪೂರ್ಣ ನಡವಳಿಕೆಗಳನ್ನು ನೈತಿಕ ವಿಚಾರಗಳ ಮೂಲಕ ತಿದ್ದುವುದರೊಂದಿಗೆ ಜನರಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡಿದ್ದಾರೆ. ಇವರು ಭಾಗವತೋತ್ತಮರಷ್ಟೇ ಅಲ್ಲ, ಜಗತ್ತಿನ ಒಬ್ಬ ಮಹಾನ್ ಮಾನವತಾವಾದಿಯೂ ಹೌದು. ಬದುಕಿನ ಕಷ್ಟಕಾರ್ಪಣ್ಯಗಳಿಂದ ಕಂಗೆಟ್ಟಿರುವ ಭಕ್ತರಿಗೆ ಅಭಯ ಸಂದೇಶವನ್ನು, ದುರಹಂಕಾರಿ ಅಜ್ಞಾನಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿರುವ ಇಂತಹ ಹರಿಭಕ್ತನಿಗೆ ಈಡಾಗಬಲ್ಲವರು ಲೋಕದಲ್ಲಿ ವಿರಳವೆಂದು ದಾಸಶ್ರೇಷ್ಠರಾದ ಶ್ರೀ ಪುರಂದರದಾಸರು ಹೊಗಳಿರುವುದು ಏನೂ ಅಚ್ಚರಿಯಲ್ಲ.

ನರಸಿಂಹೇಗೌಡ ನಾರಣಾಪುರ

ತೇಜಿಗೆರೆ ಅಮ್ಮ—ಒಂದು ನೋಟ

ಮಾನವನ ಉಗಮದೊಂದಿಗೆ ದೇವತಾರಾಧನೆಯೂ ಹುಟ್ಟಿಕೊಂಡಿತು. ಸಮಾಜ ಬದಲಾವಣೆಯಾದಂತೆ ಮಾನವನ ಬದುಕಿನಲ್ಲೂ ಹಲವಾರು ವ್ಯತ್ಯಯಗಳು ಕಂಡು ಬಂದವು. ಆದಿಯಲ್ಲಿ ಪ್ರಕೃತಿ ವೈಚಿತ್ರ್ಯಗಳು ಆತನಲ್ಲಿ ಭಯ–ಭಕ್ತಿಯನ್ನು ಹುಟ್ಟಿಸಿದವು. ಹೀಗಾಗಿ ತನ್ನ ಜೀವನವನ್ನು ಯಾವುದೋ ಅಗೋಚರ ಶಕ್ತಿ ನಿಯಂತ್ರಿಸುತ್ತದೆಂದು ಭಾವಿಸಿದ. ಆ ನಿಯಾಮಕ ಶಕ್ತಿಯನ್ನು ಒಲಿಸಿಕೊಳ್ಳಬೇಕೆಂಬ ಉದ್ದೇಶದಿಂದ ತನಗೆ ದಕ್ಕಿದ ವಸ್ತು ವಿಶೇಷಗಳನ್ನು ಆ ಶಕ್ತಿಗೆ ಸಮರ್ಪಿಸುತ್ತಾ ಬಂದ. "ಹಿಂದೂ ಗ್ರಾಮ ಜೀವನದ ವೈಶಿಷ್ಟ್ಯವೆಂದರೆ ಸ್ಥಳೀಯವಾಗಿ ಜನಪ್ರಿಯವಾದ ಶಕ್ತಿಯನ್ನು ಆರಾಧಿಸುವುದು. ಮಕ್ಕಳು ಹೆತ್ತ ತಾಯನ್ನು ಪೂಜ್ಯಭಾವದಿಂದ ನೋಡುವುದು ಎಷ್ಟು ಸಹಜವೋ, ಗ್ರಾಮವನ್ನು ರಕ್ಷಿಸುವ 'ಅಮ್ಮ'ನನ್ನು ಊರ ಮಕ್ಕಳು ಆರಾಧಿಸುವುದು ಅಷ್ಟೇ ಸಹಜ. ಅಮ್ಮನ ಅಧೀನದಲ್ಲಿ ಪುರುಷ ದೈವವೂ ಒಂದು ಇರುತ್ತದೆ. ಸ್ತ್ರೀ ದೈವದಂತೆ ಈ ಪುರುಷ ದೈವವೂ ವ್ಯಕ್ತಿಗೆ ಎದುರಾಗುವ ಎಲ್ಲ ಪ್ರತಿಕೂಲಗಳನ್ನು ನಿವಾರಿಸುವ, ಅವುಗಳಿಂದ ವ್ಯಕ್ತಿಯನ್ನು ಪಾರಾಗಿಸುವ ಹೊಣೆ ಹೊತ್ತಿರುತ್ತದೆ. ಇಷ್ಟಾದರೂ ಅಮ್ಮನಿಗೇ ಹೆಚ್ಚು ಪ್ರಾಶಸ್ತ್ಯ. ಅವಳು ಕಾರ್ಯಚತುರಳೂ, ಶಕ್ತಳೂ ಆಗಿರುತ್ತಾಳೆಂಬ ನಂಬಿಕೆ. ಪ್ರಾರ್ಥನೆ, ಬಲಿ, ಮುಖಸ್ತುತಿಗಳಿಂದ ಸಂಪ್ರೀತಳಾಗುವವಳು ಅವಳು. ತನ್ನನ್ನು ನಿರ್ಲಕ್ಷಿಸಿದರೆ ರೋಗರುಜಿನಗಳ ಮೂಲಕ ಪ್ರಣತಗೊಳ್ಳುತ್ತಾಳೆ ಎಂಬ ಭಯ[1] ಎಂದು ಅಂಬಳಿಕೆ ಹಿರಿಯಣ್ಣ ಅವರು ಅಭಿಪ್ರಾಯಿಸುತ್ತಾರೆ. ಪ್ರಾಯಶಃ ಕಾಲಕಾಲಕ್ಕೆ ತಮಗೆ ಸಲ್ಲಬೇಕಾದ ಆಹಾರದ ವಿಷಯದಲ್ಲಿ ಜನ ಅಸಡ್ಡೆಯನ್ನು ತೋರಿದರೆ ಕಾಯಿಲೆ ಕಸಾಲೆಗಳನ್ನು ತರುತ್ತಾಳೆಂಬ ಅಂಜಿಕೆಯಿಂದ ಬಲಿ, ಪ್ರಾರ್ಥನಾ ವಿಧಿಗಳು ರೂಢಿಯಲ್ಲಿವೆ. ಎಲ್ಲ ಅಮ್ಮಂದಿರೂ ರಕ್ತಾಹಾರ ಬಯಸುವವರೇ ಆದ್ದರಿಂದ ಚೊಕ್ಕಭೋಜನದ ಜೊತೆಗೆ ಕುರಿ, ಕೋಳಿ, ಕೋಣ, ಮನುಷ್ಯನ ರಕ್ತ[2] ನೀಡುವುದು ರೂಢಿಯಾಗಿದೆ. "ವೈವಿಧ್ಯತೆಯಲ್ಲಿ ಏಕತೆ

1. ಜಾನಪದ ವೀಕ್ಷಣೆ: ಅಂಬಳಿಕೆ ಹಿರಿಯಣ್ಣ, ಪುಟ—೯೯. ಪ್ರ—೧೯೮೭.
2. ಜನ್ನನ ಯಶೋಧರ ಚರಿತೆಯಲ್ಲಿನ ಚಂಡಮಾರಿ ದೇವತೆಗೆ ಮಾರಿದತ್ತರಾಜ ನೀಡುತ್ತಿದ್ದ ಮನುಷ್ಯ ಮತ್ತು ಪ್ರಾಣಿಬಲಿಗಳು.

ಯನ್ನು ಎತ್ತಿಹಿಡಿಯುವ ಭಾರತೀಯ ಸಂಸ್ಕೃತಿಯಲ್ಲಿ ಮಾತೃದೇವತಾರಾಧನೆಯ ಕಲ್ಪನೆಗಳು ರೂಢಿಗೆ ಬಂದಿರುವುದರ ಬಗೆಗೆ ಜಾನಪದ ವಿದ್ವಾಂಸರು ತಮ್ಮ ಕುತೂಹಲವನ್ನು ವ್ಯಕ್ತಪಡಿಸಿದ್ದಾರೆ."[3]

ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಬೆಳವಣಿಗೆಯ ದೃಷ್ಟಿಯಿಂದ ಹಾಗೂ ನಮ್ಮ ಸಂಸ್ಕೃತಿಯನ್ನು ಅರ್ಥೈಸುವ ದೃಷ್ಟಿಯಿಂದ ಗ್ರಾಮ ದೇವತೆಗಳ ಅಧ್ಯಯನ ಈ ಕೆಳಗೆ ತಿಳಿಸಿರುವ ನಾಲ್ಕು ಮುಖವಾಗಿ ಸಾಗಬೇಕಾಗುತ್ತದೆಂಬ[4] ಆನಂದಮೂರ್ತಿ ಅವರ ಅಭಿಪ್ರಾಯ ಸೂಕ್ತವಾದುದೆನ್ನಬಹುದು : (೧) ದೇವತೆಯ ಮೂಲ ಹಾಗೂ ಪವಾಡಗಳನ್ನು ಬಣ್ಣಿಸುವ ಪುರಾಣಗಳ, ನಂಬಿಕೆಗಳ ಸಂಗ್ರಹ ಹಾಗೂ ವಿಶ್ಲೇಷಣೆ. (೨) ದೇವತೆಯ ಹಬ್ಬಕ್ಕೆ ಸಂಬಂಧಿಸಿದ ವಿವಿಧ ಆಚರಣೆಗಳ, ಉತ್ಸವಗಳ ಅಭ್ಯಾಸ. (೩) ದೇವತೆಯನ್ನು ಕುರಿತ ಗೀತ ಸಾಹಿತ್ಯದ ಸಂಗ್ರಹ. (೪) ದೇವತೆಯ ಸಂಪ್ರದಾಯದ ಕುಣಿತಗಳ ಹಾಗೂ ಇತರ ಕಲೆಗಳ ಅಧ್ಯಯನ.

ಈ ದಿಸೆಯಲ್ಲಿ ತೇಜಿಗೆರೆ[5] ಅಮ್ಮನನ್ನು ಕುರಿತಾದ ಅಧ್ಯಯನಕ್ಕೆ ಈ ನನ್ನ ಲೇಖನ ಪ್ರಾಥಮಿಕ ಹಂತದ ಕಿರು ಪ್ರಯತ್ನವಾಗಿದೆ. ನಾಡಿನಾದ್ಯಂತ ಗ್ರಾಮದೇವತೆಗಳ ಹಬ್ಬಗಳು ಅತ್ಯಂತ ವ್ಯಾಪಕವಾಗಿ ನಡೆದುಕೊಂಡು ಬಂದ ಸಂಸ್ಕೃತಿಯ ಹೆಜ್ಜೆ ಗುರುತುಗಳಾಗಿವೆ. ಕೋಲಾರಮ್ಮ, ಚಕ್ಕರೆ ಚೌಡಮ್ಮ, ಉಜ್ಜನಿ ಚೌಡಮ್ಮ, ಮಳಲಿ ಅಮ್ಮ, ನಲ್ಲೂರಮ್ಮ, ಆನೆಕೆರೆ ಅಮ್ಮ ಮುಂತಾದ ದೇವತೆಗಳ ಹಬ್ಬಗಳಂತೆ 'ತೇಜಿಗೆರೆ ಅಮ್ಮ'ನ ಹಬ್ಬವೂ ತನ್ನದೇ ಆದ ವಿಶಿಷ್ಟತೆಯನ್ನು ಕಾಪಾಡಿಕೊಂಡು ಬಂದಿದೆ. ತೇಜಿಗೆರೆ ಸುತ್ತಮುತ್ತಲಿರುವ ಕುರುಬ್ರಹಳ್ಳಿ, ಸಿಂಗೇನಳ್ಳಿ, ಕಾಚೇನಹಳ್ಳಿ, ಕೋಡಿಹಳ್ಳಿ, ಪೋತಹಳ್ಳಿ, ಗ್ರಾಮಗಳಿಗೂ ಇವಳೊಬ್ಬಳೇ ದೇವತೆಯಾಗಿದ್ದು, ಒಂದೊಂದು ಊರಿನಿಂದ ಒಂದೊಂದು ವಿಶೇಷ ವಸ್ತುವನ್ನು ತಂದು ತನಗೆ ಒಪ್ಪಿಸಬೇಕೆಂಬ ನಿಯಮಗಳನು ನಿಯಮಿಸಿದ್ದಾಳೆ. ತವರುಮನೆಯಾದ ತೇಜಿಗೆರೆಯಿಂದ ಆರತಿ, ಕುರುಬ್ರಹಳ್ಳಿ, ಸಿಂಗೇನಳ್ಳಿಗಳಿಂದ ತೇರುಗಳು ಬಂದರೆ, ಕಾಚೇನಹಳ್ಳಿ, ಪೋತನಳ್ಳಿಯಿಂದ ಬಂಡಿಗಳು ಬರುತ್ತವೆ. ಕೋಡಿಹಳ್ಳಿಯಿಂದ 'ಮಣದೀಪ' ಬರುತ್ತವೆ.

ಸಾಮಾನ್ಯವಾಗಿ ತೇಜಿಗೆರೆ ಜಾತ್ರೆಯು ಏಪ್ರಿಲ್ ತಿಂಗಳಲ್ಲಿ 'ಆನೆಕೆರೆ–ಅಮ್ಮ'ನ ಹಬ್ಬವಾದ ಎಂಟು ದಿನಗಳಿಗೆ ಸರಿಯಾಗಿ ಮಂಗಳವಾರ, ಬುಧವಾರಗಳು ನಡೆಯುತ್ತದೆ. ಮಂಗಳವಾರ ಊರಲ್ಲೆಲ್ಲ ಉತ್ಸವ ನಡೆಯುತ್ತದೆ. ಬುಧವಾರ ಬೆಳಿಗ್ಗೆ ಮೂರು

3. ಕೋಲಾರಮ್ಮ : ಜಿ. ಆರ್. ತಿಪ್ಪೇಸ್ವಾಮಿ, ಪುಟ–೫ ಪ್ರ–೧೯೭೬.

4. ಉಜ್ಜನಿ ಚೌಡಮ್ಮನ ಹಬ್ಬದ ವೈಶಿಷ್ಟ್ಯ : ಎ. ಆನಂದಮೂರ್ತಿ (ಮುನ್ನುಡಿ) ಪ್ರ–೧೯೭೯.

5. ಹಾಸನ ಜಿಲ್ಲೆಯ ಚನ್ನರಾಯಪಟ್ಟಣ–ಹೊಳೆನರಸೀಪುರ ಹೆದ್ದಾರಿಯಲ್ಲಿ ಎಂಟು ಕಿ.ಮೀ. ದೂರದಲ್ಲಿರುವ ಒಂದು ಪುಟ್ಟ ಗ್ರಾಮ.

ಗಂಟೆಗೆ ತೇರನ್ನು ಎಳೆದು ಆರು ಗಂಟೆಯಷ್ಟರಲ್ಲಿ ದೇವಾಲಯದ ಸಮೀಪಕ್ಕೆ ಬರುತ್ತಾರೆ.

ತೇಜಗೆರೆ ಆದಿಶಕ್ತಿ ಇದ್ದಾಳೊ ಇಲ್ಲವೊ
ಹೊಕ್ಕಿ ನೋಡಿರಯ್ಯ ಗುಡಿಯಲ್ಲಿ । ತೇಜಗೆರೆ ಆದಿಶಕ್ತಿ
ಎದ್ದುಬಾರೆ ನಮ್ಮ ಸಪುನಾಕೆ ॥

ಈ ಊರಿನ ಮೂಲಶಕ್ತಿಯೇ 'ತೇಜಗೆರೆ ಅಮ್ಮ'. ಇವಳು ಇಲ್ಲಿ ನೆಲೆಯಾಗಿ ನಿಂತು ಜನರನ್ನು ರಕ್ಷಿಸುತ್ತಿದ್ದಾಳೆಂಬುದು ಸ್ಪಷ್ಟವಾಗುತ್ತದೆ. ಸತ್ತವರು ಕನಸಿನಲ್ಲಿ ಕಾಣಿಸಿಕೊಂಡರೆ ಅವರು ಜೀವಂತವಾಗಿದ್ದಾರೆಂದೂ, ಮಾರ್ಗದರ್ಶನ ನೀಡಲೋಸುಗವೇ ಬಂದಿದ್ದಾರೆಂಬ ಭಾವನೆ ಜನಪದರಲ್ಲಿ ಇದೆಯಾದರೂ ಆದಿಶಕ್ತಿ ಇದ್ದಾಳೊ ಇಲ್ಲವೊ ಹೊಕ್ಕಿ ನೋಡಿರಿ ಎಂಬ ಸಂದೇಹ ಇಲ್ಲಿ ವ್ಯಕ್ತವಾಗಿದೆ. ಎಲ್ಲ ಗ್ರಾಮದೇವತೆಗಳೂ ಆಯಾ ಗ್ರಾಮಗಳನ್ನು ಯಾವುದೇ ದುಷ್ಟಶಕ್ತಿಗಳು ಪ್ರವೇಶಿಸದಂತೆ ಕಾವಲಿರುತ್ತಾಳೆಂಬ ನಂಬಿಕೆ ಇರುವುದರಿಂದ ಈಕೆಯೂ ಸಹ ತನ್ನ ಅಧೀನದಲ್ಲಿರುವ ಇತರ ಗ್ರಾಮಗಳ ರಕ್ಷಣೆಗಾಗಿ ಹೋಗಿರುವಳೇನೋ ಎಂಬ ಭಾವನೆ ಇರಬಹುದು ಎನಿಸುತ್ತದೆ.

ಹಟ್ಟಿಲ್ಲಾರೂತಿ ಕೊಟ್ಟಿಗೇಲಿ ಗೊಲ್ಲಾತಿ
ಘಟ್ಟ ಕೆಳಗಾಲ ತೆಲಗಾತಿ । ಸೋಲಿಗರೆಣ್ಣೆ
ಬಿಟ್ಟಿ ಬಂದೇನೆ ಮಲನಾಡ ॥
ಆರೂತಿ ಹೊಂಟಾವು ಪೀರೂತಿ ಉಳ್ಕೊಳಿಗೆ
ಕೇರಿ ಕೇರಿ ಮೇಲೆ ಮೆರಿಯೊ(ಳಗೆ) । ದಂಡಿನ ಮಾರಿಗೆ
ಆರೂತಿ ಹೊಂಟಾವು ಐನೂರು ॥
ಕೋಡಳ್ಳಿಲವಳೆ ಕೊಲ್ಲಾಪುರದಲ್ಲವಳೆ
ಉತ್ತ್ಮನಳ್ಳಿಲವಳೆ ಉರಿಮಾರಿ । ಜಂಬೂರ
ಕೋಟೆ ಮಾರೀಯ ಬರುವೇಳಿ ॥

'ದಂಡಿನಮಾರಿ' ಇದ್ದಂತೆ 'ತೇಜಗೆರೆ ಅಮ್ಮ'ನೂ ಸೇನಾದೇವತೆ ಯುದ್ಧಗಳು ವ್ಯಾಪಕವಾಗಿ ಹರಡಿದ್ದ ಕಾಲದಲ್ಲಿ ಈಕೆ ಪ್ರಾಬಲ್ಯಕ್ಕೆ ಬಂದಿರಬಹುದು. ಕ್ರಮೇಣ ಸಾಂಕ್ರಾಮಿಕ ರೋಗಗಳ ನಿವಾರಕ ಶಕ್ತಿಯಾಗಿರಬೇಕು. ಈಗಲೂ ಸಿಡುಬು, ಸೀತಾಳೆ ಇತ್ಯಾದಿ ಅಂಟುಜಾಡ್ಯಗಳು ತಲೆದೋರಿದ್ದಾದರೆ ಅವಳಿಗೆ ತಂಪು ಮಾಡಿಸುವುದುಂಟು. ಅವಳು ಜನರ ಮೇಲೆ ಕೋಪಗೊಂಡಾಗ ಅವು ಸಂಭವಿಸುತ್ತವೆಂದೂ, ಶೈತ್ಯೋಪಚಾರ ಮಾಡಿದರೆ ಅಮ್ಮನ ಕೋಪ ಉಪಶಮನವಾಗುತ್ತದೆಂದೂ ಜನಪದರು ನಂಬಿದ್ದಾರೆ. ಇವಳ ಮೂಲ 'ಮಲೆನಾಡು' ಆಗಿದ್ದು ನಂತರ ಇಲ್ಲಿಗೆ ಬಂದು ನೆಲೆಗೊಂಡಿದ್ದಾಳೆ. ಒಂದೆಡೆ ನಿಲ್ಲದೆ ಕೋಡಳ್ಳಿ, ಕೊಲ್ಲಾಪುರ, ಉತ್ತ್ಮನಳ್ಳಿ, ಜಂಬೂರು, ಪೋತನಳ್ಳಿ, ಸಿರಿಗೇನಳ್ಳಿ, ಕಾಚೇನಳ್ಳಿ, ಕುರುಬಳ್ಳಿ ಮುಂತಾದ ಗ್ರಾಮದವರನ್ನು ರಕ್ಷಿಸುವ ಹೊಣೆಯನ್ನು ಹೊತ್ತಿದ್ದು 'ಸಂಚಾರಿದೇವತೆ' ಆಗಿದ್ದಾಳೆನ್ನಬಹುದು. ಜಾತ್ರೆಯಂದು

ಸುತ್ತಮುತ್ತಲ ಗ್ರಾಮಗಳಿಂದ ಆರತಿಗಳು ಬಂದರೂ ತವರೂರಿನ ದೀಪ ಬರುವವರೆಗೆ ಬೇರೆ ಊರುಗಳ ರಥ, ಬಂಡಿಗಳು ಇವಳ ಗುಡಿಯನ್ನು ಪ್ರದಕ್ಷಿಣೆ ಮಾಡುವಂತಿಲ್ಲ.

ಹತ್ತೀಯ ಮರದ ನೆತ್ತಿಕೊಂಬೆ ಮೇಲೆ
ಹತ್ತಿ ನೋಡ್ಯಾಳೊ ತವರೂರ । ಅಪ್ಪನ ಮನೆಯ
ಮುತ್ತಿನಾರೂತಿ ಹೊರುಟಾವೂ ॥
ಬಳೆಯ ತೊಡುವಾಗ ಬಲಗಡೆ ಕೂತವರಾರು
ಬಳೆಗಾರ ಸೆಟ್ಟಿ ಕೈಬೀಡೊ । ತೇಜಿಗೆರೆಯ
ಬಳಗಾವ ಕೇಳಿ ಬರುತೀನಿ ॥

ಹೀಗೆ ತೇಜಿಗೆರೆಯಿಂದ ಬಳಗದ ಆರತಿ ಬಂದಮೇಲೆ ಗುಡಿಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿ, ಮಂದ್ದುಗುಂಡುಗಳನ್ನು ಹಾರಿಸಿ ಗುಡಿ ಬಾಗಿಲಲ್ಲಿ ನಿಲ್ಲುತ್ತಾರೆ.

ಸಾಮಾನ್ಯವಾಗಿ ಮಾರಿಯರಿಗೆ, ಅದರಲ್ಲೂ ಯುಂದ್ಧ ಮಾರಿಯರಿಗೆ ಸಂಬಂಧಿಸಿದ ದೇವಾಲಯಗಳು ಊರ ಹೊರಗಿರುವುದೇ ಹೆಚ್ಚು. ಗುಂಡಾಗಿರುವ ತಲೆಯಾಕಾರದ ನೆಲಕ್ಕೆ ಹೂತ ಎರಡು ಕಲ್ಲುಗಳೇ[6] ದೇವರನ್ನು ಪ್ರತಿನಿಧಿಸುವ ವಿಗ್ರಹಗಳು. ಶಿಷ್ಟ ದೇವತೆಗಳಿಗಿರುವಂತೆ ಗ್ರಾಮದೇವತೆಗಳಿಗೆ ವಿಶೇಷ ಸೌಲಭ್ಯಗಳು ಇರುವುದಿಲ್ಲ. ಯಾವುದೇ ವೈಭವವಿಲ್ಲದ, ನಾಗರಿಕತೆಯ ಸೋಂಕಿರದ ಬಿಸಿಲು–ಮಳೆ–ಗಾಳಿಗೆ ಮೈಯೊಡ್ಡಿರುವ ಹೊಳೆಯದಡ, ಹೊಂಗೆ ತೋಪು, ಆಲ, ಜಾಲ, ಪೌಸೇಯ ಮರದ ಅಡಿಯೇ ಗ್ರಾಮದೇವತೆಯ ನಿವಾಸ.[7]

ಗಂಧ ತೇಯ್ಕೋಳಿ ಗಿಂಡಿಗೆ ತುಂಬ್ಕೋಳಿ
ಹಿಂದೆ ಗೌಡ್ಗೋಳ ಕರಕೊಳಿ । ತೇಜಿಗೆರೆ ಆದಿಶಕ್ತಿ
ಗಂಗಾಸ್ಥಾನಕ್ಕೋಗಿ ಬರುವೋಣ ॥

ಪೂಜಾರಪ್ಪನನ್ನು ಕರೆದುಕೊಂಡು ಗಂಧವನ್ನು ಅಣಿಮಾಡಿಕೊಂಡು ಗಿಂಡಿಗೆ ಹಾಕಿಕೊಂಡು ಊರ ಗೌಡರುಗಳನ್ನು ಕರೆದುಕೊಂಡು ಗಂಗೆಯ ತಡಿಗೆ ಹೋಗುತ್ತಾರೆ.

ಚಂದ್ರಗಿರಿ ಬಣ್ಣ ಚಂದಲ್ಲಂತ್ಹೇಳಿ
ಚುಡಿ ಕುಂತಾಳೆ ಹೊಳೆಯಲ್ಲಿ । ತೇಜಿಗೆರೆ ಸಿಂಗೆನಳ್ಳಿ
ಕುರುಬ್ರಳ್ಳಿ ಗೌಡುಗೋಳ ಗೊಂಬೇಯ ಬಣ್ಣ ತರುವ್ಹೇಳಿ ॥

ಇವಳಿಗಿರುವ ಚಂದ್ರಗಿರಿ ಬಣ್ಣ [ಸೀರೆ] ಚೆನ್ನಾಗಿಲ್ಲವೆಂದು ಹಟ ಮಾಡಿಕೊಂಡು ಹೊಳೆಯಲ್ಲಿ ಕುಂತಿದ್ದಾಳೆ. ಈಕೆಗೆ ಒಪ್ಪುವಂತಹ ಸೀರೆ ತರಲು ತೇಜಿಗೆರೆ, ಸಿಂಗೆನಳ್ಳಿ, ಕುರುಬ್ರಳ್ಳಿ ಗೌಡರನ್ನು ಕರೆಸಲಾಗುತ್ತದೆ. ಅವರು 'ವರಿ' ಎತ್ತಿರುವ ಹಣದಿಂದ ಪೂಜಾ ಸಾಮಾನುಗಳ ಜೊತೆಗೆ ಕೆಂಪು ಬಣ್ಣದ ಸೀರೆಯನ್ನು ತರುತ್ತಾರೆ.

6. ಇಲ್ಲಿ ದೇವತೆಯು ಮೂಡಿದ್ದಾಳೆಂಬ ನಂಬಿಕೆ ಗ್ರಾಮೀಣರಲ್ಲಿದೆ.
7. ಇತ್ತೀಚೆಗೆ ಚಿಕ್ಕ ಗುಡಿಯನ್ನು ನಿರ್ಮಿಸಿದ್ದು ಗರ್ಭಾಂಕಣ, ಹೊರಾಂಗಣ ಇವೆ.

ಕೂಕುಮನಿಕ್ಕೊಂಡು ಕೂತಿರೊಳಿವಳ್ಯಾರೆ
ಕೂಕುಮದ ಸೀರೆ ನೆರಿಗ್ಯೋಳು । ತೇಜಿಗೆರೆ ಆದಿಶಕ್ತಿ
ಇವ್ಳ ಕೂತು ನೋಡ್ಯಾಳೆ ಪರಿಸೇಯ ॥

ತಂದಿರುವ ಕೆಂಪುಬಣ್ಣದ ಸೀರೆ ಕಂಪ್ಪಸವನ್ನು ತೊಟ್ಟು ಹಣೆಗೆ ಅಗಲವಾಗಿ ಕುಂಕುಮವನ್ನಿಟ್ಟು ಕುಳಿತು ಪರಿಸೆ ನೋಡುವುದೇ ಒಂದು ಸೊಗಸು. ಹಳ್ಳದ ದಂಡೆಯಿಂದ ಒಲಿಸಿಕೊಂಡು ನಡೆಮುಡಿಯ ಮೇಲೆ ಕರೆತರುತ್ತಾರೆ. ನವಿಲಗರಿಯಂತೆ ಕುಣಿತ ಹಾಕುತ್ತ ಬರುವುದು ಬಲು ಸೊಗಸಾಗಿರುತ್ತದೆ.

ಕೆಂಡಗಣ್ಣನೋಳು ಬಂದಾಳೂರ ಮುಂದೆ
ಕೆಂಜಾರುಗಣ್ಣ ಕೆದರೂತ । ದೂಳ್ ಮರಿಯ
ಕೊಟ್ಟಲ್ಲದೆ ಊರ ಹೊಗೊಳಲ್ಲ ॥

ಊರಿನ ಸಮೀಪಕ್ಕೆ ಬಂದಿದ್ದಾಳೆ. ಅಷ್ಟರಲ್ಲಿ ಬಲಿಗಾಗಿ ಮರಿಯನ್ನು ಸಿದ್ಧಗೊಳಿಸಿರಬೇಕು. ಇಲ್ಲದಿದ್ದಲ್ಲಿ ಕೋಪಗೊಂಡು ಕಣ್ಣನ್ನು ಕೆಂಪಗೆ ಮಾಡಿಕೊಂಡು 'ದೂಳ್ ಮರಿ'ಯನ್ನು ಕೊಟ್ಟಲ್ಲದೆ ಊರನ್ನು ಪ್ರವೇಶಿಸುವವಳಲ್ಲ ಎಂಬಂತೆ ನಿಲ್ಲುತ್ತಾಳೆ. ದೂಳ್‌ಮರಿ ಕೊಟ್ಟು, ಪಾದ ತೊಳೆದು ಆರತಿ ಎತ್ತಿದ ನಂತರವೇ 'ತೇಜಿ'ಯಿಂದ ಕೆಳಗೆ ಇಳಿಯುತ್ತಾಳೆ.

ಕತ್ತಿ ಕಿತ್ತಾಳು ಕಲ್ಲಮೇಲೆ ನೆಟ್ಟಾಳು
ನೆತ್ತೀಯ ಜುಂಗ ಹೊದುರ್‍ಯಾಳು । ತೇಜಿಗೆರೆ ಆದಿಶಕ್ತಿ
ಅವಳ ಸತ್ಯ ತೋರಾಳು ಸಭೆಯಲ್ಲಿ ॥
ಗಂಡನುಳ್ಳೋಳಿಗೆ ಗಂಡಾನ ಐಭೋಗ
ಗಂಡನಿಲ್ಲಾದ ಗರತೀಗೆ । ತೇಜಿಗೆರೆ ಆದಿಶಕ್ತಿಗೆ
ಗಂಡುಗತ್ತೀಯ ಐಭೋಗ ॥

ಕತ್ತಿಯನ್ನು ಬಿಚ್ಚಿ ಕಲ್ಲಮೇಲೆ ನೆಟ್ಟು, ನೆತ್ತಿಯ ಜುಂಗನ್ನು 'ಹೊದರುತ್ತ' ತನ್ನ ಸತ್ಯವನ್ನು ಸಭೆಗೆ ತೋರುತ್ತಾಳೆ. ಗಂಡನಿಲ್ಲದ ಈಕೆಗೆ ಗಂಡುಗತ್ತಿಯನ್ನಿಟ್ಟು ಐಭೋಗದ ಪೂಜೆ ಸಲ್ಲಿಸಲಾಗುತ್ತದೆ.

ತೇರು ಕಟ್ಟಿದ ಬಡಗಿಗೆ ಏನು ಕೊಟ್ಟೆ ಪುಟ್ಟವ್ವ
ಆಗ್ರವ ಕೊಟ್ಟೆ ಅಡಿಕೆಯ । ಹೊಂಬಾಳೆಯ
ಭೂಮಿಯ ಕೊಟ್ಟೆ ಕೊಡುಗೇಯ ॥

ಈ ದೇವತೆಗೆ ಸಂಬಂಧಿಸಿದಂತೆ ಹತ್ತಾರು ಎಕರೆಗಳಷ್ಟು ತರಿ ಜಮೀನು ಇದ್ದು ಗುಡಿ ಗೌಡನ ಮನೆಯವರು, ಪೂಜಾರಪ್ಪ, ಬಡಗಿಗಳ ಮನೆಗಳವರು ಅನುಭವಿಸುತ್ತಿದ್ದಾರೆ. ಊರ ಹೊರಗಿರುವ ಈ ಗುಡಿಯಲ್ಲಿ ದೇವತೆಗೆ ಸಂಬಂಧಿಸಿದ ಒಡವೆ, ವಸ್ತ್ರಗಳು, ಮೆರೆಸುವ ವಿಗ್ರಹಗಳು, ಸೋಮಗಳು–ಮುಂತಾದುವನ್ನು ಇಡುವುದು ಸೂಕ್ತವಲ್ಲವಾದ್ದರಿಂದ ಕುರುಬ್ರಳ್ಳಿಯಲ್ಲಿ ಒಂದು ಮನೆಯನ್ನು ಕಟ್ಟಿಸಿ, ಅದರಲ್ಲಿ ಎಲ್ಲ

ವಸ್ತುಗಳನ್ನು ಇಟ್ಟು ಅದರ ಸಂಪೂರ್ಣ ಜವಾಬ್ದಾರಿಯನ್ನು ಗಂಡಿಗೌಡನಿಗೆ ವಹಿಸಿದ್ದಾರೆ. ವಾರಕ್ಕೊಮ್ಮೆ ಗುಡಿಯಲ್ಲಿ ಪೂಜೆ ನಡೆಯುತ್ತದೆ,

ತೇಜಿಗರೆ ಅಮ್ಮನ ಹಬ್ಬ ಸಾಮೂಹಿಕವಾದುದು. ವರ್ಷಕ್ಕೆ ಒಮ್ಮೆ ತಮ್ಮ ನೆಂಟರಿಷ್ಟರನ್ನು ಬರಮಾಡಿಕೊಂಡು ಬಾಣ, ಬಿರುಸು, ತಮ್ಮಟೆ, ವಾದ್ಯಗಳ ಮೇಳ ದೊಡನೆ ರಥೋತ್ಸವ ನಡೆಯುತ್ತದೆ. ಮಾರನೆ ಬೆಳಗ್ಗೆ ಪುಟ್ಟ ಜಾತ್ರೆಯೇ ಇಲ್ಲಿ ಸೇರುತ್ತದೆ. ನಂತರ ಮನೆಗೆ ಹಿಂದಿರುಗಿ ಬಂಧುಗಳೊಡನೆ ಮಾಂಸದ ಊಟವಾಗುತ್ತದೆ. ಈಗಲೂ ಈ ಪದ್ಧತಿ ಮುಂದುವರಿಯುತ್ತಿದೆ.

ವಿ.ಸೂ. :—ಈ ಲೇಖನ ಬರೆಯಲು ನನ್ನ ಬಂಧು ಕೆ. ಬಿ. ಮಲ್ಲೇಶ ಅವರು ಕೆಲವು ಮಾಹಿತಿಗಳನ್ನು ಒದಗಿಸಿದ್ದಾರೆ. ಜೊತೆಗೆ ಇಲ್ಲಿನ ಗೀತೆಗಳನ್ನು ತೇಜಿಗರೆಯ ಆದಿದ್ರಾವಿಡ ಮನೆತನದ ಚೆಲುವಯ್ಯನವರು ಹೇಳಿ ಸಹಕರಿಸಿದ್ದಾರೆ. ಇವರನ್ನು ನೆನೆಯಬೇಕಾದುದು ನನ್ನ ಆದ್ಯ ಕರ್ತವ್ಯವಾಗಿದೆ.

ಎಸ್. ಕೆ. ರಮೇಶ್

ರವೀಂದ್ರರ ಸೃಜನಶೀಲ ಸಾಹಿತ್ಯದಲ್ಲಿ ಜಾನಪದೀಯ ನೆಲೆಗಳು

ಜಾನಪದ ಯಾವುದೇ ಸಮಾಜ–ಸಂಸ್ಕೃತಿಯ ಮೂಲ ನೆಲೆಯಾಗಿರುತ್ತದೆ, ಅವುಗಳ ನೆಲೆಯೂ ಈ ಮೂಲ ಭಿತ್ತಿಯ ಅಡಿಪಾಯದ ಮೇಲೆಯೇ ಆಗಿರುತ್ತದೆ. ಅಂತೆಯೇ ಮಾನವನು ತನ್ನ ವಿಕಾಸದ ಹಂತದಲ್ಲಿ ರೂಪಿಸಿಕೊಂಡ ಸಾಹಿತ್ಯ, ತತ್ವಶಾಸ್ತ್ರ, ಸಮಾಜಶಾಸ್ತ್ರ, ವಿಜ್ಞಾನ, ತಂತ್ರಜ್ಞಾನ ಮುಂತಾದವುಗಳು ಇಂದು ಭಿನ್ನ ಭಿನ್ನ ವ್ಯಾಪಕ ಆಯಾಮಗಳನ್ನು ಪಡೆದು ಬೌದ್ಧಿಕ ಇಲ್ಲವೆ ಪ್ರಾಯೋಗಿಕವಾದ ವ್ಯವಸ್ಥಿತ ಶಾಖೆಗಳಾಗಿ ಬೆಳವಣಿಗೆ ಸಾಧಿಸಿ, ಒಂದು ಸ್ಪಷ್ಟ ವಿನ್ಯಾಸವನ್ನು ಪಡೆದು ಮಾನವನ ಪ್ರಜ್ಞೆ ಮತ್ತು ಪ್ರಯತ್ನಗಳ ವಿಶಾಲ ಸ್ವರೂಪವನ್ನು ಬಿಂಬಿಸುತ್ತವೆ. ಈ ಎಲ್ಲ ಜ್ಞಾನ, ಬುದ್ಧಿಗಳು ಜಾನಪದೀಯ ನೆಲೆಯಲ್ಲಿಯೇ ಸಾವಕಾಶವಾಗಿ ನಿಷ್ಪನ್ನವಾದವುಗಳಾಗಿವೆ. ಅಂತೆಯೇ ಸಾಹಿತ್ಯ ವಿಶೇಷವಾಗಿ ಸೃಜನಶೀಲವಾದದ್ದು. ಅದು ಈ ಜಾನಪದೀಯ ನೆಲದಲ್ಲಿ ತನ್ನ ಮೂಲ ಬೇರುಗಳನ್ನು ಬಿಟ್ಟು ಬೆಳೆದಾಗಲೇ ಉತ್ಕೃಷ್ಟತೆಯನ್ನು ಹೊಂದಲು ಸಾಧ್ಯ. ಅಂತೆಯೇ ಭಾರತೀಯರ ವಿಶ್ವಮಾನ್ಯ ಕವಿ ರವೀಂದ್ರನಾಥರ ಸೃಜನಶೀಲ ಸಾಹಿತ್ಯದಲ್ಲಿರುವ ಜಾನಪದೀಯ ಮೂಲ ನೆಲೆ–ಸೆಲೆಗಳು ಹೇಗೆ ಅವರ ಸಾಹಿತ್ಯಿಕ ಪ್ರತಿಭೆಯ ಉತ್ಕೃಷ್ಟತೆಗೆ ಪೂರಕವಾಯಿತೆಂಬುದನ್ನು ಈ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಆರಂಭಿಕ ಸಾಹಿತ್ಯ ಸೃಷ್ಟಿ

ರವೀಂದ್ರನಾಥ್ ಠಾಕೂರರು ಭಾರತೀಯ ಅಗ್ರಮಾನ್ಯ ಕವಿ. ಈ ಮಾತು ಅವರ 'ಗೀತಾಂಜಲಿ' ಕವನ ಸಂಕಲನಕ್ಕೆ ಮಾತ್ರವಲ್ಲ; ಸಮಗ್ರ ಸಾಹಿತ್ಯದ ಉತ್ಕೃಷ್ಟ ಸತ್ವ–ಸಾರಕ್ಕೆ ಅನ್ವಯಿಸಿದುದು. ರವೀಂದ್ರರ ಸೃಜನಶೀಲತೆ ತೆರೆದುಕೊಳ್ಳಲು, ಪಳಗಲು, ಮಾಗುತ್ತಾ ಪರಿಪಕ್ವ ವಿನ್ಯಾಸಗೊಳ್ಳಲು ಮೂಲ ಪ್ರೇರಣೆಯಾದುದು, ಅವರು ತಮ್ಮ ಪ್ರತಿಭೆಯನ್ನು ಜಾನಪದೀಯ ಮೂಲ ನೆಲೆ–ಸೆಲೆಗಳಿಗೆ ಒರೆ ಹಚ್ಚಿದುದರಿಂದ. ಶ್ರೀಮಂತಿಕೆಯ ಮನೆತನದಲ್ಲಿ ಹುಟ್ಟಿದ ಇವರು; ಆ

ಯಾಂತ್ರಿಕವಾದ ಐಭೋಗದ ಗೂಡಿನ ಗಂಡಾಣದೊಳಗೆ ಹೊರಬರಲು ಪ್ರಯತ್ನಿಸುತ್ತಿದ್ದರು. ಹೀಗೆ ರವೀಂದ್ರರು ಪರಿತಪಿಸುತ್ತಾ–ತೊಳಲಾಡುತ್ತಾ ಏಕತಾನವೂ, ಕೃತಕವೂ ಆದ ಸೋಗಿನ ಬದುಕಿನಲ್ಲಿ ಜಡವಾಗಿ ಹೋಗುತ್ತಿತ್ತು. ಅವರೂ–ಅವರ ಪ್ರತಿಭೆಯೂ. ಆಗಿಯೂ ಅವರಲ್ಲಿನ ಸ್ವಭಾವ ಸಹಜವಾದ ಕವಿತನದ ತುಡಿತ, ಕುತೂಹಲ, ಉತ್ಸಾಹದಿಂದ ಜಗತ್ತಿನ ಸಂಕೀರ್ಣತೆಯನ್ನು ಬದುಕಿನ ಯಾಥಾರ್ಥವನ್ನು ಅರಿಯಲು ಚಡಪಡಿಸುತ್ತಿತ್ತು. ಮನೆ. ಶಾಲೆಯ ಬಂಧನ ಅವರ ಪಾಲಿಗೆ ಜೈಲುಖಾನೆಯಾಗಿ ಅಸಹನೀಯವಾಯಿತು; ಇವುಗಳಿಗೆ ಕಟ್ಟು ಬಿದ್ದಿದ್ದರೆ ಈ ಸೀಮಿತ ಪರಿಧಿ–ಅನುಭವಗಳ ಮಿತಿಯನ್ನು ಮೀರಿ ರವೀಂದ್ರರ ವಿಶ್ವಮುಖಿಯಾದ ಸಮಷ್ಟಿ ಕವಿವಾಣಿ ಸಹಜವಾಗಿ ಹೊಮ್ಮಲಾಗುತ್ತಿರಲಿಲ್ಲ. ಆದುದರಿಂದಲೇ ಈ ಮಿತಿಯೊಳಗೆ ಬರೆದ ರವೀಂದ್ರರ ಆರಂಭಿಕ ಬರಹಗಳು, ಸಂಕೀರ್ಣತೆ, ಪರಿಪೂರ್ಣತೆಯಿಲ್ಲದೆ ಕೇವಲ ಶಬ್ದಪುಂಜವಾಗಿ ಇಲ್ಲವೆ ಆಂಶಿಕ ಸಾಹಿತ್ಯ ಮಾತ್ರವಾಗಲು ಕಾರಣವಾಯಿತು.

ಸೃಜನಶೀಲ ಪ್ರಕ್ರಿಯೆಯ ಆರಂಭ

ರವೀಂದ್ರರು ಮೊದಲ ಬಾರಿಗೆ ಮನೆಯ, ಶಾಲೆಯ ಸೆರೆಯ ಆವರಣವನ್ನು ಮೀರಿ ತಂದೆಯೊಡನೆ ಹಿಮಾಲಯಕ್ಕೆ ಹೋದಾಗ ಪ್ರಪಂಚದ ವಿಶ್ವರೂಪಿನ ಸಂಕೀರ್ಣ ಸೆಳೆತ–ಸಂವೇದನೆಗಳಿಂದ ರವೀಂದ್ರರ ಅಂತಃ ಪ್ರತಿಭೆಯಾದ ಕಾವ್ಯಸೃಜನೆ ಸಚೇತಕಗೊಂಡಿತು. ಈ ದೃಷ್ಟಿಯಲ್ಲಿ ಓದಲಾರಂಭಿಸಿದ ಠಾಕೂರರಿಗೆ ಬಂಗಾಳದ ಪ್ರಭಾವಶಾಲಿಯಾದ ಜನಪದ ಸಾಹಿತ್ಯ ಗುಂಪಿನ ವೈಷ್ಣವ ಪದಾವಳಿಗಳು ರವೀಂದ್ರರ ಮೇಲೆ ಗಾಢ ಪ್ರಭಾವ ಬೀರಿ, ಆ ರೀತಿಯಲ್ಲೇ ಅನುಕರಿಸಿ ಬರೆಯಲು ಮೊದಲು ಮಾಡಿದರು. ರಾಮಾಯಣ, ಮಹಾಭಾರತ, ಕಾಳಿದಾಸನ ಕೃತಿಗಳನ್ನು ಸಾಧಾರಣವಾಗಿಯೇ ಓದಿ ತಿಳಿದುಕೊಂಡಿದ್ದ ಠಾಕೂರರು ಈ ನಂತರ ಸ್ವಯಂಸ್ಫೂರ್ತವಾಗಿ ಜನಪದ ಸಾಹಿತ್ಯ ಮತ್ತು ಅವರ ಕವಿಗಳ ಮೇಲೆ ಕುತೂಹಲ, ಒಲವು ಉಂಟಾಗಿ ಜಾನಪದ ಜ್ಞಾನರಾಶಿಯನ್ನು ವೃದ್ಧಿಸಿಕೊಳ್ಳುತ್ತಾರೆ. ಅಲ್ಲಿ ಯಥಾವತ್ತಾದ ಬದುಕಿನ ದಟ್ಟ ಚಿತ್ರಣದ ದರ್ಶನವನ್ನು ಕಾಣುತ್ತಾರೆ.

ಜಾನಪದೀಯ ಸಂವೇದನೆ ಮತ್ತು ಅನುಭವ ಸಾಮಗ್ರಿ

ಯುವ ರವೀಂದ್ರರು ಬೋಲ್ಪುರದ ಶೆಲೈಡಾದ ಜಮೀನ್ದಾರಿಯ ಹೊಣೆ ಹೊತ್ತು, ಹಳ್ಳಿಗೆ ಹೋದಾಗ ಗ್ರಾಮೀಣ ಬದುಕಿನ ಕಠೋರ ವಾಸ್ತವ ಅವರ ಪ್ರತ್ಯಕ್ಷ ಅನುಭವಕ್ಕೆ ಬರುತ್ತದೆ. ಜನಪದೀಯರ ಜನಜೀವನದ ರೀತಿ–ನೀತಿ–ಸಂವೇದನೆಗಳು ರವೀಂದ್ರರಿಗೆ ಅನುಭವಗಮ್ಯವಾಗಿ ಅವರ ದೃಷ್ಟಿ–ಸೃಷ್ಟಿ ಬಲಿಯುತ್ತವೆ. ಅವರ ಸಾಹಿತ್ಯ, ಚಿತ್ರಕಲೆ ಮುಂತಾದ ಕಲಾತ್ಮಕ ಸೃಜನೆಗೆ ಬೇಕಾದ ಅನುಭವ ಸಾಮಗ್ರಿ ಅಲ್ಲಿ ಅಗಾಧವಾಗಿ ದೊರೆತವು. ಮೌಖಿಕ ಪರಂಪರೆಯ ಜನಪದ ಸಾಹಿತ್ಯ ಹಾಗೂ ಕಲೆಗಳಲ್ಲಿ

ಬದುಕಿನ ತಾಜಾತನದ ತಿರುಳಿರುವುದನ್ನು ಕಂಡು ಅವುಗಳನ್ನು ಸಂಗ್ರಹಿಸುತ್ತಾ, ಅವುಗಳ ಬಗೆಗೆ ವಿಚಾರಪೂರ್ಣ ಲೇಖನಗಳನ್ನು ಬರೆದು ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರ ಗಮನಕ್ಕೆ ತರುವ ಪ್ರಯತ್ನ ಆರಂಭಿಸಿದರು. ರವೀಂದ್ರರ ಬರವಣಿಗೆ ಈ ಜನಪದ ಸಾಹಿತ್ಯದ ಭಿತ್ತಿಯಲ್ಲಿ ಸ್ವೋಪಜ್ಞವಾದ ಹಾಗೂ ಅನನ್ಯವಾದ ಸೃಜನಶೀಲತೆಯ ಪರಿಪೂರ್ಣ ವಿನ್ಯಾಸವನ್ನು ಪಡೆದು ರಚನೆಯಾಗಲು ಸಾಧ್ಯವಾಯಿತು. ಅವರ 'ಕರ್ಮದೇವತೆ', 'ಜೀವನದೇವತೆ', 'ಪ್ರೇಮಯೋಗ' ಮುಂತಾದ ಸೈದ್ಧಾಂತಿಕ ಪರಿಕಲ್ಪನೆಗಳು ಸುವ್ಯಾಪಕ ಅರ್ಥದ ಮೇಲೆ ಮೂಡಿದುದೂ ಈ ಜನಪದೀಯ ಹಿನ್ನೆಲೆಯಲ್ಲಿಯೇ ! ಸೃಜನಶೀಲತೆಯ ದೃಷ್ಟಿಯಿಂದ ಉತ್ಕೃಷ್ಟ ರಚನೆಗಳಾಗಿರುವುದು; ರವೀಂದ್ರರ ಚಿತ್ರಾಂಗದ, ಚಿರಕುಮಾರ ಸಭಾ, ವಿಸರ್ಜನ, ಸೋನಾರ್ ತರೀ ಮುಂತಾದ ಕೃತಿಗಳಲ್ಲಿ ಪ್ರಧಾನವಾಗಿ ಜಾನಪದೀಯ ಅಂಶಗಳ ಮೂಲಸೆಲೆಯ ಮೇಲೆಯೇ ವಿನ್ಯಾಸಗೊಂಡಿರುವುದರಿಂದ. ರವೀಂದ್ರರ ಗೀತಾಂಜಲಿ ಅತೀತವಾದ ದಿವ್ಯಗೀತೆ ಗಳಂತಾದರೆ; ಬಹುವಾಗಿ ಅವರ ಕಥೆ, ಕಾದಂಬರಿ, ನಾಟಕಗಳೆಲ್ಲ ಜಾನಪದೀಯ ಜ್ಞಾನ, ಅನುಭವಗಳ ನೆಲದ ಸೊಗಡು ಸೂಸುತ್ತಾ ಯಥಾವತ್ತಾದ ಭೂಮಿಯ ಬದುಕನ್ನು ಅದ್ಭುತ ರಮ್ಯವಾದ ಕಲಾವಂತಿಕೆಯಿಂದ ಉಜ್ವಲವಾಗಿ ಚಿತ್ರಿಸಲಾಗಿದೆ. ರವೀಂದ್ರರು ಶ್ರೇಷ್ಠ ಮಕ್ಕಳ ಸಾಹಿತಿಯಾಗಲು ವಿಶ್ವಮಾನ್ಯ ಮಹಾಕವಿಯಾಗಲು; ಮಾನವ ಧರ್ಮ, ವಿಶ್ವಶಾಂತಿ–ಕಲ್ಯಾಣ ಬೋಧಿಸಿದ ಮಹಾ ಗುರುವರ್ಯರಾಗಲು ಅವರೊಳಗೆ ಜಾನಪದೀಯ ಕರುಳಿನ ವ್ಯವಧಾನವೇ ಜೀನಿಯಸ್ಸಾದ ಸತ್ವವಾಗಿರು ವುದು. ರವೀಂದ್ರರ ಜನಪರವೂ, ಸತ್ಯಪರವೂ ಆದ ನಿಷ್ಠುರ ವಿಚಾರಧಾರೆ ಅವರ ಪ್ರಬಂಧಗಳಲ್ಲಿ ಬಿತ್ತರಗೊಂಡಿರುವುದೂ ಈ ಸಮಷ್ಟಿಯ ಜಾನಪದೀಯ ಸಂಸ್ಕಾರದಿಂದಲೇ.

ದಿಟ್ಟ ಭಾರತೀಯತೆ

ರವೀಂದ್ರರು ಪಾಶ್ಚಾತ್ಯ ಸಮಾಜ. ಸಂಸ್ಕೃತಿ, ಸಾಹಿತ್ಯ, ವಿಚಾರಗಳಿಗೆ ಮುಕ್ತವಾಗಿ ತೆರೆದುಕೊಂಡರೂ ಅದರಿಂದ ತಮ್ಮ ವಿಚಾರಗಳನ್ನು ಒರೆಹಚ್ಚಿ ಪರಿಷ್ಕರಿಸಿಕೊಂಡರೂ ಅವರ ಬದುಕು, ವ್ಯಕ್ತಿತ್ವ ಹಾಗೂ ಸಾಹಿತ್ಯ ಸೃಜನೆಗಳಲ್ಲಿ ಭಾರತೀಯ ಜನಪದೀಯ ಸಂಸ್ಕಾರ, ರೂಪು, ಸಂಸ್ಕೃತಿ–ಇವುಗಳ ಘನತೆಯ ಪ್ರತಿಬಿಂಬ ಮತ್ತು ಪ್ರತಿಪಾದನೆ ಗಾಢವಾಗಿದೆ. ಇವರನ್ನು 'ಭಾರತೀಯ ಸಾಂಸ್ಕೃತಿಕ ಪ್ರತಿನಿಧಿ' ಎಂದು ಸಂಬೋಧಿಸುವುದೂ ಈ ದೇಶೀಯ ಜಾನಪದೀಯತೆಯಿಂದರೆ ಇದಕ್ಕೆ ಅನುಗುಣ ವಾಗಿಯೇ ಆಯಾಯ ಸಮಾಜ, ಸಂಸ್ಕೃತಿ, ಶಿಕ್ಷಣ, ಭಾಷೆ-ವಿಕಾಸ ಹೊಂದಬೇಕೆಂಬ ಅವರ ವಿಚಾರಸರಣಿಯೂ, ಅಂತೆಯೇ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರೂ ಆದದ್ದು ಈ ಜಾನಪದ ಪರಂಪರೆಯನ್ನು ಪರಿಪೋಷಿಸಲೆಂದೇ. ಆದರೆ ಇದು ಸೀಮಿತ ದೃಷ್ಟಿಯಲ್ಲಿ ಒಣ ಆಡಂಬರ, ಸ್ವಮತಾಂಧತೆ, ಸ್ವಹಿತಾಸಕ್ತಿಯದು ಮಾತ್ರವಾಗಿರಲಿಲ್ಲ.

ಸ್ವಂತಿಕೆ ಮತ್ತು ಸ್ವಾಭಿಮಾನದ ಸಂಕೀರ್ಣ ದೃಷ್ಟಿಯಲ್ಲಿ ಅನೇಕತೆಯಲ್ಲೂ ಅನ್ಯೋನ್ಯತೆಯನ್ನು, ಭಿನ್ನತೆಯ ನಡುವೆಯ ಏಕತೆಯನ್ನು ಅನಂತ ಹಾದಿಗಳ ನಡುವೆಯೂ ಒಂದು ವಿಶ್ವಶ್ರೇಯಸ್ಕರವಾದ ರಹದಾರಿ ಕಂಡುಕೊಳ್ಳಬೇಕೆಂಬುದು ರವೀಂದ್ರರ ವಿಶ್ವಕಲ್ಯಾಣಕರವಾದ ಜನಪದ ಧೋರಣೆಯೊಳಗೆ ರವೀಂದ್ರರ ಜನಪದೀಯ ಭಿತ್ತಿ ಸಮನ್ವಯ ಸಾಧಿಸಿತ್ತು.

ರವೀಂದ್ರರ ಸೃಜನಶೀಲ ಸಾಹಿತ್ಯದಲ್ಲೆಲ್ಲಾ ಜಾನಪದೀಯ ಸೆಲೆಯ ನೆಲೆಗಳು ವ್ಯಾಪಿಸಿವೆ. ಅವರ ಗೀತಾಂಜಲಿಯಲ್ಲೂ ಅಲ್ಲಲ್ಲಿ 'ಜೀವನ ದೇವತೆ', 'ದೂಳಿಯ ದೇಗುಲ' ಮುಂತಾದ ಕವನಗಳಲ್ಲಿ ಅಪರೂಪವಾಗಿ ಕಾಣಿಸಿಕೊಂಡಿದೆ. ಪ್ರವಾಸಕಥನ, ಪ್ರಬಂಧಗಳಲ್ಲೂ ಗೌಣವಾಗಿಯಾದರೂ ಉಳಿದುಕೊಂಡಿದೆ. ಅವರ ಕಾದಂಬರಿ, ಕಥೆ, ನಾಟಕ ಪ್ರಕಾರಗಳಲ್ಲಂತೂ ಜಾನಪದೀಯ ಅಂಶ ದಟ್ಟವಾಗಿರುವುದರಿಂದ ವಿಶೇಷವಾಗಿ ಪರಿಶೀಲಿಸಬಹುದು.

ಕಾದಂಬರಿ

ಠಾಕೂರರ ಕಾದಂಬರಿಗಳು ಐತಿಹಾಸಿಕ, ಸಾಮಾಜಿಕ, ವೈಚಾರಿಕ ಭಿತ್ತಿಯ ವಸ್ತು–ವಿಷಯ ಆಧಾರಿತವಾಗಿವೆ. ದೇಶೀಯ ಜನಪದ ಸೆಲೆಯ–ನೆಲೆಯ ಮೇಲೆ ಸಮಕಾಲೀನ ವಾಸ್ತವಿಕ ನೆಲೆಗಟ್ಟಿನ ಮೇಲೆ ಸ್ವವಿವೇಚನೆ ಹಾಗೂ ಪ್ರತಿಭಾ ಕೌಶಲದಿಂದ ದಟ್ಟವಾದ ಲೌಕಿಕ ಜಗತ್ತನ್ನು ಚಿತ್ರಿಸುತ್ತ ಅದರೊಳಗೆ ಘನತಿರುಳನ್ನು ಬಿಂಬಿಸಲಾಗುತ್ತದೆ. ಇಲ್ಲಿ ಗೋರಾ, ಯೋಗಾಯೋಗ್, ಮನೆ–ಜಗತ್ತು, ನಾಲ್ಕು ಅಧ್ಯಾಯಗಳು, ಚತುರಂಗ ಕಾದಂಬರಿಗಳಲ್ಲಿ ಸಮಷ್ಟಿ ಬದುಕನ್ನು ಅದರ ಕೃತಕ ಆವರಣವನ್ನು ಭೇದಿಸಿ ಅದರ ಅಂತರಂಗದ ಜಗತ್ತನ್ನು ಆತ್ಮೀಯವಾಗಿ ಅರಿಯಲು ಸಾಧ್ಯವಾಗಿರುವುದು ರವೀಂದ್ರರಿಗಿದ್ದ ಮುಕ್ತವಾದ ಜನಪದ ದೃಷ್ಟಿ–ಭಿತ್ತಿಗಳೇ ಕಾರಣ.

'ಗೋರಾ' ಕಾದಂಬರಿಯಲ್ಲಿ ಒಂದು ಬದುಕು, ಒಂದು ಬಾಂಧವ್ಯ, ಒಂದು ಮೌಲ್ಯ–ಇವುಗಳಲ್ಲಿ ಅಂತರ್ಮುಖವಾಗಿ ವಿಚ್ಛಿದ್ರತೆ ಇದ್ದರೂ, ಅವುಗಳ ಅಂತರಂಗದಲ್ಲಿ ಜನಪದ ಧ್ವನಿ–ಸ್ವರೂಪದ ಒಂದು ಸಮಷ್ಟಿ ಚೌಕಟ್ಟನ್ನು ಪಡೆದುಕೊಳ್ಳುತ್ತವೆ. ಈ ನಿಟ್ಟಿನಲ್ಲಿ ಸೂಕ್ಷ್ಮಾತಿಸೂಕ್ಷ್ಮವಾಗಿ ಸಮಷ್ಟಿ ಬದುಕನ್ನು ಕಾವ್ಯಾತ್ಮಕವಾಗಿ ಅನಾವರಣ ಮಾಡುತ್ತಾ 'ಧರ್ಮ'ವನ್ನು ಸಮಷ್ಟಿ ಪ್ರಜ್ಞೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಲಾಗಿದೆ. 'ನೌಕಾಘಾತ' ಕಾದಂಬರಿಯಲ್ಲಿ ಭಾರತೀಯ ಜನಪದ ಸಂಸ್ಕೃತಿಯಲ್ಲಿನ ಹೆಣ್ಣು–ಗಂಡಿನ ಪ್ರೀತಿ, ಕಾಮನೆಗಳನ್ನು ಭಾರತೀಯ ದಾಂಪತ್ಯ ಬದುಕಿನ ತೆಕ್ಕೆಯಲ್ಲಿ ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳಾಗಿ ಚಿತ್ರಿಸಲಾಗಿದೆ. ಒಟ್ಟಾರೆಯಾಗಿ ಕಾದಂಬರಿಕಾರನೊಬ್ಬ ಯಶಸ್ವಿಯಾಗಲು ಇಂತಹ ಜಾನಪದೀಯ ಸೆಲೆ–ನೆಲೆ ಇರದ ಹೊರತು ಸಮಷ್ಟಿ ಬದುಕಿನ ದಟ್ಟವಾದ ಚಿತ್ರಣ ಕೊಟ್ಟು ಕಾದಂಬರಿಯ ಜಾಯಮಾನವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುವಲ್ಲಿ ವಿಫಲನಾಗುತ್ತಾನೆ.

ಸಣ್ಣ ಕತೆ

ಮೂಲತಃ ಕವಿಗಳಾದ ಠಾಕೂರರು ಬಾಲಕನಾಗಿರುವಾಗಲೇ ಭಾವಪರವಶರಾಗಿ ಕವನ ಕಟ್ಟಿಕೊಳ್ಳುತ್ತಿದ್ದರು. ಯುವಕರಾದ ಮೇಲೆ ಅವರು ಶಿಲೈಡಾದ ಜಮೀನ್ದಾರಿ ಹೊಣೆಹೊತ್ತು ಪಲ್ಲಿಗ್ರಾಮಕ್ಕೆ ಬಂದಾಗ ಅಲ್ಲಿನ ಜನಪದರು, ಅವರ ಕಷ್ಟ ಕಾರ್ಪಣ್ಯಗಳು, ಅವರ ಚಿಂತಾಜನಕವಾದ ಜೀವನಾನುಭವಗಳು ಈ ಭಾವುಕ ಕವಿಯನ್ನು ವಾಸ್ತವಿಕ ಠಾಕೂರರನ್ನಾಗಿಸಿ, ಅವರ ಕಥಾ ಸೃಜನೆಗೆ ಮೂಲ ಭಿತ್ತಿ–ಪ್ರೇರಣೆಯಾದವು ; ಆ ತನಕದ ಬಂಗಾಳಿ ಕಥೆಗಾರರು ಆಂಗ್ಲ ಕಥೆಗಳನ್ನು ಅನುಕರಿಸಿ ಬರೆಯುತ್ತಿದ್ದರೆ ರವೀಂದ್ರರು ತಮ್ಮ ಅನುಭವಕ್ಕೆ ಬಂದ ಜಾನಪದೀಯ ಅಂಶಗಳನ್ನೇ ಬಳಸಿಕೊಂಡು ಮೊದಲಿಗೆ ಸ್ವೋಪಜ್ಞವಾದ ಉತ್ಕೃಷ್ಟ ಕಥೆಗಳನ್ನು ಬರೆದು ಭಾರತೀಯ ಗ್ರಂಥಸ್ಥ ಕಥಾಪರಂಪರೆಗೆ ಸ್ವಂತ ಅಸ್ತಿತ್ವ ಹಾಕಿದವರು. ಶ್ರೇಷ್ಠ ಕಥೆಗಾರರಾಗಲು ಕಥನಕಲೆ ಹಾಗೂ ಸ್ವಪ್ರತಿಭೆಯೇ ಮುಖ್ಯವಾದರೂ ತನ್ನ ಸಾಮಾಜಿಕ ಪರಿಸರದ ಜಾನಪದೀಯ ಜ್ಞಾನ, ಸಂಸ್ಕೃತಿ, ಸಂಸ್ಕಾರವನ್ನು ಅರಿತಷ್ಟೂ ಸಂವೇದಿಸಿದಷ್ಟೂ ಅವುಗಳನ್ನು ಕಥೆಯೊಳಗೆ ಕುಸುರಿಯ ವಿನ್ಯಾಸಗೊಳಿಸಿದಷ್ಟೂ ಕಥೆ ಸಮೃದ್ಧಿಗೊಳ್ಳುತ್ತದೆ. ಅಂತೆಯೇ ಠಾಕೂರರು ಭಾರತೀಯ ಹಾಗೂ ಬಂಗಾಳ ಜನಪದೀಯರಲ್ಲಿರುವ ಐತಿಹಾಸಿಕ ಪ್ರಜ್ಞೆ, ದಂತಕತೆಗಳು, ಪೌರಾಣಿಕ ಪ್ರಸಂಗಗಳು ಕಥಾಸಂದರ್ಭದಲ್ಲಿ ಎಳೆಯಾಗಿ ಇಲ್ಲವೆ ಹೊಳೆಯಾಗಿ ಪ್ರಾಮುಖ್ಯ ಪಾತ್ರವಹಿಸುವಿಕೆಯನ್ನು ಮನಗಾಣಬಹುದು. ಇದು ಅವರ ಕಾಬೂಲಿವಾಲ, ದಾಲಿಯಾ, ದುರಾಶೆ, ಪತ್ನಿಯ ಪತ್ರ ಕತೆಗಳಲ್ಲಿ ನಿಬಿಡವಾಗಿದೆ.

ನಾಟಕಗಳು

ರವೀಂದ್ರರ ನಾಟಕಗಳು ಕೇವಲ ಅಭಿನಯ ಪ್ರಾಧಾನ್ಯವಾದವುಗಳಲ್ಲ; ಭಾವಗಮ್ಯವೂ, ಧ್ವನಿಪೂರ್ವಕವೂ ಆಗಿವೆ. ಇದು ಇವರ ನಾಟಕಗಳ ವಿಶೇಷವೂ ಹೌದು ಹಾಗೆಯೇ ಇದು ಭಾರತೀಯ ಜನಪದ ಬದುಕಿನ ಮನೋವೃತ್ತಿಗೆ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಗೆ ಪೂರಕವಾದುದೇ ಆಗಿದೆ. ರವೀಂದ್ರರು ತಮ್ಮ 'ಪ್ರಕೃತಿ ಪರಿಶೋಧ' ನಾಟಕ ರಚನೆ ವ್ಯಷ್ಟಿಯಲ್ಲಿ ಸಮಷ್ಟಿಯನ್ನು ಕಾಣುವ ಮತ್ತು ಆ ಕಾಣುವಿಕೆಯಲ್ಲೇ ಅವಿಂತ ಆನಂದ ಕಂಡುಕೊಂಡು, ಅನಂತರ ಈ ಧೋರಣೆಯೇ ಅವರ ಎಲ್ಲ ಸಾಹಿತ್ಯ ರಚನೆಯ ಮೂಲ ಭಿತ್ತಿಯಾದುದರ ಬಗೆಯನ್ನು ನಿವೇದಿಸಿಕೊಂಡಿದ್ದಾರೆ. ಈ ಸಮಷ್ಟಿ ದೃಷ್ಟಿಯನ್ನೇ ಪರ್ಯಾಯವಾಗಿ ಜನಪದೀಯ ದೃಷ್ಟಿ ಇಲ್ಲವೆ ಸಾಮಾಜಿಕ ದೃಷ್ಟಿ ಎಂತಲೂ ಸಂಕೀರ್ಣವಾಗಿ ಅರ್ಥೈಸಬಹುದು. ರವೀಂದ್ರರು ವಿಶ್ವಕವಿಯಾಗಲೂ ಈ ವಿಶ್ವವ್ಯವಧಾನವೇ ಮೂಲ ಕಾರಣ.

ರವೀಂದ್ರರ ಆರಂಭಿಕ ನಾಟಕ 'ಲಕ್ಷ್ಮಿಯ ಪರೀಕ್ಷೆ' ನಾಟಕದಲ್ಲಿ ಹೆಸರುವಾಸಿಯಾದ ಬಂಗಾಲಿ ಜನಪದೀಯರ ಸಿಹಿತಿನಿಸುಗಳಾದ 'ಚಂದ್ರಪುಲಿ', 'ರಸ್ಕಾರ'ಗಳ ಉಲ್ಲೇಖವಿದೆ. ಭಾರತೀಯ ಜನಪದ ಬದುಕಿನೊಂದಿಗೆ ಬೌದ್ಧ, ಹಿಂದೂ, ಮುಸಲ್ಮಾನ

ಧರ್ಮಗಳ ಪ್ರಭಾವ, ಸಂಘರ್ಷ ತಳಮಳದ ಸ್ಥಿತ್ಯಂತರವಾದ ಮನಸ್ಥಿತಿಯನ್ನು ಚಿತ್ರಿಸುತ್ತ ಕೊನೆಗೆ ಮಾನವೀಯ ಬೌದ್ಧಧರ್ಮದ ಹಿರಿಯ ಗುಣಗಳಿಗೆ ಒಲಿದುದನ್ನು 'ಮಾಲಿನಿ', 'ನರ್ತಕಿಯ ಪೂಜೆ' ನಾಟಕಗಳಲ್ಲಿ ಅಭಿವ್ಯಕ್ತಿಸಿದ್ದಾರೆ. 'ಸಾಹಸಿ ರಜಪೂತ' ನಾಟಕದಲ್ಲಿ ರಜಪೂತರ ಕ್ಷಾತ್ರಧರ್ಮ ಮತ್ತು ಹಿಂದೂಗಳ ಗೋಪೂಜೆ ಮತ್ತು ಗೋಹತ್ಯಾ ನಿಷೇಧದಂತಹ ಅಂಶಗಳನ್ನು ಪರಕಾಯ ಪ್ರವೇಶ ಮಾಡಿದಂತೆ ಅಂದಿನ ಭಾರತೀಯ ಜಾನಪದ ಸ್ತರಗಳಲ್ಲಿದ್ದಂತೆಯೇ ಠಾಕೂರರು ಚಿತ್ರಿಸಿದ್ದಾರೆ. 'ಅಚಲಾಯತನ' ನಾಟಕದಲ್ಲಿ ಭಾರತೀಯ ಜನಪದರಲ್ಲಿನ ಕುರುಡು ನಂಬಿಕೆ, ಅಜ್ಞಾನ, ಅಂಧಾಚಾರ ಗಳನ್ನು ವಿಡಂಬಿಸುತ್ತಾ, ಹಾಗೆಯೇ ಸಾಮಾಜಿಕ ಹಿತಚಿಂತನೆ ಬಿಟ್ಟು ಸ್ವಾರ್ಥ ಸಾಧನೆಗಷ್ಟೇ ಸೀಮಿತಗೊಳ್ಳುತ್ತಿರುವ ಆಧುನಿಕ ಜಗತ್ತಿನ ಮೌಲ್ಯಗಳನ್ನು ಪರಸ್ಪರ ವಸ್ತುನಿಷ್ಠವಾಗಿ ಪರಾಮರ್ಶಿಸಿ ಹಂಸಕ್ಷೀರ ನ್ಯಾಯ ಪ್ರತಿಪಾದಿಸಿದ್ದಾರೆ. ಭಾರತೀಯರ ಅಸ್ತಿತ್ವವಾದದ ಹಿನ್ನೆಲೆಯಲ್ಲಿ ನಿರಾಕಾರ ದೇವರ ಸ್ವರೂಪವನ್ನು 'ಕತ್ತಲ ಕೋಣೆಯ ರಾಜ' ನಾಟಕದಲ್ಲಿ ಬಿಂಬಿಸಿರುವುದು ನಮ್ಮ ಜನಪದರ ದೇವರು ಕುರಿತ ನಂಬಿಕೆಯ ಪ್ರಾತಿನಿಧಿಕವಾಗಿದೆ. ನಮ್ಮ ಜನಪದರು ದಾಂಪತ್ಯ, ಪ್ರೀತಿ, ಕಾಮಗಳಿಗೆ ಕೊಟ್ಟ ಮೌಲ್ಯಗಳನ್ನು 'ಚಿತ್ರಾಂಗದ' ನಾಟಕದಲ್ಲಿ ಕಲಾತ್ಮಕವಾಗಿ ಉಜ್ವಲಗೊಳಿಸಿದ್ದಾರೆ. ವಾಲ್ಮೀಕಿ ಪ್ರತಿಭಾ, ಮುಂತಾದ ನಾಟಕಗಳಲ್ಲಿ ಗ್ರೀಕ್ ಮೇಳದಂತೆ, ನಮ್ಮ ರಂಗನೃತ್ಯ, ರಂಗಕುಣಿತ, ಬಯಲಾಟ ಯಕ್ಷಗಾನ ರೀತಿಯ ಜನಪದ ಕಲೆಗಳನ್ನು ಸಾಂದರ್ಭಿಕವಾಗಿ ಔಚಿತ್ಯಪೂರ್ಣವಾಗಿ ಬಳಸಿಕೊಂಡಿದ್ದಾರೆ.

ಅಂತೂ ಒಂದು ಕಾಲಕ್ಕೆ ಪ್ರಾದೇಶಿಕ ಸಾಹಿತ್ಯ ರಚನೆಗೆ ದಟ್ಟವಾಗಿ ಜಾನಪದೀಯ ನೆಲೆಗಳೇ ಭದ್ರ ಬುನಾದಿಯಾಗಿದ್ದವು. ಅನಂತರದ ರಾಷ್ಟ್ರೀಯ ಸಾಹಿತ್ಯದ ಕಾಲ ಘಟ್ಟದಲ್ಲಿ ಇದರ ಬಾಹುಳ್ಯ ಕಡಿಮೆಯಾಯಿತು. ರವೀಂದ್ರರ ಸಮಕಾಲೀನತೆಯಿಂದೀಚೆಗೆ ಗಯಟೆಯ ಪರಿಭಾಷೆಯಲ್ಲಿ ಹೇಳುವುದಾದರೆ 'ವಿಶ್ವಸಾಹಿತ್ಯದ ಕಾಲ'; ಇಲ್ಲಿ ಜಾನಪದೀಯ ಪರಂಪರೆಯ ಭಿತ್ತಿ ಅವಸಾನವಾಗುತ್ತಿದೆ. ರವೀಂದ್ರನಾಥ ಠಾಕೂರರಂಥ ಕೆಲವೇ ಕೆಲವರು ಮಾತ್ರ ಜಾನಪದ ಪರಂಪರೆಯನ್ನು ನಿರ್ಲಕ್ಷಿಸದೆ ಹಿಂದು–ಇಂದುಗಳ ಮೇಲೆ ಮುಂದನ್ನು ತಮ್ಮ ಸಾಹಿತ್ಯದಲ್ಲಿ ಕಲ್ಪಿಸಿದರು. ಹೀಗೆ ಪ್ರಾದೇಶಿಕ ಸಾಹಿತ್ಯ ತನ್ನ ತನವನ್ನು ಉಳಿಸಿಕೊಂಡೇ ವಿಶ್ವಸಾಹಿತ್ಯದ ಸಂಕೀರ್ಣತೆಯಲ್ಲಿ ನವೀಕರಣವಾಗಿಯೇ ತನ್ನ ಮೂಲ ಅನನ್ಯ ಜಾನಪದೀಯ ಪರಂಪರೆಯ ನೆಲೆಯನ್ನು ಉಳಿಸಿಕೊಂಡೇ ಬೆಳೆಯುವುದು ನಿಜವಾದ ಬೆಳವಣಿಗೆ ಎಂಬುದು ಅವರ ಅಭೀಪ್ಸೆ. ನಮ್ಮ ರಾಮಾಯಣ, ಮಹಾಭಾರತ ಹಾಗೂ ಕಾಳಿದಾಸನ ಕೃತಿಗಳು ವಿಶ್ವಮಾನ್ಯತೆ ಪಡೆದು ವಿಶ್ವಸಾಹಿತ್ಯ ವಾಗಲು ಅವುಗಳಲ್ಲಿರುವ ವಾಸ್ತವಯುತವಾದ ಜಾನಪದೀಯ ಗುಣಸತ್ವ–ಸಂಕೀರ್ಣತೆ ಗಳೇ ಕಾರಣ ಎಂದು ಅವರು ತಮ್ಮ ಪ್ರಾಚೀನ ಸಾಹಿತ್ಯ ಕುರಿತ ವಿಮರ್ಶಾ ಪ್ರಬಂಧ ಗಳಲ್ಲಿ ವಿಶ್ಲೇಷಿಸುತ್ತಾರೆ. ಅಂತೆಯೇ ಠಾಕೂರರ ಸಾಹಿತ್ಯ ಇಷ್ಟು ಉತ್ಕೃಷ್ಟ ಸ್ಥಾನಮಾನ ಪಡೆಯುವಂತಾಗಿರುವುದು ಅದು ಜಾನಪದ ಸೆಲೆ-ನೆಲೆಗಳ ಮೇಲೆ ಕಲಾತ್ಮಕ ಸೃಜನೆಯಾಗಿ ಹೊಮ್ಮಿರುವುದರಿಂದಲೇ.

ಪ್ರೊ. ಕೆ. ಕೇಶವಮೂರ್ತಿ

ಅನ್ನಮೀಮಾಂಸೆ

ಜೀವಿಗಳ ಜೀವಧಾರಣೆಗೆ ಅತ್ಯಗತ್ಯವಾದ ಅಂಶಗಳಲ್ಲಿ ಅನ್ನವೂ ಒಂದು. 'ಅನ್ನಗತಪ್ರಾಣ'—ಎಂಬ ಮಾತೇ ಇದೆ. ಶರೀರಪೋಷಣೆ ಅನ್ನದಿಂದ ಮಾತ್ರ ಸಾಧ್ಯ. ನಿದ್ದೆಗಳು ಬಾರವು। ಬುದ್ಧಿಗಳು ತಿಳಿಯುವು। ಮುದ್ದಿನ ಮಾತು ಸೊಗಸವು। ಬೋನದ ಮುದ್ದೆ ತಪ್ಪಿದರೆ। ಎಂಬ ಸರ್ವಜ್ಞನ ವಚನ ಯಥಾರ್ಥವಾದುದು. ಅನ್ನವೆಂದರೆ ಕೇವಲ ಅಕ್ಕಿಯನ್ನು ಬೇಯಿಸಿದ್ದು ಮಾತ್ರವಲ್ಲ. ಇಡೀ ನಾವು ಸೇವಿಸುವ ಆಹಾರವನ್ನು 'ಅನ್ನ'ವೆಂಬ ಪದ ಪ್ರತಿನಿಧಿಸುತ್ತದೆ. ಆಹಾರ ಕೇವಲ ಮನುಷ್ಯನಿಗೆ ಮಾತ್ರವಲ್ಲ. ಎಲ್ಲ ಜೀವಿಗಳಿಗೂ ಅದರ ಅಗತ್ಯವಿದೆ.

"ಆಹಾರ ನಿದ್ರಾಭಯ ಮೈಥುನಂ ಚ ಸಮಾನಮೇತತ್ ಪಶುಭಿರ್ನರಾಣಾಮ್।

ಎಂಬ ಮಾತು ಮನುಷ್ಯ ಮತ್ತು ಪ್ರಾಣಿಗಳೆರಡಕ್ಕೂ ಬೇಕೆಂಬುದನ್ನು ತಿಳಿಸಿದೆ, ಅಷ್ಟೇ ಅಲ್ಲ. ಗಿಡ, ಮರ, ಬಳ್ಳಿಗಳಿಗೂ ಆಹಾರದ ಅಗತ್ಯವಿದೆ.

ಅನ್ನದ ಪ್ರಶಂಸೆಯನ್ನು ಉಪನಿಷತ್ತಿನಲ್ಲಿಯೇ ಕಾಣುತ್ತೇವೆ. ತೈತ್ತಿರೀಯೋಪ ನಿಷತ್ತು ಅನ್ನದ ಬಗ್ಗೆ ಹೆಚ್ಚು ಕಾಳಜಿಯನ್ನು ವ್ಯಕ್ತಪಡಿಸಿದೆ.

"ಅನ್ನಂ ಬ್ರಹ್ಮೇತಿ ವ್ಯಜಾನಾತ್।" ಅಂದರೆ ಅನ್ನವನ್ನು ಬ್ರಹ್ಮವೆಂದು ತಿಳಿ ಎಂದು ಉಪದೇಶಿಸುತ್ತಾ ಅದಕ್ಕೆ ಕಾರಣವನ್ನೂ ತಿಳಿಸಿದೆ.

"ಅನ್ನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ"। ಅನ್ನೇನ ಜಾತಾನಿ ಜೀವಂತಿ ಅನ್ನಂ ಪ್ರಯಂತ್ಯಭಿಸಂವಿಶಂತೀತಿ। ತದ್ವಿಜ್ಞಾಯ।

ಅನ್ನದಿಂದಲೇ ಪ್ರಾಣಿಗಳು ಹುಟ್ಟುತ್ತವೆ. ಹುಟ್ಟಿದ ಈ ಪ್ರಾಣಿಗಳು ಅನ್ನದಿಂದಲೇ ಜೀವಿಸುತ್ತವೆ. ಮತ್ತು ಅನ್ನವನ್ನು ಕುರಿತು ಪ್ರವೇಶಿಸುತ್ತವೆ.

"ಅನ್ನಗ್ಂ ಹಿ ಭೂತಾನಾಂ ಜ್ಯೇಷ್ಠಮ್। ತಸ್ಮಾತ್ ಸರ್ವೌಷಧಮುಚ್ಯತೇ।" ಅಂದರೆ ಸರ್ವಪ್ರಾಣಿಗಳ ದೇಹತಾಪವನ್ನು ಹೋಗಲಾಡಿಸುವುದರಿಂದ ಅನ್ನವು ಸರ್ವೌಷಧವಾಗಿದೆ. ಸರ್ವಂ ವೈತೇಽನ್ನಮಾಪ್ನುವಂತಿ। ಯೇಽನ್ನಂ ಬ್ರಹ್ಮೋಪಾಸತೇ।" ಯಾರು ಅನ್ನವನ್ನು ಬ್ರಹ್ಮವೆಂದು ಉಪಾಸಿಸುತ್ತಾರೋ ಅವರು ಅನ್ನವೆಲ್ಲವನ್ನೂ ಹೊಂದುತ್ತಾರೆ.

"ತಸ್ಮಾದ್ವಾ ಏತಸ್ಮಾದನ್ನರಸಮಯಾತ್। ಅನ್ಯೋಽಂತರ ಆತ್ಮಾ ಪ್ರಾಣಮಯಃ। ತೇನೈಷ ಪೂರ್ಣಃ।" ಅಂತಹ ಈ ಅನ್ನರಸಮಯನಾದ ಆತ್ಮನಿಗಿಂತ ಅಂದರೆ ಶರೀರಕ್ಕಿಂತ ಬೇರೆಯಾದವನಾದ ಪ್ರಾಣಮಯನಾದ ಆತ್ಮನಿದ್ದಾನೆ. ಈ ಪ್ರಾಣಮಯನಾದ ಆತ್ಮನಿಂದ ಈ ಅನ್ನರಸಮಯನಾದ ಆತ್ಮ ತುಂಬಿದ್ದಾನೆ.

ಪಂಚಕೋಶಗಳಲ್ಲಿ ಅನ್ನಮಯಕೋಶವೇ ಮೊದಲನೆಯದು. ಅನ್ನರಸದಿಂದ ಯಾವುದು ಉಂಟಾಗಿ, ಅನ್ನದಿಂದ ವೃದ್ಧಿಯಾಗಿ ಅನ್ನರೂಪವಾದ ಪೃಥ್ವಿಯಲ್ಲಿ ಲೀನವಾಗುತ್ತದೋ ಅದೇ ಅನ್ನಮಯಕೋಶ. ಅನ್ನಮಯಕೋಶದಿಂದಲೇ 'ನಾನು ಮನುಷ್ಯ' ಎಂಬ ಭಾವನೆ ಜೀವಿಗುಂಟಾಗುತ್ತದೆ. 'ನಾನು ಸಣ್ಣ, ದಪ್ಪ, ರೂಪಿ ಕುರೂಪಿ ಇತ್ಯಾದಿ ಭಾವನೆಗಳಿಗೆ ಅನ್ನಮಯಕೋಶವೇ ಕಾರಣ. ಮನುಷ್ಯನ ಸ್ಥೂಲಶರೀರವನ್ನೇ ಅನ್ನಮಯಕೋಶ' ಎಂದು ವ್ಯವಹರಿಸುತ್ತಾರೆ.

ಶ್ರೀಮದ್ಭಗವದ್ಗೀತೆಯಲ್ಲಿ ಅನ್ನತತ್ತ್ವ

ಪ್ರಸ್ಥಾನತ್ರಯಗಳಲ್ಲೊಂದಾದ ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಹೇಳುತ್ತಾನೆ.

"ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನ ಸಂಭವಃ।" ಅನ್ನದಿಂದ ಪ್ರಾಣಿಗಳು ಉತ್ಪನ್ನವಾಗುತ್ತವೆ. ಮಳೆಯಿಂದ ಅನ್ನವು ಉತ್ಪತ್ತಿಯಾಗುತ್ತದೆ. ತೈತ್ತಿರೀಯೋಪನಿಷತ್ತಿನ ಬ್ರಹ್ಮಾನಂದದಲ್ಲಿಯೂ ಇದೇ ಮಾತಿದೆ. ಇದು ಪ್ರಪಂಚದ ಉತ್ಪತ್ತಿಯ ಬಗ್ಗೆ ಹೇಳಿದೆ.

"ಆಕಾಶಾದ್ವಾಯುಃ। ವಾಯೋರಗ್ನಿಃ। ಅಗ್ನೇರಾಪಃ। ಅದ್ಭ್ಯಃ ಪೃಥಿವೀ। ಪೃಥಿವ್ಯಾ ಓಷಧಯಃ। ಓಷಧೀಭ್ಯೋಽನ್ನಮ್। ಅನ್ನಾತ್ ಪುರುಷಃ। ಸ ವಾ ಏಷ ಪುರುಷೋಽನ್ನರಸಮಯಃ।"

ಆಕಾಶದಿಂದ ವಾಯುವೂ, ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ನೀರೂ, ನೀರಿನಿಂದ ಭೂಮಿಯೂ, ಭೂಮಿಯಿಂದ ಸಸ್ಯಗಳೂ, ಸಸ್ಯಗಳಿಂದ ಅನ್ನವೂ, ಅನ್ನದಿಂದ ಪುರುಷನೂ ಉತ್ಪನ್ನರಾದರು. ಆದ್ದರಿಂದ ಈ ಪುರುಷ ಅನ್ನರಸಮಯನಾಗಿದ್ದಾನೆ. ವಾಯು ಮತ್ತು ನೀರು ಕೂಡ ಅನ್ನವೇ. ಅನ್ನವು ಮೂರು ಸ್ಥಿತಿಗಳಲ್ಲೂ ಇರಬಹುದು.

(೧) ಘನಾಹಾರ (೨) ದ್ರವಾಹಾರ. (೩) ಅನಿಲಾಹಾರ ಗಾಳಿಯು ಹೇಗೆ ಆಹಾರವಾಗಬಹುದೆಂದು ಅಚ್ಚರಿಪಡಬೇಕಾಗಿಲ್ಲ. ನಮ್ಮ ಪ್ರಾಚೀನ ಋಷಿಗಳು ವಾಯುವನ್ನೇ ಆಹಾರವನ್ನಾಗಿ ಸೇವಿಸಿ ಹಲವು ವರ್ಷಗಳು ತಪಸ್ಸನ್ನಾಚರಿಸುತ್ತಿದ್ದರೆಂಬುದು ಸುವೇದ್ಯ. "ಸರ್ಪಾಃ ಪಿಬಂತಿ ಪವನಂ ನಚ ದುರ್ಬಲಾಸ್ತೇ" ಸರ್ಪಗಳು ಗಾಳಿಯನ್ನು ಸೇವಿಸಿದರೂ ಅವು ದುರ್ಬಲವಾಗುವುದಿಲ್ಲ—ಎಂಬ ಮಾತು ಮನನೀಯ.

ನೀರು ಆಹಾರ ಎಂಬುವರಲ್ಲಿ ಸಂಶಯವೇ ಇಲ್ಲ. ನೀರನ್ನೇ ಕುಡಿದುಕೊಂಡು ಹಲವು ದಿವಸಗಳು ಬದುಕಬಹುದು. "ಆಪೋವಾ ಅನ್ನಮ್।" ನೀರು ಸಹ ಅನ್ನವೇ ಎಂದು ತೈತ್ತಿರೀಯೋಪನಿಷತ್ತು ತಿಳಿಸುತ್ತದೆ. ನಾವು ಏನೇನನ್ನು ಭುಂಜಿಸುತ್ತೇವೆಯೋ ಅವೆಲ್ಲವೂ ಅನ್ನವೇ.

ಭಗವಂತ ಗೀತೆಯಲ್ಲಿ ನಾಲ್ಕು ವಿಧವಾದ ಅನ್ನವನ್ನು ಹೇಳಿದ್ದಾನೆ :

ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ।
ಪ್ರಾಣಾಪಾನಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಮ್॥ ೧೫–೧೪

"ನಾನೇ ವೈಶ್ವಾನರನೆಂಬ ಜಠರಾಗ್ನಿ ರೂಪದಲ್ಲಿ ಎಲ್ಲ ಪ್ರಾಣಿಗಳಲ್ಲೂ ಇದ್ದುಕೊಂಡು ನಾಲ್ಕು ವಿಧವಾದ ಅನ್ನವನ್ನು ಜೀರ್ಣವಾಗುವಂತೆ ಮಾಡುತ್ತೇನೆ" ತಿಂದ ಅನ್ನ ಜೀರ್ಣವಾಗಬೇಕಾದರೂ ಆ ಭಗವಂತನ ಕೃಪೆಯೇ ಬೇಕು. ಅನ್ನವನ್ನು ನಾಲ್ಕು ವಿಧವಾಗಿ ವಿಂಗಡಿಸಿದ್ದಾರೆ. (೧) ಭಕ್ಷ್ಯ (೨) ಭೋಜ್ಯ (೩) ಚೋಷ್ಯ ಮತ್ತು (೪) ಲೇಹ್ಯ ಭಕ್ಷ್ಯವೆಂದರೆ ಸಿಹಿತಿಂಡಿಗಳು, ತೈಲ ಪಕ್ವಗಳು ಇತ್ಯಾದಿ. ಇವುಗಳನ್ನು ಹಲವು ದಿನಗಳವರೆಗೆ ಇಟ್ಟು ತಿನ್ನಬಹುದು. ಭೋಜ್ಯವೆಂದರೆ ಉಣ್ಣತಕ್ಕದ್ದು. ಅನ್ನ, ಸಾರು, ಹುಳಿ, ಪಲ್ಯ ಇತ್ಯಾದಿ. ಚೋಷ್ಯ ಎಂದರೆ ಹೀರಿಕೊಳ್ಳತಕ್ಕದ್ದು. ನೀರು ಸೇರಿದಂತೆ ಎಲ್ಲ ಪಾನೀಯಗಳೂ ಇದಕ್ಕೆ ಉದಾಹರಣೆ. ಲೇಹ್ಯವೆಂದರೆ ನೆಕ್ಕತಕ್ಕದ್ದು· ಜೇನುತುಪ್ಪ ಇತ್ಯಾದಿ.

ಅವರವರ ಗುಣಕರ್ಮಗಳಿಗನುಸಾರವಾಗಿ ಮೂರು ಬಗೆಯ ಆಹಾರವನ್ನು ಭಗವಂತ ಹೇಳಿದ್ದಾನೆ.

ಆಹಾರಸ್ತ್ವಪಿ ಸರ್ವಸ್ಯ ತ್ರಿವಿಧೋ ಭವತಿ ಪ್ರಿಯಃ।

ಸತ್ವರಜಸ್ತಮೋ ಗುಣಗಳಿಗನುಸಾರವಾಗಿ ಮೂರು ಬಗೆಯ ಆಹಾರಗಳು ಪ್ರಿಯವಾಗುತ್ತವೆ.

ಆಯುಸ್ಸತ್ತ್ವಬಲಾರೋಗ್ಯ ಸುಖಪ್ರೀತಿ ವಿವರ್ಧನಾಃ।
ರಸ್ಯಾಃ ಸ್ನಿಗ್ಧಾಃ ಸ್ಥಿರಾ ಹೃದ್ಯಾ ಆಹಾರಾಃ ಸಾತ್ತ್ವಿಕ ಪ್ರಿಯಾಃ॥ ೧೭–೮

ಆಯುಷ್ಯ ಸತ್ವಬಲ ಆರೋಗ್ಯ ಸುಖ ಪ್ರೀತಿಗಳನ್ನು ವೃದ್ಧಿಗೊಳಿಸುವ ರಸಯುಕ್ತವಾದ ಜಿಡ್ಡುಳ್ಳ, ಶರೀರವಲ್ಲಿ ಬಹಳ ಕಾಲ ಉಳಿಯಬಹುದಾದ, ಹೃದಯಪ್ರಿಯವಾದ ಆಹಾರಗಳು ಸಾತ್ತ್ವಿಕರಿಗೆ ಪ್ರಿಯವಾಗುತ್ತವೆ. ರಾಜಸಿಗಳಿಗೋ ?

ಕಟ್ವಮ್ಲ ಲವಣಾತ್ಯುಷ್ಣ ತೀಕ್ಷ್ಣ ರೂಕ್ಷವಿದಾಹಿನಃ।
ಆಹಾರಾ ರಾಜಸಸ್ಯೇಷ್ಟಾ ದುಃಖ ಶೋಕಾಮಯಪ್ರದಾಃ॥ ೧೭–೯

ಅತಿ ಕಹಿ, ಅತಿ ಹುಳಿ, ಅತಿ ಉಪ್ಪು, ಅತಿ ಬಿಸಿ, ಅತಿ ಖಾರ, ಒಣಕಲು, ದಾಹವನ್ನುಂಟುಮಾಡುವ, ಹಾಗೂ ದುಃಖ—ಶೋಕ—ರೋಗಗಳನ್ನುಂಟುಮಾಡುವ ಆಹಾರಗಳು ರಾಜಸಿಕ ಗುಣವುಳ್ಳವರಿಗೆ ಪ್ರಿಯವಾಗುತ್ತವೆ.

ಯಾತಯಾಮಂ ಗತರಸಂ ಪೂತಿ ಪರ್ಯುಷಿತಂ ಚ ಯತ್ ।
ಉಚ್ಛಿಷ್ಟಮಪಿ ಚಾಮೇಧ್ಯಂ ಭೋಜನಂ ತಾಮಸಪ್ರಿಯಮ್॥ ೧೭–೧೦

ಸ್ವಲ್ಪ ಬೆಂದಿರುವುದು, ರಸಹೀನವಾದದ್ದು, ದುರ್ಗಂಧಯುಕ್ತವೂ, ಹಳಸಿ ಹೋಗಿರುವುದೂ, ಎಂಜಲೂ, ಭಗವಂತನಿಗೆ ಸಮರ್ಪಿಸಲು ಆರೋಗ್ಯವಾದದ್ದೂ ಆದ ಆಹಾರ ತಾಮಸಿಕರಿಗೆ ಪ್ರಿಯವಾಗುತ್ತದೆ.

ಆಹಾರಕ್ಕನುಸಾರವಾಗಿ ಗುಣವು ರೂಪಿತವಾಗುವುದರಿಂದ ಯಾವಾಗಲೂ ಸಾತ್ತ್ವಿಕಾಹಾರವನ್ನೇ ಸೇವಿಸಬೇಕು.

ಅನ್ನವ್ರತ

ಅನ್ನಂ ನ ನಿಂದ್ಯಾತ್। ತದ್ ವ್ರತಮ್। ಪ್ರಾಣೋವಾ ಅನ್ನಮ್। ಶರೀರಮನ್ನಾದಮ್। ಪ್ರಾಣೇಶರೀರಂ ಪ್ರತಿಷ್ಠಿತಮ್। ಶರೀರೇ ಪ್ರಾಣಃ ಪ್ರತಿಷ್ಠಿತಃ ತದೇತದನ್ನಮನ್ನೇ ಪ್ರತಿಷ್ಠಿತಮ್। ಸ ಯ. ಏತದನ್ನಮನ್ನೇ ಪ್ರತಿಷ್ಠಿತಂ ವೇದ ಪ್ರತಿತಿಷ್ಠತಿ। ಎನ್ನುತ್ತದೆ ತೈತ್ತಿರೀಯೋಪನಿಷತ್ತು.

ಅನ್ನವನ್ನು ನಿಂದಿಸಕೂಡದು ಕಾರಣ ಅನ್ನವು ಬ್ರಹ್ಮಜ್ಞಾನಕ್ಕೆ ದ್ವಾರ. ಪ್ರಾಣವೇ ಅನ್ನ. ಶರೀರವೇ ಅನ್ನಾದ. ಪ್ರಾಣನಿಮಿತ್ತದಿಂದ ಶರೀರ ನಿಂತಿದೆ. ಶರೀರದಲ್ಲಿ ಪ್ರಾಣವು ಪ್ರತಿಷ್ಠಿತವಾಗಿದೆ. ಈ ಅನ್ನವು ಅನ್ನದಲ್ಲಿ ಪ್ರತಿಷ್ಠಿತವಾಗಿದೆ.

"ಅನ್ನವಾನನ್ನಾದೋ ಭವತಿ। ಮಹಾನ್ ಭವತಿ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನ। ಮಹಾನ್ ಕೀರ್ತ್ಯಾ।"

ಹೀಗೆ ಯಾವನು ಇದನ್ನು ಯಥಾರ್ಥವಾಗಿ ತಿಳಿಯುತ್ತಾನೋ ಅವನು ಅನ್ನ ಅನ್ನಾದಗಳ ರೂಪದಲ್ಲಿ ಪ್ರತಿಷ್ಠಿತನಾಗುತ್ತಾನೆ. ಪುತ್ರರಿಂದಲೂ, ಪಶುಗಳಿಂದಲೂ, ಬ್ರಹ್ಮವರ್ಚಸ್ಸಿನಿಂದಲೂ ಕೂಡಿ ಕೀರ್ತಿವಂತನೂ, ಮಹಾನ್ ವ್ಯಕ್ತಿಯೂ ಆಗುತ್ತಾನೆ.

ಅನ್ನಕ್ಕೆ ಸಂಬಂಧಿಸಿದ ಮತ್ತೊಂದು ವ್ರತವಿದೆ. "ಅನ್ನಂ ನ ಪರಿಚಕ್ಷೀತ। ತದ್‌ವ್ರತಮ್। ಅನ್ನವನ್ನು ನಿರಾಕರಿಸಕೂಡದು. ಅದೊಂದು ವ್ರತ. ಸಿದ್ಧಮನ್ನಂ ನ ಪರಿತ್ಯಜ್ಯ' ಎಂಬ ಮಾತಿದೆ. ಅಂದರೆ ಸಿದ್ಧವಾಗಿರುವ ಅನ್ನವನ್ನು ಭುಂಜಿಸದೆ ತಾನು ಶ್ರೇಷ್ಠ ಎಂಬ ಕಾರಣದಿಂದ ನಿರಾಕರಿಸಬಾರದು. ಇಂತಹವರನ್ನು 'ಪೃಥಕ್‌ಪಾಕ' ಎಂದು ಕರೆಯುತ್ತಾರೆ.

ಪಂಕ್ತಿಭೇದೀ ಪೃಥಕ್ ಪಾಕೀ ಸದಾಬ್ರಾಹ್ಮಣನಿಂದಕಃ।
ಆದೇಶೀವೇದವಿಕ್ರೇತಾಂ ಪಂಚೈತೇ ಬ್ರಹ್ಮಘಾತಕಾಃ ॥

ಎಂಬ ಮಾತಿದೆ ನೂರಾರು ಜನ ಸತ್ಪುರುಷರು ಕುಳಿತು ಊಟಮಾಡುತ್ತಿರುವ ಕಡೆ ತಾನು ಊಟ ಮಾಡದೆ ಅವರು ತನಗಿಂತ ಕನಿಷ್ಠ ಎಂದು ಭಾವಿಸಿ ಯಾವನು ಸ್ವಯಂಪಾಕ ಮಾಡಿಕೊಳ್ಳುವನೋ ಅಂತಹವನಿಗೆ ಬ್ರಹ್ಮಹತ್ಯಾದೋಷ ಪ್ರಾಪ್ತಿಯಾಗುತ್ತದೆ.

ಆಯುರ್ವೇದದಲ್ಲಿ ಆಹಾರ

ಇದುವರೆಗೆ ಶಾಸ್ತ್ರದೃಷ್ಟಿಯಿಂದ ಅನ್ನದ ಬಗ್ಗೆ ತಿಳಿದೆವು. ಈಗ ಆರೋಗ್ಯ ದೃಷ್ಟಿಯಿಂದ ಅನ್ನದ ಬಗ್ಗೆ ತಿಳಿಯಲು ಪ್ರಯತ್ನಿಸೋಣ.

"ಆರೋಗ್ಯಂ ಭೋಜನಾಧೀನಮ್"–"ಊಟಬಲ್ಲವನಿಗೆ ರೋಗವಿಲ್ಲ" ಎನ್ನುತ್ತದೆ ಕಾಶ್ಯಪ ಸಂಹಿತೆ ಎಂಬ ಆಯುರ್ವೇದ ಗ್ರಂಥ "ಪಥ್ಯೇ ಸತಿ ಕಿಮೌಷಧೇನ?" ಅಂದರೆ ಪಥ್ಯದಿಂದಿರುವವನಿಗೆ ಔಷಧವೇಕೆ? ಎಂಬ ಆಯುರ್ವೇದದ ಸುವರ್ಣಸೂತ್ರವನ್ನು ಸ್ವಾಸ್ಥ್ಯಸಾಧಕರು ಅನುಸರಿಸಬೇಕು. ಯಾವ ಯಾವ ಆಹಾರದಿಂದ ಏನೇನು ವರ್ಧಿಸುತ್ತದೆಂಬುದನ್ನು ಆಯುರ್ವೇದ ಹೀಗೆ ಹೇಳುತ್ತದೆ :

> ಘೃತೇನ ವರ್ಧತೇ ಬುದ್ಧಿಃ ಕ್ಷೀರೇಣಾಯುಷ್ಯ ವರ್ಧತೇ ।
> ಶಾಖೇನ ವರ್ಧತೇ ವ್ಯಾಧಿಃ ಮಾಂಸಂ ಮಾಂಸೇನ ವರ್ಧತೇ ॥

ತುಪ್ಪವನ್ನು ಸೇವಿಸುವುದರಿಂದ ಬುದ್ಧಿಯೂ, ಹಾಲಿನಿಂದ ಆಯುಷ್ಯವೂ, ಕೆಲವು ತರಕಾರಿಗಳಿಂದ ವ್ಯಾಧಿಯೂ, ಮಾಂಸದಿಂದ ಮಾಂಸವೂ ವರ್ಧಿಸುತ್ತದೆ.

ಹಾಲು ಪೂರ್ಣಾಹಾರ ತಾಯಿಯ ಮಡಿಲಿನಲ್ಲಿರುವ ಮಗುವಿನಿಂದ ಹಿಡಿದು ಜಗಜಟ್ಟಿಯವರೆಗೂ ಹಾಲಿನ ಅಗತ್ಯ ಎಲ್ಲರಿಗೂ ಇದೆ. ಆರೋಗ್ಯವಂತನಿಗೆ ಎಷ್ಟು ಅಗತ್ಯವೋ ರೋಗಿಗೂ ಅಷ್ಟೇ ಅಗತ್ಯ. ಎಳೆ ಕುಂಬಳಕಾಯಿ, ಹುಳಿ ಹೀರೇಕಾಯಿ, ಬದನೆಕಾಯಿ ಇತ್ಯಾದಿ ತರಕಾರಿಗಳು ದೇಹಕ್ಕೆ ತೊಂದರೆ ಮಾಡುತ್ತವೆ. ತುಪ್ಪವು ಒಳ್ಳೆಯ ಆಹಾರವಾದರೂ ಸ್ಥೂಲಕಾಯರಿಗೆ ಅದು ವರ್ಜ್ಯ. ಇನ್ನು ಮಾಂಸಾಹಾರ ತಾಮಸ ಸ್ವಭಾವವನ್ನು ವರ್ಧಿಸುವುದರಿಂದ ಅದೂ ವರ್ಜ್ಯವೇ. ಇದರ ಹಿನ್ನೆಲೆಯಲ್ಲಿ ಪ್ರಾಣಿಹಿಂಸೆಯೂ ಅಡಗಿದೆ. ಅಷ್ಟೇ ಅಲ್ಲ. ಸಸ್ಯಾಹಾರಿಗಳಿಗಿಂತ ಮಾಂಸಾಹಾರಿಗಳು ಬಹು ಬೇಗ ರೋಗಗ್ರಸ್ತರಾಗುತ್ತಾರೆಂಬುದು ವೈದ್ಯಕೀಯ ಸಂಶೋಧನೆಯಿಂದ ದೃಢಪಟ್ಟಿದೆ. ಈರುಳ್ಳಿ, ಬೆಳ್ಳುಳ್ಳಿ, ಸೊಪ್ಪು ಸೀಗೇಸೊಪ್ಪು ಇವುಗಳು ತಮ್ಮ ದುರ್ಗಂಧದಿಂದಾಗಿ ವರ್ಜ್ಯವೆನಿಸಿವೆ. ಕೆಂಪು ಮೂಲಂಗಿ, ಬೀಟ್‌ರೂಟ್‌ಗಳು ಇವುಗಳ ಬಣ್ಣದಿಂದಾಗಿ ವರ್ಜಿಸಲ್ಪಟ್ಟಿವೆ. ಅಂದಮಾತ್ರಕ್ಕೆ ಇವುಗಳು ದೇಹಕ್ಕೆ ಬೇಡವೆಂದಲ್ಲ. ಆಚಾರವಂತರು, ಯೋಗಿಗಳು ಇವುಗಳನ್ನು ಸೇವಿಸುವುದಿಲ್ಲ. ಆದರೆ ಇವುಗಳ ಔಷಧೀಯ ಗುಣಗಳು ಸ್ಮರಣೀಯ.

ಯೋಗಿಗಳು ಯಾವ ಯಾವ ಆಹಾರವನ್ನು ವರ್ಜಿಸಬೇಕೆಂಬುದಕ್ಕೆ ಸ್ವಾತ್ಮಾರಾಮಯೋಗೀಂದ್ರರು ದೊಡ್ಡ ಪಟ್ಟಿಯೊಂದನ್ನೇ ಕೊಟ್ಟಿರುತ್ತಾರೆ.

> ಕಟ್ವಮ್ಲ ತೀಕ್ಷ್ಣ ಲವಣೋಷ್ಣ ಹರೀತ ಶಾಕ ಸೌವರ್ಚ ತೈಲತಿಲ ಸರ್ಷಪ
> ಮತ್ಸ್ಯ ಮದ್ಯಾನ್ ।
> ಅಜಾವಿಕಂ ಚ ದಧಿತ ಕ್ರ ಕುಳಿತ್ಥಕೋಲಪಿಣ್ಯಾಕ ಹಿಂಗು ಲಶುನಾದ್ಯಂ
> ಅಪಥ್ಯಮಾಹುಃ ॥

ಅತಿಕಹಿ, ಅತಿಹುಳಿ, ಅತಿಉಪ್ಪು, ಅತಿಬಿಸಿ, ಕೆಲವು ಹಸಿರು ತರಕಾರಿಗಳು, ಸಾಸಿವೆ, ಎಳ್ಳು, ಎಣ್ಣೆ, ಮೀನು, ಮಾಂಸ, ಮದ್ಯ, ಮೊಸರು, ಮಜ್ಜಿಗೆ, ಹುರುಳಿ, ಹಂದಿ, ಇಂಗು, ಬೆಳ್ಳುಳ್ಳಿಗಳನ್ನು ಯೋಗಿ ಸೇವಿಸಬಾರದು. ಇವು ಅವನ ಅಭ್ಯಾಸಕ್ಕೆ ಅಡ್ಡಿಪಡಿಸುತ್ತವೆ.

ಆಹಾರ ನಮಗೇಕೆ ಬೇಕು?

ಈ ಪ್ರಶ್ನೆಗೆ ತೈತ್ತಿರೀಯೋಪನಿಷತ್ತು ಹೀಗೆ ಉತ್ತರಿಸಿದೆ. ಅನ್ನಾದ್ವೈ ಪ್ರಜಾಃ ಪ್ರಜಾಯಂತೇ । ಯಾಃ ಕಾಶ್ಚ ಪೃಥಿವೀಗ್ಂ ಶ್ರಿತಾಃ । ಅಥೋ ಅನ್ನೇನೈವ ಜೀವಂತಿ । ಅಂದರೆ ಯಾವ ಯಾವ ಪ್ರಾಣಿಗಳು ಭೂಮಿಯ ಮೇಲಿವೆಯೋ ಅವೆಲ್ಲವೂ ಅನ್ನವನ್ನೇ ತನ್ನ ಬದುಕಿಗಾಗಿ ಆಶ್ರಯಿಸಿವೆ. ಅಂದರೆ ಅನ್ನದಿಂದಲೇ ಜೀವಿಸುತ್ತವೆ.

ಆಯುರ್ವೇದಾಚಾರ್ಯರಾದ ಚರಕರು ಹೀಗೆ ಹೇಳುತ್ತಾರೆ.

ಪಂಚಭೂತಾತ್ಮಕೇ ದೇಹೇಹ್ಯಾಹಾರಃ ಪಂಚಭೌತಿಕಃ ।
ವಿಪಕ್ವಃ ಪಂಚಧಾ ಸಮ್ಯಕ್ ಸ್ವಾನ್ ಗುಣಾನ್ ವಿವರ್ಧಯೇತ್ ॥

ಪಂಚಭೂತಾತ್ಮಕವಾದ ಶರೀರದ ಕೊರತೆಯನ್ನು ಪೂರೈಸಲು ಪಂಚಭೂತಾತ್ಮಕ ಆಹಾರದ ಅಗತ್ಯವಿದೆ. ಅದು ಪಂಚಭೂತಾಗ್ನಿಗಳಿಂದ ಪಾಚಿತವಾಗಿ ಶಾರೀರಿಕ ಅಂಗಗಳಲ್ಲಿ ಆಯಾ ಪಂಚಭೌತಿಕ ಅಂಶಗಳನ್ನು ವರ್ಧಿಸುವುದರಿಂದ ನಮಗೆ ಆಹಾರದ ಅಗತ್ಯವಿದೆ. ನಾವು ಆಹಾರವನ್ನು ಸೇವಿಸದಿದ್ದರೆ ಏನಾಗುತ್ತದೆ ?

ಆಹಾರಂ ಪಚತಿ ಶಿಖೀ ದೋಷಾನಾಹಾರ ವರ್ಜಿತಃ । ಅಂದರೆ ಜೀರ್ಣಿಸುವುದಕ್ಕೆ ಉದರಕ್ಕೆ ಆಹಾರವು ಸಿಗದಿದ್ದಲ್ಲಿ ಪಾಚಕಾಗ್ನಿಗಳು ಜೀವಧಾತುಗಳಾದ ವಾತಪಿತ್ತ ಕಫಗಳೆಂಬ ತ್ರಿದೋಷಗಳನ್ನೇ ಸುಟ್ಟುಬಿಡುತ್ತದೆ ಆದ ಕಾರಣ ಆಹಾರವಿಧಿಯನ್ನು ಸರಿಯಾಗಿ ತಿಳಿದು ಅದರಂತೆ ಆಚರಿಸುವುದು ಸೂಕ್ತ.

ಆಹಾರ ವಿಧಿ

ಆಹಾರಶುದ್ಧೌ ಸತ್ತ್ವಶುದ್ಧಿಃ ಸತ್ವಶುದ್ಧೌ ಧ್ರುವಾ ಸ್ಮೃತಿಃ । ಎಂಬ ತತ್ತ್ವಾಕ್ಯನುಸಾರವಾಗಿ ಮನೋಬುದ್ಧಿಗಳೆರಡರ ಮೇಲೂ ಸತ್ಪರಿಣಾಮ ಬೀರುವ ಆಹಾರವನ್ನೇ ವಿಧಿಗನುಸಾರ ಸೇವಿಸಬೇಕು. ಆ ವಿಧಿಯೇನೆಂಬುದನ್ನು ಆಯುರ್ವೇದ ತಿಳಿಸಿದೆ.

(೧) ಆಹಾರವನ್ನು "ವಿವಿಕ್ತಸ್ಥಂ" ಅಂದರೆ ಏಕಾಂತದಲ್ಲಿ ಸೇವಿಸಬೇಕು.

(೨) "ತನ್ಮನಾಃ" ಅಂದರೆ ಊಟ ಮಾಡುವಾಗ ಮನಸ್ಸು ಊಟದ ಕಡೆ ಏಕಾಗ್ರವಾಗಿರಬೇಕು. "ಮೌನೇನ ಭುಂಜೀಥಂ" ಎಂಬ ಮಾತಿದೆ. ಊಟ ಮಾಡುವಾಗ ಮಾತನಾಡಬಾರದು. "ಭೋಕ್ತವ್ಯಂ ಸ್ವಸ್ಥಮಾನಸೈಃ" ಸ್ವಸ್ಥ ಮನಸ್ಸು ಎಂದರೆ ಏಕಾಗ್ರತೆಯಿಂದ ಊಟಮಾಡಬೇಕು.

(೩) "ನಾತಿದ್ರುತ ವಿಲಂಬಿತಂ"—ತೀರ ಅವಸರದಿಂದಾಗಲೀ ಅಥವಾ ತೀರಾ ಸಾವಕಾಶವಾಗಿಯಾಗಲೀ ಊಟಮಾಡಬಾರದು. ಒಂದೊಂದು ತುತ್ತನ್ನೂ ಚೆನ್ನಾಗಿ ಅಗಿದು ನುಂಗಬೇಕು. ಕಾರಣ ಹೊಟ್ಟೆಗೆ ಹಲ್ಲಿಲ್ಲ.

(೪) "ಸ್ಥಿರಸುಖಮಾಸನಂ"—ಸುಖಕರವಾದ ಆಸನದಲ್ಲಿ ಕುಳಿತು ಊಟ ಮಾಡಬೇಕು. ಇದು ದೇಹವಿನ್ಯಾಸಕ್ಕೆ ಸಂಬಂಧಿಸಿದ್ದು. ಬಾಹ್ಯಾಸನ ಬೇರೆ.

(೫) "ತರ್ಪಯಿತ್ವಾ ಪಿತೄನ್, ದೇವಾನ್ ಅತಿಥೀನ್ ಗುರೂನ್ ಬಾಲಕಾನ್" —ಎಂದರೆ ಪಿತೃಗಳನ್ನು ತೃಪ್ತಿಪಡಿಸಿ, ದೇವತೆಗಳಿಗೆ ನೈವೇದ್ಯಮಾಡಿ, ಗುರುಹಿರಿಯರು ಮತ್ತು ಮಕ್ಕಳಿಗೆ ಊಟವಾಗಿದೆಯೆಂಬುದನ್ನು ಖಚಿತ ಪಡಿಸಿಕೊಂಡು ತಾನು ಊಟ ಮಾಡಬೇಕು. ಭಗವಂತ ಗೀತೆಯಲ್ಲಿ ಯಜ್ಞಶೇಷವನ್ನು ಭುಂಜಿಸಬೇಕೆನ್ನುತ್ತಾನೆ.

ಯಜ್ಞಶಿಷ್ಟಾಶಿನಃ ಸಂತೋ ಮುಚ್ಯಂತೇ ಸರ್ವಕಿಲ್ಬಿಷೈಃ । ೩—೧೩
ಭುಂಜತೇ ತೇ ತ್ವಘಂ ಪಾಪಾ ಯೇ ಪಚಂತ್ಯಾತ್ಮಕಾರಣಾತ್ ॥

ದೇವರಿಗೆ ನಿವೇದಿಸಿದ ಶೇಷವನ್ನು ಸ್ವೀಕರಿಸುವ ಸಂತರು ಸರ್ವದೋಷಗಳಿಂದಲೂ (ಆಹಾರಕ್ಕೆ ಸಂಬಂಧಿಸಿದ) ಮುಕ್ತರಾಗುತ್ತಾರೆ. ಯಾರು ತಮಗೋಸ್ಕರವೇ ಅಡುಗೆ ಮಾಡಿಕೊಳ್ಳುತ್ತಾರೋ ಅಂತಹವರು ಪಾಪವನ್ನೇ ಊಟ ಮಾಡುತ್ತಾರೆ.

ಯಜ್ಞ ಶಿಷ್ಟಾಮೃತ ಭುಜೋ ಯಾಂತಿ ಬ್ರಹ್ಮ ಸನಾತನಮ್ । ೪—೩೧

ಅಮೃತಕ್ಕೆ ಸಮಾನವಾದ ಯಜ್ಞಶೇಷವನ್ನು ಯಾರು ಸೇವಿಸುತ್ತಾರೋ ಅವರು ಸನಾತನವಾದ ಬ್ರಹ್ಮವನ್ನೇ ಹೊಂದುತ್ತಾರೆ. ಅಂದರೆ ಅವರು ಬ್ರಹ್ಮಜ್ಞಾನಿಗಳಾಗುತ್ತಾರೆ.

(೬) "ಸಮೀಕ್ಷ್ಯ ಸಮ್ಯಗಾತ್ಮಾನಂ"—ಅಂದರೆ ತನಗೆ ಈಗ ಆಹಾರದ ಅಗತ್ಯವಿದೆಯೇ ಎಂಬುದನ್ನು ತಾನೇ ಪ್ರಶ್ನಿಸಿಕೊಂಡು ಅದಕ್ಕೆ ಸರಿಯಾದ ಉತ್ತರ ದೊರೆತರೆ ಮಾತ್ರ ಊಟ ಮಾಡಬೇಕು. ಆಯುರ್ವೇದವು ಒಂದೇ ಮಾತಿನಲ್ಲಿ ಇದರ ಬಗ್ಗೆ ಹೇಳುವುದೇನೆಂದರೆ—"ಹಿತಭುಕ್, ಮಿತಭುಕ್, ಕ್ಷುತಭುಕ್, ಋತಭುಕ್ ನತು ರೋಗವಾನ್ ಭವತಿ"—ಹಿತವಾದುದನ್ನು ಮಿತವಾಗಿ, ಹಸಿವಾದಾಗ, ಧರ್ಮದಿಂದ ಸಂಪಾದಿಸಿದ ಅನ್ನವನ್ನು ಯಾರು ಸೇವಿಸುವರೋ ಅವರೆಂದಿಗೂ ರೋಗಿಗಳಾಗುವುದಿಲ್ಲ.

ಆಹಾರ ಕಾಲ

(೭) ಆಹಾರಕ್ಕೆ ಕಾಲನಿಯಮವುಂಟೇ? ಹೌದೆನ್ನುತ್ತದೆ ಆಯುರ್ವೇದ. "ಯಾಮಮಧ್ಯೇ ನ ಭೋಕ್ತವ್ಯಂ ಯಾಮಯುಗ್ಮಂ ನ ಲಂಘಯೇತ್" —ಒಮ್ಮೆ ಆಹಾರವನ್ನು ಸೇವಿಸಿದ ಒಂದು ಯಾಮಕ್ಕಿಂತ ಮೊದಲು ಮತ್ತೆ

ಸೇವಿಸಬಾರದು. ಯಾಮವೆಂದರೆ ಮೂರು ಗಂಟೆ ಮತ್ತು ಎರಡು ಯಾಮಗಳಿಗಿಂತ ಹೆಚ್ಚಾಗಿ ಲಂಘನ (ಉಪವಾಸ) ಮಾಡಬಾರದು. ಏಕೆಂದರೆ 'ಭಾವಪ್ರಕಾಶ' ಹೀಗೆ ಹೇಳುತ್ತದೆ.

ಯಾಮ ಮಧ್ಯೇ ರಸೋತ್ಪತ್ತಿಃ ಯಾಮಯುಗ್ಮಾತ್ ಬಲಕ್ಷಯಃ ।

ಎಂದರೆ ಆಹಾರ ಸೇವಿಸಿದ ಒಂದು ಯಾಮದವರೆಗೆ ರಸೋತ್ಪತ್ತಿಯಾಗುತ್ತಿರುತ್ತದೆ. ಆಗ ಪುನಃ ಆಹಾರ ಸೇವಿಸಿದರೆ ರಸೋತ್ಪತ್ತಿಗೆ ತಡೆಯಾಗುವುದರಿಂದ ಪಚನಕ್ರಿಯೆಗೆ ತೊಂದರೆಯಾಗುತ್ತದೆ.

ಆಹಾರ ಪ್ರಮಾಣ

(೮) ತನಗೆಷ್ಟು ಆಹಾರ ಬೇಕೆಂಬುದನ್ನು ತಾನೇ ನಿರ್ಧರಿಸಿಕೊಳ್ಳಬೇಕು. ವಾಗ್ಭಟಾಚಾರ್ಯರು ತಮ್ಮ 'ಅಷ್ಟಾಂಗ ಹೃದಯ'ವೆಂಬ ಗ್ರಂಥದಲ್ಲಿ

ಅರ್ಧಂ ಸವ್ಯಂಜನಮನ್ನಸ್ಯ ತೃತೀಯಂ ಉದಕಸ್ಯ ಚ ।
ವಾಯೋಃ ಸಂಚರಣಾರ್ಥಂ ತು ಚತುರ್ಥಮವಶೇಷಯೇತ್ ॥

ಎಂದಿದ್ದಾರೆ. ಉದರಕೋಶದ ಅಳತೆಯಲ್ಲಿ ಅರ್ಧದಷ್ಟನ್ನು ಘನಾಹಾರದಿಂದ ತುಂಬಬೇಕು. ನಾಲ್ಕನೇ ಒಂದು ಭಾಗವನ್ನು ಪಾನೀಯಗಳಿಂದ ಭರ್ತಿಮಾಡಿ ಉಳಿದ ಕಾಲು ಭಾಗವನ್ನು ವಾಯು ಸಂಚಾರಕ್ಕಾಗಿ ಖಾಲಿ ಬಿಡಬೇಕು.

ನಮ್ಮಲ್ಲಿ ಒಂದು ತಪ್ಪುಕಲ್ಪನೆಯಿದೆ. ಹೆಚ್ಚಾಗಿ ತಿಂದರೆ ಬಲಶಾಲಿಗಳಾಗುತ್ತೇವೆಂಬುದು. ಇದು ತಪ್ಪು ಕಲ್ಪನೆಯೆಂಬುದರಲ್ಲಿ ಸಂಶಯವೇ ಇಲ್ಲ. ಮಿತಾಹಾರದ ಬಗ್ಗೆ ಭಗವಂತ ಗೀತೆಯಲ್ಲಿ ಹೀಗೆ ಹೇಳುತ್ತಾನೆ (ಅರ್ಜುನನನ್ನು ಕುರಿತು)

ನಾತ್ಯಶ್ನತಸ್ತು ಯೋಗೋಽಸ್ತಿ ನ ಚೈಕಾಂತಮನಶ್ನತಃ । ೬–೧೬

ಮಿತಿಮೀರಿ ತಿನ್ನುವವನಿಗೂ, ಏನೂ ತಿನ್ನದೆ ಇರುವವನಿಗೂ ಯೋಗ ಸಿದ್ಧಿಸುವುದಿಲ್ಲ. ಹಾಗಾದರೆ ಯೋಗಿ ಹೇಗಿರಬೇಕು ?

ಯುಕ್ತಾಹಾರ ವಿಹಾರಸ್ಯ.........ಯೋಗೋ ಭವತಿ ದುಃಖಹಾ ॥ ೬–೧೭

ಯಾವನು ಆಹಾರ–ವಿಹಾರಗಳಲ್ಲಿ ಮಿತವಾಗಿರುತ್ತಾನೆಯೋ ಅವನಿಗೆ ಯೋಗವು ದುಃಖನಾಶಕವಾಗಿರುತ್ತದೆ. ಮಿತಾಹಾರದಿಂದಾಗುವ ಪ್ರಯೋಜನವನ್ನು ಮಹಾಭಾರತವು ಹೀಗೆ ತಿಳಿಸಿದೆ.

ಗುಣಾಶ್ಚ ಷಣ್ಮಿತಭುಕ್ತಂ ಭಜಂತೇ ಆರೋಗ್ಯಮಾಯುಶ್ಚ ಬಲಂ ಸುಖಂ ಚ ।
ಅನಾವಿಲಂ ಚಾಸ್ಯ ಭವತ್ಯಪತ್ಯಂ ನ ಚೈನಮಾದ್ಯೂನ ಇತಿ ಕ್ಷಿಪಂತಿ ॥

ಮಿತವಾಗಿ ಊಟ ಮಾಡುವವನನ್ನು ಆರು ಗುಣಗಳು ಆಶ್ರಯಿಸುತ್ತವೆ. ಆರೋಗ್ಯ, ಆಯುಷ್ಯ, ಬಲ, ಸುಖ, ಲಭಿಸುತ್ತದೆ. ಅವನ ಸಂತಾನವು ಕಲುಷಿತವಾಗುವುದಿಲ್ಲ. ಕಡೇಪಕ್ಷ ಅವನು ಹೊಟ್ಟೆಬಾಕನೆಂದು ಯಾರೂ ನಿಂದಿಸುವುದಿಲ್ಲವಷ್ಟೆ.

ಮಿತಾಹಾರದ ಬಗ್ಗೆ ಸ್ವಾತ್ಮಾರಾಮರು ಹೀಗೆ ಹೇಳುತ್ತಾರೆ.

ಸುಸ್ನಿಗ್ಧ ಮಧುರಾಹಾರಃ ಚತುರ್ಥಾಂಶ ವಿವರ್ಜಿತಃ ।
ಭುಜ್ಯತೇ ಶಿವಸಂಪ್ರೀತ್ಯೈ ಮಿತಾಹಾರಃ ಸ ಉಚ್ಯತೇ ॥

ಜಿಡ್ಡುಳ್ಳ ಮಧುರಾಹಾರವನ್ನು ಯಾರು ತಮ್ಮ ಉದರಕೋಶದ ಅಳತೆಯ ಮುಕ್ಕಾಲು ಭಾಗ ಸೇವಿಸುತ್ತಾರೋ, ಹಾಗೂ ಆಹಾರವನ್ನು ಪರಮಾತ್ಮನ ಪ್ರಸಾದವೆಂದು ಭುಂಜಿಸುತ್ತಾರೋ ಅಂತಹವರು ಮಿತಾಹಾರಿಗಳು.

ಹಸಿದಿರುವಾಗ ಮಾತ್ರ ಊಟಮಾಡಬೇಕು. ಈ ವಿಚಾರದಲ್ಲಿ ಸರ್ವಜ್ಞನ ಮಾತು ಮನನೀಯ.

ಹಸಿಯದಿರೆ ಉಣಬೇಡ। ಹಸಿದು ಮತ್ತಿರಬೇಡ। ಬಿಸಿಬೇಡ ತಂಗಳುಬೇಡ ವೈದ್ಯರ ಬೆಸಸಬೇಡೆಂದ॥ ಎಂತಹ ಒಳ್ಳೆಯ ಮಾತು! ಹೇಗೆ ಅತಿ ಆಹಾರ ಕೂಡದೋ ಅಂತೆಯೇ ಅತಿ ಉಪವಾಸವೂ ಕೂಡದು. 'ಉಪವಾಸ' ಎಂಬುದರ ಅರ್ಥವನ್ನು ಸರಿಯಾಗಿ ತಿಳಿಯಬೇಕು,

ಉಪವೃತ್ತಸ್ಯ ಪಾಪೇಭ್ಯಃ ಯಸ್ತುವಾಸೋ ಗುಣೈಃ ಸಹ।
ಉಪವಾಸಃ ಸುವಿಜ್ಞೇಯಃ ನ ಶರೀರಸ್ಯ ಶೋಷಣಮ್॥

ಪಾಪಕಾರ್ಯಗಳಿಂದ ದೂರವಿದ್ದು ಭಗವಂತನ ಗುಣಗಾನ ಮಾಡುತ್ತ ಇರುವುದೇ ಉಪವಾಸ. ಹಾಗಲ್ಲದೆ ಕೇವಲ ಅನ್ನನೀರು ಬಿಟ್ಟು ಶರೀರಶೋಷಣೆ ಮಾಡುವುದು ಉಪವಾಸವಲ್ಲ.

ಪಕ್ಷಕ್ಕೊಮ್ಮೆ ಅಂದರೆ ಪ್ರತಿ ಏಕಾದಶಿಯಲ್ಲೂ ಆರೋಗ್ಯದ ದೃಷ್ಟಿಯಿಂದ ಉಪವಾಸ ಮಾಡುವುದು ಒಳ್ಳೆಯದು. ಆದರೆ ನಿರ್ಜಲ ಉಪವಾಸ ಒಳ್ಳೆಯದಲ್ಲ. ವಸಿಷ್ಠಸ್ಮೃತಿಯಲ್ಲಿ

ಏಕಾದಶ್ಯಾಂ ಉಪವಾಸೋಽಯಂ ನಿರ್ಮಿತಃ ಪರಮೌಷಧಮ್ ।

ಅಂದರೆ ಏಕಾದಶಿಯಂದು ಉಪವಾಸವಿರುವುದು ಶ್ರೇಷ್ಠವಾದ ಔಷಧಿ. ಇದರಿಂದ ಜೀರ್ಣಾಂಗಗಳಿಗೆ ಹದಿನೈದು ದಿನಕ್ಕೊಮ್ಮೆ ವಿಶ್ರಾಂತಿ ದೊರೆತು ಅವು ಹುರುಪಿನಿಂದ ಕಾರ್ಯನಿರ್ವಹಿಸಲು ಅನುಕೂಲವಾಗುತ್ತದೆ.

"ಏಕಾದಶೀ ಸದೋಪೋಷ್ಯಾ ಪಕ್ಷಯೋಃ"

—ಅಂದರೆ ಹದಿನೈದು ದಿನಕ್ಕೊಮ್ಮೆ ಏಕಾದಶಿಯಂದು (ಹರಿದಾಸರ) ಉಪವಾಸ ವಿರಬೇಕೆಂದು ವರಾಹಪುರಾಣ ಹೇಳುತ್ತದೆ.

ಅನ್ನದಾನ

ಕಡೆಯದಾಗಿ ಅನ್ನದ ಧಾರ್ಮಿಕ ವಿಚಾರಕ್ಕೆ ಬರೋಣ. ಸ್ಮೃತಿಕಾರರು ದಶದಾನ ಗಳಲ್ಲಿ ಅನ್ನದಾನವನ್ನು ಹೇಳದಿದ್ದರೂ "ಅನ್ನದಾನಂ ಪರಂ ದಾನಂ" ಎಂಬುದಾಗಿ ಬೇರೆಡೆ ಕೊಂಡಾಡಿದ್ದಾರೆ. ಅನ್ನಶಾಂತಿಯನ್ನು ಹೇಳಿದ್ದಾರೆ.

ಅನ್ನಂ ಬಹು ಕುರ್ವೀತ । ತದ್ವ್ರತಮ್ ।

ಅಂದರೆ ಅನ್ನವನ್ನು ಹೆಚ್ಚು ಹೆಚ್ಚು ದಾನ ಮಾಡಬೇಕೆನ್ನುತ್ತದೆ ತೈತ್ತಿರೀಯೋಪನಿಷತ್ತು. ಅದೊಂದು ವ್ರತ ಎಂದಿದೆ ಅನ್ನದಾನದ ಮಹಿಮೆಯನ್ನು ನಮ್ಮ ಪೂರ್ವಜರು ಹೀಗೆ ಹೇಳುತ್ತಾರೆ :

ತುರಗ ಶತಸಹಸ್ರಂ ಗೋಗಜಾನಾಂ ಚ ಲಕ್ಷಂ।
ಕನಕ ರಜತಪಾತ್ರಂ ಮೇದಿನೀ ಸಾಗರಾಂತಮ್।
ವಿಮಲ ಕುಲವಧೂನಾಂ ಕೋಟಿಕನ್ಯಾಶ್ಚ ದದ್ಯಾತ್॥

ನಹಿ ನಹಿ ಸಮಮೇತೈರನ್ನದಾನಂ ಪ್ರಧಾನಮ್॥ ಅಂದರೆ ಲಕ್ಷ ಆನೆ, ಕುದುರೆ, ಹಸುಗಳನ್ನೂ, ಸಮುದ್ರಪರ್ಯಂತವಾದ ಭೂಮಿ ಮತ್ತು ಚಿನ್ನ ಬೆಳ್ಳಿಗಳನ್ನೂ, ಸತ್ಕುಲ ಪ್ರಸೂತರಾದ ಕೋಟಿ ಕನ್ಯಾದಾನವನ್ನು ಮಾಡುವುದರಿಂದ ಉಂಟಾಗುವ ಫಲವು ಅನ್ನದಾನಕ್ಕೆ ಸಮವಾಗಲಾರದು. ಅರ್ಥಾತ್ ಇವೆಲ್ಲಕ್ಕಿಂತ ಅನ್ನದಾನವೇ ಶ್ರೇಷ್ಠವಾದುದು.

ಅನ್ನದಾನವನ್ನು ಸರ್ವಜ್ಞನೂ ಪ್ರಶಂಸಿಸಿದ್ದಾನೆ.

ಅನ್ನದಾನಕ್ಕಿಂತ ಇನ್ನು ದಾನಗಳಿಲ್ಲ । ಅನ್ನಕ್ಕೆ ಮೇಲು ಇನ್ನಿಲ್ಲ । ಲೋಕಕ್ಕೆ
ಅನ್ನವೇ ಪ್ರಾಣ ॥

ಅನ್ನದಾನದಿಂದ ಸ್ವರ್ಗವೇ ಲಭಿಸುತ್ತದಂತೆ. ಅನ್ನದಾನ ಕಡ್ಡಾಯ ಎನ್ನುತ್ತಾನೆ.

ಇಕ್ಕಿದಾತನು ಉಂಡು । ನಕ್ಕು ಸ್ವರ್ಗಕ್ಕೆ ಹೋದ । ಇಕ್ಕದನು ಹೋದ ನರಕಕ್ಕೆ
ಲೋಕದೊಳ । ಇಕ್ಕಲೇ ಬೇಕು ॥

ಅನ್ನದಾನಮಾಡಿ ಖಿನ್ನಪಡಬಾರದೆಂಬ ಮಾತು ಮನನೀಯ.

ಅನ್ನವನು ಇಕ್ಕಿ ನೀ । ಖಿನ್ನವನು ಪಡಬೇಡ । ಭಿನ್ನಭೇದಗಳು ಇಲ್ಲದಲೆ ಶಿವ
ಜಗವ ಸಲಹುವನು ॥

ಅನ್ನದಾನದಿಂದ ಕೈಲಾಸವೇ ಸಿಗುವುದೆಂಬ ಸರ್ವಜ್ಞನ ವಚನ ಬಲು ಸೊಗಸು.

ಅನ್ನವನು ಇಕ್ಕುವುದು । ನನ್ನಿಯನು ನುಡಿಯುವುದು । ತನ್ನಂತೆ ಪರರ ಬಗೆದೊಡೆ
ಕೈಲಾಸ ಬಿನ್ನಾಣವಕ್ಕು ॥

ಹೀಗೆ ಅನ್ನವು ಶರೀರಕ್ಕೆ ಪ್ರಾಣವಾಗಿ, ಗೃಹಸ್ಥನಿಗೆ ರಕ್ಷೆಯಾಗಿ, ಯತಿಗೆ ಭಿಕ್ಷೆಯಾಗಿ, ಧರ್ಮಕ್ಕೆ ದಾನವಾಗಿ, ಜೀವನಿಗೆ ಬ್ರಹ್ಮನಾಗಿದೆ.

ಓಂ ಶ್ರೀ ಅನ್ನಬ್ರಹ್ಮಣೇ ನಮಃ

ಪುಸ್ತಕ ವಿಮರ್ಶೆ

ಮತಾಂತರ ಮತ್ತು ಇತರ ಲೇಖನಗಳು : ಲೇ. ಡಾ. ವಿ. ಮುನಿವೆಂಕಟಪ್ಪ, ವಿಚಾರ ವಾದಿ ಪ್ರಕಾಶನ, ಮೈಸೂರು–೨೩. ಪ್ರಥಮ ಮುದ್ರಣ ೨೦೦೦ ; ಪುಟಗಳು : viii + 128 = 136 ; ಬೆಲೆ. ರೂ. ೧೦೦/–.

ಎಪ್ಪತ್ತರ ದಶಕದಲ್ಲಿ ಕನ್ನಡ ಸಾಹಿತ್ಯದಲ್ಲಿ ಆದ ಬದಲಾವಣೆಗಳು ಹಲವಾರು. ಗತ ಇತಿಹಾಸದಲ್ಲಿ ಕಾಣದೇ ಇರುವಷ್ಟು ಭಾರೀ ಪ್ರಮಾಣದಲ್ಲಿ ಹೊಸ ವಿಚಾರಗಳ ಹೊಸ ಅಲೆಯೇ ಕಾಣಿಸಿಕೊಂಡಿತು. ಪಾಶ್ಚಿಮಾತ್ಯ ವಿಚಾರಧಾರೆಗಳಿಗಿಂತ ಸ್ವದೇಶಿ ನೆಲೆಯ ಚಿಂತನಧಾರೆಗಳೇ ಅಧಿಕೃತತೆಯನ್ನು ಪಡೆದವು. ಇದರ ಫಲವಾಗಿ ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ವಿಚಾರ ಕ್ರಾಂತಿಯನ್ನು ಒಳಗೊಂಡ ಚಿಂತನಶೀಲರು ಸೃಷ್ಟಿಯಾದರು. ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಶೋಷಣೆಯ ಸ್ವರೂಪ, ಸ್ವಭಾವ, ವ್ಯಾಪ್ತಿ ಮೊದಲಾದ ಅನೇಕ ದೃಷ್ಟಿಕೋನಗಳಲ್ಲಿ ಮುಕ್ತ ಮನಸ್ಸಿನ ಚರ್ಚೆಯೇ ನಡೆಯಿತು. ಜಾತಿ ವ್ಯತ್ಯಾಸಗಳ ನೆಲೆಯಲ್ಲಿ ಚಿಂತನಶೀಲತೆ ಒಂದೆಡೆ ಕಂಡುಬಂದರೆ, ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್ ವಿಚಾರ ಧಾರೆಯ ಸಾಹಿತ್ಯವನ್ನು ಇನ್ನೊಂದೆಡೆಗೆ ಕಾಣುತ್ತೇವೆ. ಪರಂಪರಾಗತ ಸೈದ್ಧಾಂತಿಕ ನೆಲೆಯಲ್ಲಿಯೂ ನೋಡುತ್ತಾ ಅವನ್ನು ಸಮಕಾಲೀನ ಸಂದರ್ಭಕ್ಕೆ ಅನ್ವಯಿಸಿಕೊಂಡು ಹೇಳುವ ವೈಚಾರಿಕತೆಯೂ ಕಂಗೊಳಿಸಿತು. ದಲಿತ ಬಂಡಾಯ ಚಳವಳಿಯಲ್ಲಿ ಮಾರ್ಕ್ಸ್, ಲೋಹಿಯಾ, ಅಂಬೇಡ್ಕರ್‌ವಾದದ ಪ್ರಭಾವಗಳಿದ್ದರೂ ಅಂಬೇಡ್ಕರ್ ವಿಚಾರಧಾರೆ ಬೀರಿದ ಪ್ರಭಾವ ತುಂಬ ಮಹತ್ವದ್ದು. ಅವರನ್ನು ಕುರಿತು ಬಂದ ಕೃತಿಗಳಿಗೆ ಲೆಕ್ಕವಿಲ್ಲ. ಪೌರಾಣಿಕ, ಐತಿಹಾಸಿಕ, ಸಂಗತಿಗಳನ್ನು ಪುನರ್ ಮೌಲೀಕರಣ ಮಾಡುವ ಕೆಲಸವೂ ನಡೆಯಿತು. ಹೀಗೆ ಬೇರೆ ಬೇರೆ ನೆಲೆಯಲ್ಲಿ ಚಿಂತನಾಶೀಲತೆ ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ವಿ. ಮುನಿವೆಂಕಟಪ್ಪನವರ 'ಮತಾಂತರ ಮತ್ತು ಇತರ ಲೇಖನಗಳು' ಎಂಬ ಕೃತಿ ಮುಖ್ಯವಾದುದು.

ಇದರಲ್ಲಿ ಒಂಬತ್ತು ಲೇಖನಗಳಿವೆ. ಮತಾಂತರ, ವಚನ ಚಳವಳಿಯಲ್ಲಿ ದಲಿತ ವಚನಕಾರರು ಅಂತ್ಯಜನಾತ್ಮ ಕಥೆ, ದಲಿತ ಸಾಹಿತ್ಯ ಬೆಳೆದು ಬಂದ ಬಗೆ, ಭಾರತದಲ್ಲಿ ಅಭಿವ್ಯಕ್ತಿಯ ಸವಾಲುಗಳು, ಶೋಷಿತ ವರ್ಗದ ಧ್ವನಿ ಅಂಬೇಡ್ಕರ್, ಬುದ್ಧ ಮತ್ತು ಬೌದ್ಧಧರ್ಮ, ದೇವರು, ಧರ್ಮ ಮತ್ತು ದಲಿತರು, ಮೀಸಲಾತಿ ಒಂದು ಅವಲೋಕನ —ಇವೇ ಆ ಲೇಖನಗಳು. ಕೃತಿಯ ಶೀರ್ಷಿಕೆಯೇ ಸಂವಾದಕ್ಕೆ—ಚರ್ಚೆಗೆ ಆಹ್ವಾನ ನೀಡುವಂಥದ್ದಾಗಿದೆ. ಹಿಂದೂಧರ್ಮದ ಸ್ಥಗಿತತೆಯನ್ನು ಯಥಾ ಸ್ಥಿತಿವಾದಿ ಧೋರಣೆ ಗಳನ್ನು ಕಂಡು ಬೇಸತ್ತಿರುವ ಹೊಸ ಮೌಲ್ಯಗಳನ್ನು ಪಂಥವನ್ನು ಇಷ್ಟಪಡುವ ಯಾರೇ ಆಗಲಿ ಈ ಕೃತಿಯ ಬರಹಗಳನ್ನು ಮೊದಲ ಓದಿನಲ್ಲಿಯೇ ಇಷ್ಟಪಡುತ್ತಾರೆ. "ಭಾರತದ ಸಂದರ್ಭದಲ್ಲಿ ಮತಾಂತರ ನಾಲ್ಕು ಬಗೆಯದ್ದಾಗಿರುತ್ತದೆ. ಮೊದಲನೆಯದು

ಸ್ವತಹ ಸ್ವಇಚ್ಛೆಯಿಂದ ತನಗೆ ಬೇಕಾದ ಇಷ್ಟವಾದ ವಿಶ್ವಾಸವಿರುವ ಧರ್ಮವನ್ನು ಆಯ್ಕೆ ಮಾಡಿಕೊಂಡು ಮತಾಂತರಗೊಳ್ಳುವುದು. ಎರಡನೆಯದು, ಸಾಮಾಜಿಕ ಸಂದರ್ಭಗಳಿಂದ ಜಾತಿ ಪದ್ಧತಿ ಅಸ್ಪೃಶ್ಯತೆಯಂತಹ ಆಚರಣೆಗಳಿಂದ ಬೇಸತ್ತು, ಬಿಡುಗಡೆಗಾಗಿ ಬೇರೆ ಧರ್ಮಕ್ಕೆ ಮತಾಂತರಗೊಳ್ಳುವುದು. ನಾಲ್ಕನೆಯದು ಬಲಾತ್ಕಾರದಿಂದ ಒತ್ತಾಯಗಳಿಂದ ಮತಾಂತರಗೊಳ್ಳುವುದು". ಆದರೆ ಭಾರತದ ಸಂದರ್ಭದಲ್ಲಿ ಗಮನಿಸಿದರೆ ಇಲ್ಲಿ ನಡೆದಿರುವ ಮತಾಂತರಗಳು ಎರಡನೆಯ ಅಥವಾ ಮೂರನೆಯ ಕಾರಣಗಳಿಂದ ಜರುಗಿದಂಥವು. ದಲಿತರು, ಹಿಂದುಳಿದವರು, ಆದಿವಾಸಿಗಳು, ಇಸ್ಲಾಂ ಅಥವಾ ಕ್ರಿಶ್ಚಿಯನ್ ಇಲ್ಲವೆ ಬೌದ್ಧ ಧರ್ಮಕ್ಕೆ ಮತಾಂತರವಾಗಿದ್ದರೆ ಅದಕ್ಕೆ ಕಾರಣಗಳು ಅವರವರ ಸಾಮಾಜಿಕ ಸ್ಥಿತಿಗತಿಗಳು ಅಥವಾ ಸಮಾನತೆಗಾಗಿ ನೆಮ್ಮದಿಗಾಗಿ ಅನ್ಯಧರ್ಮಗಳತ್ತ ಆಕರ್ಷಿಸಲ್ಪಟ್ಟಿದ್ದಾರೆಂದು ಹೇಳಬಹುದು. ಇದನ್ನು ಸಮರ್ಥಿಸಲು ಲೇಖಕರು ಅಂಬೇಡ್ಕರ್ ವಿಚಾರಧಾರೆಯನ್ನು ಇಲ್ಲಿ ಮಂಡಿಸಿದ್ದಾರೆ. ಭಾರತದಲ್ಲಿ ಸುಮಾರು ಐದು ಸಾವಿರ ವರ್ಷಗಳಿಂದ ಜಾತಿ ಪದ್ಧತಿಯ ಅಮಾನುಷ ಹಿಂಸೆಗೆ ಗುರಿಯಾಗಿ ಶೂದ್ರರು, ದಲಿತರು, ಮತಾಂತರದ ಪ್ರಕ್ರಿಯೆಗೆ ಮಾರುಹೋಗಿದ್ದಾರೆ. ಈ ಪ್ರಕ್ರಿಯೆಗೆ ಸಾಮಾಜಿಕ ಅಸಮಾನತೆಯೇ ಮುಖ್ಯ ಕಾರಣ. ಇಂಥ ಕಾರಣವನ್ನು ಯಥಾಸ್ಥಿತಿವಾದಿಗಳು, ಪ್ರತಿಗಾಮಿಗಳು, ಸರಿಯಾಗಿ ಅರ್ಥ ಮಾಡಿಕೊಳ್ಳದೆ ನಿಜಸ್ಥಿತಿಯನ್ನು ಮರೆಮಾಚಲು ಸುಳ್ಳು ಹೇಳಿಕೆಗಳನ್ನು ನೀಡುತ್ತಿರುವುದರ ಬಗ್ಗೆ ಲೇಖಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದರ ಸಮರ್ಥನೆಗೆ ಹಲವರ ಅಭಿಪ್ರಾಯಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಜಾತಿವಾದಿಗಳು ಮತಾಂತರ ನಿಷೇಧ ಮಸೂದೆಯನ್ನು ತರಲು ಶತಪ್ರಯತ್ನ ನಡೆಸುವುದರ ಬಗೆಗಿನ ಪ್ರತಿಭಟನೆಯು ಇಲ್ಲಿ ವ್ಯಕ್ತವಾಗಿದೆ. ಇದರ ಜೊತೆಗೆ ಅಂಬೇಡ್ಕರ್ ಮತಾಂತರಗೊಂಡಿದ್ದರ ಹಿನ್ನೆಲೆ, ಬೌದ್ಧ ಧರ್ಮದ ಪುನರುಜ್ಜೀವನ, ಧಾರ್ಮಿಕ ಅಸಹಿಷ್ಣುತೆ, ಕರ್ನಾಟಕದಲ್ಲಿನ ಮತಾಂತರದ ಪ್ರಕ್ರಿಯೆಗಳು, ಅವುಗಳಿಂದಾದ ಪರಿಣಾಮಗಳು, ಅವುಗಳ ಬಗೆಗಿನ ಕಾನೂನುಗಳು ಇತ್ಯಾದಿಗಳೆಲ್ಲವನ್ನೂ ಇಲ್ಲಿ ವಿವರಿಸಲಾಗಿದೆ. ಹಾಗೆಯೇ ಹನ್ನೆರಡನೇ ಶತಮಾನದ ವಚನ ಚಳವಳಿಯ ಮೌಲಿಕತೆ, ಜನಪರ ಚಿಂತನೆ, ಅದರಲ್ಲಿ ಕಾಣಿಸಿಕೊಂಡ ದಲಿತ ವಚನಕಾರರ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ. ದಲಿತ ಸಾಹಿತ್ಯ ಬೆಳೆದುಬಂದ ಬಗೆಯನ್ನು ವಿವರಿಸುತ್ತಾ ಹೊಸ ಲೇಖಕರು ಬರೆಯುತ್ತಿರುವ ಸಂದರ್ಭದಲ್ಲಿ ಅವರಿಗೆ ಪ್ರೋತ್ಸಾಹ ನೀಡುವ ಹೊಸ ಬಗೆಯ ವಿಮರ್ಶಕರು ಕನ್ನಡದಲ್ಲಿ ಬರದಿರುವುದು ಒಂದು ದೊಡ್ಡ ಕೊರತೆ ಎಂದು ಹೇಳುತ್ತಾ ದಲಿತ ಸಾಹಿತ್ಯಕ್ಕೆ ಹೊಸ ವಿಮರ್ಶನ ಮಾನದಂಡಗಳು ಹುಟ್ಟಬೇಕಾಗಿದೆ. ಇದು ಆಗುವವರೆಗೂ ದಲಿತ ಸಾಹಿತ್ಯಕ್ಕೆ ಸಂಪ್ರದಾಯವಾದಿ ವಿಮರ್ಶಕರಿಂದ ನ್ಯಾಯ ಸಿಗುವುದಿಲ್ಲ ಎಂಬ ತೀರ್ಮಾನಕ್ಕೆ ಬಂದಿರುವುದನ್ನು ಗಮನಿಸಬಹುದು.

ಭಾರತವಲ್ಲಿ ಏನೆಲ್ಲಾ ಬೆಳವಣಿಗೆಗಳಾಗಿದ್ದರೂ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಸಾಧಿಸಬೇಕಾಗಿದ್ದು ಏನೆಂಬುದರ ಬಗ್ಗೆ ಅದರ ಸವಾಲುಗಳನ್ನು ಕುರಿತು ಪರಿಚಯಾತ್ಮಕವಾದ

ವಿವರಣೆ ನೀಡಲಾಗಿದೆ. ಸಮಾಜದ ಕಟ್ಟ ಕಡೆಯ ಮನುಷ್ಯನ ಬಗ್ಗೆ ಚಿಂತನೆ ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿದೆ. ಇಂಥವುಗಳ ಬಗ್ಗೆ ಮಾತನಾಡಲು ತೊಡಗಿದರೆ ಅಭಿವ್ಯಕ್ತಿಗೆ ಅಡಚಣೆ ಉಂಟಾಗುತ್ತಿದೆ. ವ್ಯವಸ್ಥೆಯ ಅತಿರೇಕಗಳನ್ನು ಅರಿಯಲು ಸವಾಲುಗಳ ಬಗ್ಗೆ ಗಾಢ ಚಿಂತನೆ ನಡೆಸಲು ಇದು ಸಹಾಯವಾಗುತ್ತದೆ. 'ಮೀಸಲಾತಿ ಒಂದು ಅವಲೋಕನ'ದಲ್ಲಿ ಭಾರತದಲ್ಲಿ ಜಾತಿಪದ್ಧತಿ ಎಂಬ ಮಾನಸಿಕ ರೋಗ ಇರುವ ವರೆಗೂ ಮೀಸಲಾತಿ ಮುಂದುವರಿಯಬೇಕು ಎಂಬ ಒತ್ತಾಸೆ ಇದೆ. ಸಂವಿಧಾನದ ಚರ್ಚೆ, ಮೀಸಲಾತಿಯ ಬಗೆಗಿನ ಚಿಂತನೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಈ ಲೇಖನಕ್ಕೆ ವಿಶೇಷ ಮಹತ್ವವಿದೆ. ಇದರಲ್ಲಿ ಮೀಸಲಾತಿ ವಿರೋಧದ ಧೋರಣೆಯಿಂದ ಜೈಲು ಸೇರಿದವರು, ಚಳವಳಿ ನಡೆಸಿದವರು, ಮೀಸಲಾತಿ ರಕ್ಷಣಾ ಒಕ್ಕೂಟ, ಸುಪ್ರೀಂ ಕೋರ್ಟ್‌ಗಳ ತೀರ್ಪುಗಳು – ಇತ್ಯಾದಿ ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನೆಲ್ಲ ಒಂದೆಡೆ ಸಂಗ್ರಹಿಸಿದ್ದಾರೆ. ಹೀಗೆ ಪ್ರತಿಯೊಂದು ಲೇಖನವೂ ಪ್ರಸ್ತುತ ಸಂದರ್ಭದಲ್ಲಿ ದಲಿತರ ಬದುಕನ್ನು ಮಾನವೀಯ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕಾದ ರೀತಿಯನ್ನು ಹಾಗೂ ನಮ್ಮ ಚಿಂತನೆಯ ದೃಷ್ಟಿಕೋನವನ್ನು ವಿಸ್ತರಿಸಿಕೊಳ್ಳಬೇಕಾದ ರೀತಿಯನ್ನು ಮನದಟ್ಟು ಮಾಡಿಕೊಡುತ್ತವೆ. ಆದರೆ ಅಧಿಕಾರವಾಣಿಯಿಂದ ವಿಚಾರ ಮಂಡನೆ ಮಾಡುವಾಗ ಆಕ್ರೋಶವೇ ಅತಿಯಾಗಿ ಸಮತೋಲನವನ್ನು ಕಳೆದುಕೊಂಡಿರುವ ಉದಾಹರಣೆಗಳೂ ಇಲ್ಲಿವೆ. ತಾತ್ವಿಕ ನಿಲುವನ್ನು ಪ್ರಕಟಪಡಿಸುವಾಗ ಸಮತೋಲನವಾದ ಮನಸ್ಸು ಬಹಳ ಮುಖ್ಯ. ಬರವಣಿಗೆ ಶುಷ್ಕವಾಗುವಿಕೆಯನ್ನೂ ಇದು ತಪ್ಪಿಸಬಹುದು. ಮುನಿವೆಂಕಟಪ್ಪನವರು ಇಂಥ ಅಪಾಯಗಳ ಕಡೆಗೆ ಮನಸ್ಸು ಹರಿಸಿದರೆ ಮತ್ತಷ್ಟು ವೈಚಾರಿಕ ಬರಹವನ್ನು ನೀಡುವಲ್ಲಿ ಸಮರ್ಥರಾಗಬಲ್ಲರು.

ಜಿ. ಆರ್. ತಿಪ್ಪೇಸ್ವಾಮಿ

ಈ ಸಂಯುಕ್ತ ಸಂಚಿಕೆಯ ಲೇಖಕರು

ಡಾ. ಎನ್. ಉಷಾರಾಣಿ
ನಿರ್ದೇಶಕರು
ಶ್ರವ್ಯ-ದೃಶ್ಯ ಸಂಶೋಧನಾ ಕೇಂದ್ರ
ವೈ. ವಿ. ವಿ. ಮಾನಸಗಂಗೋತ್ರಿ, ಮೈಸೂರು-೬

ಶ್ರೀ ಬಿ. ಪಿ. ಮಹೇಶಚಂದ್ರಗುರು
ರೀಡರ್, ಸಮೂಹ ಸಂಪರ್ಕ ಮತ್ತು ಪತ್ರಿಕೋದ್ಯಮ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಡಾ. ಕೆ. ಚಂದ್ರಶೇಖರ್
ರೀಡರ್, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ
ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ-೫೭೭೪೫೧

ಶ್ರೀ ಜಿ. ಎಸ್. ಭಟ್ಟ
ಕಾ. ಭಾ. ಮಾನವಿಕ ಸಂಪಾದಕರು
ಕನ್ನಡ ವಿಶ್ವಕೋಶ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬

ಡಾ. ಕೆ. ವೈ. ಬಾಲರಾಜ್
ಉಪನ್ಯಾಸಕರು, ಎಸ್. ಜಿ. ಎಸ್. ನಿಲಯ
ಸಾವರ್ಕರ್‌ನಗರ, ಮುನ್ಸಿಪಲ್ ಆಫೀಸ್ ರೋಡ್ ಎದುರು
ಶಿವಮೊಗ-೫೭೭೨೦೨

ಶ್ರೀ ನರಸಿಂಹೇಗೌಡ ನಾರಣಾಪುರ
C/o ಆನಂದಮೂರ್ತಿ
ವಿ. ವಿ. ಕರಡು ಪರಿಶೀಲಕರು
ವಿ. ವಿ. ಮುದ್ರಣಾಲಯ, ಮಾನಸಗಂಗೋತ್ರಿ, ಮೈಸೂರು-೬

ಶ್ರೀ ಎಸ್. ಕೆ. ರಮೇಶ್
ಸಂಶೋಧನಾ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಪ್ರೊ. ಕೇಶವಮೂರ್ತಿ
ಪ್ರಾಧ್ಯಾಪಕರು, ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ
ಮೈಸೂರು

ಡಾ. ಜಿ. ಆರ್. ತಿಪ್ಪೇಸ್ವಾಮಿ
ರೀಡರ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಕೆ.ಸಂ. ೬೬೩೬—ಎಂ.ಯು.ಪಿ.ಎಂ.—೩೦೦ ಪ್ರತಿಗಳು—೧೫-೨-೨೦೦೧